FINANCIAL BUSINESS

Discussion and voting of Demands for grants 1983-84

† ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).— ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಹದಿನಾರು ಬೇಡಿಕೆಗಳ ಬಗ್ಗೆ ಚರ್ಚೆಯಾಗುತ್ತಿರುವ ಈ ಸಮಯದಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದು ಮತ್ತು ಕೆಲವು ಸಲಹೆಗಳನ್ನು ಕೊಡಬೇಕೆಂದು ಇಚ್ಛೆಪಡುತ್ತಿದ್ದೇನೆ. ನನ್ನ ಮೂವತ್ತು-ಮೂವತ್ತೈದು ವರ್ಷದ ರಾಜಕೀಯ ಅನುಭವದಲ್ಲಿ ಯಾರೂ ಈ ಮುಖ್ಯಮಂತ್ರಿಯವರಷ್ಟು ಅದೃಷ್ಟವಂತರು ಆಗಿರಲಿಲ್ಲ. ಎಲ್ಲಾ ಪಕ್ಷಗಳ ಅನ್‌ಕಂಡಿಷನಲ್ ಸಪೋರ್ಟ್‌ನಿಂದ ಮತ್ತು ಜನತೆಯ ಆಶೀರ್ವಾದ ಇವೆಲ್ಲದರಿಂದ ಅವರು ಮುಖ್ಯಮಂತ್ರಿಯಾಗಿ ಬಂದಿದ್ದಾರೆ. ಇದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಾದ ಹೆಗಡೆಯವರನ್ನು ಹಿಂದೆ ಅವರು ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಉಪಮಂತ್ರಿಯಾದಾಗಿನಿಂದ, ಅಬಕಾರಿ ಮತ್ತು ಸಹಕಾರ ಖಾತೆಯ ಉಪಮಂತ್ರಿಯಾದಾಗಿನಿಂದಲೂ ನೋಡಿದ್ದೇನೆ. ನಂತರ ಅವರು ಅರ್ಥ ಸಚಿವರಾಗಿದ್ದಾಗ ನೋಡಿದ್ದೇನೆ. ಅವರ ಜೊತೆಯಲ್ಲಿ ಸ್ವಲ್ಪ ಕೆಲಸ ಮಾಡತಕ್ಕಂಥ ಅವಕಾಶ ನನಗೆ ದೊರಕಿತ್ತು. ಅವರನ್ನು ಯಾವಾಗಲೂ ಬಹಳ ಬುದ್ಧಿವಂತರು, ಬಹಳ ಮೇಧಾವಿ ಮಂತ್ರಿಗಳೆಂದು ಎಲ್ಲರೂ ಹೇಳುತ್ತಿದ್ದರು ಜನರಿಗೆ ಒಂದು ಬದಲಾವಣೆ ಬೇಕಾಗಿತ್ತು. ಇಂತಹ ಸಮಯದಲ್ಲಿ ಅವರು ಬಹಳ ಸುಲಭವಾಗಿ ಮುಖ್ಯಮಂತ್ರಿಯಾಗಿ ಬಂದಿದ್ದಾರೆ. ಆದ್ದರಿಂದ ಅವರು ಬಹಳ ಅದೃಷ್ಟವಂತರು ಎಂದು ನಾನು ಹೇಳುತ್ತೇನೆ ಜನತೆ ತಮಗೆ ಬಯಸಿದ್ದು ಎಲ್ಲಾ ಸಿಗುತ್ತದೆ, ಬಹುತೇಕ ಸ್ವರ್ಗದಲ್ಲಿಯೇ ಇರುತ್ತೇವೆ, ಇನ್ನು ಮುಂದೆ ಯಾವುದೇ ತರಹದ ಕಷ್ಟಕಾರ್ಪಣ್ಯಗಳು ಇರುವುದಿಲ್ಲ. ನಾವು ಸುಖವಾಗಿ ಜೀವಿಸುತ್ತೇವೆ ಎನ್ನತಕ್ಕ ಬಯಕೆ ಅವರಿಗೆ ಇದ್ದಾಗಲೇ, ಈ ಒಂದು ಬದಲಾವಣೆ ಕಾಲದಲ್ಲಿ ಅವರು ಬಂದಿದ್ದಾರೆ. ಅವರು ಮತ್ತು ಕೆಲವು ಮಹನೀಯರು ಹೇಳಿದ್ದನ್ನು ನಾವು ನೋಡಿದ್ದೇವೆ. ಅದರಲ್ಲೂ ಮಾನ್ಯ ರಘುಪತಿಯವರು ಯಾವಾಗಲೂ ಹೇಳುತ್ತಿದ್ದರು. 'ಈ ಪಾಪದ ಸಂತಾನದಿಂದ ಆಗಿರತಕ್ಕಂಥ ಅಘೋರ ಕೃತ್ಯಗಳನ್ನು ನಾವು ಅಳಿಸಬೇಕಾಗಿದೆ' ಎಂದು ಒಂದು ದೃಷ್ಟಿಯಿಂದ ನಾವು ದಾಯಾದಿಗಳು ಎಂಬುದು ಪಾಪ, ಅವರಿಗೆ ಗೊತ್ತಿಲ್ಲ. ನಾನಂತೂ ತಿಳಿದುಕೊಂಡಿದ್ದೇನೆ. ಅವರು ಬೇರೆಯವರಿಗಿಂತ ಕೆಳಗಿನವರೂ ಅಲ್ಲ. ಮೇಲಿನವರೂ ಅಲ್ಲ. ಎಲ್ಲರೂ ಒಂದೇ. ಹಾಗೆ ಹೇಳುವುದಾದರೆ ಇದೊಂದು ಥರಹ ಲವ್ ಮ್ಯಾರೇಜ್ ಆದ ಹಾಗೆ. Inter-caste marriage for convenience. ಅದು ಆಗಿಬಿಟ್ಟು ಅವರು ಅಲ್ಲಿ ಇದ್ದಾರೆ, ನಾವು ಇಲ್ಲಿ ಇದ್ದೇವೆ. ನಾವು ದಾಯಾದಿಗಳು ಎಂಬುದನ್ನು ಮರೆಯಬೇಡಿ ನಾನಂತೂ ತಿಳಿದುಕೊಂಡಿದ್ದೇನೆ, ಅದೇನೆಂದರೆ ಈ ಒಂದು ಅವಕಾಶ ತಮಗೆ ದೊರಕಿದೆ. ಒಂದು ಅವಕಾಶವನ್ನು ದೇವರು ಕೊಟ್ಟಿದ್ದಾನೆ, ಜನತೆ ಕೊಟ್ಟಿದೆ, ಅನೇಕ ಒಳ್ಳೆಯ ಕೆಲಸಗಳನ್ನು ಮಾಡುವುದಕ್ಕೆ ತಮಗೆ ಒಂದು ಅವಕಾಶ ಸಿಕ್ಕಿದೆ ಎಂದು ನನ್ನ ಭಾವನೆ. ಯಾರೋ ಏನೋ ತಪ್ಪು ಮಾಡಿದರು, ಒಳ್ಳೆ ಕೆಲಸ ಮಾಡಲಿಲ್ಲ ಅನ್ನುವುದಕ್ಕೋಸ್ಕರ ಇದನ್ನು ರಿಪೀಟ್ ಮಾಡುವ ಕಾರಣ ಇಲ್ಲ. 'ನೀವು ಏಕೆ ಮಾಡಲಿಲ್ಲ ? ನಾವು ಮಾಡುವುದು ಏಕೆ ?' ಎಂದು ಹೇಳುವುದು ನನ್ನ ಅಭಿಪ್ರಾಯದಲ್ಲಿ ಯಾವ ಪ್ರಯೋಜನವೂ ಇಲ್ಲ. ಏಕೆಂದರೆ ಈಗ ಜನರೆಲ್ಲರೂ ಸುಖವಾಗಿದ್ದಾರೆಂದು ನಾನಂದುಕೊಂಡಿದ್ದೇನೆ. ಏಕೆಂದರೆ ಜನರಿಂದ ಯಾವ ದೂರುಗಳೂ ಇಲ್ಲ. ಜನರಿಗೆ ಹೊಟ್ಟೆ ತುಂಬಾ ಆಹಾರ ಸಿಕ್ಕುತ್ತಿದೆ, ಇರುವುದಕ್ಕೆ ಮನೆ ಸಿಗುತ್ತಿದೆ, ಯಾವುದೇ ತರಹದ ಭಯ ಭೀತಿ ಇಲ್ಲ. ಬಹಳ ಸುರಕ್ಷವಾಗಿ ಇದ್ದಾರೆ. ಅವರು ಹಾಗೆ ನಿರೀಕ್ಷೆ ಮಾಡುವುದೂ ನ್ಯಾಯ ಮತ್ತು ನಾವು ಹಾಗೆ ತಿಳಿಯುವುದು ಕೂಡ ನ್ಯಾಯವೇ ಆಗಿದೆ, ಕೆ. ಜಿ. ಅಕ್ಕಿಗೆ ಐದು ರೂಪಾಯಿ, ಒಂದು ಕೇಜಿ ಬೇಳೆಗೆ ಒಂಬತ್ತು ರೂಪಾಯಿ. ತೆಂಗಿನಕಾಯಿಗೆ ಎರಡು ರೂಪಾಯಿ. ಒಂದು ಲೀಟರ್ ಕಡಲೆಕಾಯಿ ಎಣ್ಣೆಗೆ ಹತ್ತೊಂಬತ್ತು ರೂಪಾಯಿ. ಜನರು ಚೆನ್ನಾಗಿ ತಿಂದು, ಹೊಟ್ಟೆತುಂಬಾ ಊಟಮಾಡಿಕೊಂಡು ಸುಖವಾಗಿ ಇರುವಾಗ ಅವರು ಸಂತೋಷವಾಗಿರುವರಲ್ಲದೆ ಬೇರೇನೆಂದು ನಾವು ತಿಳಿದುಕೊಳ್ಳಬೇಕು ? ನಾನಂತೂ ಹಾಗೆಯೇ ತಿಳಿದುಕೊಂಡಿದ್ದೇನೆ. ಜನಗಳೆಲ್ಲರಿಗೂ ಮನೆ ಇದೆ, ಮನೆ ಇಲ್ಲದಿದ್ದರೆ ಸೈಟು ಆದರೂ ಇದೆ ಶೆಡ್ಡು ಹಾಕಿಕೊಳ್ಳಲಿಕ್ಕೆ. ಆ ಅನುಕೂಲತೆಯಾದರೂ ಅವರಿಗೆ ಇದೆ. ಜನರು ಸುಖವಾಗಿ

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ರುವುದರಿಂದ ಯಾರೂ ಮಾತನಾಡುತ್ತಿಲ್ಲ. ಅವರೆಲ್ಲರೂ ಸಂತೋಷವಾಗಿದ್ದಾರೆಂದೇ ನನ್ನ ಭಾವನೆ. ಇನ್ನು ಲಾ ಅಂಡ್ ಆರ್ಡರ್ ವಿಷಯಕ್ಕೆ ಬಂದರೆ ಎಲ್ಲೂ ಗಲಾಟೆ ಇಲ್ಲ, ಅರ್ಧರಾತ್ರಿಯಲ್ಲಿ ಮಧ್ಯರಾತ್ರಿಯಲ್ಲೂ ಹೆಣ್ಣುಮಕ್ಕಳು ಸಾದಾ ಸೀದಾ ಆಗಿ ಓಡಾಡಿಕೊಂಡಿದ್ದಾರೆ. ಎಲ್ಲೂ ಅತ್ಯಾಚಾರ ಇಲ್ಲ, ವರದಕ್ಷಿಣೆಯ ಪಿಡುಗು ಇಲ್ಲ. ಹೆಣ್ಣು ಮಕ್ಕಳನ್ನು ವರದಕ್ಷಿಣೆ ಕೊಡಲಿಲ್ಲವೆಂದು ಯಾರೂ ಸಾಯಿಸು ವುದಿಲ್ಲ. ಹೆಣ್ಣು ಮಕ್ಕಳು ಬಹಳ ಸುಖಸಂತೋಷದಿಂದ ಇದ್ದಾರೆ. ಇನ್ನು ನಾವು ಟ್ಯಾಕ್ಸ್ ಕೊಡುತ್ತಿದ್ದೇವೆ. ಟ್ಯಾಕ್ಸ್ ಆನ್ ವೆಹಿಕಲ್ಸ್ ಬಗ್ಗೆ ಹೇಳಬೇಕೆಂದರೆ ಬಹಳ ದೂರ ಬೇಡ ಬೆಂಗಳೂರು–ಮೈಸೂರು ರಸ್ತೆಯನ್ನೇ ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಮಾನ್ಯ ರಘುಪತಿಯವರು ಆ ಜಿಲ್ಲಾ ಮಂತ್ರಿಗಳು ಮೈಸೂರಿಗೆ ಅವರು ಬಹಳವಾಗಿ ಹೋಗುತ್ತಿದ್ದಾರೆ. ಮೊನ್ನೆತಾನೆ ನಾನು ಲೋಕೋಪಯೋಗಿ ಮಂತ್ರಿಗಳಿಗೆ ಹೇಳಿದೆ Mysore–Bangalore road... There would be nice roads and very small number of pot holes but today, there is a bit of good road and the remaining portion of the road is full of pot holes. ನಾವು ಕೊಡುವ ಟ್ಯಾಕ್ಸ್ ನಮಗೆ ಬರುತ್ತದೆ ನೋಡಿ, ಅದಕ್ಕೆ ಅಲ್ಲಿ ಪಾಟ್ ಹೋಲ್ಸ್ ಇವೆ. ಲಕ್ಷ ಅಥವಾ ಎಂಬತ್ತು ಸಾವಿರ ಕೊಟ್ಟು ಒಂದೊಂದು ಡಬ್ಬಾಕಾರು, ಅಂಬಾಸಿಡರ್ ಕಾರನ್ನಾದರೂ ತೆಗೆದುಕೊಂಡಿರುತ್ತಾರೆ. ಇಂತಹ ರಸ್ತೆಯಲ್ಲಿ ಈ ಕಾರುಗಳ ಪ್ರಯಾಣ ಸುಖಕರವಾಗಿಯೇ ಇರುತ್ತದೆ. ನಾವು ಕೊಟ್ಟ ಟ್ಯಾಕ್ಸ್ ನಮಗೆ ಚೆನ್ನಾಗಿ ಉಪಯೋಗ ಆಗುತ್ತಿದೆ ಎಂದು ತಿಳಿದುಕೊಂಡರೆ ಸಂತೋಷ ಪಡದೆ ಇನ್ನೇನು ಮಾಡಬೇಕು ?

ಪೆನ್‌ಶನ್ ಅಂಡ್ ಅದರ್ ಸರ್ವಿಸಸ್ ಬಗ್ಗೆ ನೋಡುವುದಾದರೆ, ಮಾನ್ಯ ಸೂರ್ಯನಾರಾಯಣ ರಾವ್ ಅವರು ಹೇಳುತ್ತಿದ್ದರು ಹತ್ತು–ಹದಿನೈದು ವರ್ಷಗಳಾದರೂ ಪೆನ್‌ಶನ್ ಸಿಕ್ಕುತ್ತಿಲ್ಲ ಎಂದು. ಬಹುಶಃ ಅವರ ಭಾವನೆ ತಪ್ಪಾಗಿರಬಹುದು. ನಿವೃತ್ತಿಯಾದಕೂಡಲೇ ಪೆನ್‌ಶನ್ ಸಿಕ್ಕುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಓಲ್ಡ್ ಏಜ್ ಪೆನ್‌ಶನ್ ಯಾವ ತೊಂದರೆಯೂ ಇಲ್ಲದೆ ಜನರಿಗೆ ಸಿಗುತ್ತಿದೆ ಎಂದು ನಾನು ಭಾವಿಸಿದ್ದೇನೆ. ಅಂಚೆಪೇದೆಗೆ ಐದು ರೂಪಾಯಿ ಹತ್ತು ರೂಪಾಯಿ ಕೊಡಬೇಕು. ಅವನು ಕೊಡಲೇ ಬೇಕೆಂದು ಡಿಮ್ಯಾಂಡ್ ಮಾಡುತ್ತಾನೆ, ಕೊಡದೇ ಹೋದರೆ ಅವನು ಮನಿಯಾರ್ಡರ್‌ನ್ನು ವಾಪಾಸ್ಸು ಕಳಿಸುತ್ತೇನೆಂದು ಹೇಳುತ್ತಾನೆ. ಆದ್ದರಿಂದ ಎಷ್ಟು ಚೆನ್ನಾಗಿ ಓಲ್ಡ್ ಏಜ್ ಪೆನ್‌ಶನ್ ಸಿಗುತ್ತದೆ ಎಂದು ತಿಳಿಯಬಹುವುದು. ಇದೆಲ್ಲಕ್ಕಿಂತಲೂ ಹೆಚ್ಚಾಗಿ ಫ್ಯಾಮಿಲಿ ಪೆನ್‌ಶನ್, ಓಲ್ಡ್ ಏಜ್ ಪೆನ್‌ಶನ್ ಎಷ್ಟು ದಿವಸಕ್ಕೆ ಅವರಿಗೆ ಹೋಗುತ್ತಿದೆ, ಎಷ್ಟು ಹಣ ಹೋಗುತ್ತಿದೆ ಎಂದು ನೋಡಿದರೆ ಇದಕ್ಕೆ ಹೇಳುವವರು ಕೇಳುವವರು ಇಲ್ಲ. ಕಳಿಸಿದ್ದಕ್ಕೆ ಲೆಕ್ಕ ಇಲ್ಲ, ಹಣ ತಲುಪಿದ್ದಕೆ ಲೆಕ್ಕ ಇಲ್ಲ. ಮುದುಕರು/ಮೋಟರು ಎಷ್ಟು ನೆಮ್ಮದಿಯಾಗಿದ್ದಾರೆಂದರೆ ಹೇಳತೀರದು. ಲೋನ್ ಟು ಗವರ್ನಮೆಂಟ್ ಸರ್ವೆಂಟ್ಸ್ ಹತ್ತು ವರ್ಷಗಳಿಂದಲೂ ಅರ್ಜಿ ಹಾಕಿಕೊಂಡು ಕಾದು ಕುಳಿತಿದ್ದಾರೆ. ಅವರು ಕೂಡ ಸಂತೋಷವಾಗಿದ್ದಾರೆ.

ಆದ್ದರಿಂದ ಇವರೆಲ್ಲ ಸಂತೋಷವಾಗಿದ್ದಾರೆ ಅಂತ ನನ್ನ ಭಾವನೆ. ಇನ್ನು ಜಿಲ್ಲಾ ಆಡಳಿತದ ಬಗ್ಗೆ ಹೇಳುವುದಾದರೆ, ಕ್ಷಾಮ ನಿವಾರಣೆಗಾಗಿ ಜನತೆಗೆ ಅನುಕೂಲವನ್ನು ಮಾಡಿಕೊಟ್ಟಿದ್ದಾರೆ. ಕ್ಷಾಮ ಪ್ರದೇಶಗಳಲ್ಲಿ ಮೈಸೂರು ಜಿಲ್ಲೆ ಕೂಡ ಒಂದು. ಅಲ್ಲಿ ರಿಲೀಫ್ ವರ್ಕ್ಸ್ ಅಂತ ಮಾಡುತ್ತಿದ್ದಾರೆ. ನನ್ನನ್ನು ನೋಡಿದರೆ ಕ್ಷಾಮ ಪ್ರದೇಶದಿಂದ ಬಂದವರು ಅಂತ ಯಾರೂ ಹೇಳುವುದಿಲ್ಲ. ಆದರೆ ನನ್ನ ಕ್ಷೇತ್ರವಾದ ಗುಂಡ್ಲುಪೇಟೆ ಮಾತ್ರ ಸತತವಾಗಿ ಕ್ಷಾಮವನ್ನು ಅನುಭವಿಸತಕ್ಕ ತಾಲ್ಲೂಕಾಗಿದೆ. ಅಲ್ಲಿ ಮಾಡಿದಂತಹ ರೀಲಿಫ್ ವರ್ಕ್ಸ್‌ಗೆ ಒಂದಕ್ಕೂ ಪೇಮೆಂಟ್ ಆಗಿಲ್ಲ. ಬೋರ್‌ವೆಲ್ ಆಗಿಲ್ಲ. ಕೊಳವೆ ತೋಡಿದ್ದಾರೆ, ಅದಕ್ಕೆ ಪಂಪ್‌ಗಳನ್ನು ಹಾಕಿಲ್ಲ. ಎಲೆಕ್ಟ್ರಿಕ್‌ಸಿಟಿ ಇಲ್ಲ. ಪೈಪು ಇಲ್ಲ. ಬೋರ್‌ವೆಲ್ ಮಾತ್ರ ಹಾಕಿದ್ದಾರೆ. ಆದರೆ ಇಷ್ಟು ಕೆಲಸವನ್ನು ಮಾಡಿದಂತಹವರಿಗೆ ದುಡ್ಡು ಕೊಟ್ಟಿಲ್ಲ, ಆದರೂ ಅವರು ಬಹಳ ಸಂತೋಷವಾಗಿದ್ದಾರೆ. ಎಲ್ಲ ನೆಮ್ಮದಿಯಾಗಿದ್ದಾರೆ.

ಮತ್ತೆ ವಿಧವೆಯವರಿಗೆ ಮತ್ತು ಮಹಿಳೆಯವರಿಗೆ ಪರಿಹಾರದ ಬಗ್ಗೆ ಹೇಳುವುದಾದರೆ, ಅವತ್ತು ನಾನು ಮಾತನಾಡುವಾಗ ಹೇಳಿದ್ದೆ. ಇವರ ಚುನಾವಣೆ ಪ್ರಣಾಳಿಕೆಯಲ್ಲಿ ಹೇಳಿರುವಂತಹ ಶೇಕಡ ೫೦ ರಷ್ಟು ಇರತಕ್ಕಂತಹ ಹೆಣ್ಣು ಮಕ್ಕಳಿಗೆ ಎಲ್ಲ ರೀತಿಯ ಮೀಸಲಾತಿಯನ್ನು ಕೊಡುತ್ತೇವೆಂದು ನೀವು ಕಮಿಟ್‌ಮೆಂಟ್ ಮಾಡಿಕೊಂಡಿದ್ದೀರಿ. ಇದು ಹೇಗೆ ನಡೆಯುತ್ತಿದೆ ಅಂದರೆ, ನಾನು ಮೊನ್ನೆ

ದಿವಸ ನಂಜನಗೂಡಿನಲ್ಲಿರುವ ದೇವಸ್ಥಾನಕ್ಕೆ ಹೋಗಿದ್ದೆ. ಅಲ್ಲಿ ಎಂಟು–ಹತ್ತು ಹೆಂಗಸರು ಬಂದು ನನ್ನನ್ನು ಮುತ್ತಿಕೊಂಡು, ನೀವು ಇದ್ದುಕೊಂಡು ನಮಗೆ ಹೀಗೆ ಅನ್ಯಾಯ ಮಾಡಿದ್ದೀರಲ್ಲಾ ಅಂತ ಹೇಳಿಕೊಂಡು ನನ್ನ ಗಂಡ ನನಗೆ ಮೋಸ ಮಾಡಿದ, ನನ್ನ ಗಂಡ ಇಂತಹವರು. ನನ್ನ ಗಂಡ ಅಂತಹವರು ನನ್ನ ಹೆಸರಿನಲ್ಲಿ ಒಂದು ಅರ್ಧ ಎಕರೆ ಜಮೀನು ಇತ್ತು. ಆ ಜಮೀನನ್ನು ತೆಗೆದುಕೊಂಡಿದ್ದಾರೆ. ನನಗೆ ಮೂರು ಕಾಸನ್ನೂ ಕೊಡಲಿಲ್ಲ. ಈಗ ನಾನು ನಂಜನಗೂಡಿನಲ್ಲಿರುವ ಈ ದೇವಸ್ಥಾನದ ಹತ್ತಿರ ತಿರುಪೆ ಅನ್ನಕ್ಕೆ ಬಂದು ನಿಂತುಕೊಂಡಿದ್ದೇನೆ. ಈ ರೀತಿಯಾಗಿ ಹೇಳಿಕೊಂಡು ನನ್ನ ಮುಖಕ್ಕೆ ತಿವಿಯುವುದಕ್ಕೆ ಬಂದುಬಿಟ್ಟರು ಹೀಗಿದೆ ಪರಿಸ್ಥಿತಿ. ಆ ಹೆಣ್ಣು ಮಕ್ಕಳು ಎಷ್ಟು ಸಂತೋಷವಾಗಿದ್ದಾರೆ ಎಂಬುದನ್ನು ತಾವೇ ಯೋಚನೆ ಮಾಡಿಕೊಳ್ಳಿ ಹೆಣ್ಣು ಮಕ್ಕಳು ನಾವು ಶೇಕಡ ೫೦ ರಷ್ಟು ಇರುವುದು ನಿಜ. ಎಲ್ಲರೂ ಮಾತನಾಡುತ್ತಾರೆ, ನಾವು ಅಸ್ಪೃಶ್ಯರು ಎಂದು ನಾವೂ ಕೂಡ ಅಸ್ಪೃಶ್ಯರು. ಆದರೆ ನಾವು ಬೇರೆಯವರ ತರಹ ಅಸ್ಪೃಶ್ಯರಂತೆ ಗಲಾಟೆ ಮಾಡುವುದಿಲ್ಲ. ನಾವು ಅಸ್ಪೃಶ್ಯರಾಗಿದ್ದರೂ ಸಂತೋಷವಾಗಿದ್ದೇವೆ. ದೂರವಲ್ಲಿದ್ದೇವೆ. ಯಾರಾದರೂ ಬಂದು ನಮ್ಮನ್ನು ಮುಟ್ಟುವುದು ಗಿಟ್ಟುವುದು ಮಾಡುವುದು ಬೇಡ, ಆದರೆ ನಮಗೆ ಕೊಡಬೇಕಾದ ಅನುಕೂಲಗಳನ್ನು ಕೊಡಬೇಕು. ಆ ರೀತಿಯ ಭರವಸೆಗಳನ್ನು ಕೊಟ್ಟಿದ್ದೀರಿ. ಕಾಲೇಜುಗಳಲ್ಲಾಗಲಿ ಜಡ್ಜ್‌ಗಳಲ್ಲಾಗಲಿ ಪಿ. ಎಸ್. ಸಿ. ಮೆಂಬರ್‌ಗಳಲ್ಲಾಗಲಿ, ಮತ್ತು ಚುನಾವಣೆಯಲ್ಲಿ ಮೀಸಲಾತಿಯಲ್ಲಾಗಲೀ ಎಲ್ಲಾ ದೃಷ್ಟಿಯಲ್ಲೂ ಶೇಕಡ ೫೦ ರಷ್ಟು ನಮಗೆ ಭಾಗವನ್ನು ತಾವು ಕೊಡಬೇಕು. ೧೮ ಪರ್ಸೆಂಟ್ ಇರುವವರೂ ಇದ್ದಾರೆ. ಒಟ್ಟು ನಾವು ೫೦ ಪರ್ಸೆಂಟ್ ಇದ್ದೇವೆ. ನಮಗೆ ಸರಿಯಾದ ಭಾಗವನ್ನು ಕೊಡಬೇಕು. ತಾವು ಕೊಟ್ಟಂತಹ ಭರವಸೆಗಳನ್ನು ನೆರವೇರಿಸಿಕೊಡಬೇಕು.

ಇನ್ನು ವಿಕ್ಟೋರಿಯ ಆಸ್ಪತ್ರೆಯ ಮುಂದೆ ಹಾಗೂ ಮಾರುಕಟ್ಟೆ ಮುಂದೆ ಯಾರು ಕಾಲಿಟ್ಟು ನಡೆಯುವುದಕ್ಕಾಗುವುದಿಲ್ಲ. ಅಲ್ಲಿ ಕಾಲಿಡುವುದಕ್ಕಾಗುವುದಿಲ್ಲ. ಅಲ್ಲಿ ಹೈಜನಿಕ್ ಕಂಡಿಷನ್ ಇದೆ. ಅಲ್ಲೇ ಸಂಸಾರ ಅಲ್ಲೇ ಮಕ್ಕಳೂ, ಸುರಿಯೂ ಅಲ್ಲೇ, ವ್ಯಾಪಾರವೂ ಅಲ್ಲೇ ಅಂತಹ ಕೊಳಕು ಜಾಗ ಇನ್ನೆಲ್ಲೂ ಇಲ್ಲ. ಮಾರುಕಟ್ಟೆ ಮುಂದೆ ಇರುವಂತಹ ಈ ಕೊಳಕನ್ನು ಸ್ವಲ್ಪ ಕ್ಲೀನ್ ಮಾಡಿಸುವುದಕ್ಕೆ ಯಾರು ಹೇಳುವವರು, ಕೇಳುವವರು ಇಲ್ಲ. ಮುನಿಸಿಪಲ್ ಅಥಾರಿಟೀಸ ನವರೂ ಇಲ್ಲ. ಅಲ್ಲಿ ಪೋಲೀಸ್‌ನವರು ಇಲ್ಲ ಯಾರ್ಯಾರೂ ಇಲ್ಲ, ಅದನ್ನು ಕ್ಲೀನ್ ಮಾಡಿಸಿ, ಪೋಲೀಸ್‌ನವರನ್ನು ಸರಿಯಾದ ಬಂದೋಬಸ್ತ್‌ಗೋಸ್ಕರವಾಗಿ ಹಾಕಬೇಕು. ಅದೇ ರೀತಿ ನ್ಯಾಷನಲ್ ಹೈಸ್ಕೂಲಿಗೆ ಹೋಗುವ ರಸ್ತೆಯ ಪಕ್ಕದಲ್ಲಿ ಬುಟ್ಟಿ ಹೆಣೆಯುವವರ (ಮೇದರು) ಕಾಲೋನಿಯೇ ಅಲ್ಲಿ ಪ್ರಾರಂಭವಾಗಿಬಿಟ್ಟಿದೆ. ಮೊದಲು ಅಲ್ಲಿ ಗಳಗಳನ್ನು ಇಟ್ಟುಕೊಂಡು ಬುಟ್ಟಿಯನ್ನು ಮಾಡುತ್ತಿದ್ದರು. ಈವಾಗ ಅಲ್ಲೇ ಗುಡಿಸಲುಗಳನ್ನು ಕಟ್ಟಿಕೊಂಡು ದೊಡ್ಡ ಕಾಲೋನಿಯೇ ಆಗಿಬಿಟ್ಟಿದೆ. ಅದು ಯಾರ ನಿಗಕ್ಕೂ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಗರ ಬೆಳೆಯುತ್ತಿದೆ. ತಾವು ಇದನ್ನು ನೋಡಬೇಕು. ನಗರ ಪ್ರದೇಶದಲ್ಲಿರುವವರೆಲ್ಲರೂ ಸಂತೋಷವಾಗಿದ್ದಾರೆ. ಹೇಗೆ ಸಂತೋಷವಾಗಿದ್ದಾರೆಂಬುದನ್ನು ತಾವು ನೋಡಬೇಕು. ಮಾನ್ಯ ರಘುಪತಿಯವರು ಹಾಗೂ ರಾಮದೇವ್‌ರವರು ಯಾವಾಗ ನೋಡಿದರೂ ಯಾವುದೇ ವಿಷಯ ಬಂದಾಗಲೂ ಕೂಡ ಎದ್ದು ನಿಂತು ಮಾತನಾಡುತ್ತಾರೆ. ಇದು ಏನನ್ನು ತೋರಿಸುತ್ತದೆಂದರೆ, ಮುಖ್ಯಮಂತ್ರಿಗಳಿಗೆ ಅಧಿಕಾರ ನಡೆಸುವುದು ಗೊತ್ತಿಲ್ಲ ಅಂತ. ಆದರೆ ನನಗೆ ವಿಶ್ವಾಸವಿದೆ ಮುಖ್ಯ ಮಂತ್ರಿಗಳು ಚೆನ್ನಾಗಿ ಆಡಳಿತವನ್ನು ನಡೆಸಬಲ್ಲರು ಅಂತ. ತಾವು ಮುಖ್ಯ ಮಂತ್ರಿಗಳಾಗಿದ್ದೀರಿ, ಸರಿಯಾದ ರೀತಿಯಲ್ಲಿ ಸರ್ಕಾರವನ್ನು ನಡೆಸಿ, ನಮ್ಮೆಲ್ಲರನ್ನೂ ಸಂತೋಷ ಪಡಿಸಬೇಕು. ಇಷ್ಟು ಸಮಯ ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಡಿ.ಜಿ. ಬಸವನಗೌಡ (ಹೊನ್ನಾಳಿ).–ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕಂಥ ಸುಮಾರು ೧೬ ಬೇಡಿಕೆಗಳಿಗೆ ಬೆಂಬಲವನ್ನು ಸೂಚಿಸುತ್ತಾ ಕೆಲವೊಂದು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಈಗ ಪೋಲೀಸ್ ಖಾತೆಯಲ್ಲಿರತಕ್ಕಂತಹ ಒಂದು ವ್ಯವಸ್ಥೆಯಲ್ಲಿ ಕೆಲವು ತಾಲ್ಲೂಕುಗಳಿಗೆ ಪ್ರತ್ಯೇಕವಾದ ಪೋಲೀಸ್ ಠಾಣೆಗಳು ಇಲ್ಲ. ಅಂದರೆ ಸರ್ಕಲ್ ಇನ್ಸ್‌ಪೆಕ್ಟರ್ ಇಲ್ಲ ೨–೩ ತಾಲ್ಲೂಕುಗಳಿಗೆ ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್ ಇದ್ದಾರೆ ಆದುದರಿಂದ ಇದನ್ನು ತೆಗೆದು ಹಾಕಿ ತಾಲ್ಲೂಕಿಗೆ ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್‌ರವರನ್ನು ಇಡಿ. ಇಡೀ ಆಡಳಿತದ ದೃಷ್ಟಿಯಿಂದ, ಆ ಭಾಗದ ಸುಭದ್ರತೆಯ ದೃಷ್ಟಿಯಿಂದ ಆ ರೀತಿ ಮಾಡಬೇಕು ಎಂದು ನಾನು ಸಲಹೆ ಕೊಡುತ್ತಿದ್ದೇನೆ.

ಅದೇರೀತಿ ಹೋಬಳಿಗೊಂದು ಔಟ್ ಪೋಲೀಸ್ ಸ್ಟೇಷನ್‌ನನ್ನು ರಚನೆ ಮಾಡಿದರೆ ಸಾರ್ವಜನಿಕವಾಗಿ ಇರತಕ್ಕಂತಹ ಕುಂದುಕೊರತೆಗಳನ್ನು ಇಲಾಖೆಯವರು ಬಗ್ಗೆಹರಿಸುವುದಕ್ಕೆ ಸಾಧ್ಯ. ಜೊತೆಗೆ ಅವರು ಸಾರ್ವಜನಿಕರ ಸಂಪರ್ಕವನ್ನು ಹೊಂದಿರಬೇಕು.

(ಉಪಾಧ್ಯಕ್ಷರು ಅಧ್ಯಕ್ಷರ ಸ್ಥಾನವನ್ನಲಂಕರಿಸಿದರು)

ಬೆಂಗಳೂರು ನಗರದಲ್ಲಿ ಪ್ರತಿ ದಿವಸ ಅಪಘಾತಗಳು ಆಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇದರ ಬಗ್ಗೆ ಗೃಹ ಇಲಾಖೆಯಾವರು ಗಮನ ಹರಿಸಿ ಟ್ರಾಫಿಕ್ ಸಿಗ್ನಲ್‌ಗಳನ್ನು ತಾಂತ್ರಿಕವಾಗಿ ಅಳವಡಿಸಿ, ಹೆಚ್ಚಿನ ರೀತಿಯಲ್ಲಿ ಆಗುತ್ತಿರುವ ಅಪಘಾತಗಳನ್ನು ತಡೆಗಟ್ಟಬಹುದು. ಪ್ರತಿಯೊಂದು ವೃತ್ತದಲ್ಲೂ ಆಟೋಮ್ಯಾಟಿಕ್ ಸಿಗ್ನಲ್‌ಗಳನ್ನು ಅಳವಡಿಸಬೇಕು. ಸಂಚಾರ ವ್ಯವಸ್ಥೆಯನ್ನು ಬೆಂಗಳೂರಿನಲ್ಲಿ ಸರಿಯಾದ ರೀತಿಯಲ್ಲಿ ಮಾಡಿಕೊಡಬೇಕು.

ಹಳ್ಳಿಗಾಡಿನಲ್ಲಿ ಈಗ ಇರುವ ವ್ಯವಸ್ಥೆಯ ಪ್ರಕಾರ ಯಾವುದಾದರೊಂದು ಊರು ಪೋಲೀಸ್ ಸ್ಟೇಷನ್‌ಗೆ ಬಂದರೆ ಅಲ್ಲಿರತಕ್ಕಂತಹ ಸರ್ಕಲ್ ಇನ್ಸ್‌ಪೆಕ್ಟರ್ ಆಗಲಿ, ಅಥವಾ ಸಬ್ ಇನ್ಸ್‌ಪೆಕ್ಟರಾಗಲಿ, ೧೦–೧೫ ಮೈಲಿ ದೂರದಲ್ಲಿರುವ ಹಳ್ಳಿಗೆ ತಕ್ಷಣ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಯಾರು ದೂರು ಕೊಟ್ಟಿದ್ದಾರೋ, ಅಥವಾ ತೊಂದರೆಯಲ್ಲಿದ್ದಾರೋ ಅವರ ನೆರವಿಗೆ ಬರುವುದಕ್ಕಾಗುವುದಿಲ್ಲ. ಈ ಕಾರಣದಿಂದ ಪೋಲೀಸ್ ಸ್ಟೇಷನ್ ಇರುವ ಸಮೀಪದಲ್ಲೇ ಈ ಅಧಿಕಾರಿಗಳಿಗೆ ವಸತಿ ಸೌಲಭ್ಯವನ್ನು ಮಾಡಿಕೊಟ್ಟರೆ ಒಳ್ಳೆಯದು. ಅದೇ ಪ್ರಕಾರ ನಮ್ಮ ಸರ್ಕಾರದವರು ಪೋಲೀಸ್ ಇಲಾಖೆಯ ಮುಖಾಂತರ ಸಾರ್ವಜನಿಕರಿಗೆ ಸೂಕ್ತ ವ್ಯವಸ್ಥೆಯನ್ನು ಹಾಗೂ ಸಾರ್ವಜನಿಕರ ಆಸ್ತಿಪಾಸ್ತಿಯನ್ನು ರಕ್ಷಣೆ ಮಾಡುವುದಕ್ಕೆ ಈ ಒಂದು ಕೆಲಸವನ್ನು ಮಾಡಿದರೆ ಒಳ್ಳೆಯದು, ಈ ಒಂದು ವ್ಯವಸ್ಥೆ ರಾಜ್ಯದಲ್ಲಿ ಆಗಬೇಕೆಂದು ಸಲಹೆ ಕೊಡುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ. ಎಸ್. ಬಸವರಾಜ್ (ಅರಸೀಕೆರೆ).—ಮಾನ್ಯ ಅಧ್ಯಕ್ಷರೆ, ಈಗ ಸದನದ ಮುಂದೆ ಮಂಡಿಸಿರತಕ್ಕಂಥಹ ಸುಮಾರು ೧೬ ಬೇಡಿಕೆಗಳನ್ನು ವಿರೋಧ ಮಾಡುತ್ತಾ ಕೆಲವೊಂದು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಪೋಲೀಸ್ ಇಲಾಖೆಯ ಬಗ್ಗೆ ನಾಲ್ಕು ಸಲಹೆಗಳನ್ನು ಕೊಡುತ್ತೇನೆ. ಈಗ ಪೋಲೀಸ್ ಅಧಿಕಾರಿಗಳಿಗೆ ತರಬೇತಿಯನ್ನು ಕೊಟ್ಟಿದ್ದಾರೆ. ಆ ರೀತಿಯ ತರಬೇತಿಯನ್ನು ಕೊಡುವಂತಹ ಕಾಲೇಜೂ ಕೂಡ ನಮ್ಮಲ್ಲಿದೆ. According to Criminal Jurisprudence ನೂರು ಜನ ಅಪರಾಧಿಗಳನ್ನು ಬಿಡುಗಡೆ ಮಾಡಿದರೂ ಚಿಂತೆಯಿಲ್ಲ. ಆದರೆ ಒಬ್ಬ ನಿರಪರಾಧಿಗೆ ಶಿಕ್ಷೆ ಆಗಬಾರದು ಎಂದು ಇದೆ.

೧೧–೩೦ ಎ.ಎಂ.

ಆದರೆ ನಾವು ಈಗ ಪೋಲೀಸ್ ಆಡಳಿತವನ್ನು ನೋಡಿದರೆ ೧೦೦ ಜನ ಅಪರಾಧಿಗಳು ಬಿಡುಗಡೆ ಯಾದರೂ ಚಿಂತೆ ಇಲ್ಲ, ನಿರಪರಾಧಿಗಳನ್ನು ಬಿಡುಗಡೆ ಮಾಡಿದರೂ ಚಿಂತೆ ಇಲ್ಲ, ಅಪರಾಧಿಗಳಿಗೆ ಶಿಕ್ಷೆ ಆಗಬಾರದು ಎನ್ನತಕ್ಕಂಥಾದ್ದು ಈ ದಿನ ರಾಜ್ಯಾದ್ಯಂತ ನಡೆಯುತ್ತಾ ಇರುವುದನ್ನು ನೋಡಬಹುದಾಗಿದೆ. ನಾವು ಈ ಬಗ್ಗೆ ಪ್ರತಿದಿನವೂ ಸಹ ಪೇಪರ್‌ನಲ್ಲಿ ಬರುತ್ತಿರತಕ್ಕದ್ದನ್ನು ನೋಡುತ್ತಾ ಇದ್ದೇವೆ ಹಾಗೂ ಪೋಲೀಸಿನವರು ಮಾಡುತ್ತಾ ಇರತಕ್ಕಂಥಾ ಕಾರ್ಯಚಟುವಟಿಕೆಗಳನ್ನೂ ಸಹ ನೋಡುತ್ತಾ ಇದ್ದೇವೆ. ಆದುದರಿಂದ ನಾನು ಈ ಸಂದರ್ಭದಲ್ಲಿ ರಾಜ್ಯ ಸರ್ಕಾರಕ್ಕೆ ಸಲಹೆ ಮಾಡುವುದಾದರೂ ಇಷ್ಟೆ. ದಯಮಾಡಿ ಈ ಕ್ರಿಮಿನಲ್ ಜ್ಯೂರಿಸ್ ಪ್ರುಡೆನ್ಸ್ ಆಕ್ಟ್‌ನಲ್ಲಿ ೧೦೦ ಜನ ಅಪರಾಧಿಗಳು ಬಿಡುಗಡೆ ಯಾದರೂ ಸಹ ನಿರಪರಾಧಿಗಳಿಗೆ ಶಿಕ್ಷೆಯಾಗಬಾರದು ಎನ್ನುವ ಕಾನೂನು ಏನು ಇದೆ, ಇದನ್ನು ಪರಿಪಾಠ ಮಾಡತಕ್ಕಂಥಾ ಟ್ರೈನಿಂಗನ್ನು ಕೊಡಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಈ ೨೦ನೇ ಶತಮಾನದಲ್ಲಿ ಪೋಲೀಸಿನವರು ಅಪರಾಧಿಗಳನ್ನು ಪತ್ತೆ ಮಾಡತಕ್ಕಂಥಾ ಕ್ರಮ ಪ್ರತಿಯೊಬ್ಬರಿಗೂ ಗೊತ್ತಿರತಕ್ಕಂಥಾ ವಿಷಯ. ಅದು ಏನೆಂದರೆ ಥರ್ಡ್ ಗ್ರೇಡ್ ಮೆಥಡ್ ಎನ್ನುವುದು. ಈಗ ಈ

ಥರ್ಡ್‌ಗ್ರೇಡ್ ಮೆಥಡ್ ಏನು ಇದೆ ಅದನ್ನು ಉಪಯೋಗಿಸಿಕೊಳ್ಳದೆ ತಾಂತ್ರಿಕ ದೃಷ್ಟಿಯಿಂದ ಎಲೆಕ್ಟ್ರಾನಿಕ್ ಮೆಥಡ್‌ಸಲ್ಲಿ ಸರ್ಕಾರದವರು ಆ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುವಂತೆ ಏರ್ಪಾಡು ಮಾಡಬೇಕು ಎಂದು ಸಲಹೆ ಮಾಡುತ್ತೇನೆ. ಇನ್ನೊಂದು ವಿಷಯ ಏನೆಂದರೆ ಹಳ್ಳಿಗಾಡಿನಲ್ಲಿರುವ ಪೋಲೀಸ್ ಸ್ಟೇಷನ್‌ಗೆ ರೈತಭಾಂದವರು ಹೋದರೆ ಅವರನ್ನು ಮಾನ ಮರ್ಯಾದೆಯಿಂದ ಕುಳ್ಳಿರಿಸಿ ಮಾತನಾಡತಕ್ಕಂಥಾ ಒಂದು ಸೌಜನ್ಯತೆ ಈ ಪೋಲೀಸ್ ಅಧಿಕಾರಿಗಳಲ್ಲಿ ಇಲ್ಲ, ಆ ರೀತಿ ಆಗಬಾರದು ಎನ್ನತಕ್ಕಂಥಾ ಮಾತನ್ನು ಹೇಳುತ್ತೇನೆ. ಅವರನ್ನು ಸೌಜನ್ಯದಿಂದ ನೋಡುವ ರೀತಿಯಲ್ಲಿ ಮಾಡಬೇಕೆಂದು ನಾನು ಸರ್ಕಾರದಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ಪೋಲೀಸ್ ಅಧಿಕಾರಿಗಳು ಅವನು ಯಾರೇ ಆಗಿರಲಿ, ಪೋಲೀಸ್ ಠಾಣೆಗೆ ಬರತಕ್ಕವರೊಡನೆ ಸೌಜನ್ಯತೆಯಿಂದ ಮಾತನಾಡಿ ಅವರ ಕಷ್ಟಸುಖಗಳನ್ನು ಕೇಳಿ ಅವರು ಏನು ಫಿರ್ಯಾದೆಗಳನ್ನು ಕೊಡುತ್ತಾರೆ ಅದನ್ನು ತೆಗೆದುಕೊಂಡು ಸರಿಯಾಗಿ ವಿಚಾರಣೆ ಮಾಡತಕ್ಕದರ ಬಗ್ಗೆ ಸರ್ಕಾರದ ವತಿಯಿಂದ ಆ ಅಧಿಕಾರಿಗಳಿಗೆ ಸೂಕ್ತವಾದ ಆದೇಶ ಕೊಡತಕ್ಕಂಥಾ ಕೆಲಸ ಆಗಬೇಕಾಗಿದೆಂದೂ, ಈ ಒಂದು ಸಲಹೆಯನ್ನು ಸರ್ಕಾರಕ್ಕೆ ಕೊಡಲು ಇಷ್ಟಪಡುತ್ತೇನೆ.

ಇನ್ನು ರೈತರ ಬಗ್ಗೆ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಸುಮಾರು ೭೦-೮೦ ಪರ್ಸೆಂಟ್ ರೈತರು ಏನು ಇದ್ದಾರೆ ಅವರಿಂದಲೇ ಜೀವನ ಮಾಡತಕ್ಕಂಥಾ ಜನತೆ ಇಷ್ಟೊತ್ತು ಇದ್ದರೂ ಸಹ ಆ ರೈತರಿಗೆ ಅನುಕೂಲ ಕಲ್ಪಿಸತಕ್ಕಂಥಾ ಯಾವ ಒಂದು ಕಾರ್ಯಕ್ರಮವನ್ನೂ ಸಹ ಸರಿಯಾಗಿ ಹಾಕಿಕೊಂಡಿಲ್ಲ. ಉದಾಹರಣೆಗೆ ರೈತನಿಗೆ ಏನಾದರೂ ಕೂಡ ಹೊಲದಲ್ಲಿ ಹಾವು ಕಡಿದರೆ, ಇನ್ನು ಏನಾದರೂ ಕಡಿದರೆ ಆತ ಅದರಿಂದ ಸತ್ತರೆ ಅವನ ಯೋಗಕ್ಷೇಮಕ್ಕೆ ಯಾರೂ ಸಹ ಮುಂದೆ ಬರಲಿಕ್ಕಿಲ್ಲ. ಅದೇ ಕಾರ್ಖಾನೆಯಲ್ಲಿರುವ ಕಾರ್ಮಿಕರು ಯಾರಾದರೂ ಸತ್ತರೆ ಅವರಿಗೆ ಕಾಂಪನ್ಸೇಷನ್, ಇತರೇ ವಗೈರೆ ಅನುಕೂಲಗಳು ಸಿಕ್ಕುತ್ತವೆ. ಹಾಗೆ ರೈತರ ಬಗ್ಗೆಯೂ ಸರ್ಕಾರ ಸರಿಯಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಈ ಸಂದರ್ಭದಲ್ಲಿ ಸಲಹೆ ಕೊಡಲಿಕ್ಕೆ ಇಚ್ಛಿಸುತ್ತೇನೆ.

ಇನ್ನೊಂದು ವಿಷಯ, ಈ ಪೋಲೀಸ್ ಇಲಾಖೆಯ ಬಗ್ಗೆ ಹೇಳುವುದಾದರೆ, ಇನ್‌ವೆಸ್ಟಿಗೇಷನ್ ಗೋಸ್ಕರವಾಗಿ ಪೋಲೀಸ್ ನಾಯಿಗಳನ್ನು ಏನು ಬಳಸುತ್ತಾರೆ ಅದರ ಬಗ್ಗೆ ಒಂದು ಉದಾಹರಣೆ ಹೇಳುತ್ತೇನೆ. ಈಗ್ಗೆ ೨-೩ ವರ್ಷದ ಹಿಂದೆ ನನ್ನ ತಾಲ್ಲೂಕಿನಲ್ಲಿ ಒಂದು ಕೃತ್ಯ ನಡೆಯಿತು. ಆ ಕೃತ್ಯದ ಬಗ್ಗೆ ಇನ್‌ವೆಸ್ಟಿಗೇಷನ್ ಪೋಲೀಸ್ ನಾಯಿಯಿಂದ ನಡೆಯಿತು. ಆ ಪೋಲೀಸ್ ನಾಯಿ ಆ ಕೃತ್ಯ ನಡೆದ ಸ್ಥಳಕ್ಕೆ ಹೋಯಿತು ಅದರ ಸಮೀಪದಲ್ಲಿ ಒಂದು ಬಾವಿ ಇತ್ತು. ಕೃತ್ಯ ನಡೆಸದೆ ಇದ್ದವರು ಆ ಬಾವಿಯಲ್ಲಿ ತಮ್ಮ ಕೈಕಾಲುಗಳನ್ನು ತೊಳೆದುಕೊಂಡು ಹೋಗಿದ್ದರು. ೧೦ ನಿಮಿಷಕ್ಕೆ ಮೊದಲು ಆ ಬಾವಿಯಲ್ಲಿ ಯಾರು ಕೈಕಾಲು ತೊಳೆದುಕೊಂಡು ಹೋಗಿದ್ದರೋ ಅವರ ಮನೆಗೆ ಈ ನಾಯಿ ಹೋಯಿತು. ಈ ಕೃತ್ಯಕ್ಕೆ ಸಂಬಂಧಪಡದೇ ಇದ್ದಂಥಾ ಜನ ಏನು ಇದ್ದರು ಅವರು ಅಲ್ಲಿರುವ ಬಾವಿಯಲ್ಲಿ ಕೈಕಾಲು ತೊಳೆದುಕೊಂಡಿದ್ದಕ್ಕೋಸ್ಕರ ಅವರೇನಾದರೂ ಅಪರಾಧಿಗಳು ಇರಬಹುದೇ ಎಂದುಕೊಂಡು ಆ ಪೋಲೀಸ್ ನಾಯಿಯನ್ನು ಕರೆದುಕೊಂಡು ಹೋದರು. ಆದರೂ ಕೂಡ ಅಪರಾಧಿಗಳನ್ನು ಪತ್ತೆ ಮಾಡತಕ್ಕಂಥಾ ಕಾರ್ಯಕ್ರಮ ಆ ಪೋಲೀಸ್ ನಾಯಿಯಿಂದ ಸರಿಯಾಗಿ ನಡೆಯಲಿಲ್ಲ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಈ ೨೦ನೇ ಶತಮಾನದಲ್ಲಿ ಈ ಬಗ್ಗೆ ಏನಾದರೂ ಇನ್‌ವೆಸ್ಟಿಗೇಷನ್ ಮಾಡಬೇಕಾದರೆ ನಾನಾ ತರಹದ ತಾಂತ್ರಿಕ ಉಪಕರಣಗಳು ಇದ್ದರೂ ಸಹ ಪೋಲೀಸ್ ಇಲಾಖೆಯವರು ಈ ನಾಯಿಗಳನ್ನು ಬಳಸಿಕೊಂಡು ಈ ತರಹ ಇನ್‌ವೆಸ್ಟಿಗೇಷನ್ ಮಾಡಿಸತಕ್ಕಂಥದ್ದು ನನ್ನ ಅಭಿಪ್ರಾಯದಲ್ಲಿ ಸಮಂಜಸವಲ್ಲ ಎಂದು ಹೇಳುತ್ತೇನೆ. ಇನ್‌ವೆಸ್ಟಿಗೇಷನ್ ಮಾಡಬೇಕಾದರೆ ತಾಂತ್ರಿಕ ಜ್ಞಾನ ಪಡೆದುಕೊಂಡವರಿಂದ ಮಾಡಿಸಬೇಕು. ಉದಾಹರಣೆಗೆ ಹೊರದೇಶಗಳಲ್ಲಿರುವ ಗುಪ್ತ ದಳದವರು ಯಾವ ರೀತಿಯಾಗಿ ಅಪರಾಧಗಳನ್ನು ಪತ್ತೆ ಮಾಡುತ್ತಾರೋ ಆ ರೀತಿಯಾಗಿ ಇಲ್ಲೂ ಮಾಡಬೇಕು ಎಂದು ಹೇಳುತ್ತೇನೆ. ಅಪರಾಧಿಗಳನ್ನು ಪತ್ತೆ ಮಾಡುವ ಬಗ್ಗೆ ಏನು ಒಳ್ಳೊಳ್ಳೆಯ ತಾಂತ್ರಿಕ ಉಪಕಾರಣಗಳು ಇವೆ ಅದನ್ನು ಉಪಯೋಗಿಸಿಕೊಂಡು ಪತ್ತೆ ಹಚ್ಚಬೇಕು ಎಂದು ನಾನು ಅಧ್ಯಕ್ಷರ ಮುಖಾಂತರವಾಗಿ ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಇನ್ನು, ವಿಶ್ರಾಂತಿ ವೇತನದ ಬಗ್ಗೆ ಹೇಳುವುದಾದರೆ ಈಗ ಯಾವ ಅಧಿಕಾರಿ ನಿವೃತ್ತಿ ಹೊಂದುತ್ತಾರೋ ಅಂಥವರಿಗೆ ಕೂಡಲೇ ನಿವೃತ್ತಿ ವೇತನ ಸಿಗಬೇಕು. ಆದರೆ ಈಗ ಹಾಗೆ ಸಿಕ್ಕುತ್ತಿಲ್ಲ. ಬಹಳ ಕಷ್ಟವಾಗಿದೆ. ೨-೩ ವರ್ಷಗಳಾದರೂ ಸಹ ಸಿಕ್ಕುವುದಿಲ್ಲ. ಈ ತರಹದ ಹಲವಾರು ಪ್ರಕರಣಗಳು

ಇವೆ. ನೌಕರರ ಸರ್ವಿಸ್‌ನ್ನು ಕೌಂಟ್ ಮಾಡಿ ಅವರು ನಿವೃತ್ತರಾದ ಕೂಡಲೇ ಅವರಿಗೆ ಏನೇನು ಸವಲತ್ತುಗಳು ಸಿಗಬೇಕು ಅದು ಕೂಡಲೇ ಸಿಗುವ ಹಾಗೆ ಏರ್ಪಾಡು ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ. ಸಾಮಾನ್ಯವಾಗಿ ನಮ್ಮ ರಾಜ್ಯದ ಬಹುಪಾಲು ಜನರು ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥಾ ಜನರು. ಅವರಿಗೆ ಬರತಕ್ಕಂಥಾ ಭಾಷೆ ಕನ್ನಡ, ಡಿಸ್ಟ್ರಿಕ್ಟ್‌ನಲ್ಲಿ ಆಡಳಿತ ಮಾಡತಕ್ಕಂಥಾ ಐ.ಎ.ಎಸ್. ಅಧಿಕಾರಿಗಳು ಏನು ಇದ್ದಾರೆ ಅಂಥವರನ್ನೂ ಅಲ್ಲಿಗೆ ದಯಮಾಡಿ ಅವರನ್ನು ಹಾಕಬೇಡಿ ಎಂದು ನಾನು ಸರ್ಕಾರವನ್ನು ಮನವಿ ಮಾಡಿಕೊಳ್ಳುತ್ತೇನೆ. ಜಿಲ್ಲಾಧಿಕಾರಿಯಾಗಿ ಯಾವುದಾದರೂ ಜಿಲ್ಲೆಗೆ ಹಾಕಬೇಕಾದರೆ ಕೆ.ಎ.ಎಸ್. ದರ್ಜೆಯ ಅಧಿಕಾರಿಗಳನ್ನು ಹಾಕಿದರೆ ಒಳ್ಳೆಯದು. ಆ ಗ್ರಾಮಾಂತರ ಪ್ರದೇಶದ ಜನತೆ ತಮ್ಮ ಬೇಡಿಕೆ ಏನು ಇದೆ ಅದನ್ನು ಅರ್ಥ ಮಾಡಿಕೊಳ್ಳತಕ್ಕಂಥಾ ಅಧಿಕಾರಿಯನ್ನು ಆ ಜಿಲ್ಲೆಗೆ ಹಾಕಬೇಕು ಎಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ಕನ್ನಡವನ್ನು ಬಲ್ಲ, ಕನ್ನಡಿಗರೇ ಆದಂಥಾ ಸೀನಿಯರ್ ದರ್ಜೆಯ ಕೆ.ಎ.ಎಸ್. ಅಧಿಕಾರಿಯನ್ನು ಜಿಲ್ಲೆಗಳಿಗೆ ಹಾಕಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ಬಹು ಮುಖ್ಯವಾದ ವಿಷಯ ಏನೆಂದರೆ, ನಮ್ಮ ತಾಲ್ಲೂಕಿನಲ್ಲಿ ಜಾಸ್ತಿಯಾಗಿ ಗುಡಿಸಲು ಇರತಕ್ಕಂಥಾ ಪ್ರದೇಶವಿದೆ. ಅಲ್ಲಿರುವ ಗುಡಿಸಲಿಗೆ ಬೆಂಕಿ ಏನಾದರೂ ಬಿದ್ದರೆ ಅಲ್ಲಿರತಕ್ಕಂಥಾ ಗುಡಿಸಲು ಮನೆಗಳು ಎಲ್ಲಾ ನಾಶವಾಗಿ ಬಿಡುತ್ತದೆ. ನಮ್ಮ ತಾಲ್ಲೂಕಿನಲ್ಲಿ ಬೆಂಕಿ ಬೀಳುವುದೇ ಜಾಸ್ತಿ. ಅಗ್ನಿಶಾಮಕ ದಳದವರನ್ನು ಕರೆಸಬೇಕಾದರೆ ಹಾಸನಕ್ಕೆ ಫೋನ್ ಮಾಡಿ ಕರೆಸಿಕೊಳ್ಳಬೇಕಾಗುತ್ತದೆ. ಅದು ಬರುವ ತನಕ ಇಲ್ಲಿರುವ ಗುಡಿಸಲುಗಳೆಲ್ಲಾ ನಾಶವಾಗಿ ಬಿಡುತ್ತದೆ. ಆದುದರಿಂದ ಬೇಗನೆ ಕರೆಸಿಕೊಳ್ಳುವುದಕ್ಕಾಗುವುದಿಲ್ಲ. ಅದಕ್ಕೋಸ್ಕರವಾಗಿ ನಮ್ಮ ತಾಲ್ಲೂಕಿಗೆ ಒಂದು ಅಗ್ನಿಶಾಮಕ ದಳದ ಒಂದು ಸಂಸ್ಥೆಯನ್ನು ತೆರೆಯಬೇಕು ಎಂದು ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಸರ್ಕಾರದವರು ಎದುರಿಸತಕ್ಕ ಪರಿಸ್ಥಿತಿ ನಮಗೆಲ್ಲರಿಗೂ ಗೊತ್ತಿರತಕ್ಕ ವಿಚಾರ. ಈ ಬಡ್ಜೆಟ್ ಏನು ಇದೆ ಡಿಫಿಸಿಟ್ ಬಡ್ಜೆಟ್, ಇದನ್ನು ತುಂಬಿಸತಕ್ಕದ್ದಕ್ಕೆ ಕಾರ್ಯಕ್ರಮಗಳನ್ನು ಈ ಸರ್ಕಾರ ಹಾಕಿಕೊಂಡಿಲ್ಲ, ಎಂದರೆ ತಪ್ಪಾಗಲಿಕ್ಕಿಲ್ಲ. ಈ ಸರ್ಕಾರ ಅಧಿಕಾರಕ್ಕೆ ಬಂದು ೯ ತಿಂಗಳಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಈ ೯ ತಿಂಗಳಲ್ಲಿ ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದಾರೆಂದು ನಾನು ಅವರನ್ನು ಕೇಳಲಿಕ್ಕೆ ಇಷ್ಟಪಡುತ್ತೇನೆ. ಜನತೆಯ ಕಷ್ಟಸುಖಗಳನ್ನು, ಅಹವಾಲುಗಳನ್ನು ಕೇಳುವುದಕ್ಕೆ ಅವರು ಎಷ್ಟು ಸಾರಿ ಪ್ರವಾಸ ಮಾಡಿದ್ದಾರೆ? ರಾಜ್ಯ ಸರ್ಕಾರದವರು ಹಿಂದೆ ಒಂದು ಕೋಟಿರೂಪಾಯಿಗಳನ್ನು ಖರ್ಚು ಮಾಡಿ ಹೆಲಿಕ್ಯಾಪ್ಟರ್‌ನ್ನು ಕೊಳ್ಳತಕ್ಕ ಉದ್ದೇಶ ಏನಿತ್ತು ? ಮುಖ್ಯಮಂತ್ರಿಗಳು ಎಂದಮೇಲೆ ಸಮಯದ ಮಿತಿ ಅವರಿಗೆ ಇರುತ್ತದೆ. ಪ್ರತಿಯೊಬ್ಬರ ಅಹವಾಲುಗಳನ್ನು ಕೇಳತಕ್ಕ ಪರಿಸ್ಥಿತಿ ಇರುತ್ತದೆ. ಈ ಹೆಲಿಕ್ಯಾಪ್ಟರ್‌ನ್ನು ಹಿಂದಿನ ಸರ್ಕಾರದವರು ಕೊಂಡಿದ್ದರು. ಇಂಥಾದ್ದನ್ನು ಮಾನ್ಯ ಮುಖ್ಯಮಂತ್ರಿಗಳು ಉಪಯೋಗ ಮಾಡಿಕೊಂಡು ಜನತೆಯ ಕಷ್ಟಸುಖಗಳನ್ನು ಕೇಳಬೇಕು. ಇವರು ಹೆಲಿಕ್ಯಾಪ್ಟರ್‌ನ್ನು ಹತ್ತಲಿಕ್ಕೆ ಏಕೆ ಭಯಬೀಳುತ್ತಾರೋ ನನಗೆ ಗೊತ್ತಿಲ್ಲ. ಆದ್ದರಿಂದ ಇವರು ಈಗಾಗಲೂ ಇದನ್ನು ಉಪಯೋಗಮಾಡಿಕೊಂಡು ಜನತೆಯ ಕಷ್ಟಸುಖಗಳನ್ನು ಕೇಳುವುದಕ್ಕೆ ಏರ್ಪಾಡು ಮಾಡಿಕೊಳ್ಳಬೇಕು, ಎಂದು ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ಸರ್ಕಾರ ಮಾಡುತ್ತಿರುವ ಇನ್ನೊಂದು ಕಾರ್ಯಕ್ರಮ ಎಂದರೆ ಈಗ ಪಕ್ಷಾಂತರ ಮಸೂದೆಯನ್ನು ಸಭೆಯ ಮುಂದಿಟ್ಟಿದ್ದಾರೆ. ಇದನ್ನು ಇಟ್ಟನಂತರ ಹಲವಾರು ಜಿಲ್ಲೆಗಳನ್ನೂ ಅವರು ಇಟ್ಟಿದ್ದಾರೆ. ಪಕ್ಷಾಂತರ ಬಿಲ್ಲನ್ನು ಅವರು ಇಟ್ಟರೂ ಸಹ ಅದು ಕಾನೂನು ಆಗಲಿಕ್ಕೆ ಸಾಧ್ಯವಿಲ್ಲ. ಸೆಂಟ್ರಲ್ ಆಕ್ಟ ಏನು ಇದೆ, ಪಕ್ಷಾಂತರ ಬಿಲ್‌ನಲ್ಲಿ ಏನು ಇದೆ ಎಂದು ನೋಡಿ, ಆದರ ಆಗುಹೋಗುಗಳನ್ನು ತಿಳಿದುಕೊಂಡಿದ್ದರೂ ಸಹ ಈ ಮಸೂದೆಯನ್ನು ಇಟ್ಟು ಸದಸ್ಯರಿಗೆ ಬೆದರಿಕೆ ಬರತಕ್ಕ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆಂದರೆ ತಪ್ಪಾಗಲಿಕ್ಕಿಲ್ಲ. ಜೊತೆಗೆ ಈ ಮಸೂದೆಯಿಂದ ರಾಜ್ಯದ ಆಡಳಿತವನ್ನು ಇವರು ಮುಂದುವರಿಸಿಕೊಂಡು ಹೋಗಬಹುದು ಎಂದು ತಿಳಿದುಕೊಂಡಿದ್ದಾರೆ. ಇದರಿಂದ ಸದಸ್ಯರಿಗೆ ಯಾವ ತರಹದ ಅನುಕೂಲವಾಗಲಿಕ್ಕಿಲ್ಲ ಇದ್ದುಬಿದ್ದು ಹೋಗುತ್ತದೆ ಎಂದು ನಾನು

ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸಂದರ್ಭದಲ್ಲಿ ನನಗೆ ಒಂದು ಕಥೆ ಜ್ಞಾಪಕಕ್ಕೆ ಬರುತ್ತಿದೆ. ಚಾಣಕ್ಯ ತಂತ್ರ ತಮಗೆಲ್ಲರಿಗೂ ಗೊತ್ತಿರ ಬಹುದು. ಚಾಣಕ್ಯ ಮೌರ್ಯ ವಂಶವನ್ನು ಸ್ಥಾಪನೆಮಾಡಬೇಕು ಎಂದು ನಂದ ವಂಶವನ್ನು ನಾಶಮಾಡಲು ಅಮಾತ್ಯ ರಾಕ್ಷಸನನ್ನು ಕರೆಯಿಸಿದ. ಅಮಾತ್ಯ ರಾಕ್ಷಸ ವಿಷಕನ್ಯೆಯ ಮೂಲಕ ಪರ್ವತ ರಾಜನನ್ನು ಕೊಲ್ಲಲು ಪ್ರಯತ್ನಮಾಡಿದ, ಈ ವಿಷ ಕನ್ಯೆ ಉಗುಳಿದರೆ ಕಾಗೆಯೂ ಸಾಯುತ್ತದೆ. ಆ ತರಹ ಈ ಮಸೂದೆ ಆಯಿತು. ಆದ್ದರಿಂದ ಮಾನ್ಯ ಸದಸ್ಯರುಗಳು ಈ ಮಸೂದೆಯನ್ನು ಸರ್ಕಾರದವರು ಏನು ತಂದಿದ್ದಾರೆ. ಇದನ್ನು ನಾವು ಒಪ್ಪಿ ಕೊಂಡರೆ ಪರ್ವತರಾಜನಿಗಾದ ಪರಿಸ್ಥಿತಿ ನಮಗೂ ಬರುತ್ತದೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಸ್. ಬಂಗಾರಪ್ಪ (ಸೊರಬ).— ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳು ಸುಮಾರು ೧೬ ಏನು ಇವೆ ಅವುಗಳನ್ನು ವಿರೋಧಮಾಡತಕ್ಕ ಒಂದು ಸಂದರ್ಭ ಬಂದಿದ್ದಕ್ಕಾಗಿ ನಾನು ಸಂತೋಷ ಪಡುತ್ತೇನೆ. ಸರ್ಕಾರಗಳು ಚುನಾವಣೆಯಾದ ತಕ್ಷಣ ಪ್ರಜಾಪ್ರಭುತ್ವಕ್ಕನುಗುಣವಾಗಿ ಸ್ಥಾಪನೆಯಾಗುತ್ತವೆ, ಈ ರೀತಿಯಾಗಿ ಸ್ಥಾಪನೆಯಾಗತಕ್ಕ ಕಾಲದಲ್ಲಿ ರಾಜ್ಯದ ಜನತೆಯ ಮುಂದೆ ಚುನಾವಣೆ ಕಾಲದಲ್ಲಿ ಯಾವ ಭರವಸೆಗಳನ್ನು ಕೊಟ್ಟಿದ್ದರೋ ಅವುಗಳನ್ನು ಈಡೇರಿಸತಕ್ಕ ಜವಾಬ್ದಾರಿ ಆ ಒಂದು ಪಕ್ಷಕ್ಕೆ ಆ ಒಂದು ಸರ್ಕಾರಕ್ಕೆ ಇರುತ್ತದೆ. ಇದು ಪ್ರಜಾಪ್ರಭುತ್ವದ ಮೂಲಭೂತವಾದ ನೀತಿ. ಈ ನೀತಿಯನ್ನು ಸರ್ಕಾರದವರೂ ಸಹ ಒಪ್ಪಿಕೊಂಡಿದ್ದಾರೆ, ಇದು ಒಳ್ಳೆಯದು. ಚುನಾವಣೆ ಕಾಲದಲ್ಲಿ ಯಾವ ಯಾವ ಮಾತುಗಳನ್ನು ರಾಜ್ಯದ ಜನತೆಯ ಮುಂದೆ ಆಡಿದ್ದೇವೆ ಎನ್ನುತಕ್ಕ ನೆನಪನ್ನು ಅಧಿಕಾರಕ್ಕೆ ಬಂದಿರತಕ್ಕವರು ತಮ್ಮ ಮನಸ್ಸಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಆ ಮಾತುಗಳನ್ನು ಜಾರಿಗೆ ಕೊಡತಕ್ಕ ಜವಾಬ್ದಾರಿ ಆಡಳಿತ ಪ್ರಾರಂಭವಾದ ಕೂಡಲೇ ಬರಬೇಕಾಗುತ್ತದೆ. ಈ ದಿಸೆಯಲ್ಲಿ ನಾನು ನನ್ನ ಒಂದು ಅಭಿಪ್ರಾಯವನ್ನು ಹಿಂದೆ ಸರ್ಕಾರದವರು ಆಯವ್ಯಯ ಪತ್ರವನ್ನು ಮಂಡನೆ ಮಾಡಿದಾಗ ಸಾಕಷ್ಟು ಹೇಳಿದ್ದೇನೆ. ಚುನಾವಣಾ ಪ್ರಣಾಳಿಕೆಯ ವಿಷಯದಲ್ಲಿಯೂ ಹೇಳಿದ್ದೇನೆ. ಪುನಃ ಆ ವಿವರಣೆಗೆ ಹೋಗತಕ್ಕ ಸಂದರ್ಭ ಇದ್ದರೂ ಕೂಡ ಅದರ ವಿವರಣೆಯ ಆಳ ಅಭ್ಯಾಸಕ್ಕೆ ನಾನು ಹೋಗುವುದಿಲ್ಲ. ಭರವಸೆಗಳನ್ನು ಕೊಟ್ಟಾಗ ಅವುಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡ ಬೇಕಾಗುತ್ತದೆ. ಆ ಮಾತುಗಳನ್ನು ನಡೆಸತಕ್ಕ ಜವಾಬ್ದಾರಿ ಇವರ ಮನಸ್ಸಿನಲ್ಲಿದೆ ಎನ್ನುವ ನಂಬಿಕೆ ಯನ್ನು ನಾವೆಲ್ಲಾ ಇಟ್ಟಿದ್ದೆವು. ಆದರೆ ಈಗ ಆ ನಂಬಿಕೆಯನ್ನು ಇಡತಕ್ಕದ್ದಕ್ಕೆ ಕಾರಣಗಳು ಸಿಕ್ಕುತ್ತಿಲ್ಲ ಎನ್ನತಕ್ಕದ್ದನ್ನು ಸುಮಾರು ೯ ತಿಂಗಳ ಇವರ ಆಡಳಿತದ ಅನುಭವದ ಹಿನ್ನೆಲೆಯಲ್ಲಿ ನಾನು ಹೇಳ ಬೇಕಾಗುತ್ತದೆ. ಚುನಾವಣೆಯಾದ ಮೇಲೆ ನಮ್ಮ ನಮ್ಮ ಕ್ಷೇತ್ರದಲ್ಲಿ ಅಲ್ಲದೆ ಕರ್ನಾಟಕ ರಾಜ್ಯದ ಎಲ್ಲೆಡೆ ಯಲ್ಲಿಯೂ ಇರತಕ್ಕ ಸಮಸ್ಯೆಗಳಿಗೆ ನಾವು ಹೆಚ್ಚಿನ ಗಮನಕೊಡಬೇಕಾಗಿದೆ. ಈ ಸದನದಲ್ಲಿ ಕುಳಿತಿರತಕ್ಕ ಸದಸ್ಯರುಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ಕೊಡುತ್ತಾರೆ. ಕೊಟ್ಟಾಗ ರಾಜ್ಯದ ಹಿತ ಅದು ನೀರಿನ ಸಮಸ್ಯೆ ಇರಬಹುದು. ಅದು ಗಡಿ ಪ್ರಶ್ನೆ ಇರಬಹುದು, ಮತ್ತಿತರ ಸಮಸ್ಯೆಗಳೇ ಇರಬಹುದು ಇಂಥ ಸಮಸ್ಯೆಗಳಿಗೆ ನಾವು ಹೆಚ್ಚಿನ ಗಮನಕೊಡುತ್ತೇವೆ. ಅಲ್ಲದೆ ಸಮಾಜದಲ್ಲಿರತಕ್ಕ ಹರಿಜನ ಗಿರಿಜನರ ಬಗ್ಗೆ, ದುರ್ಬಲ ವರ್ಗಗಳ ಬಗ್ಗೆ ಅಲ್ಪಸಂಖ್ಯಾತರ ಬಗ್ಗೆ ಬಡವರ ಬಗ್ಗೆ ನಮ್ಮ ಚಿಂತನೆ ಇರಬೇಕು, ಈ ಹಿನ್ನೆಲೆಯಲ್ಲಿ ನಾವು ಸೂಕ್ತವಾದ ಕಾರ್ಯಕ್ರಮಗಳನ್ನು ಸರ್ಕಾರದಿಂದ ನಿರೀಕ್ಷಣೆ ಮಾಡತಕ್ಕ ಒಂದು ಹಕ್ಕು ಜನತೆಗೆ ಇದೆ ಮತ್ತು ಇದು ನಮ್ಮೆಲ್ಲರ ಹಕ್ಕು ಕೂಡ ಆಗಿದೆ ಎಂದು ನಾನು ಭಾವಿಸಿದ್ದೇನೆ. ಇದನ್ನು ಅವರೂ ಕೂಡ ಒಪ್ಪುತ್ತಾರೆ. ನಮಗೆ ಇಂಥ ಚಿಂತನೆ ಬೇಕು. ಚಿಂತನೆ ಬ್ಯಾಂಕು ಬೇಕೆಂದಲ್ಲ. ವಿಚಾರ ಮಾಡುವುದನ್ನು ನಾವು ಗಮನಿಸಬೇಕಾಗುತ್ತದೆ. 'ಥಿಂಕ್‌ಟ್ಯಾಂಕ್'' ಅಥವಾ ಇದಕ್ಕೆ ಮತ್ತೊಂದು ಹೆಸರು ಎಕನಾಮಿಕ್ ಡೆವಲಪ್‌ಮೆಂಟ್ ಕೌನ್ಸಿಲ್ ನಮ್ಮ ರಾಜ್ಯದ ಆರ್ಥಿಕ ವಿಷಯಗಳನ್ನು ಹೆಚ್ಚಾಗಿ ಮೇಲೆತ್ತತಕ್ಕವರು ಅವರು ಇವರು ರಾಜ್ಯ ಸರ್ಕಾರಕ್ಕೆ ತಮ್ಮ ಅನುಭವದ ಹಿನ್ನೆಲೆಯಲ್ಲಿ ಗಮನ ಕೊಟ್ಟು ಒಂದು ದಾರಿಯನ್ನು ತೋರಿಸಬೇಕು ಈ ವಿಚಾರ ಹಲವಾರು ಬಾರಿ ಇಲ್ಲಿ ಚರ್ಚೆಗೆ ಕೂಡ ಬಂದಿದೆ ಇಂಗ್ಲೆಂಡಿನಲ್ಲಿಯೂ ಕೂಡ 'ಥಿಂಕ್‌ಟ್ಯಾಂಕ್'ನ್ನು ಅಲ್ಲಿರತಕ್ಕ ಪ್ರಧಾನ ಮಂತ್ರಿಗಳಾದ ಮಾರ್ಗೆಟ್ ಥ್ಯಾಚರ್ ಅವರು ಹಿಂದೆ ಇಟ್ಟುಕೊಂಡಿದ್ದರು. ಇದರ ಬಗ್ಗೆ ವಿವರಗಳನ್ನು ನಾನು ಓದಿ ತಿಳಿದು ಕೊಂಡಿದ್ದೇನೆ. ಅದರ ವಿವರಗಳನ್ನು ಕೆಲವು ಪತ್ರಿಕೆಗಳಲ್ಲಿ ಬಂದಿರುವುದನ್ನು ನಾನು ನೋಡಿದೆ. ಅದರ

ಬಗ್ಗೆ ಅವರು ಎಷ್ಟು ಅನುಭವವನ್ನು ಪಡೆದಿದ್ದಾರೋ ಏನೋ ಈ ಸಾರಿ ಮಾರ್ಗರೆಟ್ ಥ್ಯಾಚರ್‌ರವರು ಪ್ರಧಾನಮಂತ್ರಿಯಾಗಿ ಮತ್ತೆ ಚುನಾವಣೆಯಲ್ಲಿ ಆರಿಸಿಬಂದಿದ್ದಾರೆ. ಆ 'ಚಿಂತನಾ ಬ್ಯಾಂಕ್' ಕೂಡ ತಕ್ಕಂಥಾದ್ದು ಅಭಿಪ್ರಾಯಗಳು ಏನಿವೆ, ಆ ದೇಶವೇ ಬೇರೆ, ನಮ್ಮದೇ ಬೇರೆ ಆದರೂ ಕೂಡ ಅದರಿಂದ ಉಪಯೋಗವಿಲ್ಲ ಎಂದು ಈ ಸಾರಿ ಅವರು ಪ್ರಧಾನ ಮಂತ್ರಿಯಾದ ಮೇಲೆ ಇಂಗ್ಲೆಂಡ್‌ನಲ್ಲಿ ಅದನ್ನು ಕೈಬಿಟ್ಟಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಬೇಕೇಬೇಕು ಎಂದರೆ ಅವರು ಇರುವವರೆಗೆ ಇಟ್ಟುಕೊಳ್ಳಲಿ, ನಮ್ಮದು ಅಭ್ಯಂತರವಿಲ್ಲ. ಆದರೆ ಅದರಿಂದ ಏನು ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯ ಎನ್ನತಕ್ಕಂಥ ವಿವರಗಳನ್ನು ಕರ್ನಾಟಕ ರಾಜ್ಯದ ಜನತೆಗೆ ನಂಬಿಕೆ ಹುಟ್ಟತಕ್ಕ ರೀತಿಯಲ್ಲಿ ಅವರು ಹೇಳಿರಬಹುದು. ಅವರು ಏನು ಹೇಳಿದ್ದಾರೆ, ಎಂದರೆ, ಅದಕ್ಕೆ ನಾವು ಹೆಚ್ಚಿನ ಹಣ ಖರ್ಚುಮಾಡುವುದಿಲ್ಲ, ಚಿಂತನಾ ಬ್ಯಾಂಕಿಗೆ ಕೆಲವೇ ಕೆಲವು ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚುಮಾಡುತ್ತೇವೆ, ಕರ್ನಾಟಕ ರಾಜ್ಯದ ಜನತೆಯ ಮೇಲೆ ಹೆಚ್ಚಿನ ಹೊರೆ ಬರಲಾರದು ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಚಿಂತನಾಬ್ಯಾಂಕ್ ಸಮಾಜದಲ್ಲಿರತಕ್ಕ ದುರ್ಬಲವರ್ಗದವರ ಪ್ರಗತಿಗೋಸ್ಕರ ಆರ್ಥಿಕ ಸಮೀಕ್ಷೆಯನ್ನು ಮಾಡಿದಾಗ ಆ ಸಮೀಕ್ಷೆಯ ಒಂದು ಗುರಿ ನಮ್ಮನ್ನು ಮೇಲಕ್ಕೆ ಎತ್ತತಕ್ಕದ್ದು ಆಗಿರಬೇಕು, ಅದಕ್ಕೆ ಸಹಕಾರಿಯಾಗಿರತಕ್ಕ ಚಿಂತನೆಯನ್ನು ಚಿಂತನಾಬ್ಯಾಂಕ್ ಸ್ಪಷ್ಟವಾಗಿ ಕೊಡಬೇಕು. ಅದಕ್ಕೆ ಕೋಟಿ ರೂಪಾಯಿಗಳನ್ನು ಉಳಿತಾಯವಾಗುವಂಥಾದ್ದು ಅಥವಾ ಅಷ್ಟು ಖರ್ಚುಮಾಡಿದರೂ ಕೂಡ ಹಲವಾರು ಕೋಟಿ ರೂಪಾಯಿಗಳಷ್ಟು ನಿವ್ವಳ ಲಾಭವನ್ನು ಪಡೆಯತಕ್ಕಂಥ ಪರಿಸ್ಥಿತಿ ಇದ್ದರೆ ಈ ಚಿಂತನಾಬ್ಯಾಂಕ್ ಉಪಯುಕ್ತ ಎನ್ನತಕ್ಕ ಭಾವನೆಯನ್ನು ನಾವು ಇಟ್ಟುಕೊಳ್ಳೋಣ. ಈ ಚಿಂತನಾಬ್ಯಾಂಕ್‌ನಿಂದ ಇಲ್ಲಿಯವರೆಗೆ ಏನು ಉಪಯೋಗವಾಗಿದೆ ಎನ್ನುವುದರ ವಿವರಣೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ನಾಳೆ ಉತ್ತರ ಕೊಡಬೇಕಾದರೆ ಹೇಳುತ್ತಾರೆ ಎಂಬ ನಂಬಿಕೆಯನ್ನು ನಾನು ಇಟ್ಟುಕೊಂಡಿದ್ದೇನೆ. ಇಲ್ಲಿಯವರೆಗೆ ಎಷ್ಟು ಸಭೆಗಳು ನಡೆದಿವೆ? ಯಾವ ತೀರ್ಮಾನ ಮಾಡಿಕೊಂಡಿದ್ದಾರೆ,? ಯಾವರೀತಿಯ ದಾರಿಯನ್ನು ಕರ್ನಾಟಕ ರಾಜ್ಯ ಸರ್ಕಾರಕ್ಕೆ ತೋರಿಸಿದ್ದಾರೆ? ಆ ಒಂದು ಅನುಭವದ ಹಿನ್ನೆಲೆಯಲ್ಲಿ ಯಾವ ಶಕ್ತಿಯನ್ನು ಕೊಟ್ಟಿದ್ದಾರೆ ಎನ್ನತಕ್ಕ ವಿವರಗಳನ್ನು ಅವರು ಕೊಡುತ್ತಾರೆ ಎನ್ನುವ ನಂಬಿಕೆಯನ್ನು ಇಟ್ಟುಕೊಂಡಿದ್ದೇನೆ, ಒಂದು ವೇಳೆ ಚಿಂತನಾ ಬ್ಯಾಂಕ್‌ನಿಂದ ಉಪಯೋಗವಿಲ್ಲ ಎನ್ನತಕ್ಕ ಅಭಿಪ್ರಾಯಕ್ಕೆ ಅವರೇ ಬಂದಿದ್ದರೆ ಅಥವಾ ಸದನದ ಈ ಕಡೆಯ ಮತ್ತು ಆ ಕಡೆಯ ಸದಸ್ಯರು ಆ ಒಂದು ಅಭಿಪ್ರಾಯಕ್ಕೆ ಬಂದರೆ ಕೂಡಲೇ ಚಿಂತನಾ ಬ್ಯಾಂಕನ್ನು ರದ್ದು ಮಾಡತಕ್ಕ ಅವಶ್ಯಕತೆ ಕೂಡ ಇದೆ. ಏಕೆಂದರೆ, ಸಾವಿರಾರು ರೂಪಾಯಿ, ಲಕ್ಷಾಂತರ ರೂಪಾಯಿ ಹಣ ಖರ್ಚುಮಾಡಬಹುದು ಅದು ಕರ್ನಾಟಕ ರಾಜ್ಯದ ಜನತೆಯ ಹಣ ಎನ್ನುವುದನ್ನು ಮರೆಯಬಾರದು. ಆ ದೃಷ್ಟಿಯಿಂದ ಚಿಂತನಾಬ್ಯಾಂಕ್ ಬಗ್ಗೆ ನನ್ನ ಅಭಿಪ್ರಾಯವನ್ನು ತಿಳಿಸಿದ್ದೇನೆ.

ಮಾನ್ಯ ಸಭಾಧ್ಯಕ್ಷರೆ, ಈ ಸರ್ಕಾರ ರಚನೆಯಾದಮೇಲೆ ಚುನಾವಣೆ ಸಂದರ್ಭದಲ್ಲಿ ಯಾವ ಮಾತುಗಳನ್ನು ರಾಜ್ಯದ ಜನತೆಗೆ ಕೊಟ್ಟಿತ್ತೋ ಆ ಮಾತುಗಳನ್ನು ಉಳಿಸತಕ್ಕ ದಿಶೆಯಲ್ಲಿ ಯಾವ ಸಾಧನೆಗಳನ್ನು ಮಾಡಿದ್ದಾರೆ ಎನ್ನತಕ್ಕ ಒಂದು ವರದಿಯನ್ನು ಮಾನ್ಯ ಮುಖ್ಯ ಮಂತ್ರಿಗಳು ನಾಳೆ ಉತ್ತರದಲ್ಲಿ ಹೇಳಬೇಕು. ಸಾಮಾನ್ಯಾಡಳಿತ ಮತ್ತು ಕರ್ನಾಟಕ ರಾಜ್ಯದ ಎಲ್ಲಾ ಇಲಾಖೆಗಳ ಸೂಕ್ಷ್ಮ ಪರಿಚಯದ ಹಿನ್ನೆಲೆಯಲ್ಲಿ ಯಾವ ತೀರ್ಮಾನಗಳನ್ನು ತೆಗೆದುಕೊಂಡಿದ್ದಾರೆಂದು ಹೇಳಬೇಕು. ಅವರು ಹೇಳಬಹುದು, ೫ ವರ್ಷದ ಅವಧಿ ಇದೆ. ಈಗ ೯ ತಿಂಗಳು ಮಾತ್ರ ಆಗಿದೆ, ನಾವು ಇನ್ನೂ ಕೂಸು, ಇನ್ನೂ ಬೆಳೆದಿಲ್ಲ ಎನ್ನತಕ್ಕಂಥ ಭಾವನೆಯಿಂದ ಮಾತನಾಡಿದರೂ ಕೂಡ ಸುಮಾರಾಗಿ ಮಗುವಿನ ಆರೋಗ್ಯ ಈಗಲೇ ಗೊತ್ತಾದರೆ, ಮುಂದೆ ಬೆಳೆದಾಗ ಎಷ್ಟು ಆರೋಗ್ಯವಾಗಿ ಆಡಳಿತ ಕೊಡಬಹುದು ಎನ್ನತಕ್ಕಂಥಾದ್ದು ಸುಲಭವಾಗಿ ದೇಶದ ಜನತೆಗೆ ಗೊತ್ತಾಗುತ್ತದೆ. ನನಗೆ ಗೊತ್ತಿರುವಹಾಗೆ ಭೂಸುಧಾರಣೆ ತೆಗೆದುಕೊಳ್ಳಿ ಭೂಸುಧಾರಣೆ ಬಗ್ಗೆ ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿದೆ. ಮಾನ್ಯ ರೆವಿನ್ಯು ಸಚಿವರು ಸದನದಲ್ಲಿ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ ಒಟ್ಟು ೭–೮ ಲಕ್ಷ ಚಿಲ್ಲರೆ ಅರ್ಜಿಗಳಲ್ಲಿ ಇತ್ಯರ್ಥವಾದದ್ದು ಎಷ್ಟು ? ಎಷ್ಟು ಗೇಣೀದಾರರ ಪರ ಆಯಿತು ? ಎಷ್ಟು ಗೇಣಿದಾರರ ವಿರುದ್ಧವಾಯಿತು ಎಂದು ಹೇಳಿದ್ದೀರಾ ? ಅದರ ಅಂಕಿಅಂಶಗಳು ಈಗ ಬೇಡ, ಅದರ ವಿವರಕ್ಕೆ ನಾನು ಹೋಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಜನರಲ್ ಬಡ್ಜೆಟಿಗೆ ಉತ್ತರಕೊಡತಕ್ಕ ಸಂದರ್ಭದಲ್ಲಿ ಉತ್ತರಕೊಟ್ಟರು. ಸಣ್ಣ ಹಿಡುವಳಿದಾರರು ಏನಿದ್ದಾರೆ ಆ ಸಣ್ಣ ಹಿಡುವಳಿದಾರರಿಗೆ ಏಕಗಂಟಿನಲ್ಲಿ ಪರಿಹಾರ ಕೊಡತಕ್ಕ ವ್ಯವಸ್ಥೆ

ಮಾಡುತ್ತೇನೆ ಎನ್ನುವ ಮಾತನ್ನು ಹೇಳಿದರು. ನನಗೆ ಗೊತ್ತಿರುವ ಹಾಗೆ ಏಕ ಗಂಟಿನಲ್ಲಿ ಕೊಡತಕ್ಕ ವ್ಯವಸ್ಥೆ ಇನ್ನೂ ಮಾಡುವುದಕ್ಕೆ ಆಗಿಲ್ಲ. ಅದಕ್ಕೆ ಏನು ಕೊರತೆ, ತೊಂದರೆ ಇದೆಯೋ ಗೊತ್ತಾಗಲಿಲ್ಲ. ಆ ಸಂದರ್ಭದಲ್ಲಿ ನಾನು ಪ್ರಶ್ನೆ ಕೇಳಿದೆ ಸಣ್ಣ ಹಿಡುವಳಿದಾರರು ಅಂದರೆ ೨ ಎಕರೆ, ೩ ಎಕರೆ, ೪ ಎಕರೆ ಕಳೆದು ಕೊಂಡಿರತಕ್ಕ ಜಮೀನುದಾರರಿಗೆ ಏಕ ಗಂಟಿನಲ್ಲಿ ಪಾವತಿ ಮಾಡತಕ್ಕ ವ್ಯವಸ್ಥೆ ಮಾಡಿಸಿ ಎಂದು. ಏಕೆಂದರೆ, ನಿಮ್ಮ ಒಂದು ನೀತಿ ಏನಿದೆ, ಅದರಂತೆ ಬಡತನವನ್ನು ತೊಡೆದು ಹಾಕತಕ್ಕ ಸಂದರ್ಭದಲ್ಲಿ ಮತ್ತೊಂದು ವರ್ಗದಲ್ಲಿ ಬಡತನ ಹುಟ್ಟುಹಾಕತಕ್ಕ ಗುರಿ ಆಗಿರಬಾರದು. ಆ ದೃಷ್ಟಿಯಿಂದ ಆ ಮಾತನ್ನು ನಾನು ಒಪ್ಪಿದ್ದೇನೆ. ಅದರ ಜೊತೆಗೆ ಇನ್ನೊಂದು ಪ್ರಶ್ನೆ ಹಾಕಿದೆ, ಸಣ್ಣ ಗೇಣಿದಾರರಲ್ಲಿ ಅರ್ಧ ಎಕರೆ ಒಂದು ಎಕರೆ ಇಟ್ಟು ಕೊಂಡಿರತಕ್ಕವರು, ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವು ಗಂಟೆಗಳನ್ನು ಇಟ್ಟುಕೊಂಡಿರತಕ್ಕ ಸಾವಿರಾರು ಜನರಿದ್ದಾರೆ. ಅದೇರೀತಿ ಕರ್ನಾಟಕ ರಾಜ್ಯದ ೧೯ ಜಿಲ್ಲೆಗಳಲ್ಲೂ ಕೂಡ ಇದ್ದಾರೆ, ಈ ಗೇಣಿದಾರರು ಕಂತುಗಳಲ್ಲಿ ಹಣವನ್ನು ಕೊಡತಕ್ಕ ಶಕ್ತಿ ಪಡೆದಿಲ್ಲ, ಅವರಿಗೋಸ್ಕರ ಅವರ ಕಂತುಗಳನ್ನು ವಜಾ ಮಾಡತಕ್ಕ ಅಭಿಪ್ರಾಯವನ್ನು ಪ್ರಣಾಳಿಕೆಯಲ್ಲಿ ಹೇಳುವುದರ ಮೂಲಕ ಜನತೆಗೆ ತಿಳಿಸಿದ್ದೀರಿ. ಆದುದರಿಂದ ಆ ಒಂದು ವರ್ಗಕ್ಕೆ ಕಂತುಗಳನ್ನು ವಜಾ ಮಾಡತಕ್ಕ ವಿಚಾರದಲ್ಲಿ ಕೇಳಿದಾಗ ಮಾನ್ಯ ಮುಖ್ಯ ಮಂತ್ರಿಗಳು ಅದನ್ನೂ ಕೂಡ ವಜಾ ಮಾಡುತ್ತೇವೆ ಎಂದು ಇದೇ ಸದನದಲ್ಲಿ ಮಾರ್ಚಿ ತಿಂಗಳಲ್ಲಿ ಹೇಳಿದರು. ನಾನು ಈಗ ಕೇಳುತ್ತಿದ್ದೇನೆ. ಈಗ ಬಜೆಟ್ ಮುಗಿದುಹೋಗಿರುತ್ತದೆ. ಅಪ್ರೋಪ್ರಿಯೇಷನ್ ಬಿಲ್ ಪಾಸ್ ಆದಮೇಲೆ ನಮ್ಮ ಮುಂದೆ ಬಜೆಟ್ ಪ್ರಶ್ನೆ ಬರುವುದಿಲ್ಲ. ಅದೇ ನಿನ್ನೆರೂ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಮಾನ್ಯ ರೆವಿನ್ಯು ಸಚಿವರಾದ ವಿ. ಎಲ್. ಪಾಟೀಲರು ಕಂದಾಯ ಇಲಾಖೆಯ ಬೇಡಿಕೆ ಚರ್ಚೆಗೆ ಬಂದಾಗ ಸಣ್ಣ ಹಿಡುವಳಿದಾರರಿಗೆ ಏಕ ಗಂಟಿನಲ್ಲಿ ಹಣ ಪಾವತಿ ಮಾಡತಕ್ಕ ವಿಚಾರದ ಬಗ್ಗೆ ಹೇಳಬೇಕಾಗಿತ್ತು, ನಮ್ಮ ನೀತಿ ಪ್ರಕಾರ ಸಣ್ಣ ಗೇಣಿದಾರರಿಗೆ ಕಂತುಗಳನ್ನು ವಜಾ ಮಾಡತಕ್ಕ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಸದನದಲ್ಲಿ ಕೊಟ್ಟಿರತಕ್ಕ ಮಾತಿನ ಹಿನ್ನೆಲೆಯಲ್ಲಿ ಉತ್ತರ ಕೊಡಬೇಕು. ಆದರೆ ಅದಕ್ಕೆ ಉತ್ತರ ಪಡೆಯುವುದಕ್ಕೆ ಆಗಲಿಲ್ಲ. ಆದುದರಿಂದ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ನಾಳೆ ಈ ವಿಚಾರವನ್ನು ತಿಳಿಸಿದರೆ ಬಹಳ ಒಳ್ಳೆಯದು. ಲಕ್ಷಾಂತರ ಗೇಣಿದಾರರ ಮತ್ತು ಸಣ್ಣಪುಟ್ಟ ಹಿಡುವಳಿದಾರರ ಬಗ್ಗೆ ಎರಡು ಪ್ರಶ್ನೆಗಳು ಅವರೆ ವರದಿ ಕೊಟ್ಟಿರುವ ಹಾಗೆ ನಮ್ಮ ಮುಂದಿವೆ. ಈ ವರ್ಗಗಳಿಗೋಸ್ಕರ ಯಾವುದೇ ಒಂದು ಪರಿಹಾರವನ್ನು ಕೊಡತಕ್ಕಂಥ ತೀರ್ಮಾನವನ್ನು ನೀವು ಮಾಡತಕ್ಕಂಥ ಪರಿಸ್ಥಿತಿ ಇನ್ನೂ ಆಗಿಲ್ಲ. ಹಣಕಾಸಿನ ತೊಂದರೆಗಳ ಬಗ್ಗೆ ಅಂಕಿಅಂಶಗಳನ್ನು ಏನಾದರೂ ತಯಾರುಮಾಡಿ ಇಟ್ಟಿದ್ದೀರಾ? ಎಷ್ಟು ಹಣವನ್ನು ತೆಗೆದಿಟ್ಟಿದ್ದೀರಿ? ಇನ್ನೆಷ್ಟು ಹಣಬೇಕಾಗಿದೆ? ಅದಕ್ಕಾಗಿ ನೀವು ರಿಸೋರ್ಸಸ್ ಮೊಬಲೈಸೇಷನ್ ಏನು ಮಾಡಿಕೊಂಡಿದ್ದೀರಿ ಸಂಪನ್ಮೂಲಗಳನ್ನು ಹುಡುಕತಕ್ಕ ವಿಚಾರ ಅಂದೊಂದೇ ಅಲ್ಲ. ರಾಜ್ಯದ ಅನೇಕ ಬಾಬುಗಳಿಗೋಸ್ಕರ ಯಾವ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ? ಎನ್ನತಕ್ಕ ವಿಚಾರವನ್ನು ನಾಳೆ ಹೇಳುತ್ತೀರಿ ಎನ್ನತಕ್ಕ ನಂಬಿಕೆಯನ್ನು ಇಟ್ಟುಕೊಂಡಿದ್ದೇನೆ. ಮಾನ್ಯ ಸಭಾಧ್ಯಕ್ಷರೆ, ನಾನು ಈ ಸಂದರ್ಭದಲ್ಲಿ ಗೇಣಿದಾರರ ಬಗ್ಗೆ ಹೇಳುವಾಗ ಜಿ.ಎ.ಡಿ ಯನ್ನೂ ಸೇರಿಸಿ ಹೇಳುತ್ತಾ ಇದ್ದೇನೆ. ಸುಮಾರಾಗಿ ಪೋಲೀಸ್ ಇಲಾಖೆ ಈ ಗೇಣಿದಾರರಿಗೆ ರಕ್ಷಣೆ ಕೊಡತಕ್ಕ ವಿಚಾರದಲ್ಲಿ ಸಂಪೂರ್ಣವಾಗಿ ವಿಫಲವಾಗಿಹೋಗಿದೆ. ಗೇಣಿದಾರರುಗಳು ಈ ಜಡ್ಜ್‌ಮೆಂಟ್ ಪಡೆದಿರತಕ್ಕವರು ಇವತ್ತು ರಕ್ಷಣೆಪಡೆಯುವುದಕ್ಕೆ ಆಗುತ್ತಾ ಇಲ್ಲ. ಕೊಲೆಗಳಾಗಿರುವ ಬಗ್ಗೆ ಈ ಸದನದಲ್ಲಿ ಚರ್ಚೆಯಾಗಿದೆ ಈ ರೀತಿಯಾದ ಅಂಕಿಅಂಶಗಳನ್ನು ಬಂದಮೇಲೆ ಕರ್ನಾಟಕ ರಾಜ್ಯದಲ್ಲಿ ಚುನಾವಣೆಕಾಲದಲ್ಲಿ ನಾವು ಜನತೆಗೆ ಕೊಟ್ಟಿರತಕ್ಕ ಮಾತು ಏನು ಎನ್ನತಕ್ಕ ಪ್ರಶ್ನೆಯನ್ನು ನಾನು ನೇರವಾಗಿ ಮಾನ್ಯ ಮುಖ್ಯ ಮಂತ್ರಿಗಳನ್ನು ತಮ್ಮ ಮೂಲಕ ಕೇಳುತ್ತಾ ಇದ್ದೇನೆ. ಅದಕ್ಕೆ ಅವರು ಉತ್ತರ ಕೊಡಬೇಕು. ಪದೇ ಪದೇ ನಾವು ಹೇಳಿದ್ದೇವೆ. ತೀರ್ಥಹಳ್ಳಿಯ ಶೇಡ್ಗಾರ್‌ನಲ್ಲಿ ಶ್ರೀಮಾನ್ ರಾಮನಾಯ್ಕರ ಮನೆಯಲ್ಲಿ ಕೊಲೆ ನಡೆದಿರತಕ್ಕ ವಿಚಾರದಲ್ಲಿ ಹೇಳಿದ್ದೇವೆ. ಗೇಣಿದಾರರ ಕೊಲೆ ನಡೆದಿರತಕ್ಕ ವಿಚಾರದಲ್ಲಿ ಪ್ರಶ್ನೆ ಕೇಳಿದಾಗ ಈ ಸರ್ಕಾರ ಬದ್ಧ ಎನ್ನುವುದು ಮಾನ್ಯ ಮುಖ್ಯ ಮಂತ್ರಿಗಳ ಹೇಳಿಕೆ. ಗೇಣಿದಾರರಿಗೆ ರಕ್ಷಣೆಕೊಡುವುದಕ್ಕೆ ಈ ಸರ್ಕಾರ ಬದ್ಧ ಎಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಈ ರೀತಿಯಾದ ಹೇಳಿಕೆ ಕೊಟ್ಟು ಸಮಾಧಾನ ಪಡತಕ್ಕ ರಾಜಕಾರಣ ಮಾಡುವ ಈ ಒಂದು ಮಟ್ಟಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಇಳಿಯುವ ಹಾಗಿದ್ದರೆ ನಾನು ಹೇಳುತ್ತೇನೆ, ಬಹಳ ದಿವಸ ಇದೇ ಹೇಳಿಕೆಕೊಟ್ಟು ಬಚಾವ್ ಆಗುವುದಕ್ಕೆ ಸಾಧ್ಯವಿಲ್ಲ ಎಂದು. ಏಕೆಂದರೆ ತೀರ್ಥಹಳ್ಳಿಯಲ್ಲಿ ನಡೆದಿರತಕ್ಕ ಕೊಲೆ ಪ್ರಕರಣಕ್ಕೆ ಸಂಬಂಧಪಟ್ಟ ಹಾಗೆ ರಾಮನಾಯ್ಕರವರು ಹಿಂದಿನ ಸರ್ಕಾರಕ್ಕೆ ಅಷ್ಟೇ ಅಲ್ಲ ತಾವು ಜನವರಿಯಲ್ಲಿ ಅಧಿಕಾರಕ್ಕೆ ಬಂದಮೇಲೂ ಕೂಡ ಸುಮಾರು ೮–೧೦ ಕಂಪ್ಲೈಂಟ್‌ಗಳನ್ನು ಮಾಲೂರು ಪೋಲೀಸ್ ಸ್ಟೇಷನ್‌ಗೆ ಕೊಟ್ಟರು.

ಅವರು ಟ್ರಿಬ್ಯೂನಲ್‌ನಿಂದ ಹೈಕೋರ್ಟಿಗೆ ಹೋಗಿ ಇಂಜಂಕ್ಷನ್ ಆರ್ಡರ್ ತೆಗೆದುಕೊಂಡು ಬಂದು ಪೋಲೀಸಿನವರಿಗೆ ತೋರಿಸಿ ರಕ್ಷಣೆ ಕೊಡಿ ಎಂದು ಕೇಳಿದರೂ ಪೋಲೀಸಿನವರು ರಕ್ಷಣೆ ಕೊಡಲಿಲ್ಲ. ಕಾರ್ಯ ನಿರ್ವಹಣೆ ಮಾಡತಕ್ಕವರು ಜವಾಬ್ದಾರಿ ಯುತವಾಗಿ ಕಾರ್ಯ ನಿರ್ವಹಣೆ ಮಾಡದೇ ಇದ್ದುದರಿಂದ ಇವತ್ತು ಅವರ ಕೊಲೆ ಆಗುವುದಕ್ಕೆ ಕಾರಣವಾಗಿದೆ. ತೀರ್ಥಹಳ್ಳಿಯ ಪೋಲೀಸಿನವರು ಹತ್ತಿರ ಮತ್ತು ಮಾಲೂರು ತಾಲ್ಲೂಕಿನ ಪೋಲೀಸಿನವರು ಹತ್ತಿರ ಅವರು ರಕ್ಷಣೆ ಬೇಕೆಂದು ಬೇಡಿದರೂ ಕೊನೆಯುವರೆಗೂ ಕೊಡಲಿಲ್ಲ. ಇವತ್ತು ಸಮಾಜದಲ್ಲಿ ದುರ್ಬಲವರ್ಗದವರು ಯಾರಿದ್ದಾರೆ, ಹಿಂದುಳಿದ ವರ್ಗದವರು ಯಾರಿದ್ದಾರೆ ಅವರಿಗೆ ಸಂಪೂರ್ಣವಾದ ರಕ್ಷಣೆಯನ್ನು ಕೊಡತಕ್ಕ ಜವಾಬ್ದಾರಿ ಸರ್ಕಾರದವರ ಮೇಲೆ ನೇರವಾಗಿದೆ ಹೀಗಿರುವಾಗ ನೀವು ಅವರಿಗೆ ರಕ್ಷಣೆ ಕೊಡತಕ್ಕದರಲ್ಲಿ ವಿಫಲರಾಗಿದ್ದೀರಿ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನೀವು ಜನತೆಗೆ ಕೊಟ್ಟ ಭರವಸೆಯನ್ನು ಈಡೇರಿಸುವುದರಲ್ಲಿ ವಿಫಲರಾಗಿರುವುದರಿಂದ ನಾವು ನಿಮಗೆ ಕೊಟ್ಟ ಬೆಂಬಲವನ್ನು ಇದಕ್ಕಾಗಿ ವಾಪಸ್ಸು ಪಡೆಯುತ್ತಿದ್ದೇವೆಯೇ ಹೊರತು ಇನ್ನು ಯಾವುದೇ ಕಾರಣಕ್ಕಾಗಿ ಅಲ್ಲ. ಮತ್ತೆ ಬೆಲೆ ಏರಿಕೆ ಮತ್ತು ಸಮಾಜದಲ್ಲಿರತಕ್ಕ ಅಸಮಾನತೆಯನ್ನು ಹೋಗಲಾಡಿಸುವುದಕ್ಕೆ ಪ್ರಯತ್ನವನ್ನು ನೀವು ಮಾಡಲ್ಲ. ಇವತ್ತು ಮಾನ್ಯ ಮುಖ್ಯಮಂತ್ರಿಗಳವರಿಗೆ ಬಡವರ ಬಗ್ಗೆ ಮತ್ತು ಹಿಂದುಳಿದ ಜನಾಂಗದವರ ಬಗ್ಗೆ ಕಳಕಳಿ ಅವರ ಹೃದಯಾಂತರಾಳದಲ್ಲಿ ಇದೆ ಎನ್ನುವ ಭಾವನೆ ಇದ್ದರೆಆ ವಿಷಯದಲ್ಲಿ ಅವರ ಬಗ್ಗೆ ನನಗೆ ನಂಬಿಕೆ ಇಲ್ಲ. ಇವರು ಅಧಿಕಾರಕ್ಕೆ ಬರುವುದಕ್ಕಿಂತ ಮುಂಚಿತವಾಗಿ ಪೋಲೀಸ್ ಇಲಾಖೆ ಏನಿತ್ತು. ಇವರು ಬಂದ ಮೇಲೆ ಏನು ಬದಲಾವಣೆಯಾಗಿದೆ ಎಂದರೆ ಏನೂ ಇಲ್ಲ, ಬಡವರಿಗೆ ರಕ್ಷಣೆ ಕೊಡತಕ್ಕದರಲ್ಲಿಯೂ ವಿಫಲರಾಗಿದ್ದಾರೆ. ಓ. ಸಿ. ಮಟ್ಕಾ ಏನು ನಡೆಯುತ್ತಿದೆ ಅದನ್ನು ಸಂಪೂರ್ಣವಾಗಿ ನಿಲ್ಲಿಸಿ ಬಿಡುತ್ತೇವೆಂದು ಈ ಸದನದಲ್ಲಿಯೇ ಮಾನ್ಯ ಮುಖ್ಯಮಂತ್ರಿಗಳವರು ಹೇಳಿದ್ದರು. ಆದರೆ ಇವತ್ತಿಗೂ ಕೂಡ ಅದು ಅವ್ಯಾಹತವಾಗಿ ನಡೆಯುತ್ತಿದೆ. ೧೯ ಜಿಲ್ಲೆಗಳಲ್ಲೂ ಓ. ಸಿ. ಮಟ್ಕಾ ನಿಲ್ಲಿಸುವುದಕ್ಕೆ ಆಗುತ್ತಿಲ್ಲ. ಪೋಲೀಸ್ ಇಲಾಖೆಯ ಕಾರ್ಯಾಚರಣೆ ಸ್ಥಗಿತವಾಗಿದೆ ಎನ್ನತಕ್ಕ ಭಾವನೆ ಸಾಮಾನ್ಯ ಜನರಲ್ಲಿ ಈಗಾಗಲೇ ಬಂದಿದೆ. ಇನ್ನು ಬೆಲೆ ಏರಿಕೆಯ ವಿಚಾರದಲ್ಲಿ ನೀವು ಜನವರಿ ತಿಂಗಳಲ್ಲಿ ಚುನಾವಣೆ ಪ್ರಣಾಳಿಕೆಯಲ್ಲಿ ಏನು ಹೇಳಿದ್ದೀರಿ ಅದರ ಬಗ್ಗೆ ನಾನು ಪ್ರಸ್ತಾಪ ಮಾಡಿ ಹೇಳುವುದಕ್ಕೆ ಹೋಗುವುದಿಲ್ಲ ಈಗಾಗಲೇ ಅದರ ಬಗ್ಗೆ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಆಗ ಅವರು ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಗಳವರು ಇರಲಿಲ್ಲ, ಆದರೆ ಅವರು ಹೇಳಿದ್ದು ಎಲ್ಲಾ ಪತ್ರಿಕೆಗಳಲ್ಲಿ, ರೇಡಿಯೋದಲ್ಲಿ ಪ್ರಸಾರವಾಗಿದೆ, ಜನತೆಗೂ ಗೊತ್ತಾಗಿದೆ. ಬೆಲೆ ಏರಿಕೆಯನ್ನು ತಡೆಗಟ್ಟುವುದರಲ್ಲಿ ರಾಜ್ಯ ಸರ್ಕಾರದವರ ಜವಾಬ್ದಾರಿ ಇದೆ ನಾನು ಆಹಾರ ಮತ್ತು ನಾಗರೀಕ ಪೂರೈಕೆ ಬೇಡಿಕೆಯ ಚರ್ಚೆಯಲ್ಲಿ ಭಾಗವಹಿಸುತ್ತಾ ಈ ಸದನದಲ್ಲಿ ಅಂಕಿ ಅಂಶಗಳನ್ನು ಇಟ್ಟು ಮತ್ತೆ ಎಸೆನ್ಸಿಯಲ್ ಕಮಾಡಿಟೀಸ್ ಆ್ಯಕ್ಟ್ ಸೆಕ್ಷನ್ ೫೯, ಸೆಕ್ಷನ್ ೩, ೬(ಎ) ಇತ್ಯಾದಿ ಕಲಂಗಳನ್ನು ಸ್ಪಷ್ಟವಾಗಿ ಓದಿ ಹೇಳಿದೆ ಅಲ್ಲದೆ ನ್ಯಾಶನಲ್ ಸೆಕ್ಯೂರಿಟಿ ಆ್ಯಕ್ಟ್ ಸೆಕ್ಷನ್ ೩.೪ ಇದನ್ನು ಕೂಡಓದಿ ಹೇಳಿದ್ದೇನೆ. ಈ ಎಸೆನ್ಸಿಯಲ್ ಕಮಾಡಿಟೀಸ್ ಆ್ಯಕ್ಟ್ ಕೆಳಗಡೆ ಅಲ್ಲದೇನೇ ೧೯೮೦ ರಲ್ಲಿ ಬ್ಲ್ಯಾಕ್ ಮಾರ್ಕೆಟ್ ಹೋರ್ಡರನ್ನು ಯಾವ ರೀತಿಯಾಗಿ ಕಂಟ್ರೋಲ್ ಮಾಡಬಹುದು ಎನ್ನುವ ಬಗ್ಗೆ ಕಾನೂನು ತಂದಿದ್ದಾರೆ ಅದನ್ನು ಸಹ ಉಪಯೋಗ ಮಾಡಿಕೊಳ್ಳಬಹುದಾಗಿದೆ, ಅದನ್ನೆಲ್ಲಾ ಸಂಪೂರ್ಣವಾಗಿ ಕೋಟ್ ಮಾಡಿ ಹೇಳಿದ್ದೇನೆ. ಬೆಲೆ ಏರಿಕೆಯನ್ನು ತಡೆಗಟ್ಟುವುದಕ್ಕೆ ಕೇಂದ್ರದ ಮೇಲೆ ಇವರು ಜವಾಬ್ದಾರಿಯನ್ನು ಹೊರಿಸುತ್ತಿದ್ದಾರೆ. ಮತ್ತು ಇದಕ್ಕಾಗಿ ಹೊಸದಾಗಿ ಕಾನೂನು ಹುಡುಕುತ್ತಿದ್ದಾರೆ. ಇನ್ನು ಚಾಕು ಚೂರಿಯನ್ನು ತಡೆಗಟ್ಟುವುದಕ್ಕಾಗಿ ಕ್ಯಾಬಿನೆಟ್‌ನಲ್ಲಿ ಒಂದು ನಿರ್ಣಯನ್ನು ತೆಗೆದುಕೊಂಡು ಇದರ ಬಗ್ಗೆ ಏನಾದರೂ ಮಾಡಿ ನಿಲ್ಲಿಸುವುದಕ್ಕೆ ಹೊಸದಾಗಿ ಕಾನೂನು ತರಬೇಕು ಎನ್ನುವ ಭಾವನೆ ಇಟ್ಟುಕೊಂಡು ಒಂದು ತೀರ್ಮಾನ ಮಾಡಿದ್ದಾರೆ. ಆದರೆ ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿರುವವರೇ ವಿರೋಧ ಮಾಡಿದರು ಎನ್ನತಕ್ಕ ವಿಚಾರ ಕೂಡ ನನಗೆ ಗೊತ್ತಾಯಿತು, ಬಹಳ ಸಂತೋಷ. ಅದನ್ನು ವಿರೋಧ ಮಾಡುವುದಕ್ಕೆ ಕಾರಣವೇನೆಂದರೆ ಈಗಾಗಲೇ ನ್ಯಾಶನಲ್ ಸೆಕ್ಯೂರಿಟಿ ಆಕ್ಟ್ ಇದೆ, ಐ.ಪಿ.ಸಿ, ಇದೆ ಇದನ್ನೆಲ್ಲಾ ಉಪಯೋಗಿಸಿ ಚಾಕು ಚೂರಿ ಸಂಸ್ಕೃತಿಯನ್ನು ತಡೆಗಟ್ಟುವುದಕ್ಕೆ ಆಗುವುದಿಲ್ಲವೆ ? ಅದಕೋಸ್ಕರವಾಗಿ ಹೊಸದಾಗಿ ಒಂದು ಕಾನೂನನ್ನು ತರುವ ಅವಶ್ಯಕತೆ ಇದೆಯೇ ? ಕಂಕುಳಲಲ್ಲ ಮಗವನ್ನು ಇಟ್ಟುಕೊಂಡು ಊರೆಲ್ಲಾ ಹುಡುಕಿದರು ಎನ್ನುವ ಹಾಗೆ ಇದಕ್ಕಾಗಿ ಹೊಸದಾಗಿ ಕಾನೂನು ತರುತ್ತೇವೆಂದು ಪ್ರಚಾರ ಪ್ರಿಯತೆಗಾಗಿ ಮಾನ್ಯ ಮಂತ್ರಿಗಳವರು ಹೇಳಿರಬೇಕು, ಆ ಒಂದು ಅಭಿಲಾಷೆ ಈ ಒಂದು ಮಂತ್ರಿಮಂಡಲಕ್ಕೂ

ಇರಬೇಕೆಂದು ಕಾಣುತ್ತದೆ. ಇರತಕ್ಕ ಕಾನೂನನ್ನೇ ಮೊದಲು ಚಲಾವಣೆ ಮಾಡಿ, ಯಾರು ಯಾರು ಸಮಾಜ ಘಾತುಕರಿದ್ದಾರೆ, ಯಾರು ಯಾರು ಕಂಟಕರಿದ್ದಾರೆ, ಅಂಥವರ ವಿರುದ್ಧ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರವರು ಮೊನ್ನೆ ದಿವಸ ಒಂದು ವಿಷಯವನ್ನು ಪ್ರಸ್ತಾಪ ಮಾಡಿ ಹೇಳುತ್ತಿದ್ದರು. ತಾಯಪ್ಪ ಎನ್ನತಕ್ಕವರು ತಮ್ಮ ಮಗ ಪ್ರಕಾಶ್ ಎನ್ನತಕ್ಕವನು ಡಬಲ್ ರೋಡಿನಲ್ಲಿರತಕ್ಕ ಅವರ ಮನೆಯಿಂದ ಕಾಣೆಯಾಗಿದ್ದಾನೆಂದು ಹೇಳಿದ್ದರೂ ಸಹ ಅವನನ್ನೂ ಇಲ್ಲಿಯವರೆಗೆ ಪೋಲೀಸಿನವರು ಹುಡುಕಿಲ್ಲ. ಇದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಏನು ಹೇಳುತ್ತಾರೆ ಎಂದರೆ ನಿಮ್ಮ ಕಾಲದಲ್ಲಿ ಏನಾಗಿತ್ತು ಎಂದು ಹೇಳುತ್ತಾರೆ, ಅದಕ್ಕೆ ಜನ ತೀರ್ಪು ಕೊಟ್ಟಿದ್ದಾರೆ ಆದುದರಿಂದ ಹಿಂದಿನವರು ಏನು ತಪ್ಪು ಮಾಡಿದ್ದಾರೆ ಅದನ್ನೇ ನೀವು ಮಾಡುವುದಕ್ಕೆ ಹೋಗುತ್ತೀರಾ ? ನಿಮಗೆ ಅಧಿಕಾರ ಸಿಕ್ಕಿದೆ ಆದುದರಿಂದ ನೀವು ಯಾವ ರೀತಿಯಾಗಿ ಇದನ್ನೂ ಸರಿಪಡಿಸುತ್ತೀರಿ ಎಂಬುದನ್ನು ತಮ್ಮ ಉತ್ತರದಲ್ಲಿ ಹೇಳಿ. ಬೆಲೆ ಏರಿಕೆಯ ವಿಚಾರದಲ್ಲಿ ಹೇಳುವುದಾದರೆ ಬೆಲೆಗಳು ವಿಪರೀತವಾಗಿ ಏರುತ್ತಲೇ ಇದೆ. ಮಾನ್ಯ ಮುಖ್ಯಮಂತ್ರಿಗಳವರ ಕೈಯಲ್ಲಿಯೇ ಪೋಲೀಸ್ ಇಲಾಖೆ ಇದೆ ಅದನ್ನು ಉಪಯೋಗ ಮಾಡಿಕೊಂಡು ಈ ಬೆಲೆ ಏರಿಕೆಯನ್ನು ತಡೆಗಟ್ಟಲು ಸಾಧ್ಯವಾಗುವುದಿಲ್ಲವೇ ? ಇದಕ್ಕೆ ಸಾಕಷ್ಟು ಕಾನೂನಿನ ಬೆಂಬಲವಿದ್ದರೂ ಅದನ್ನು ಏತಕ್ಕೆ ಚಲಾವಣೆ ಮಾಡುವುದಕ್ಕೆ ನೀವು ತಯಾರಾಗಿಲ್ಲ. ಇವತ್ತು ಆಕ್ರಮ ದಾಸ್ತಾನುಗಾರರು, ಕಳ್ಳಸಾಗಾಣಿಕೆದಾರರು ಇವರ ವಿರುದ್ಧವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ನಿಮಗೆ ಧೈರ್ಯ ಬರುತ್ತಿಲ್ಲ. ಆ ಶಕ್ತಿಯನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದೀರಿ ಎಂದು ಹೇಳುತ್ತೇನೆ. ಅಕ್ಕಿ ಸಾಧಾರಣವಾಗಿ ೪-೫ ರೂ.ಗಳು ಆಗಿದೆ ಮಲೆನಾಡಿನಲ್ಲಿ ಭತ್ತ ಬೆಳೆಯತಕ್ಕ ಪ್ರದೇಶವಾಗಿದ್ದರೂ ಸಹ ಭತ್ತ ಸಿಗುತ್ತಿಲ್ಲ. ಕಳ್ಳ ಸಾಗಾಣಿಕೆ ಅವ್ಯಾಹತವಾಗಿ ಆಗುತ್ತಿದೆ. ಇದರ ಬಗ್ಗೆ ಅನೇಕ ಜನರಿಂದ ನನಗೆ ಬಂದ ಕಂಪ್ಲೇಂಟ್‌ಗಳನ್ನು ಸಂಬಂಧಪಟ್ಟ ಮಂತ್ರಿಗಳವರಿಗೆ ಮತ್ತು ಮುಖ್ಯಮಂತ್ರಿಗಳವರಿಗೆ ಕಳುಹಿಸಿ ಕೊಟ್ಟಿದ್ದೇನೆ. ಇದರಲ್ಲಿ ಸೇಲ್ಸ್ ಟ್ಯಾಕ್ಸ್ ಫಿನಾನ್ಸ್ ಡಿಪಾರ್ಟ್‌ಮೆಂಟ್ ಎರಡನ್ನು ಮಾನ್ಯ ಮುಖ್ಯಮಂತ್ರಿಗಳವರ ಕೈಯಲ್ಲಿದೆಯೇ ಇದೆ. ಅವರು ಈ ಜವಾಬ್ದಾರಿಯನ್ನು ಹೊತ್ತಿರತಕ್ಕ ಸಂದರ್ಭದಲ್ಲಿ ನನಗೆ ಬಂದಿರತಕ್ಕ ಕಂಪ್ಲೇಂಟ್‌ನ್ನು ಅವರಿಗೆ ಕಳುಹಿಸಿ ಕೊಟ್ಟಿದ್ದೇನೆ. ಶ್ರೀಮಾನ್ ಗಣೇಶ್ ಹೆಗಡೆ ಎನ್ನತಕ್ಕವರ ಹೆಸರನ್ನು ಪದೇ ಪದೇ ಎತ್ತುವುದಕ್ಕೆ ನನಗೆ ಏನೂ ಆಸೆಯಿಲ್ಲ. ಇದರ ಬಗ್ಗೆ ಆಗಲೇ ಒಂದು ಸಮಿತಿ ಬಂದಿದೆ. ಈ ವಿಚಾರವನ್ನು ನಾನು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದ್ದೇನೆ, ಇವರ ಅಣ್ಣನ ಮೇಲೆ ಆಪಾದನೆ ಮಾಡಬೇಕು ಎನ್ನತಕ್ಕ ಉದ್ದೇಶ ನನಗೇನೂ ಇಲ್ಲ. ಆದರೆ ಲಕ್ಷಾಂತರ ಜನರು ಕರ್ನಾಟಕ ರಾಜ್ಯದಲ್ಲಿ ಇವತ್ತು ಅಕ್ಕಿಯನ್ನು ಕೊಂಡು ತಿನ್ನುವುದೇ ಸಿಕ್ಕದೇ ಇರುವಾಗ, ಭತ್ತ ಅಕ್ಕಿ ಲಾರಿಗಳಲ್ಲಿ ಬೇರೆ ರಾಜ್ಯಗಳಿಗೆ ಹೋಗುತ್ತಲೇ ಇದೆ. ಇದು ದಿನನಿತ್ಯ ಅನೇಕ ಲಾರಿಗಳಲ್ಲಿ ಕೇರಳ, ಗೋವಾಕ್ಕೆ ಹೋಗತಕ್ಕ ಸಂದರ್ಭದಲ್ಲಿ ಅವನ್ನು ತಡೆಹಿಡಿಯಬೇಕು ಎನ್ನತಕ್ಕ ಆಸೆಯಿಂದ ನಾನು ಹೇಳಿದ್ದೇನೆ. ಬಡವರ ಮಾನ ಮರ್ಯಾದೆಗಿಂತ ಮಾನ್ಯ ಮುಖ್ಯಮಂತ್ರಿಗಳವರಿಗೆ ಅವರ ಅಣ್ಣನ ಮಾನ ಮರ್ಯಾದೆ ಜಾಸ್ತಿಯಾಗಿ ಅದಕ್ಕೆ ಹೆಚ್ಚಿನ ಗಮನವನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಅವರು ಸಭಾಧ್ಯಕ್ಷರಿಗೆ ಒಂದು ಪತ್ರವನ್ನು ಬರೆದು, ವಿಚಾರಣೆ ಮಾಡಬೇಕೆಂದು ತಿಳಿಸಿದ್ದಾರೆ ಅದಕ್ಕಾಗಿ ಒಂದು ಸಮಿತಿ ಕೂಡ ಮಾಡಿದ್ದಾರೆ. ಈ ವಿಚಾರದಲ್ಲಿ ವಿರೋಧ ಪಕ್ಷದ ನಾಯಕರು ಮತ್ತು ಇತರ ಸದಸ್ಯರುಗಳು ಆ ಸಮಿತಿಯಲ್ಲಿ ಇರುವುದಿಲ್ಲವೆಂದು ಹೇಳಿದ್ದಾರೆ ಅದಕ್ಕಾಗಿ ನಾನು ಅವರಿಗೆಲ್ಲಾ ಅಭಿನಂದನೆಗಳನ್ನು ಸಲ್ಲಿಸುತ್ತೇನೆ, ಕಾನೂನು ಪ್ರಕಾರವಾಗಿ ಆ ರೀತಿಯಾದ ಒಂದು ಸಮಿತಿಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ನಾನು ಅವರ ಒಳ್ಳೆಯದು ಕೆಟ್ಟದ್ದರ ಬಗ್ಗೆ ಚರ್ಚೆಗೆ ಹೋಗುವುದಿಲ್ಲ. ಕರ್ನಾಟಕ ರಾಜ್ಯದ ಜನತೆಯ ಹಿತ ದೃಷ್ಟಿಯಿಂದ ಯಾವುದೇ ತ್ಯಾಗಕ್ಕೆ ತಯಾರಿರತಕ್ಕ ಜನ ನಾವು. ಇಲ್ಲದಿದ್ದರೆ ಇಂಥ ರಾಜಕಾರಣವನ್ನು ಮಾಡುವುದಕ್ಕೆ ಹೋಗುತ್ತಿರಲಿಲ್ಲ ಕಾನೂನು ಪ್ರಕಾರ ಸಭಾಧ್ಯಕ್ಷರಿಗೆ ತಿಳಿಸಿದ್ದೇವೆ. ನಿಮಗೆ ಸಮಿತಿ ಮಾಡುವುದಕ್ಕೆ ಅಧಿಕಾರ ಇಲ್ಲವೆಂದು ಹೇಳಿದ್ದೇವೆ. ಬಂದಿರತಕ್ಕ ವಿಚಾರವನ್ನು ಮುಖ್ಯ ಮಂತ್ರಿಗಳಿಗೆ ಕಳುಹಿಸಿದ್ದೇವೆ. ಅವರು ನನ್ನ ಮೇಲೆ ಕೋರ್ಟಿನಲ್ಲಿ ಮಾನ ನಷ್ಟ ಮೊಕದ್ದಮೆ ಹೂಡಿ

ದ್ದಾರೆ. ಆ ಸಮಿತಿಗೆ ವೀರಪ್ಪಮೊಯಿಲಿಯವರು ಅಧ್ಯಕ್ಷರಾಗುವುದಿಲ್ಲವೆಂದರು. ಆಮೇಲೆ ಅದು ಶ್ರೀ ಗಂಗಾಧರನ್‌ರವರ ಅಧ್ಯಕ್ಷತೆಯಲ್ಲಿ ರಚನೆಯಾಯಿತು. ಚಿತ್ತಾಪುರ ತಾಲ್ಲೂಕಿನಲ್ಲಿ ರೈಸ್ ಮಿಲ್ ನಡೆಸುತ್ತಿರುವವರಿಗೆ ಲಾಯರ್ ನೋಟೀಸ್ ಕೊಟ್ಟಿದ್ದಾರೆ. ಅದು ಕೋರ್ಟಿನಲ್ಲಿದೆ. ಮತ್ತು ಆ ವಿಷಯು ಕೂಡ ಸಮಿತಿಯ ಮುಂದಿದೆ. ಸಮಿತಿ ಇವತ್ತು ಚಿತ್ತಾಪುರಕ್ಕೆ ಹೋಗಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದು ಸದನದ ಸಮಿತಿ ಅಲ್ಲ.

ಶ್ರೀ ಎಸ್. ಬಂಗಾರಪ್ಪ.—ಅದು ಸದನದ ಸಮಿತಿ ಅಲ್ಲ ಆದರೆ ಅದು ಏನೇ ಇರಲಿ, ಸಮಿತಿ ಯಾವರು ಅಲ್ಲಿಗೆ ಹೋಗಿ ಪಬ್ಲಿಕ್ ಹಿಯರಿಂಗ್ ಮಾಡಬೇಕು. ಏನು ನಡೆದಿದೆ ಮತ್ತು ನಡೆಯುತ್ತಿದೆ ಎಂಬುದನ್ನು ತಿಳಿಸಬೇಕು. ಇವರು ನನ್ನ ಮೇಲೆ ಮಾನನಷ್ಟ ಮೊಕದ್ದಮೆಯನ್ನು ಹುಬ್ಬಳ್ಳಿ ಕೋರ್ಟಿನಲ್ಲಿ ಹೂಡಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್.— ಕಾನೂನು ಪ್ರಕಾರ ಸಮಿತಿ ಅಸ್ತಿತ್ವದಲ್ಲಿರುವುದಕ್ಕೆ ಸಾಧ್ಯವಿದೆಯೆ ಎಂಬ ಪ್ರಶ್ನೆ ಇದೆ. ಸಮಿತಿ ನೇಮಕವಾಗಬೇಕು ಮತ್ತು ಅದು ಚುನಾವಣೆಯೊಳಗಾಗಿ ತನ್ನ ವರದಿಯನ್ನು ಕೊಡಬೇಕೆಂದು ಮುಖ್ಯ ಮಂತ್ರಿಗಳು ಅಧ್ಯಕ್ಷರಿಗೆ ಪತ್ರ ಬರೆದು ತಿಳಿಸಿದ್ದಾರೆ ಮತ್ತು ಬಾಯಿ ಮಾತಿನಲ್ಲಿ ಕೂಡ ಹೇಳಿದ್ದಾರೆ. ಆದರೆ ಈಗ ಆ ಕಾಲ ಮಿಂಚಿ ಹೋಯಿತು. ಆದರೂ ಆ ಸಮಿತಿ ಇನ್ನೂ ಇದೆ. ಅದು ಈ ಸದನದ ಸಮಿತಿ ಅಲ್ಲ. ಅದರಲ್ಲಿ ಸದನದ ಸದಸ್ಯರಿದ್ದಾರೆ, ಅದನ್ನು ಮಾಡಿರುವವರು ಅಧ್ಯಕ್ಷರು. ಅದು ಕೆಲಸ ಮಾಡುವುದಕ್ಕೆ ಜೂರಿಸ್‌ಡಿಕ್ಷನ್ ಇದೆಯೋ ಎಂಬುದೇ ಪ್ರಶ್ನೆ ಆಗಿದೆ. ಅದು ವರದಿ ನೀಡಿದರೆ ಅದು ಸದನದ ಮುಂದೆ ಬರುತ್ತದೆಯೆ ? ನಾನು ಅಧ್ಯಕ್ಷರಿಗೆ ಹೇಳಿದೆ, ತಾವು ಸಮಿತಿ ಮಾಡಿದ್ದೀರಿ, ಅದು ಸರಿಯೋ, ತಪ್ಪೋ ಅದರ ಬಗ್ಗೆ ವಿಚಾರ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಅದು ಆಗಬಾರದಾಗಿತ್ತು, ಅದು ಈಗ ರದ್ದಾಗಬೇಕಾಗಿದೆ ಎಂದು ತದನಂತರ ಹೇಳಿದೆ. ಅದು ಇನ್ನೂ ನಡೆಯುತ್ತಿದೆ ಎಂದರೆ ಬಹುಮಟ್ಟಿಗೆ ಸರಿಯಾಗಲಾರದು. ನಾವು ಕೆಲವು ವಿಚಾರಗಳನ್ನು ಸಂಪ್ರದಾಯವಾಗಿ ಹಾಕಿದರೆ ಅದು ಮುಂದಿನ ಪೀಳಿಗೆಗೆ ಮಾದರಿಯಾಗಿರಬೇಕು. ಇಂಥದ್ದು ಇದೆ ಅದನ್ನು ನಾವು ಅನುಸರಿಸಬೇಕೆಂಬ ಪ್ರಸಂಗ ಬರುತ್ತದೆ, ನನಗೆ ಸಮಿತಿಯ ಬಗ್ಗೆಯಾಗಲೀ ಅಧ್ಯಕ್ಷರ ಮೇಲಾಗಲೀ ಭಿನ್ನಾಭಿಪ್ರಾಯವಿಲ್ಲ. ಅದು ಕಾರ್ಯ ಮಾಡಿದರೆ ಅದರ ವ್ಯಾಪ್ತಿ ಉಳಿಯುತ್ತದೆ. ಇದರ ಬಗ್ಗೆ ಮುಖ್ಯ ಮಂತ್ರಿಗಳು ಪತ್ರ ಬರೆದು ಇಪ್ಪತ್ತನೇ ತಾರೀಖಿನೊಳಗೆ ಸಮಿತಿ ತೀರ್ಮಾನ ಕೊಡಬೇಕೆಂದು ಅದರಲ್ಲಿ ಉಲ್ಲೇಖ ಮಾಡಿದ್ದಾರೆ. ಆ ದಿನ ಸದನ ಇಲ್ಲದೆ ಇದ್ದುದರಿಂದ ಅಧ್ಯಕ್ಷರಿಗೆ ಪತ್ರ ಬರೆದು ಕೊಳುವುದು ಸಮರ್ಪಕವಾಗಿತ್ತು. ಮಾಡಿದ್ದಾರೆ. ಆದರೆ ಸದನ ಸೇರಿದಾಗಲೂ ಇನ್ನೂ ಆ ಸಮಿತಿ ಇದೆ, ಕೆಲಸ ಮಾಡುತ್ತಿದೆ ಎಂದರೆ ಹೇಗೆ? ಆ ಸಮಿತಿಯ ಮುಂದೆ ಏನು ವಿಷಯ ಇದೆ ಅದರ ಬಗ್ಗೆ ವಿಚಾರಣೆಗೆ ಕರೆದಾಗ ಯಾರಾದರೂ ಬರುವುದಿಲ್ಲವೆಂದರೆ ಈ ಸದನಕ್ಕೆ ಅವಮಾನ ಮಾಡಿದಂತಾಗುತ್ತದೆ. ಅದಕ್ಕೂ ಈ ಸದನದ ಸಮಿತಿಯಷ್ಟೇ ಹಕ್ಕುಬಾಧ್ಯತೆಗಳಿವೆ ಎಂದು ಅಧ್ಯಕ್ಷರು ಹೇಳಿದ್ದಾರೆ. ಅದು ಆಗುವುದಿಲ್ಲ. ರೂಲ್ಸ್ ಆಫ್ ಪ್ರೊಸೀಜರ್ ಪ್ರಕಾರ ಪಿ. ಎ. ಸಿ., ಪಿ.ಯು..ಸಿ , ಎಸ್.ಸಿ., ಎಸ್.ಟಿ. ಇತ್ಯಾದಿ ಸಮಿತಿಗಳು ಬರುತ್ತವೆ. ಅದಕ್ಕೆ ಸಭೆಯ ಒಪ್ಪಿಗೆ ಇರುವುದರಿಂದ ಅದನ್ನು ಎನ್‌ಫೋರ್ಸ್ ಮಾಡುವ ಹಕ್ಕು ಅಧ್ಯಕ್ಷರಿಗೆ. ಇರುತ್ತದೆ. ಆದರೆ ಈ ಸಮಿತಿಯ ಬಗ್ಗೆ ಆ ಹಕ್ಕು ಬರುವುದಕ್ಕೆ ಸಾಧ್ಯವಿಲ್ಲ. ಅದರಲ್ಲಿ ಬೇರೆ ಬೇರೆ ಅಂಶಗಳು ಇರುವುದರಿಂದ ಅದು ಬಹುಮಟ್ಟಿಗೆ ಕೆಲಸ ಮಾಡದೆ ಇರುವುದು ಒಳ್ಳೆಯದು. ಈ ಸದನದ ಸದಸ್ಯರು ಆ ಸಮಿತಿಯಲ್ಲಿ ಸದಸ್ಯರಾಗಿರುವುದರಿಂದ ಅವರೂ ಕೂಡ ಇದರ ಬಗ್ಗೆ ವಿಚಾರ ಮಾಡುವುದು ಸೂಕ್ತವೆಂದು ನನ್ನ ಅಭಿಪ್ರಾಯ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ರಂಗನಾಥ್‌ರವರು ಈ ಪ್ರಶ್ನೆ ಎತ್ತಿದ್ದರಿಂದ ಪ್ರಶ್ನೆ ಮಾಡಬೇಕಾಗಿದೆ. ನಾನು ಆ ಸಮಿತಿಯ ಸದಸ್ಯ. ಅವರು ಎರಡು ಪ್ರಶ್ನೆಗಳನ್ನು ಎತ್ತಿದ್ದಾರೆ. ಒಂದನೆಯದು ಸಮಿತಿ ಮಾಡಿರುವುದು ಸರಿಯೋ ಎಂದು, ಆ ಪ್ರಶ್ನೆಗೆ ನಾನು ಉತ್ತರಿಸುವುದಕ್ಕೆ ಹೋಗುವುದಿಲ್ಲ. ಎರಡನೆಯದು, ಸಮಿತಿ ಕಾರ್ಯಕಲಾಪಗಳನ್ನು ಮುಂದುವರಿಸಬೇಕೇ ಬೇಡವೇ ಎಂಬುದು. ಸಮಿತಿ ಪೂರ್ತಿಯಾಗಿ ಕೆಲಸ ಮಾಡಿ ವರದಿ ಕೊಡಲಿ, ಅಲ್ಲಿಯವರೆಗೆ...

ಶ್ರೀ ಕೆ. ಹೆಚ್. ರಂಗನಾಥ್. —ಈ ಹಿನ್ನೆಲೆಯಲ್ಲಿ ಮುಖ್ಯ ಮಂತ್ರಿಗಳು ಆ ಸಮಿತಿ ಕಾರ್ಯಕಲಾಪಗಳನ್ನು ನಡೆಸಿ ೧೪ರ ಚುನಾವಣೆಯೊಳಗೆ ವರದಿ ಕೊಡಬೇಕೆಂದು ಪ್ರಸ್ತಾಪ ಮಾಡಿರುವುದರಿಂದ ಆ

ತಾರೀಖಿನ ನಂತರ ಸಮಿತಿಯನ್ನು ಮುಂದುವರಿಸಿಕೊಂಡು ಹೋಗತಕ್ಕ ಪ್ರಶ್ನೆ ಹೇಗೆ ಬರುತ್ತದೆ ? ಯಾವ ರೀತಿ ಆ ಸಮಿತಿ ಮುಂದುವರಿಯುತ್ತದೆ ?

ಶ್ರೀ ಎಂ. ಎಸ್. ಕೃಷ್ಣನ್.—ಆ ಸಮಿತಿಗೆ ಒಂದು ಗಡಿಯನ್ನು ಗೊತ್ತುಮಾಡಿದ್ದು ನಿಜ. ಆದರೆ ಆ ಗಡಿಯೊಳಗೆ ಈ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲವೆಂಬ ವಿಚಾರ ಬಂತು. ಆಮೇಲೆ ಬಂಗಾರಪ್ಪನವರು ಹೇಳಿದರು, ಸಮಿತಿಯವರು ಆ ಜಾಗಕ್ಕೆ ಹೋಗಿ ನೋಡಿ ಅಲ್ಲಿ ವಿಚಾರಣೆ ಮಾಡಬೇಕು, ಯಾರ್ಯಾರನ್ನು ಕರೆದು ಕೇಳಬೇಕೆಂಬ ಪ್ರಶ್ನೆಗಳು ಬಂದವು. ಸಾಕ್ಷಿ ಕೊಡುವವರು ಬರಬೇಕಾಗುತ್ತದೆ, ಅವರಿಗೆ ಅವಧಿ ಕೊಡಬೇಕಾಗುತ್ತದೆ ಅಧಿಕಾರಿಗಳಿಗೆ ಇದನ್ನೆಲ್ಲ ಮಾಡುವುದಕ್ಕೆ ಅವಧಿ ಬೇಕಾಗುತ್ತದೆ. ಆದಕ್ಕೆ ನೀವು ನಮಗೆ ಸ್ವಲ್ಪ ಕಾಲಾವಕಾಶವನ್ನು ಮಾಡಿ ಕೊಡಬೇಕೆಂದು ಕೇಳಿದ್ದೆವು. ಆ ಪ್ರಕಾರ ಅವರು ಅವಕಾಶ ಮಾಡಿಕೊಟ್ಟಿದ್ದಾರೆ. ಅಂದಾಗ ಆ ಸಮಿತಿ ಈಗ ಅಸ್ತಿತ್ವದಲ್ಲಿದೆ ಎಂದು ಹೇಳಬಲ್ಲೆ. ರಂಗನಾಥ್‌ರವರು ಸಮಿತಿಯನ್ನು ಮುಂದುವರಿಸಿದ್ದು ತಪ್ಪು ಎಂದು ಪ್ರಶ್ನೆ ಮಾಡಿದರು. ಆದರೆ ಅದು ವ್ಯಾಖ್ಯಾನಕ್ಕೆ ಬರತಕ್ಕದ್ದು, ಆದುದರಿಂದ, ಈಗ ನಾನು ಆ ವಿವಾದಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ ಸಮಿತಿ ಅಸ್ತಿತ್ವದಲ್ಲಿದೆ ಎಂದು ಹೇಳಬಲ್ಲೆ. ಆದಷ್ಟು ಜಾಗ್ರತೆ ಸಮಿತಿ ವರದಿಯನ್ನು ಕೊಡಬೇಕಾಗುತ್ತದೆ. ಅದು ಸಮಿತಿಗೆ ಬಿಟ್ಟದ್ದು, ಬಹುಶಃ ಅದು ಮಾಡುತ್ತದೆಂದು ನನ್ನ ಅಭಿಪ್ರಾಯ.

ಶ್ರೀ ಕೆ. ಜಿ. ಮಹೇಶ್ವರಪ್ಪ,—ಅದರ ಅವಧಿಯನ್ನು ವಿಸ್ತರಿಸುವುದಕ್ಕೆ ಅವಕಾಶವಿಲ್ಲವೆ ?

ಉಪಾಧ್ಯಕ್ಷರು.—ಸಮಿತಿ ಇರಲಿಕ್ಕೆ ಸಾಧ್ಯವಿಲ್ಲವೆನ್ನುತ್ತಿರುವಾಗ ಅವಧಿಯನ್ನು ಮುಂದುವರಿಸುವ ಪ್ರಶ್ನೆ ಎಲ್ಲಿ ಬರುತ್ತದೆ ?

ಶ್ರೀ ಕೆ. ಹೆಚ್. ರಂಗನಾಥ್.—ಅದು ಇನ್‌ಫ್ರಾಕ್ಚುಯಸ್ ಆಗಿದೆ...

ಶ್ರೀ ಎಂ. ಎಸ್. ಕೃಷ್ಣನ್.—ಅದು ಇನ್‌ಫ್ರಾಕ್ಚುಯಸ್ ಆಗಿಲ್ಲ. ಅದರ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ. ಅದರ ಬಗ್ಗೆ ಬೇಕಾದರೆ ಪ್ರತ್ಯೇಕವಾಗಿ ಕುಳಿತು ಚರ್ಚೆ ಮಾಡೋಣ.

ಶ್ರೀ ಕೆ. ಹೆಚ್. ರಂಗನಾಥ್.—ಅದಕ್ಕೆ ನಾವು ತಯಾರಾಗಿದ್ದೇವೆ. ಆದರೆ ಈ ಸಭೆ ಇಲ್ಲದೆ ಇರತಕ್ಕ ಸಂದರ್ಭದಲ್ಲಿಯಾದರೆ ಆ ಮಾತು ಬೇರೆ. ಸಭೆ ನಡೆಯುತಕ್ಕ ಸಂದರ್ಭದಲ್ಲಿ ಇದೇ ಸೂಕ್ತವಾದ ಸಂದರ್ಭ ಮತ್ತು ಸೂಕ್ತವಾದ ವೇದಿಕೆ. ಇದನ್ನು ಬಿಟ್ಟು ಇನ್ನು ಬೇರೆ ಯಾವ ವೇದಿಕೆ ಮೇಲೆ ಮಾತನಾಡಬೇಕು ?

ಶ್ರೀ ಎಂ. ಎಸ್. ಕೃಷ್ಣನ್.—ಅದಕ್ಕೆ ಅಧ್ಯಕ್ಷರು ಅವಕಾಶ ಮಾಡಿಕೊಟ್ಟರೆ ಖಂಡಿತವಾಗಿ ಚರ್ಚೆ ಮಾಡೋಣ.

ಶ್ರೀ ರಾಮಚಂದ್ರರಾವ್.—ಮಾನ್ಯ ರಂಗನಾಥ್‌ರವರು ಪ್ರಶ್ನೆ ಎತ್ತಿದ್ದಾರೆ. ಅದರ ಬಗ್ಗೆ ಸಭಾಧ್ಯಕ್ಷರು ತೀರ್ಮಾನ ಕೊಡುತ್ತೇವೆಂದು ಹೇಳಿದ್ದಾರೆ.

ಉಪಾಧ್ಯಕ್ಷರ .—ಅದನ್ನೆಲ್ಲ ಚರ್ಚೆ ಮಾಡುವುದಕ್ಕೆ ಇದು ಸೂಕ್ತವಾದ ಕಾಲವಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಆ ತರಹ ಧೋರಣೆ ಸರಿಯಲ್ಲ. ನಾನು ಅತಿ ವಿನಯದಿಂದ ಕೇಳಿಕೊಳ್ಳುತ್ತೇನೆ, ಇದೇ ಸೂಕ್ತವಾದ ಸಮಯ, ಈಗಲೇ ಇದಕ್ಕೆ ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು.—ಕಮಿಟಿ ಡಿಫಂಕ್ಟ್ ಆದರೂ ವರದಿ ಸಲ್ಲಿಸುವುದಕ್ಕೆ ಅಧಿಕಾರವಿದೆ.

ಶ್ರೀ ಕೆ. ಹೆಚ್. ರಂಗನಾಥ್.—ತಮ್ಮ ಅಭಿಪ್ರಾಯ ಏನಾದರೂ ಇರಲಿ. ಅದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಇದು ಸೂಕ್ತವಾದ ಸಮಯವಲ್ಲವೆಂದು ತಾವು ಹೇಳುವುದು ಒಳ್ಳೆಯದಲ್ಲ. ನಾನು ಇನ್ನು ಯಾವ ಕಾಲದಲ್ಲಿ ಮಾತನಾಡಲಿ ? ಎಲ್ಲಿ ಮಾತನಾಡಲಿ ? ಚಿಕ್ಕಪೇಟೆಯಲ್ಲಿ ಹೋಗಿ ಕುಳಿತುಕೊಂಡು ಬಾಯಿ ಬಡಿದುಕೊಳ್ಳಲಿ ?

ಉಪಾಧ್ಯಕ್ಷರು.—ಆ ಸಮಿತಿ ಸದನದ ಮುಂದೆ ವರದಿಯನ್ನು ಇಟ್ಟಮೇಲೆ ನೀವು ವಿಷಯವನ್ನು ಪ್ರಸ್ತಾಪ ಮಾಡಬಹುದು.

ಶ್ರೀ ಕೆ, ಹೆಚ್. ರಂಗನಾಥ್.—ಸದನದಲ್ಲಿ ಹೇಳಿದ್ದು ಕಡತಕ್ಕೆ ಹೋಗುತ್ತದೆ, ನಾಳೆ ಈ ಸದನದ ಸದಸ್ಯರಾಗಿ ಬರುವವರು ಕಡತವನ್ನು ತೆಗೆದುಕೊಂಡು ಓದುತ್ತಾರೆ. ಇಂಥದಕ್ಕೆ ಅವಕಾಶ ಕೊಟ್ಟಿದ್ದಾರೆ,

ಇಂಥದ್ದು ಚರ್ಚೆಯಾಗಿದೆ, ಇಂಥ ಸಂಪ್ರದಾಯವನ್ನು ಹಾಕಿದ್ದಾರೆಂದು ಹೇಳುತ್ತಾದೆ. ಆದ್ದರಿಂದ, ನಾನು ತಮ್ಮಲ್ಲಿ ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ತಮ್ಮ ಅಭಿಪ್ರಾಯ ಏನಾದರೂ ಇರಲಿ ನಾನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಕೆಲವು ವಿಚಾರಗಳನ್ನು ಹೇಳಬೇಕಾಗುತ್ತದೆ. ಆದ್ದರಿಂದ, ಇದಕ್ಕೆ ಇದೇ ಸೂಕ್ತ ಸಮಯ ಎಂದು ನಾನು ಹೇಳಲೇಬೇಕಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ಆಗಲೇ ನಾನು ಹೇಳಿದೆ ಸಮಿತಿ ಮಾಡತಕ್ಕ ಅಧಿಕಾರ ಸಭಾಧ್ಯಕ್ಷರಿಗೆ ಇಲ್ಲದಿದ್ದರೂ ಕೂಡ ಮಾಡಿದ್ದಾರೆ ಎಂದು. ಸಮಿತಿಯ ಮುಂದೆ ಯಾರು ಬಂದು ಎವಿಡೆನ್ಸ್ ಕೊಡತಕ್ಕವರು ? ಹಣಕಾಸಿನ ಇಲಾಖೆಯವರು ಕೊಡಬೇಕು. ಹಣಕಾಸಿನ ಇಲಾಖೆ ಯಾರ ಅಧೀನದಲ್ಲಿದೆ ? ಮುಖ್ಯಮಂತ್ರಿಗಳ ಅಧೀನದಲ್ಲಿದೆ. ಅವರೇ ಹಣಕಾಸಿನ ಮಂತ್ರಿಗಳೂ ಆಗಿದ್ದಾರೆ. ಅಕ್ಕಿ ಅಕ್ರಮವಾಗಿ ಸಾಗಾಣಿಕೆಯಾಗುತ್ತಿದ್ದರೆ ಅದನ್ನು ಹಿಡಿಯುವವರು ಯಾರು ? ಸೇಲ್ಸ್‌ಟ್ಯಾಕ್ಸ್ ಅಥವಾ ಕಮರ್ಷಿಯಲ್ ಟ್ಯಾಕ್ಸ್ ಮತ್ತು ಪೋಲೀಸ್ ಇಲಾಖೆಯವರು. ಪೋಲೀಸ್ ಇಲಾಖೆ ಯಾರ ಹತ್ತಿರ ಇದೆ ? ಅದೂ ಕೂಡ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಇದೆ. ಮುಖ್ಯ ಮಂತ್ರಿಗಳ ಅಣ್ಣ ತಮ್ಮಂದಿರ ಮೇಲೆ ಆಪಾದನೆ ಇದ್ದಾಗ ಸಾಕ್ಷಿ ಕೊಡತಕ್ಕ ಧೈರ್ಯ ಯಾವ ಅಧಿಕಾರಿಗೆ ಬರುತ್ತದೆ ಎಂಬುದನ್ನು ಹೇಳಿ. ಅದಕ್ಕೋಸ್ಕರವೇ ನಾನು ಹೇಳುತ್ತಿದ್ದೇನೆ, ಗೃಹ ಇಲಾಖೆ ಮತ್ತು ಹಣಕಾಸಿನ ಇಲಾಖೆಯನ್ನು ಬೇರೆಯವರಿಗೆ ಕೊಟ್ಟು ಆಮೇಲೆ ವಿಚಾರಣೆ ನಡೆಸಲಿ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ನಿಮ್ಮ ಹತ್ತಿರ ದಾಖಲೆ ಇದ್ದರೆ ನೀವು ಕೊಡಬಹುದಲ್ಲ. ಸಾಕ್ಷ್ಯಾಧಾರಗಳು ಇದ್ದರೆ ನೀವೇ ಸಮಿತಿಗೆ ಕೊಡಬಹುದು.

ಶ್ರೀ ಎಸ್. ಬಂಗಾರಪ್ಪ.—ನಾವು ಏತಕ್ಕೆ ಕೊಡಬೇಕು ?

ಶ್ರೀ ಕೆ. ಎಚ್. ರಂಗನಾಥ್.—ನಾನು ಸಮಿತಿ ಮುಂದೆ ಬರುವುದಿಲ್ಲ ಎಂದು ಹೇಳಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಕಾನೂನು ಎಲ್ಲಿದೆ ?

ಶ್ರೀ ಎನ್. ಚಿಕ್ಕೇಗೌಡ.—ಅದು ಯಾವ ಸಮಿತಿ, ಯಾವ ಆಧಾರದಮೇಲೆ ಮಾಡಿದ್ದಾರೆ ಎಂಬುದನ್ನೂ ಕೇಳಬೇಕಾಗುತ್ತದೆ.

(ಗೊಂದಲ)

ಉಪಾಧ್ಯಕ್ಷರು.—ಈ ವಿಷಯ ಬಂದಾಗ ಚರ್ಚೆ ಮಾಡೋಣ. ಈಗ ಬೇಡ.

(ಗೊಂದಲ)

ಶ್ರೀ ಎನ್. ಚಿಕ್ಕೇಗೌಡ.—ಅದು ಯಾವ ಸಮಿತಿ ? ಯಾವ ಆಧಾರದ ಮೇಲೆ ಮಾಡಿದ್ದಾರೆ ? ಯಾವ ಕಾನೂನು ಪ್ರಕಾರ ಮಾಡಿದ್ದಾರೆ ? ಈ ವಿಷಯ ಸದನದ ಮುಂದೆ ಬಂದಿದೆಯೇ ? ಎಂಬ ಮೂಲ ಪ್ರಶ್ನೆಯನ್ನು ಹಾಕಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ನನ್ನ ಅಭಿಪ್ರಾಯವನ್ನು ನಾನು ಹೇಳಿದೆ. ಇದೇ ತರಹ ಆಪಾದನೆ ಮುಂದೆ ಬಂದಾಗ ಬಹಳ ಕಷ್ಟವಾಗುತ್ತದೆ ಎಂಬ ಅಭಿಪ್ರಾಯವನ್ನು ನಾನು ಹೇಳಿದ್ದೇನೆ. ವಿರೋಧ ಪಕ್ಷದ ನಾಯಕರು ಈ ಸಂದರ್ಭದಲ್ಲಿ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಅದೇನೇ ಇರಲಿ ಇದೇ ಸಂದರ್ಭದಲ್ಲಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಜನತಾ ಪಕ್ಷದ ಸದಸ್ಯರಾದ ರಾಮದೇವ್ ಅವರ ಬಗ್ಗೆ ನನಗೆ ಅಪಾರವಾದ ಗೌರವವಿದೆ. ಅವರ ಚಾರಿತ್ರ್ಯದ ಬಗ್ಗೆ ಅನುಮಾನ ಪಟ್ಟು ನಾನು ಮಾತನಾಡುವುದಿಲ್ಲ. ಅವರು ಶಾಸಕರಾಗಿದ್ದಾಗ ಮತ್ತು ಶಾಸಕರಲ್ಲದಿದ್ದಾಗ ಅವರನ್ನು ನಾನು ಚೆನ್ನಾಗಿ ಬಲ್ಲೆ. ಆದರೆ ಆಪಾದನೆಗಳು ಬಂದಾಗ ಯಾವ ರೀತಿ ನಡೆಯುತ್ತದೆ ಎಂಬುದಕ್ಕೆ ಉದಾಹರಣೆಯನ್ನು ಕೊಡುತ್ತಿದ್ದೇನೆ ಅಷ್ಟೆ. ಮೇಲ್ಮನೆಯ ಸದಸ್ಯರಾದ ಶ್ರೀ ಎ. ಕೆ. ಸುಬ್ಬಯ್ಯನವರು, ಚಿಕ್ಕಮಾರನಹಳ್ಳಿಯಲ್ಲಿ ಬಿ.ಡಿ.ಎ.ನವರು ಮನೆಗಳನ್ನು ಬುಲ್ಡೋಜರ್ ತೆಗೆದುಕೊಂಡು ಹೋಗಿ ಕೆಡವಿದ ಸಂದರ್ಭದಲ್ಲಿ ಒಂದು ಹೇಳಿಕೆಯನ್ನು ಕೊಟ್ಟರು. "ಶ್ರೀಮಾನ್ ರಾಮದೇವ್ ಅವರು ಈ ಪ್ರಕರಣದಲ್ಲಿ ಎರಡು ಲಕ್ಷ ರೂಪಾಯಿ ಲಂಚ ತಿಂದಿದ್ದಾರೆ, ಹಣ ಮಾಡಿದ್ದಾರೆ" ಎಂಬ ಅರ್ಥದಲ್ಲಿ ಹೇಳಿಕೆ ಕೊಟ್ಟು, "ನಾನು ಜವಾಬ್ದಾರಿಯಿಂದ ಈ ಆಪಾದನೆ

ಮಾಡುತ್ತಿದ್ದೇನೆ, ಆ ಬಗ್ಗೆ ನನ್ನ ಹತ್ತಿರ ದಾಖಲೆಗಳಿವೆ, ನಾನು ರುಜುವಾತು ಮಾಡುತ್ತೇನೆ '' ಎಂದು ಹೇಳಿದರು. ನಾನು ಆ ತಕ್ಷಣ ಸಭಾಧ್ಯಕ್ಷರಿಗೆ ಪತ್ರ ಬರೆದೆ. ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಪತ್ರ ಬರೆದು ಈ ರೀತಿ ಸುಬ್ಬಯ್ಯನವರು ರಾಮದೇವ್ ಅವರ ಮೇಲೆ ಆಪಾದನೆ ಮಾಡಿದ್ದಾರೆ, ಹೇಳಿಕೆ ಕೊಟ್ಟಿದ್ದಾರೆ. ನಿಮ್ಮ ಅಣ್ಣನವರು ಕಾನೂನಿಗೆ ವಿರುದ್ಧವಾಗಿ ಅಕ್ಕಿ ಕಳ್ಳಸಾಗಾಣಿಕೆಯಲ್ಲಿ ತೊಡಗಿದ್ದಾರೆಂದು ನನ್ನ ಗಮನಕ್ಕೆ ಬಂದಿದೆ, ಆದ್ದರಿಂದ ವಿಚಾರಣೆ ಮಾಡಿಸಿ ಎಂದು ಹೇಳಿದಾಗ ಕೋರ್ಟಿನಲ್ಲಿ ಮಾನನಷ್ಟ ಮೊಕದ್ದಮೆಯನ್ನು ಹೂಡುವ ಮಟ್ಟಕ್ಕೆ ಬಂದಿದ್ದೀರಿ, ಸಮಿತಿ ಮಾಡುವುದಕ್ಕೆ ಸಭಾಧ್ಯಕ್ಷರಿಗೆ ಪತ್ರ ಬರೆದಿದ್ದೀರಿ, ಸಮಿತಿ ಮಾಡುವ ವಿಚಾರದಲ್ಲಿ ಸಫಲರಾಗಿದ್ದೀರಿ, ಅದೇರೀತಿ ನಿಮ್ಮ ಪಕ್ಷದ ಒಬ್ಬ ಸದಸ್ಯರಾದ ರಾಮದೇವ್ ಅವರ ಮೇಲೆ ಅಪಾದನೆ ಬಂದಿರುವಾಗ ಅದೇರೀತಿ ಲಕ್ಷಾಂತರ ರೂಪಾಯಿ ಅಥವಾ ಎರಡು ಲಕ್ಷ ರೂಪಾಯಿ ಲಂಚ ತಿಂದಿದ್ದಾರೆ ಎಂಬ ಅಪಾದನೆ ಬಂದಿರುವಾಗ ಮುಖ್ಯ ಮಂತ್ರಿಗಳಾಗಿ ತಮಗೆ ನೈತಿಕ ಹೊಣೆ ಇದ್ದರೆ, ಅನ್ಯಾಯವಾಗಿ ಅವರ ಮೇಲೆ ಆಪಾದನೆ ಬರಬಾರದು ಎಂಬ ಕಳಕಳಿ ಇದ್ದರೆ ನೀವು ಏತಕ್ಕೆ ವಿಚಾರಣೆ ಮಾಡುವುದಕ್ಕೆ ಸಮಿತಿ ನೇಮಿಸಲು ಸಭಾಧ್ಯಕ್ಷರಿಗೆ ಪತ್ರ ಬರೆಯಬಾರದು ಎಂದು ಪತ್ರ ಬರೆದಿದ್ದೆ. ನನಗೆ ಮುಖ್ಯ ಮಂತ್ರಿಗಳಿಂದ ಇದುವರೆಗೂ ಉತ್ತರ ಬಂದಿಲ್ಲ. ನಾನು ಇವತ್ತು ಮಾನ್ಯ ಸಭಾಧ್ಯಕ್ಷರ ಮೂಲಕ ಕೇಳುತ್ತಿದ್ದೇನೆ ನೀವು ಏತಕ್ಕಾಗಿ ಸಭಾಧ್ಯಕ್ಷರಿಗೆ ವಿಚಾರಣೆ ಮಾಡಿಸಲು ಪತ್ರ ಬರೆಯಲಿಲ್ಲ ? ಏತಕ್ಕಾಗಿ ಹಾಗೇ ಇದ್ದೀರಿ ? ನಿಮ್ಮ ಪಕ್ಷದ ಸದಸ್ಯರು ಅವರು, ಆದ್ದರಿಂದ ವಿಚಾರಣೆ ಮಾಡಬಾರದು, ಆದರೆ ಬಂಗಾರಪ್ಪ ನಿಮಗೆ ರಾಜಕಾರಣದಲ್ಲಿ ಆಗುವುದಿಲ್ಲ, ಅದಕ್ಕೋಸ್ಕರ ಬಂಗಾರಪ್ಪನವರ ಮೇಲೆ ಮಾತ್ರ ವಿಚಾರಣೆ ಮಾಡಬಹುದು, ಆಗ ಮಾತ್ರ ನಿಮ್ಮ ಅಣ್ಣನವರ ಮೇಲೆ ಮಾನ ಮರ್ಯಾದೆ ಬರುತ್ತದೆ.

ಶ್ರೀ ಪಿ. ರಾಮದೇವ್.—ಮೊನ್ನೆ ಸದಸ್ಯರಾದ ಸುಬ್ಬಯ್ಯನವರು ನನ್ನ ಮೇಲೆ ಆಪಾದನೆ ಮಾಡಿದ್ದರು. ಅದರ ಹಿಂದಿನ ದಿವಸ ಬಿ. ಡಿ. ಎ. ಬಗ್ಗೆ ನಾನು ವೈಟ್ ಪೇಪರ್ ಇಡಬೇಕೆಂದು ಒತ್ತಾಯ ಮಾಡಿದ್ದೆ. ನಾನು ಬಿ. ಡಿ. ಎ. ಬಗ್ಗೆ ಹೇಳಿದಾಗಲೆಲ್ಲಾ ಅವರು ಏನಾದರೂ ಆಪಾದನೆ ಮಾಡುತ್ತಾರೆ ನಾನು ಮುಖ್ಯ ಮಂತ್ರಿಗಳಿಗೆ ಕಾಗದ ಬರೆದು ಅವರು ದಾಖಲೆ ಇದೆ ಎಂದು ಹೇಳಿದ್ದಾರೆ, ಆದ್ದರಿಂದ ತನಿಖೆ ಮಾಡಿ ಎಂದು ಹೇಳಿದ್ದೇನೆ. ನಂತರ ಮೂರನೇ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಕೇಸ್ ನಂ. ೪೪ರ ಪ್ರಕಾರ ಲಯಬಲ್ ಸೂಟ್ ಹಾಕಿದ್ದೇನೆ. ಸಮನ್ಸ್ ಕೂಡ ಜಾರಿಯಾಗಿದೆ. ದಾಖಲೆ ಪ್ರೊಡ್ಯೂಸ್ ಮಾಡಿ ಎಂದು ಹೇಳಿದ್ದೇನೆ. ಈ ವಿಷಯವನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಕೋರ್ಟಿಗೆ ಹೋಗಿರುವುದು ಬೇರೆ. ಆದರೆ ಮಾನ್ಯ ಬಂಗಾರಪ್ಪನವರು ಹೇಳುತ್ತಿರುವುದು ಸಮಿತಿ ಮಾಡಬಹುದಿತ್ತಲ್ಲ ಎಂದು.

ಒಬ್ಬ ಸದಸ್ಯರು.—ಕೋರ್ಟಿನಲ್ಲಿ ಕೇಸ್ ಹಾಕಿರುವಾಗ ಕಮಿಟಿ ಏತಕ್ಕೆ ?

ಶ್ರೀ ಎಸ್. ಬಂಗಾರಪ್ಪ.—ನಾನು ಪ್ರಾರಂಭದಲ್ಲೇ ಪತ್ರ ಬರೆದಿದ್ದೆ. ಮಾನ್ಯ ಸದಸ್ಯರ ಘನತೆ ಗೌರವಕ್ಕೆ ಧಕ್ಕೆ ಬರದ ರೀತಿಯಲ್ಲಿ ಮಾತನಾಡಿದ್ದೇನೆ. ಮಾನ್ಯ ರಾಮದೇವ್ ಅವರ ಬಗ್ಗೆ ನನಗೆ ಅಪಾರವಾದ ಗೌರವವಿದೆ. ಅವರ ಚಾರಿತ್ರ್ಯ ಒಳ್ಳೆಯದು ಎಂಬ ಅಭಿಪ್ರಾಯವನ್ನು ಇಟ್ಟು ಕೊಂಡಿದ್ದೇನೆ.

ಶ್ರೀ ಹನುಮಂತರಾವ್ ದೇಸಾಯಿ.—ನೀವೇ ಕಾಪಾಡಬೇಕು ಈಗ.

ಶ್ರೀ ಎಸ್. ಬಂಗಾರಪ್ಪ.—ಹನುಮಂತರಾವ್ ದೇಸಾಯಿಯವರೇ ಕಾಪಾಡಲಿ.

(ಗೊಂದಲ)

ಶ್ರೀ ಎನ್. ಜಿ. ನಾಯಕ್.—ಅವರು ಏತಕ್ಕೆ ಸೀಳುವಾಯಿ ತರಹ ಬೊಗಳುತ್ತಾರೋ ಗೊತ್ತಿಲ್ಲ.

ಉಪಾಧ್ಯಕ್ಷರು.—ನಾಯಕ್ ಅವರೇ, ಮಾತನಾಡುವಾಗ ನಾಲಿಗೆ ಬಿಗಿ ಹಿಡಿದು ಮಾತನಾಡಿ. ನೀವು ಆಡಿದ ಮಾತನ್ನು ವಾಪಸ್ ತೆಗೆದುಕೊಳ್ಳಿ.

(ಗೊಂದಲ)

MR. DEPUTY SPEAKER.—I will expunge that word.

ಶ್ರೀ ಎಸ್. ಬಂಗಾರಪ್ಪ.—ಅವರು ಸೀಳು ನಾಯಿ ತರಹ ಎಂದು ಹೇಳಲಿಲ್ಲ. ಸಿಳ್ಳೆ ಹೊಡೆದ ಹಾಗೆ ಮಾತನಾಡಬಾರದು ಎಂದು ಹೇಳುತ್ತಿದ್ದಾರೆ.

ಉಪಾಧ್ಯಕ್ಷರು.—ನಾನು ಕೇಳಿಸಿಕೊಂಡಿದ್ದೇನೆ ಅವರು ಹೇಳಿದ್ದನ್ನು. ನಾಯಕ್ ಅವರೇ ಆ ವಾಕ್ಯವನ್ನು ವಾಪಸ್ ತೆಗೆದುಕೊಳ್ಳಿ.

ಶ್ರೀ ಎನ್. ಜಿ. ನಾಯಕ್.—ಅಕಸ್ಮಾತ್ ಹೇಳಿದ್ದರೆ ವಾಪಸ್ ತೆಗೆದುಕೊಳ್ಳುತ್ತೇನೆ

(ಗೊಂದಲ)

೧೨—೩೦ ಪಿ. ಎಂ.

ಉಪಾಧ್ಯಕ್ಷರು.—ಮಾನ್ಯ ಎನ್. ಜಿ. ನಾಯಕ್‌ರವರಿಗೆ ನಾನು ಸೂಚನೆ ಕೊಡುತ್ತಿದ್ದೇನೆ. ನಾನು ಮಾನ್ಯ ನಾಯಕ್‌ರವರಿಗೆ ಪದೇ ಪದೇ ಎಚ್ಚರಿಕೆ ಕೊಡುತ್ತಿದ್ದೇನೆ. ಬಹುಶಃ ನಾನು ಆಗಲೇ ಹೇಳಿದ್ದೇನೆ, ಅವರು ಮಾತನಾಡುವಾಗ ಯೋಚನೆ ಮಾಡಿ ಮಾತನಾಡಬೇಕೆಂದು ಎರಡು ಬಾರಿ ಎಚ್ಚರಿಕೆಯನ್ನು ಕೊಟ್ಟಿದ್ದೇನೆ. ಪುನಃ ಅವರು ಎಚ್ಚರಿಕೆಯಿಂದ ಮಾತನಾಡದೇ ಹೋದರೆ ಕಾನೂನು ಪ್ರಕಾರ ಇವರು ಶಿಕ್ಷೆಯನ್ನು ಅನುಭವಿಸಬೇಕಾಗಿತ್ತದೆ. ಈ ಬಗ್ಗೆ ಇದು ನನ್ನ ಕೊನೆಯ ಎಚ್ಚರಿಕೆ. ಈಗ ಅವರು ತಮ್ಮ ಮಾತನ್ನು ಹಿಂದಕ್ಕೆ ಪಡೆದು ಕೊಂಡಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ಅವರು ಅನ್‌ಕಂಡಿಷನಲ್ಲಾಗಿ ತಮ್ಮ ಮಾತನ್ನು ವಾಪಸ್ ತೆಗೆದು ಕೊಳ್ಳಬೇಕು.

MR. DEPUTY SPEAKER.—He has withdrawn. I have expunged that word.

(ಗೊಂದಲ)

ಉಪಾಧ್ಯಕ್ಷರು.—ಮಾನ್ಯ ಸದಸ್ಯರಿಗೆ ಆಗಲೇ ಎಚ್ಚರಿಕೆ ಕೊಟ್ಟಿದ್ದೇನೆ. ಆ ರೀತಿ ಅವರು ಮಾತನಾಡುವುದು ಅವರ ಘನತೆಗೆ ತಕ್ಕುದಲ್ಲವೆಂದು ಹೇಳಬೇಕಾಗುತ್ತದೆ.

ಶ್ರೀ ಎನ್. ಜಿ. ನಾಯಕ್.—ಅಧ್ಯಕ್ಷರೇ, ನೀವು ಏತಕ್ಕೆ ಅಷ್ಟು ಅಂಜಿಸಿ ಮಾತನಾಡು ತ್ತಿದ್ದೀರಿ ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಹೇಳುತ್ತಾ ಇದ್ದೆ. ಮುಖ್ಯಮಂತ್ರಿಗಳಿ ಏಕೆ ಈ ರೀತಿ ರಾಮ್‌ದೇವ್ ಅವರ ವಿಚಾರದಲ್ಲಿ ಒಂದು ಸಮಿತಿ ಮಾಡುವುದಕ್ಕೆ ಮಾನ್ಯ ಸಭಾಧ್ಯಕ್ಷರಿಗೆ ಪತ್ರವನ್ನು ಬರೆಯಲಿಲ್ಲ ? ಮಾನ್ಯ ರಾಮ್‌ದೇವ್ ಅವರು ಕೇಸ್ ಹಾಕಿಕೊಂಡಿರತಕ್ಕದ್ದು ಅವರಿಗೆ ಬಿಟ್ಟಿರತಕ್ಕ ವಿಷಯ. ಆದರೆ ಸರ್ಕಾರದ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು ಅಧ್ಯಕ್ಷರಿಗೆ ಪತ್ರವನ್ನು ಬರೆಯುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಈ ಬಗ್ಗೆ ಸಮಿತಿ ನೇಮಕ ಮಾಡುವುದಕ್ಕೆ ಅವರು ಏಕೆ ಪತ್ರ ಬರೆಯಲಿಲ್ಲ ? ಇದಕ್ಕೆ ನಾವು ಏನು ಅರ್ಥ ಕಲ್ಪನೆ ಮಾಡೋಣ ? ತಮ್ಮ ಪಕ್ಷದ ಸದಸ್ಯರ ಮೇಲೆ ಸಮಿತಿ ಮಾಡಿದರೆ ಮನಸ್ಸಿಗೆ ಕಿರಿಕಿರಿಯಾಗುತ್ತದೆಂದು ನಾವು ಭಾವಿಸೋಣವೇ ? ಆದರೆ ರಾಜಕೀಯವಾಗಿ ಈ ಸಮಿತಿಯನ್ನು ನಮ್ಮ ಮೇಲೆ ಮಾಡಿದ್ದಾರೆ ಎನ್ನುವ ತೀರ್ಮಾನಕ್ಕೆ ನಾವು ಏಕೆ ಬರಬಾರದು ಎನ್ನುವ ಪ್ರಶ್ನೆಯನ್ನು ನಾನು ಅವರಿಗೆ ಕೇಳುತ್ತೇನೆ. ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಯವರಿಗೆ ಕರ್ನಾಟಕ ರಾಜ್ಯದ ಕಡು ಬಡವರ ಬಗ್ಗೆ ಗಮನ ಇಲ್ಲ. ಇವತ್ತು ಗಂಡಿಸಲಿನಲ್ಲಿ ಇರುವ ಕಡು ಬಡವನಿಗೆ ಮಾನ ಮರ್ಯಾದೆ ಇಲ್ಲವೇನು ? ಇವತ್ತು ಬಡವನಿಗೆ ತಿನ್ನಲು ಅಕ್ಕಿ ಸಿಕ್ಕುತ್ತಾ ಇಲ್ಲ. ಇವತ್ತು ಆತನಿಗೆ ಎಷ್ಟು ಕನಿಷ್ಟ ಪ್ರಮಾಣದ ಕೂಲಿ ಸಿಗಬೇಕೋ ಅದು ಸಿಗುತ್ತಿಲ್ಲಾ. ಕನಿಷ್ಟ ಕೂಲಿ ಕಾಯ್ದೆ ಇವತ್ತು ಹೈಕೋರ್ಟಿನಲ್ಲಿ ಬಿದ್ದು ಹೋಗಿದೆ. ಇವತ್ತು ಕೂಲಿಕಾರರಿಗೆ ಏನು ಕನಿಷ್ಟ ಕೂಲಿ ಸಿಗಬೇಕೋ ಅದು ಸಿಗುತ್ತಾ ಇಲ್ಲ. ಇವತ್ತು ಒಂದು ಕೇಜಿ ಅಕ್ಕಿಯ ಬೆಲೆ ನಾಲ್ಕರಿಂದ ಐದು ರೂಪಾಯಿ ಆಗಿದೆ. ಆತ ಉಳಿದ ಪದಾರ್ಥಗಳನ್ನು ಹೇಗೆ ಕೊಳ್ಳಬೇಕು ? ಇವರ ಮಾನ

ಮರ್ಯಾದೆ ಬಗ್ಗೆ ಗಮನ ಇಲ್ಲ. ಇವತ್ತು ಮಾನ ಮರ್ಯಾದೆಯ ಪ್ರಶ್ನೆ ಬಂದಾಗ ನನ್ನ ಪ್ರಕಾರ ಒಬ್ಬ ಮುಖ್ಯಮಂತ್ರಿಯವರಿಗೆ ನಾವ್ಯಾರು ಪಾಠ ಹೇಳಿಕೊಡಬೇಕಾಗಿಲ್ಲ. ಇದು ನನ್ನ ಸ್ಪಷ್ಟ ಅಭಿಪ್ರಾಯ. ಇವತ್ತು ಅಧಿಕಾರ ಇರಬಹುದು, ಅದು ನಾಳೆ ಹೊರಟು ಹೋಗಬಹುದು. ಆದರೆ ಅಭಿಪ್ರಾಯ ಒಂದೇ ಇರಬೇಕಾಗುತ್ತದೆ. ಇವತ್ತು ಅವರ ಮಾನ, ಮರ್ಯಾದೆ, ಗೌರವ ದೊಡ್ಡದಲ್ಲ. ಅವರು ಎಲ್ಲರನ್ನೂ ಸಮಾನವಾಗಿ ನೋಡಬೇಕು. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಕೈಗೆ ಅಧಿಕಾರ ಕೊಡಬೇಕೆನ್ನುವ ನೀವು, ಅವರನ್ನು ಕಾಪಾಡುವ ಬಗ್ಗೆ ಏನು ಮಾಡಿದ್ದೀರಿ ? ಇವತ್ತು ನಿಮ್ಮ ಮಂತ್ರಿಮಂಡಲ ಬೇರೆ ಬೇರೆ ದಾರಿಯಲ್ಲಿ, ಜಿಗ್‌ಜಾಕ್ ದಾರಿಯಲ್ಲಿ ಹೋಗುತ್ತಿದೆ. ಪ್ರಜಾಪ್ರಭುತ್ವ ರೀತಿಯಲ್ಲಿ ಇವತ್ತು ಮಂತ್ರಿ ಮಂಡಲ ರಚನೆ ಆಗಿಲ್ಲ. ಇವತ್ತು ಏನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಾ ? ಪಕ್ಷಾಂತರ ಬಗ್ಗೆ ನಿನ್ನೆ ಸಾಕಷ್ಟು ಚರ್ಚೆ ಆಗಿದೆ. ಈ ಪಕ್ಷಾಂತರವನ್ನು ಪ್ರಾರಂಭ ಮಾಡಿದರು ನಮ್ಮ ಮಾನ್ಯ ಮುಖ್ಯಮಂತ್ರಿಯವರೇ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇವರು ಲೀಡರ್ ಎಂದು ಆದರೋ ಆವತ್ತಿನಿಂದಲೂ ಪ್ರಯತ್ನ ಮಾಡುತ್ತಿದ್ದಾರೆ, ಇನ್ನೂ ಬಿಟ್ಟಿಲ್ಲ ಬಿಡುವುದೂ ಇಲ್ಲ. ಇದು ನನಗೆ ಗೊತ್ತಿದೆ ಅವರ ರಾಜಕಾರಣದ ಚರಿತ್ರೆ ನನ್ನ ಹತ್ತಿರ ಇದೆ. ಅದರಲ್ಲಿ ಅನುಮಾನ ಬೇಕಾಗಿಲ್ಲ. ಅವರು ಅದನ್ನು ಏನಾದರೂ ಬಿಟ್ಟರೆ ಹೋಯಿತು. ಪಕ್ಷಾಂತರವನ್ನು ಅವರು ಬಿಟ್ಟರೆ ಕೊಂಡಿ ಕಳಚಿ ಬಿದ್ದ ಹಾಗೆ ಆಗುತ್ತದೆ. ಅದರಲ್ಲಿ ಅನುಮಾನವಿಲ್ಲ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಕನಕಪುರ ಚುನಾವಣೆಯಲ್ಲಿ ತಮ್ಮ ಪಕ್ಷಕ್ಕೆ ಬಂದ ಮತಗಳ ಸಂಖ್ಯೆ ೩೧೬ ಸ್ವಾಮಿ, ಜ್ಞಾಪಕವಿರಲಿ.

ಒಬ್ಬ ಮಾನ್ಯ ಸದಸ್ಯರು.—ನಮ್ಮಲ್ಲಿ ಯಾರು ಯಾರು ಪಕ್ಷಾಂತರ ಮಾಡಿದರು ಎಂಬುದನ್ನು ಮಾನ್ಯ ಬಂಗಾರಪ್ಪನವರು ಹೇಳಬೇಕು.

ಉಪಾಧ್ಯಕ್ಷರು.—ಅವರು ಪೂರ್ತಿ ಮಾತನಾಡಲಿ. ಮಧ್ಯೆ ಯಾರೂ ಬಾಯಿ ಹಾಕಬಾರದು.

ಶ್ರೀ ಎಸ್. ಬಂಗಾರಪ್ಪ.—ಇರುವ ವಿಚಾರವನ್ನು ಹೇಳಬೇಕಾಗುತ್ತದೆ. ಆದರೆ ಇಷ್ಟು ಮಾತ್ರ ನಿಜ. ನನ್ನ ಪುಣ್ಯಕ್ಕೆ ನಿಮ್ಮ ಹಿಂದೆ ನಾನು ಬರದೆ ದೂರ ಬಂದು ಬಿಟ್ಟೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಬಹುಶಃ ಒಳ್ಳೆಯ ಕೆಲಸ ಮಾಡಿದಿರಿ, ನೀವು ಇಲ್ಲಿ ಇದ್ದಿದ್ದರೆ ನಮಗೆ ತೊಂದರೆಯಾಗುತ್ತಿತ್ತು.

ಉಪಾಧ್ಯಕ್ಷರು.—ನೀವೆಲ್ಲಾ ಗದ್ದಲ ಮಾಡಿದರೆ ಮಾನ್ಯ ಬಂಗಾರಪ್ಪನವರು ಏನು ಮಾತನಾಡುತಾರೋ ಗೊತ್ತಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಸರ್ಕಾರದಿಂದ ನಾನು ವೈಯಕ್ತಿಕವಾಗಿ ಏನನ್ನೂ ಬಯಸುವುದಿಲ್ಲ. ನಿಮ್ಮ ಮೂಲಕ ಜನರಿಗೆ ಒಳ್ಳೆಯದಾಗಬೇಕು. ಇದು ಒಂದು ನೀತಿಯ ಪ್ರಶ್ನೆ ಇದೆ. ಇವತ್ತು ಒಂದು ಸರ್ಕಾರವನ್ನ ತೆಗೆದು ಇನ್ನೊಂದು ಸರ್ಕಾರವನ್ನು ಕೂರಿಸುವುದು ನಮ್ಮ ಗುರಿ ಅಲ್ಲ ರಾಜಕಾರಣದಲ್ಲಿ ಮೂಲಮಂತ್ರವನ್ನು ನಾವು ಇಟ್ಟುಕೊಳ್ಳಬೇಕು. ಒಬ್ಬ ಮುಖ್ಯಮಂತ್ರಿಯನ್ನು ತೆಗೆದು, ಇನ್ನೊಬ್ಬ ಮುಖ್ಯಮಂತ್ರಿಯನ್ನು ಕೂರಿಸುವುದೇ ನಮ್ಮ ಗುರಿಯಾಗಬಾರದು. ಒಂದು ಮಂತ್ರಿ ಮಂಡಲ ರಚನೆ ಮಾಡಿ ತನ್ಮೂಲಕ ಜನರ ಸಮಸ್ಯೆ ಪರಿಹಾರ ಮಾಡಬೇಕೇ ವಿನಹ ಒಬ್ಬರನ್ನು ತೆಗೆದು ಇನ್ನೊಬ್ಬರನ್ನು ಕೂರಿಸುವುದಾಗಬಾರದು. ಈ ಒಂದು ದೃಷ್ಟಿಯಿಂದ ಇದು ನನ್ನ ನೀತಿಯಾಗಿದ್ದು ಇದನ್ನೇ ನಾನು ಮುಂದುವರಿಸಿಕೊಂಡು ಹೋಗುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಜನರ ಅಭಿಪ್ರಾಯವನ್ನು ಕೇಳಿಯೇ ನಾವು ಸರ್ಕಾರವನ್ನು ನಡೆಸಿಕೊಂಡು ಹೋಗುತ್ತಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಸಂತೋಷ, ಮಾಡಿ ಸ್ವಾಮಿ. ''ಜನರ ಪ್ರೀತಿ, ವಿಶ್ವಾಸ, ಬೆಂಬಲ, ರಕ್ಷೆ, ಛತ್ರಿಯ ಕೆಳಗೆ ಇರುವವರೆಗೂ ನಮ್ಮ ಸರ್ಕಾರವನ್ನು ಯಾರೂ ಕೂಡಾ ಉರುಳಿಸುವುದಕ್ಕೆ ಆಗುವುದಿಲ್ಲವೆಂದು,'' ಮಾನ್ಯ ಮುಖ್ಯಮಂತ್ರಿಯವರು ಹೇಳುತ್ತಾ ಬಂದಿದ್ದಾರೆ. ಆದರೆ ಇವತ್ತು ಅವರು ಮಾಡುತ್ತಿರುವುದಕ್ಕೂ, ಈ ಪಕ್ಷಾಂತರದ ವಿರುದ್ಧ ಅವರು ತಂದಿರುವ ಮಸೂದೆಗೂ ಎಲ್ಲಿಯ ಹೋಲಿಕೆ ? ಈ ಸಂದರ್ಭದಲ್ಲಿ ಪಕ್ಷಾಂತರಕ್ಕೆ ಬೆಂಬಲ ಕೊಡುತ್ತಿರುವ ಇವರು ಪ್ರಜಾಪ್ರಭುತ್ವದ ಬಗ್ಗೆ ವ್ಯಾಖ್ಯಾನ ಮಾಡತಕ್ಕ ಹಕ್ಕು ಒಂದು ಅಯೋಟಾ (Iota) ಕೂಡ ಮಾನ್ಯ ಮುಖ್ಯಮಂತ್ರಿಗಳಿಗೆ ಇಲ್ಲ ಎಂದು ಹೇಳುತ್ತೇನೆ. ಯಾವಾಗ ಬೇರೆ ಸದಸ್ಯರನ್ನು ಅವರು ತೆಗೆದುಕೊಂಡರೋ ಅವತ್ತೇ ಅವರು ಆ ಹಕ್ಕನ್ನು ಕಳೆದುಕೊಂಡರು. ಅದು ಪಕ್ಷಾಂತರ ಅಲ್ಲ ಎಂದು ಹೇಳುವುದಾದರೆ ಆದರಿಂದ ಆಗುವ ಮುಂದಿನ ಪರಿಣಾಮ ಬಗ್ಗೆಯೂ, ಅವರು ಸಹಿಸಿಕೊಳ್ಳುವುದಕ್ಕೆ ತಯಾರು ಇರಬೇಕು. ಮುಂದಿನ ಪರಿಣಾಮದ ಬಗ್ಗೆ ನುಂಗಿ ನೀರು ಕುಡಿಯಲೂ ಅವರು ಸಿದ್ಧರಾಗಿರಬೇಕು.

(ಗೊಂದಲ)

ಉಪಾಧ್ಯಕ್ಷರು.—ಗದ್ದಲ ಬೇಡ ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಜೆ. ಡಿ. ಸೋಮಪ್ಪ.—ಮುಖ್ಯಮಂತ್ರಿಗಳು ಯುವಕರಿದ್ದಾರೆ. ಅವರು ಉತ್ತರ ಕೊಡುತ್ತಾರೆ. ಸುಮ್ಮನೆ ಅವರೆಲ್ಲಾ ಗದ್ದಲವೇಕೆ ಮಾಡಬೇಕು ?

ಉಪಾಧ್ಯಕ್ಷರು.—ಬಂಗಾರಪ್ಪನವರೇ ಮಾತನಾಡಿ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಅಂತೂ ಈಗ ಬೆಕ್ಕು ಚೀಲದಿಂದ ಹೊರಕ್ಕೆ ಬಂತು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ಮಾರ್ಚಿ ತಿಂಗಳಲ್ಲಿ ಕ್ರಾಂತಿ ರಂಗದ ಎಲ್ಲಾ ಸದಸ್ಯರನ್ನು ತೆಗೆದುಕೊಳ್ಳತಕ್ಕ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದರು. ಮಂಗಳೂರಿನಲ್ಲಿ ಮಾನ್ಯ ಜಾಲಪ್ಪನವರು ಕ್ರಾಂತಿರಂಗ ಎನ್ನುವುದೇ ಇಲ್ಲವೆಂದು ಹೇಳಿದರು.

ಶ್ರೀ ಎಂ. ರಘುಪತಿ.—ಕಾರ್ಪೊರೇಷನ್ ಚುನಾವಣೆಯಲ್ಲಿ ನಿಮ್ಮವರು ಡಿಪಾಸಿಟ್ ಕಳೆದು ಕೊಂಡರು.

(ಗೊಂದಲ)

ಶ್ರೀ ಎಂ. ಮಹದೇವ್.—ನಾಳೆ ನೀವು ಚುನಾವಣೆ ಮಾಡಿ, ನಿಮ್ಮವರಿಗೂ ಕೂಡ ಡಿಪಾಸಿಟ್ ಬರುವುದಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ.— ನಂಜನಗೂಡು ಪುರಸಭೆಯಲ್ಲಿ ಏನಾಯಿತು ಎಂಬುದು ತಮಗೆ ಗೊತ್ತಿದೆ.

ಉಪಾಧ್ಯಕ್ಷರು.—ಈ ರೀತಿ ಚರ್ಚೆ ಯಾದರೆ ಎರಡು ದಿವಸವಾದರೂ ಬೇಕಾಗುತ್ತದೆ. ಮಾನ್ಯ ಬಂಗಾರಪ್ಪನವರು ಹೇಳುವುದಕ್ಕೆ ಅವಕಾಶ ಕೊಡಿ, ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ. ಪ್ರತ್ಯುತ್ತರ ಕೊಡುವುದಕ್ಕೆ ನಿಮಗೆಲ್ಲಾ ಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಯಾರನ್ನು ಗೆಲ್ಲಿಸಬೇಕು, ಯಾರನ್ನು ಸೋಲಿಸಬೇಕು, ಯಾರ ಡಿಪಾಸಿಟ್ ಕಳೆಯಬೇಕು ಎನ್ನುವಂಥ ಜನ ಹಳ್ಳಿಯಲ್ಲಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರಾದ ರಘುಪತಿಯವರು ಕ್ರಾಂತಿ ರಂಗದವರಿಗೆ ಡಿಪಾಸಿಟ್ ಹೋಯಿತು ಎಂದು ಹೇಳಿದರು. ಕೆಲವರಿಗೆ ಹೋಯಿತು, ಕೆಲವರಿಗೆ ಹೋಗಲಿಲ್ಲ. ಅವರು ನಿಜಾಂಶವನ್ನು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಧರ್ಮಸಿಂಗ್.—ಈ ರೀತಿ ಅವರು ಮಾಡಿದರೆ, ನಾವು ಅಪ್ರೋಪ್ರಿಯೇಷನ್ ಬಿಲ್ ಪಾಸಂ ಮಾಡುವುದಕ್ಕೆ ಬಿಡುವುದಿಲ್ಲ.

ಶ್ರೀ ಮಾಣಿಕರಾವ್ ಪಾಟೀಲ್.— ನಿಮಗೇ ಮಾತನಾಡುವುದಕ್ಕೆ ಬರುವುದು ನಮಗೆ ಮಾತನಾಡುವುದಕ್ಕೆ ಬರೋದಿಲ್ಲವೇನು ?

(ಗೊಂದಲ)

ಶ್ರೀ ಸೋಮಶೇಖರ್.—ಅವರು ಮಾತನಾಡುವಾಗ ನೀವು ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.— ಸನ್ಮಾನ್ಯ ಅಧ್ಯಕ್ಷರೇ, ಪ್ರಜಾಪ್ರಭುತ್ವದಲ್ಲಿ ಜನತೆ ಕೊಟ್ಟಂತ ತೀರ್ಮಾನಕ್ಕೆ ತಲೆಬಾಗಲೇಬೇಕು. ಜನತಾ ಪಕ್ಷ ಕೇಂದ್ರದಲ್ಲಿ ಅಧಿಕಾರದಲ್ಲಿ ಇತ್ತು, ಅದು ಸೋತಿರ ತಕ್ಕಂಥ ರೀತಿಯನ್ನು ನೋಡಿದರೆ ಗೊತ್ತಾಗುತ್ತದೆ. ಕಾಶ್ಮೀರ ಚುನಾವಣೆಯಲ್ಲಿ ನಿಮ್ಮ ಪಕ್ಷದ ಗತಿ ಏನಾಯಿತು ? ಆಂಧ್ರ ಪ್ರದೇಶದಲ್ಲಿ ನಿಮ್ಮ ಗತಿ ಏನಾಯಿತು ? ಎಂಬುದು ದೇಶಕ್ಕೆ ಗೊತ್ತಿದೆ.

ಶ್ರೀ ಎಂ. ರಘುಪತಿ.— ತಮಿಳುನಾಡಿನಲ್ಲಿ ಏನಾಯಿತು ? ತ್ರಿಪುರಾದಲ್ಲಿ ಏನಾಯಿತು ಎನ್ನುವುದು ದೇಶಕ್ಕೆ ಗೊತ್ತಿದೆ.

ಶ್ರೀ ಧರ್ಮಸಿಂಗ್.— ಮಾನ್ಯ ರಘುಪತಿಯವರು ಕಾರ್ಪೊರೇಷನ್ ಚುನಾವಣೆಗಳ ಬಗ್ಗೆ ಹೇಳುತ್ತಿದ್ದಾರೆ. ಪಾರ್ಲಿಮೆಂಟ್ ಚುನಾವಣೆ ಬರಲಿ ಜನ ತೋರಿಸುತ್ತಾರೆ.

ಶ್ರೀ ಎಂ. ರಘುಪತಿ.—ಚೆನ್ನಾಗಿ ತೋರಿಸುತ್ತಾರೆ.

ಉಪಾಧ್ಯಕ್ಷರು.—ತಾವು ಈ ರೀತಿ ಮಾಡಿದರೆ ಸಭೆ ನಡೆಸುವುದು ಕಷ್ಟವಾಗುತ್ತದೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.— ಮಾನ್ಯ ಬಂಗಾರಪ್ಪನವರು ಇರತಕ್ಕ ವಿಷಯವನ್ನು ಸವಿಸ್ತಾರವಾಗಿ ಹೇಳುತ್ತಿದ್ದಾರೆ. ಅವರು ಮಾತನ್ನು ನಾವೆಲ್ಲಾ ಆಲಿಸುತ್ತಿದ್ದೇವೆ. ಅವರು ಒಂದು ಪಕ್ಷದ ಮುಖಂಡರಾಗಿ ಮಾತನಾಡುತ್ತಿದ್ದಾರೆ. ಇತರೇ ಪಕ್ಷದವರು ಏತಕ್ಕೆ ಮಧ್ಯ ಪ್ರವೇಶ ಮಾಡಬೇಕು.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಸದಸ್ಯರಾದ ಬಂಗಾರಪ್ಪನವರು ಮಾತನಾಡುತ್ತಿದ್ದಾರೆ. ೩-೪ ಜನ ಸದಸ್ಯರು ಮಧ್ಯೆ ಮಧ್ಯೆ ಎದ್ದು ನಿಂತುಕೊಂಡು ಮಾತನಾಡುತ್ತಿದ್ದಾರೆ. ಸನ್ಮಾನ್ಯ ಸಚಿವರೇ ತೊಂದರೆ ಕೊಡುವುದಕ್ಕೆ ಮುಂದಾಳುತನ ವಹಿಸುತ್ತಿರುವುದನ್ನು ನೋಡಿದರೆ, ಮುಖ್ಯ ಮಂತ್ರಿಗಳ ಬೇಡಿಕೆ ಪಾಸಾಗಬಾರದೆನ್ನುವ ಪಿತೂರಿ ನಡೆದಿದೆಯೋನೋ ಎನ್ನುವ ಸಂಶಯ ಬರುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಎಲ್ಲರೂ ಕುತಂತ್ರವನ್ನು ಮಾಡಿ ತಮ್ಮನ್ನು ತ್ರಿಶಂಕು ಸ್ವರ್ಗದಲ್ಲಿ ಇಡುವುದಕ್ಕೆ ಪ್ರಯತ್ನ ಮಾಡುತ್ತಿರಬಹುದು.

ಶ್ರೀ ಎಸ್. ಬಂಗಾರಪ್ಪ.—ಇದ್ದರೂ ಇರಬಹುದು ಆದರೆ ನನ್ನ ಚಿಂತನೆ ರಾಜಕೀಯವಾಗಿ ಸಂಪರ್ಕ ಸೇತುವೇ ಇದೆ ಅವನ್ನು ಯಾರೂ ಕೂಡ ತೆಗೆದು ಹಾಕುವುದಕ್ಕೆ ಸಾಧ್ಯವಿಲ್ಲ. ಅಧಿಕಾರ ಬರುತ್ತೆ ಹೋಗುತ್ತೆ. ಇಲ್ಲಿ ಅಧಿಕಾರದ ಪ್ರಶ್ನೆ ಮುಖ್ಯವಲ್ಲ. ಮಾನ್ಯ ಅಧ್ಯಕ್ಷರೇ ಜನತಾ ಪಕ್ಷದವರು ಕೂಡ ಡಿಪಾಸಿಟ್ ಕಳೆದುಕೊಂಡಿದ್ದಾರೆ. ಮುಂದೆ ಏನಾಗುತ್ತೆನ್ನೋ ನೋಡೋಣ.

ಶ್ರೀ ಎಂ. ರಘುಪತಿ.—ಯಾವಾಗಲೂ ಅಧಿಕಾರದಲ್ಲಿರುವವರೊಂದಿಗೆ ಭಿನ್ನಾಭಿಪ್ರಾಯಬರುವುದು ಸಹಜ. ಹಿಂದೆ ದೇವರಾಜ ಅರಸು ಅವರ ಜೊತೆಯಲ್ಲಿ ಭಿನ್ನಾಭಿಪ್ರಾಯ ಬಂತು. ಗುಂಡೂರಾಯರ ಜೊತೆಯಲ್ಲಿದ್ದಾಗ ಭಿನ್ನಾಭಿಪ್ರಾಯ ಬಂತು, ನೇರವಾಗಿ ನಿಮ್ಮ ಪಕ್ಷ ಬಿಡುತ್ತೇನೆಂದು ಹೇಳಿದ್ದೇನೆ.

ಶ್ರೀ ಧರ್ಮಸಿಂಗ್.—ಇಲ್ಲಿ ಯಾವಾಗ ಹೇಳುತ್ತೀರಿ ?

ಶ್ರೀ ಎಂ. ವೀರಪ್ಪಮೊಯ್ಲಿ.—ಇಲ್ಲಿ ಯಾವಾಗ ಹೇಳುತ್ತೀರಿ, ರಾಮಕೃಷ್ಣ ಹೆಗಡೆಯವರು ತಮ್ಮನ್ನು ಮಂತ್ರಿ ಮಾಡಿದ್ದಾರೆ. ಸ್ವಲ್ಪ ಸಮಯ ನೋಡಿ ಹೇಳುತ್ತೀರಾ ?

ಶ್ರೀ ಎಂ. ರಘುಪತಿ.— ಜೀಸಸ್ ಕ್ರಿಸ್ತ ಒಂದು ಮಾತು ಹೇಳಿದ 'ಯಾರು ಪಾಪ ಮಾಡಿಲ್ಲವೋ ಅವರು ಒಂದು ಕಲ್ಲು ತೆಗೆದುಕೊಂಡು ಹೊಡೆಯಿರಿ, ಎಂದು' ಆಗ ಯಾರು ಹೊಡೆಯಲಿಲ್ಲ. ಹಾಗೆ ಮಂತ್ರಿ ಪದವಿ ಬೇಡ ಎಂದು ಯಾರು ಹೇಳುತ್ತಾರೆ ? ನಾನು ಬೇಕಿಲ್ಲ ಎಂದು ಹೇಳಿಲ್ಲವಲ್ಲ.

(ಗೊಂದಲ)

ಮಾನ್ಯ ಬಂಗಾರಪ್ಪನವರು ಮಂತ್ರಿ ಪದವಿ ಬೇಡ ಎಂದು ಹೇಳುವುದಿಲ್ಲ, ಮಾನ್ಯ ಮೊಯಿಲಿಯವರು ಮಂತ್ರಿ ಪದವಿ ಬೇಡ ಎಂದು ಹೇಳುವುದಿಲ್ಲ, ನಾನು ಬೇಡ ಎಂದು ಹೇಳುವುದಿಲ್ಲ. ಜನತಾ ಸಿಂಬಲ್ ಮೇಲೆ ಗೆದ್ದಿರುವ ನಾನು ಅದನ್ನು ಬಿಟ್ಟು ಹೋಗುವಾಗ ಆವೊತ್ತು ನನ್ನ ಶಾಸನಸಭಾ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟು ಹೋಗುತ್ತೇನೆಯೇ ಹೊರತು ಬೆನ್ನು ಹಿಂದೆ ಚೂರಿ ಹಾಕಿ ರಾಜಕಾರಣ ಮಾಡು ವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ತತ್ವ ಅನುಕೂಲ ಸಿಂಧು ಆಗಬಾರದು. ದೇವರಾಜ್ ಅರಸ್ ರವರು ಇದ್ದಾಗ ನಮ್ಮ ಪಕ್ಷದಿಂದ ಎಂ. ಎಲ್. ಸಿ. ಆಗಿದ್ದಿರಿ, ಅವರನ್ನು ಬಿಟ್ಟು ಹೋದಾಗ ಎಂ.ಎಲ್.ಸಿ ಷಿಪ್‌ಗೆ ರಾಜೀನಾಮೆ ಕೊಟ್ಟು ಏತಕ್ಕೆ ಹೋಗಲಿಲ್ಲ.

(ಗೊಂದಲ)

ಶ್ರೀ ಎಂ. ರಘುಪತಿ.— ನನಗೆ ಅನುಕೂಲ ಸಿಂಧು ರಾಜಕೀಯ ಗೊತ್ತಿಲ್ಲ. ನಾನು ಎಂದೂ ಅದು ಮಾಡುವುದಿಲ್ಲ. ಅಂಥಾದ್ದು ಉಪಯೋಗಿಸಿಕೊಳ್ಳುವುದಿಲ್ಲ. ಏನೇ ಇದ್ದರೂ, ನೇರವಾಗಿ ಯಾರು ರಾಜಕೀಯ ಮಾಡುತ್ತಾರೋ ಅವರು ರಾಜಕೀಯದಲ್ಲಿ ಸಕ್ಸಸ್ ಆಗುತ್ತಾರೆ. ಯಾರು ಬೇಡ ಎಂದು ಬಾಯಿಮಾತಿನಲ್ಲಿ ಹೇಳಿ; ಮನಸ್ಸಿನಲ್ಲಿ ಬೇಕು ಎಂದು ಹೇಳುತ್ತಾರೋ ಅವರು ಎಂದೂ ಸಕ್ಸಸ್ ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.— ಅಧ್ಯಕ್ಷರೇ, ನಾನು ಮಾನ್ಯ ರಘುಪತಿಯವರ ಮೇಲೆ ಹೆಚ್ಚು ಹೇಳ ಲಿಕ್ಕೆ ಹೋಗುವುದಿಲ್ಲ. ನನಗೂ ಸಾಕು ಎನಿಸಿದೆ, ಇವತ್ತು ಕಾಶ್ಮೀರದಲ್ಲಿ ಏನಾಗಿದೆ, ವೆಸ್ಟ್ ಬೆಂಗಾಲ್ ನಲ್ಲಿ ಏನಾಗಿದೆ, ೨೬-೩೮ ಸೀಟುಗಳು ಬಂದಿಲ್ಲ. ಇವರು ಅಲ್ಲಿ ಒಂದೊಂದು ಸೀಟು ತೆಗೆದುಕೊಂಡಿದ್ದಾರೆ. ಇನ್ನು ಆಂಧ್ರದಲ್ಲಿ ಏನಾಗಿದೆ, ಒಂದು ಸೀಟು ತೆಗೆದುಕೊಳ್ಳುವುದರಲ್ಲಿ ಬಹಳ ಎಕ್ಸ್‌ಪರ್ಟ್. ನಮಗೆ ಡಿಪಾಸಿಟ್ ಹೋಗಿದ್ದಕ್ಕೆ ಕಾರಣವೇನೆಂದರೇ ನಿಮ್ಮ ಸ್ನೇಹ ಮಾಡಿದ್ದರಿಂದ ಹೋಯಿತು, ಅಲ್ಲಿಯವರೆಗೆ ಹೋಗಿರಲಿಲ್ಲ.

(ಗೊಂದಲ)

ಅಧ್ಯಕ್ಷರೇ ನಾನು ಮತ್ತೆ ವಿವರಕ್ಕೆ ಹೋಗುವುದಿಲ್ಲ. ಹಿಂದಿನ ಚರಿತ್ರೆ, ಮುಂದಿನ ಚರಿತ್ರೆ ಆ ಭವಿಷ್ಯ ಬೇಡ. ಪ್ರತಿಯೊಂದು ದೇಶದ ಜನರ ಕೈಯಲ್ಲಿರುತ್ತದೆ ಮುಂದೆ ಏನು ಆಗುತ್ತದೆ ಅದು ಆಗಲಿ, ಅದನ್ನು ಈಗಲೇ ಹೇಳುವುದು ಬೇಡ. ಅದರ ಬಗ್ಗೆ ಶ್ರೀ ನಾರಾಯಣ ಗೌಡರಿಗೂ ಮುಂದೆ ಅರ್ಥವಾಗು ತ್ತಿದೆ, ಅನಂತರ ನಾವು ಅವರು ಮಾತನಾಡುತ್ತೇವೆ ಆ ಸಂದರ್ಭ ಬರುತ್ತದೆ. ಅಧ್ಯಕ್ಷರೇ, ಇವರ ಸರ್ಕಾರಕ್ಕೆ ಸಂಪೂರ್ಣ ಬೆಂಬಲ ಇಲ್ಲ. ಇದು ಮೈನಾರಿಟಿ ಗವರ್ನ್‌ಮೆಂಟ್ ಈ ಸರ್ಕಾರ ಬಿಜೆಪಿ, ಸಿಪಿಎಂ ಮತ್ತು ಸಿಪಿಐ ಇವರ ಬೆಂಬಲದಿಂದ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಬಂಗಾರಪ್ಪನವರು ಸರಿಯಾದ ದಾರಿಯಲ್ಲಿ ಹೇಳುತ್ತಿಲ್ಲ ಬಿಜೆಪಿ ನಾಯಕರು ನಿನ್ನೆಯ ದಿವಸ ಮಾನ್ಯ ಮುಖ್ಯಮಂತ್ರಿಯವರ ಬೇಡಿಕೆಯನ್ನು ವಿರೋಧಿಸುತ್ತೇ ನೆಂದು ಹೇಳಿದ್ದಾರೆ, ಅಲ್ಲಿಗೆ ಅವರ ಬೆಂಬಲ ಹೊರಟುಹೋಯಿತು.

ಶ್ರೀ ಟಿ. ರಾಮಚಂದ್ರರಾವ್.— ನಾವು ಜವಾಬ್ದಾರಿಯುತವಾಗಿ ಬೆಂಬಲ ಕೊಡುತ್ತಿದ್ದೇವೆ,

ಶ್ರೀ ಎಸ್. ಬಂಗಾರಪ್ಪ — ಇವರಿಗೆ ಗೊತ್ತಿದೆ, ಇವರು ಯೋಜನೆ ಹಾಕಿಕೊಂಡು ಇಟ್ಟುಕೊಂಡಿದ್ದಾರೆ. ಮಾನ್ಯ ರಾಮಕೃಷ್ಣ ಹೆಗಡೆಯವರ ಆಳವನ್ನು ಯಾರು ಪತ್ತೆ ಹಚ್ಚಿದ್ದಾರೋ ಅವರಿಗೆ ಮಾತ್ರ ಅರ್ಥವಾಗುತ್ತದೆ. ಬೇರೆಯವರಿಗೆ ಅದು ಅರ್ಥವಾಗುವುದಿಲ್ಲ. ಅದಕ್ಕೆ ನಾವು ಏನೂ ಮಾಡಲಿಕ್ಕೆ ಆಗುವುದಿಲ್ಲ. ಪ್ರತಿಯೊಬ್ಬ ಶಾಸನ ಸಭಾ ಸದಸ್ಯರ ಬಗ್ಗೆಯೂ ನಮಗೆ ಅಪಾರ ಗೌರವ ಇದೆ. ಅವರು ಬೇರೆ ಪಕ್ಷಕ್ಕೆ ಸೇರಿಕೊಳ್ಳುವುದು ಬಿಡುವುದು ಅವರ ಹಕ್ಕು. ಕ್ರಾಂತಿರಂಗದಿಂದ ಗೆದ್ದು ಹೋಗಿರತಕ್ಕವರ ಬಗ್ಗೆ ನಾನು ಕೂಡ ಏನೂ ಹೇಳಲಿಕ್ಕೆ ಹೋಗುವುದಿಲ್ಲ, ಆ ಸಂದರ್ಭದಲ್ಲಿ ಏನೋ ತೀರ್ಮಾನಕ್ಕೆ ಬಂದು ಸೇರಿದ್ದಾರೆ, ಅವರ ಬಗ್ಗೆ ಯಾವುದೇ ಅಭಿಪ್ರಾಯ ಹೇಳುವುದಿಲ್ಲ. ಅವರು ಯಾವುದೇ ಪಕ್ಷದ ಸದಸ್ಯರೇ ಆಗಿರಲಿ ಒಂದು ಮೂಲಭೂತವಾದ ನೀತಿಯನ್ನು ಇಟ್ಟುಕೊಂಡು ಬಂದಿದ್ದೇವೆ. ನಾವು ಇನ್ನು ಐದು ವರ್ಷದ ನಂತರ ಇರಬಹುದು, ಇಲ್ಲದೇ ಇರಬಹುದು. ಮಿತ್ರತ್ವ ಇಟ್ಟುಕೊಂಡಿರಬೇಕಾಗುತ್ತದೆ. ಪಕ್ಷ ಅವರವರ ಅಭಿಪ್ರಾಯಕ್ಕೆ ಬಿಟ್ಟಿರತಕ್ಕದು. ಮಾನ್ಯ ಮುಖ್ಯ ಮಂತ್ರಿಗಳ ರಾಜಕಾರಣದ ಗುರಿ ಏನಿದೆ ಇದು ಹೈಲಿ ಕ್ವೆಶ್ಚನಬಲ್, ಪ್ರಶ್ನೆಗೆ ಅತೀವವಾದ ಒಂದು ಸಂದರ್ಭ. ಶಾಸಕರನ್ನು ಸೆಳೆಯತಕ್ಕ ಸಂದರ್ಭದಲ್ಲಿ ಬಹಳ ಮುಂದೆ ಹೋಗಿದ್ದಾರೆ. ಇತ್ತೀಚೆಗೆ ಕೆಲವು ಜನ ಮಾನ್ಯ ಸದಸ್ಯರು ಸೇರಿದ್ದಾರೆಂದು ಈ ಸದನದಲ್ಲಿ ಬಂದಿದೆ, ಇದು ಬಹಳ ಹಿಂದೆಯೇ ಪ್ರಾರಂಭವಾಗಿದೆ. ಹಿಂದೆ ಶ್ರೀ ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ಮತ್ತು ಶ್ರೀ ವೀರೇಂದ್ರ ಪಾಟೀಲರ ಮಂತ್ರಿ ಮಂಡಲದಲ್ಲಿ ಇದ್ದಾಗ ಬಹುಮತದಿಂದ ಇದ್ದಂಥ ಸರ್ಕಾರವಿತ್ತು. ಅಂಥಾ ಸರ್ಕಾರ ಕೂಡ ೧೯೭೧ ನೇ ಇಸವಿಯಲ್ಲಿ ಅಧಿಕಾರ ಕಳೆದುಕೊಂಡಿತು. ಕೆಲವರು ಮಂತ್ರಿಯಾದವರು ತಮ್ಮ ಮಂತ್ರಿತನವನ್ನು ತೋರಿಸಲಿಕ್ಕೆ ಹೋಗುತ್ತಾರೆ, ಆದರೆ ಇವರು ತೋರಿಸುವುದಿಲ್ಲ ಅದೇ ವಿರಳ. ನೈಸಾಗಿ ಅದು ಬೆಣ್ಣೆಯಲ್ಲಿ ಕೂದಲು ಎಳೆದುಕೊಂಡು ಹೋದಂತೆ ಹೊರಟು ಹೋಗಿರುತ್ತದೆ. ಅದರ ಗೆರೆಯನ್ನು ಕೂಡ ಪತ್ತೆ ಹಚ್ಚಲಿಕ್ಕೆ ಆಗುವುದಿಲ್ಲ. ಮಾನ. ರಾಮಕೃಷ್ಣ ಹೆಗಡೆಯವರು ಬೆಣ್ಣೆಯಲ್ಲಿ ಕೂದಲು ಎಳೆದ ಹಾಗೆ ಎಳೆಯುತ್ತಿದ್ದಾರೆ. ಆ ದಾರಿಯನ್ನು ಕೂಡ ಪತ್ತೆ ಹಚ್ಚತಕ್ಕ ಜನ ಕರ್ನಾಟಕ ರಾಜ್ಯದಲ್ಲಿದ್ದಾರೆ. ಕರ್ನಾಟಕ ಜನತೆಗೂ ಅರ್ಥವಾಗಿದೆ. ಒಂದು ಪಕ್ಷದ ಸದಸ್ಯರನ್ನು ಮತ್ತೊಂದು ಪಕ್ಷಕ್ಕೆ ಸೇರಿಸುವಂಥಾದ್ದು ಅದೂ ಪಕ್ಷಾಂತರ ನಿಷೇಧ ಮಸೂದೆ ಮಂಡನೆಯ ಕಾಲದಲ್ಲಿ ಈ ರೀತಿ ಮಾಡಿದರೆ ಅದು ಜನರಿಗೆ ಗೊತ್ತಾಗುತ್ತದೆ ನಾಳೆ ಜನರ ಮುಂದೆ ಧ್ವನಿವರ್ಧಕ ತೆಗೆದುಕೊಂಡು ಮಾತನಾಡಲಿಕ್ಕೆ ನಿಂತಾಗ ಅರ್ಥವಾಗುತ್ತದೆ ಅಧ್ಯಕ್ಷರೇ, ಇವರು ಯಾವ ಪ್ರಯತ್ನವನ್ನು ಮಾಡುತ್ತಿದ್ದಾರೆ ಅಂದರೆ ಟೆಲಿಗ್ರಾಂಗಳನ್ನು ಸದಸ್ಯರಿಗೆ ಕಳುಹಿಸಿದ್ದಾರೆ. ಮಂತ್ರಿಮಂಡಲದ ಸದಸ್ಯರಾದ ಜೀವರಾಜ್ ಆಳ್ವರವರೇ ನಿಮ್ಮ ಆಫೀಸಿನಿಂದ ಎರಡು ಟೆಲಿಗ್ರಾಂ ಹೋಗಿರತಕ್ಕದ್ದು ಇಲ್ಲಿ ಇವೆ. ಅವರು ಬರೆದಿರುವ ಪತ್ರ ಕೂಡ ಇಲ್ಲಿದೆ, ಅದನ್ನು ಇಲ್ಲಿ ಓದುತ್ತೇನೆ.

ಉಪಾಧ್ಯಕ್ಷರು.— ಅವರ ಕ್ಷೇತ್ರದ ಕೆಲಸ ಏನಾದರೂ ಹೇಳಿರಬಹುದು. ಅದಕ್ಕೆ ಕಳುಹಿಸಿರಬಹುದು.

ಶ್ರೀ ಎಸ್. ಬಂಗಾರಪ್ಪ.— ಅಧ್ಯಕ್ಷರೇ, ಅದು ನನಗೆ ಅರ್ಥವಾಗುವುದಿಲ್ಲವೇ ?

It reads : "Shivamurthy, Member, Legislative Assembly — Come and meet me urgent on 27th April breakfast.

Dr. Jeevaraj Alva,
Youth Services Minister"

Another telegram addressed to Sri Gopalakrishna Kanade, MLA of Sirsi - Siddapur, also reads thus :

"Come and meet me. Urgent on 26th April...

Dr, Jeevaraj Alva."

೧ ಪಿ.ಎಂ.

ಇನ್ನೊಂದು ಏನೆಂದರೆ 'come and meet me urgent on 26th April... Dr. Jeevraj Alva, Youth Services Minister'. This is addressed to Sri G. M. Kanade, MLA from Sirsi. ನಮ್ಮ ಪಕ್ಷದವರು, ಸಿರ್ಸಿ ಸಿದ್ದಾಪುರ ಕ್ಷೇತ್ರದವರು. ಇದರಲ್ಲಿ ಏನೂ ವಿಶೇಷ ಇಲ್ಲ ಎಂದು ಹೇಳಿದರು. ಶ್ರೀಮಾನ್ ಜೀವರಾಜಆಳ್ವರವರು ಶಿವಮೂರ್ತಿಯವರ ಕೊಠಡಿಗೆ ಹೋಗಿದ್ದಾಗ ಅವರು ಕೊಠಡಿಯಲ್ಲಿರಲಿಲ್ಲ. ಆದರೂ ಇವರು ಒಂದು ಚೀಟಿಯನ್ನು ತಮ್ಮ ಕೈ ಬರಹದಲ್ಲೇ ಬರೆದು ಇಟ್ಟು ಹೋಗಿದ್ದರು. ಡೆಕ್ಕನ್‌ಹೆರಾಲ್ಡ್‌ನಲ್ಲೂ ಕೂಡ ಆ ಚೀಟಿಯ ಫೋಟೋಸ್ಟ್ಯಾಟ್ ಕಾಪಿ ಪ್ರಕಟವಾಯಿತು. ಇದು ಎಲ್ಲರಿಗೂ ಗೊತ್ತಿರುವಂಥ ವಿಚಾರ. ಆ ಮಾನ್ಯ ಸದಸ್ಯರೂ ಇಲ್ಲೇ ಇದ್ದಾರೆ. ಟೆಲಿಗ್ರಾಂನ್ನು ಕಳುಹಿಸಿದ ಉದ್ದೇಶವೇ ಬೇರೆ. ನಾನು ನಿಮ್ಮನ್ನು ಅರ್ಜೆಂಟಾಗಿ ಕರೆದಿದ್ದೇನೆ, ನೀವು ನಮ್ಮ ಪಕ್ಷಕ್ಕೆ ಬರಬೇಕು. ಜನತಾ ಪಕ್ಷದ ಸರ್ಕಾರ ಈಗ ಇದೆ. ಇದಕ್ಕೆ ಬೆಂಬಲವನ್ನು ಕೊಡಬೇಕೆಂಬ ಉದ್ದೇಶದಿಂದ ನಾವು ಈ ಟೆಲಿಗ್ರಾಂನ್ನು ಕಳುಹಿಸಿದ್ದೇವೆಂದು ಬರೆದಿದ್ದಾರೆ. ಏತಕ್ಕಾದರೂ ಇಂಥ ಕೆಲಸ ನಡೆಯುತ್ತಿದೆ? ಮಾನ್ಯ ಜೀವರಾಜ ಆಳ್ವಾವರು ನಮ್ಮ ಜೊತೆಯಲ್ಲಿದ್ದವರು, ನಮ್ಮ ಸ್ನೇಹಿತರು. ಆದರೂ ಇಂಥಾದ್ದೆಲ್ಲಾ ನಡೆಯುತ್ತಿದೆ. ಇಷ್ಟಾದರೂ ಕೂಡ ಅವರನ್ನು ನಮ್ಮ ಸ್ನೇಹಿತರು ಎಂದೇ ನಾವು ಕರೆಯುತ್ತೇವೆ. ಆದರೆ ಯಾವ ರೀತಿ ಸ್ನೇಹ ಎಂದು ಕರೆಯಬೇಕೆಂಬುದು ನಮ್ಮದು ನಮಗೆ ಬಿಟ್ಟಿದ್ದು, ನಿಮ್ಮದು ನಿಮಗೆ ಬಿಟ್ಟಿದು. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಾ, ಯಾರಾದರೂ ಒಂದು ಕೆಲಸಕ್ಕೆ ಎಂದು ಮಂತ್ರಿಗಳ ಹತ್ತಿರ ಹೋದರೆ ನೀವು ನಮ್ಮ ಪಕ್ಷಕ್ಕೆ ಸೇರಿ ಎಂದು ಹೇಳುತ್ತಾರಂತೆ. ಎಂದು ಹೇಳಿದರು. ಕೇವಲ ಆಪಾದನೆಗೋಸ್ಕರ ನಾನು ಈ ಮಾತನ್ನು ಹೇಳುತ್ತಿಲ್ಲ. ಖಾಸಗಿಯಾಗಿ ಮಾನ್ಯ ಸದಸ್ಯರ ಹತ್ತಿರ ಮಾತನಾಡಿದ್ದೇನೆ. ಅರ್ಜೆಂಟಾಗಿ ಬನ್ನಿ ಎಂದು ಹೇಳುವುದಾದರೆ ಇದೇನು ಅಂಥ ಅಪರೂಪದ ಸರ್ಕಾರವೆ? ಮೇಲಿನಿಂದ ಏನಾದರೂ ಇಳಿದು ಬಂದಿದೆಯೆ? ಯಾವ ಬಡವರ ಬಗ್ಗೆ ಮಹತ್ಸಾಧನೆಯನ್ನು ಮಾಡಿದ್ದಾರೆಂದು ಇವರು ಶಾಸಕರನ್ನು ಕರೆಯುತ್ತಿದ್ದಾರೆ? ಹರಿಜನ ಗಿರಿಜನರಿಗೆ ಏನು ಅನುಕೂಲ ಮಾಡಿಕೊಟ್ಟಿದ್ದೀರಿ? ಆದರೆ ಇದರ ಬಗ್ಗೆ ಬಜೆಟ್ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದು ಏನೆಂದರೆ ಹರಿಜನಗಿರಿಜನರ ಪೈಕಿ ೩ ಜನರು ಅತ್ಯಂತ ಹೆಚ್ಚಿನ ಅಂಕಗಳನ್ನು ಎಂ.ಎ., ಎಂ.ಎಸ್ಸಿ., ಬಿ.ಎಸ್ಸಿ., (ಅಗ್ರಿ) ಬಿ.ವಿ.ಎಸ್ಸಿ., ಬಿ.ಇ., ಇವುಗಳಲ್ಲಿ ತೆಗೆದುಕೊಂಡಿರುತ್ತಾರೆ ಅಂಥವರಿಗೆ ನೇರವಾಗಿ without sending them before K.P.S.C. ನೇಮಕ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಇವತ್ತಿನವರೆಗೂ ಇದರ ಬಗ್ಗೆ ಸರ್ಕಾರೀ ಆಜ್ಞೆ ಬಂದಿಲ್ಲ. ಈ ಮಾತನ್ನು ನೀವು ಮಾರ್ಚಿ ತಿಂಗಳಲ್ಲಿ ಹೇಳಿದ್ದು. ನೀವು ಹೇಳಿದ ಮೇಲೆ ಯೂನಿವರ್ಸಿಟಿಯ ಪರೀಕ್ಷಾ ಫಲಿತಾಂಶಗಳೆಲ್ಲಾ ಪ್ರಕಟವಾಯಿತು. ನಿಮ್ಮ ಮಾತನ್ನು ಕೇಳಿಕೊಂಡು ಆ ವಿದ್ಯಾರ್ಥಿಗಳು ನಮಗೆ ಕೆಲಸವನ್ನು ಕೊಡಿ ಎಂದು ಕೇಳಿದರೆ ನಮಗೆ ಇನ್ನೂ ಸರ್ಕಾರೀ ಆಜ್ಞೆಯೇ ಬಂದಿಲ್ಲವೆಂದು ವ್ಯವಸಾಯ ವಿಶ್ವವಿದ್ಯಾನಿಲಯದವರು, ಬೆಂಗಳೂರು ವಿಶ್ವವಿದ್ಯಾನಿಲಯದವರು, ಮೈಸೂರು ವಿಶ್ವವಿದ್ಯಾನಿಲಯದವರು, ಇನ್ನೂ ಕೆಲವರು ಹೇಳಿದ್ದಾರೆ. ಈ ವಿಶ್ವವಿದ್ಯಾನಿಲಯಗಳಿಂದ ಸ್ಪಷ್ಟವಾದ ದೂರುಗಳು ಬಂದಿವೆ. ನೀವು ಕೇವಲ ೩ ಜನರಿಗೆ ನೌಕರಿಯನ್ನು ಕೊಟ್ಟರೆ ಅದು ಹರಿಜನಗಿರಿಜನರ ಬಗ್ಗೆ ಇರತಕ್ಕ ಕಳಕಳಿ ತೋರಿಸುವುದಿಲ್ಲ, ಇದು ದೊಡ್ಡ ಕಿರೀಟ ಏನೂ ಅಲ್ಲ. ಈ ಮಾತನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಆದರೆ ಹಿಂದಿನ ಸರ್ಕಾರದವರು ಏತಕ್ಕೆ ಕೊಡಲಿಲ್ಲ ಎಂದು ತಾವು ಕೇಳಬಾರದು. ನೀವು ಈ ೩ ಜನರಿಗೆ ಕೊಡುತ್ತೇವೆಂದು ಹೇಳಿರುವುದು ಮೂಗಿಗೆ ತುಪ್ಪ ಹಚ್ಚಿದರೆ ಅದರ ವಾಸನೆ ತಪ್ಪುವಂತಿಲ್ಲ, ತಿನ್ನುವುದಕ್ಕೆ ಸಿಕ್ಕುವಂತಿಲ್ಲ, ಎನ್ನುವಂತಿದೆ. ಆದ್ದರಿಂದ ಹೇಳುತ್ತಿದ್ದೇನೆ, ಸಾವಿರಾರು ಜನ ಹರಿಜನಗಿರಿಜನರ ಪ್ರಶ್ನೆಯನ್ನು ನಾನು ಕುರಿತು ಮಾತನಾಡುತ್ತಿದ್ದೇನೆ. ಇವತ್ತು ಕೇವಲ ೩ ಜನರಿಗೆ ನೌಕರಿಯನ್ನು ಕೊಡದೇ ಇರುವವರು ಮೂರು ಸಾವಿರ ಜನರಿಗೆ ಕೊಡುತ್ತೀರಾ? ಇವತ್ತಿನವರೆಗೂ ಸರ್ಕಾರೀ ಆಜ್ಞೆ ಹೊರಡಿಸಿಲ್ಲ ಎಂದರೆ ನಿಮಗೆ ಇವರ ಬಗ್ಗೆ ಕಳಕಳಿ ಏನಾದರೂ ಇದೆಯೆ? ನಿಮ್ಮ ಸರ್ಕಾರೀ ಆಜ್ಞೆ ಬಂದಿದ್ದರೆ ಹೆಚ್ಚು ಅಂಕಗಳನ್ನು ತೆಗೆದುಕೊಂಡಿತಕ್ಕ ವಿದ್ಯಾರ್ಥಿಗಳಿಗೆ ನೌಕರಿ ಸಿಕ್ಕುತ್ತಿತ್ತು. ಅದೇ ರೀತಿ ಬ್ಯಾಕ್‌ವರ್ಡ್ ಕ್ಲಾಸ್‌ನವರ ಬಗ್ಗೆ ಕೂಡ ಸರ್ಕಾರೀ ಆಜ್ಞೆ ಇಲ್ಲ. ನೀವು ಇದನ್ನು ಹೇಳದೇ ಸುಮ್ಮನಿದ್ದು ನಾವು ಕಾನೂನು ಪ್ರಕಾರ ಹೋಗುತ್ತಿದ್ದೇವೆಂದು ಹೇಳಬಹುದಿತ್ತು. ನಿಮ್ಮ ಆಯವ್ಯಯ ಭಾಷಣದಲ್ಲಿ

ಏನು ಹೇಳಿದ್ದೀರಿ ಅದನ್ನು ಮಾಡುವುದಕ್ಕೆ ನಿಮ್ಮಿಂದ ಆಗಿಲ್ಲ. ಹರಿಜನಗಿರಿಜನರ ಬಗ್ಗೆ ನೀವು ಏನು ಸಾಧನೆ ಮಾಡಿದ್ದೀರಿ ಎನ್ನುವ ಬಗ್ಗೆ ದಾವಣಗೆರೆ ಮುಂತಾದ ಕಡೆಗಳಿಂದ ನನಗೆ ಬಂದಿರತಕ್ಕ ಕೆಲವು ಅರ್ಜಿಗಳು ಏನಿವೆ ಅವುಗಳನ್ನು ತಮಗೆ ಕಳುಹಿಸಿಕೊಡುತ್ತೇನೆ. ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಸಮಾಜದಲ್ಲಿರತಕ್ಕ ದೊಡ್ಡ ದೊಡ್ಡ ಪ್ರಭಾವಯುತ ವರ್ಗಗಳು ಎಂದರೆ ವಾಣಿಜ್ಯೋದ್ಯಮಿಗಳು, ಬಂಡವಾಳಶಾಹಿಗಳು, ದೊಡ್ಡ ದೊಡ್ಡ ಭೂಮಾಲೀಕರು ಯಾರಿದ್ದಾರೆ ಅವರ ಕೈಗೊಂಬೆಗಳಾಗಿದ್ದೀರಿ. ಹರಿಜನಗಿರಿಜನರು, ಹಿಂದುಳಿದ ವರ್ಗದವರು ಎಲ್ಲೋ ಒಂದು ಮೂಲೆ ಗುಂಪಾಗಿ ಬಿದ್ದಿದ್ದಾರೆ. ಅವರಿಗೆ ನೀವು ಅನುಕೂಲ ಮಾಡಿಕೊಡಿ. ನಾವೆಲ್ಲರೂ ಒಟ್ಟಿಗೇ ಪ್ರಯತ್ನ ಮಾಡಿದರೂ ಅವರಿಗೆ ಅನುಕೂಲ ಮಾಡಿಕೊಡುವುದು ಬಹಳ ಕಷ್ಟವಿದೆ. ಈ ವರ್ಗದ ಜನರು ಮತ್ತು ಇದಕ್ಕೆ ಸಂಬಂಧಪಟ್ಟ ಸಂಘದವರು ಅನೇಕ ಅರ್ಜಿಗಳನ್ನು ನನಗೆ ಕಳುಹಿಸಿಕೊಟ್ಟಿದ್ದಾರೆ. ನಾವು ಈ ಸಮಾಜದಲ್ಲಿ ಜೀವನ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ. ನಾವು ಯಾವುದೇ ಜಾತಿಯ ಸಭೆಯಲ್ಲೂ ಭಾಷಣ ಮಾಡಿ ಅಭ್ಯಾಸ ಇಲ್ಲ. ನಾವು ಜಾತಿಯನ್ನು ಕಲಿತಿಲ್ಲ. ನಮ್ಮ ರಾಜಕಾರಣದಲ್ಲಿ ಇದನ್ನು ಕಲಿತಿಲ್ಲ. ನಾವು ವರ್ಗದ ಸಂಘರ್ಷಕರು. ನಮ್ಮದು ವರ್ಗ ಸಂಘಟನೆಯ ಹೋರಾಟವೇ ಹೊರತು ಜಾತಿ ಸಂಘಟನೆಯ ಹೋರಾಟವಲ್ಲ. ಇದನ್ನು ನಾವು ಗಮನದಲ್ಲಿಟ್ಟುಕೊಂಡು ಮಾತನಾಡುತ್ತಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಬಂಗಾರಪ್ಪನವರು ಈ ರೀತಿ ಮಾತನಾಡುತ್ತಿರುವುದನ್ನು ನಾವು ಇವತ್ತೇ ಮೊದಲನೇ ಸಾರಿ ಕೇಳುತ್ತಿರುವುದು. ಹಿಂದೆ ಎಂದೂ ಕೇಳಿರಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಕ್ಷಮಿಸಬೇಕು. ಮಧ್ಯೆ ಕೆಲವು ದಿವಸ ತಾವು ಸದಸ್ಯರಾಗಿರಲಿಲ್ಲ. ತಾವು ಈ ಸಂದರ್ಭವನ್ನು ಮತ್ತೊಂದು ಅರ್ಥ ಬರುವ ರೀತಿಯಲ್ಲಿ ಮಾತನಾಡಿ ನನ್ನ ಮನಸ್ಸಿಗೆ ನೋವನ್ನುಂಟು ಮಾಡಿದಿರಿ.

ಶ್ರೀ ಎಂ. ಎಸ್. ಕೃಷ್ಣನ್.—ಹಿಂದೆ ನಾನು ನಿಮ್ಮ ಜೊತೆ ಸದಸ್ಯನಾಗಿದ್ದೆ. ನಾವು ಹಿಂದೆ ಇದೇ ಸದನದಲ್ಲಿ ಪಕ್ಕಪಕ್ಕದಲ್ಲೇ ಕೂತುಕೊಳ್ಳುತ್ತಿದ್ದೆವು. ಆಗ ಈ ತರಹ ಭಾಷೆ ತಮ್ಮ ಬಾಯಿಂದ ಬಂದಿರಲಿಲ್ಲ. ಈಗ ತಾವು ಬಹಳ ಉದ್ವೇಗದಿಂದ ವರ್ಗ ಸಂಘರ್ಷಣೆಯ ಬಗ್ಗೆ ಮಾತನಾಡುತ್ತಿರುವುದನ್ನು ನೋಡಿ ನನಗ ಖಂಡಿತವಾಗಿಯೂ ಸಂತೋಷವಾಗುತ್ತಿದೆ. ಇದರಲ್ಲಿ ತಪ್ಪು ಅಭಿಪ್ರಾಯ ಬರುವುದಕ್ಕೆ ಖಂಡಿತವಾಗಿಯೂ ಸಾಧ್ಯವೇ ಇಲ್ಲ. ಆದರೆ ಇದನ್ನು ತಾವು ಮಾಡಿ ತೋರಿಸಬೇಕು. ನಾನು ನಿಮ್ಮ ಜೊತೆಯಲ್ಲೇ ಇರುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಬಂಗಾರಪ್ಪನವರು ವರ್ಗ ಸಂಘರ್ಷಣೆಯ ಬಗ್ಗೆ ಮಾತನಾಡಿದ್ದನ್ನು ನೋಡಿ ನನಗೆ ಆಶ್ಚರ್ಯವಾಗುತ್ತಿದೆ ಎಂದು ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಹೇಳಿದರು. ವರ್ಗ ಸಂಘರ್ಷಣೆಯ ಬಗ್ಗೆ ಮಾತನಾಡುವವರು ಅದನ್ನು ಮರೆತಾಗ ಸ್ವಲ್ಪ ಒತ್ತುವಂತೆ ಮಾತನಾಡಬೇಕಾಗುತ್ತದೆ. ಅದರಂತೆ ಮಾನ್ಯ ಸದಸ್ಯರಾದ ಬಂಗಾರಪ್ಪನವರು ಒತ್ತಿ ಮಾತನಾಡುತ್ತಿದ್ದಾರೆ.

ಎಂ. ಎಸ್. ಕೃಷ್ಣನ್.—ವರ್ಗ ಸಂಘರ್ಷಣೆಯನ್ನು ಯಾರು ಮರೆತಿದ್ದಾರೆ ಎನ್ನುವ ಬಗ್ಗೆ ನಾನು ವ್ಯಾಖ್ಯಾನ ಮಾಡುವುದು ಅನುಚಿತ. ವರ್ಗ ಸಂಘರ್ಷಣೆಯ ಬಗ್ಗೆ ನಂಬಿಕೆ ಇಲ್ಲದಿರತಕ್ಕ ಈ ಜನರು ಈ ಬಗ್ಗೆ ಅದರಲ್ಲೂ ಮೊಯ್ಲಿಯವರಂಥವರು ಮಾತನಾಡಿದರೆ ಇದಕ್ಕೆ ನಾವು ಏನು ಹೇಳಬೇಕೋ ತಿಳಿಯುತ್ತಿಲ್ಲ. ಇವರಿಗೆ ಇದರಲ್ಲಿ ನಂಬಿಕೆ ಇಲ್ಲ. ಇವರು ಬಂಡವಾಳಗಾರರನ್ನು ಬೆಳೆಸಿದ ಜನ...

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಕೃಷ್ಣನ್‌ರವರಂಥ ಸದಸ್ಯರು ಇವತ್ತು ಜಮೀನುದ್ದಾರರಿಗೆ ಬೆಂಬಲ ಕೊಡುವವರು, ವರ್ತಕರಿಗೆ ಬೆಂಬಲ ಕೊಡುವವರು, ಅಕ್ರಮ ಸಾಗಾಣಿಕೆದಾರರಿಗೆ ಬೆಂಬಲ ಕೊಡುವವರು ಇರುವಂಥ ಸರ್ಕಾರಕ್ಕೆ ಬೆಂಬಲವನ್ನು ಕೊಡತಕ್ಕ ಈ ಜನರಿಂದ ಯಾರೂ ಕೂಡ ವರ್ಗ ಸಂಘರ್ಷತೆಯನ್ನು ಕಲಿಯಬೇಕಾಗಿಲ್ಲ. ವರ್ಗ ಸಂಘರ್ಷಣೆಯ ಹೆಸರಿನಲ್ಲಿ ಸಮಾಜವನ್ನು ಶೋಷಣೆ ಮಾಡತಕ್ಕ ಈ ವರ್ಗದ ಜನರಿಂದ ನಾವು ಈ ಮಾತನ್ನು ಕೇಳುವುದಕ್ಕೆ ತಯಾರಿಲ್ಲ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಯಾವ ಪಕ್ಷ ವರ್ಗ ಸಂಘರ್ಷಣೆಯ ಬಗ್ಗೆ ಹೋರಾಟ ಮಾಡುತ್ತಿದೆ ಎಂಬುದನ್ನು ಚರಿತ್ರೆಯೇ ಹೇಳುತ್ತದೆ. ಈ ಸರ್ಕಾರದ ಬಗ್ಗೆ ಕೂಡ ನಾವು ಸ್ಪಷ್ಟವಾದ ಅಭಿಪ್ರಾಯವನ್ನು ಹೇಳಿದ್ದೇವೆ, ಒಳ್ಳೆಯದನ್ನು ಮಾಡಿದರೆ ಒಳ್ಳೆಯದೆಂದು ಹೇಳುತ್ತೇವೆ, ಕೆಟ್ಟದನ್ನು ಮಾಡಿದರೆ ಕೆಟ್ಟದ್ದೆಂದು ಹೇಳುತ್ತೇವೆ. ನಾವು ಅಂಥ ಜನರು.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಬಂಡವಾಳಗಾರರಿಗೆ ಬೆಂಬಲವನ್ನು ಕೊಡುವವರು ನೀವು, ನಾವಲ್ಲ ನೀವು ಕೊಟ್ಟಿದ್ದೀರಿ, ಅದು ಸಾಬೀತಾಗಿದೆ...

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾತನ್ನು ಸ್ಪಷ್ಟಪಡಿಸುತ್ತೇನೆ. ಬಡವರು ಎಲ್ಲ ವರ್ಗದಲ್ಲೂ ಇದ್ದಾರೆ. ಈ ಬಡವರ ವಿಚಾರದಲ್ಲಿ ನಮ್ಮ ಕಮಿಟ್‌ಮೆಂಟ್ ಏನಿದೆ ಅದನ್ನು ಬಿಟ್ಟು ನಾವು ಮಾತನಾಡುವುದಾದರೆ ಅದು ತಪ್ಪಾಗುತ್ತದೆ. ಆದ್ದರಿಂದ ನಾನು ಅದನ್ನು ಬಹಳ ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿದೆ. ಈ ಸರ್ಕಾರಕ್ಕೆ ಆ ಒಂದು ಕಮಿಟ್‌ಮೆಂಟ್ ಇಲ್ಲ. ಜವಾಬ್ದಾರಿಯನ್ನು ಹೊತ್ತಿರತಕ್ಕ ವ್ಯಕ್ತಿಗಳು ಇರಬೇಕು. ಆ ಕಡೆ ಇರತಕ್ಕವರಲ್ಲಿ ಕೆಲವು ಯುವಕ ಮಂತ್ರಿಗಳಿದ್ದಾರೆ, ಅದನ್ನು ನೋಡಿದರೆ ನನಗೆ ಸಂತೋಷವಾಗುತ್ತದೆ ಅವರು ತಮ್ಮ ರಾಜಕೀಯ ಜೀವನವನ್ನು ಪಾಲಿಷ್ ಮಾಡುವುದು ತಮ್ಮ ಕಮಿಟ್‌ಮೆಂಟ್‌ನ್ನು ಸರಿಪಡಿಸುವ ಜವಾಬ್ದಾರಿಯುತ ಸ್ಥಾನದಲ್ಲಿದ್ದಾಗ ಅದನ್ನು ಸದುಪಯೋಗ ಪಡಿಸಿಕೊಳ್ಳುವ ಭಾವನೆ ಅವರಲ್ಲಿದ್ದರೆ ಬಹಳ ಒಳ್ಳೆಯದು. ಅದು ಅವರಲ್ಲಿ ಕೆಲವರಿಗಾದರೂ ಇದೆಯೆಂದು ನಾನು ತಿಳಿದುಕೊಂಡು ಮುಂದುವರಿಯುತ್ತೇನೆ. ಆದರೆ ಕೆಲವರಿಗೆ ಅದು ಇರುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಇವತ್ತು ಮಾನ್ಯ ಮುಖ್ಯ ಮಂತ್ರಿಗಳಿದ್ದಾರೆ, ಇವರು ಮಾನ್ಯ ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ, ವೀರೇಂದ್ರ ಪಾಟೀಲರ ಮಂತ್ರಿ ಮಂಡಲದಲ್ಲಿ ಇದ್ದಾಗ ಇವರು ಯಾವ ಕಮಿಟ್‌ಮೆಂಟ್‌ನ್ನು ಇಟ್ಟುಕೊಂಡಿದ್ದರು ಎಂಬುದನ್ನು ಯೋಚನೆ ಮಾಡಿ ನೋಡಿದರೆ ಆಗ ನಮಗೆ ಯಾವುದೂ ಕಂಡುಬರಲಿಲ್ಲ.

ಸೂಕ್ಷ್ಮವಾಗಿ ಹೇಳುವುದಾದರೆ. ನಿಮ್ಮ ಮಂತ್ರಿಮಂಡಲ ಆರು ತಿಂಗಳಾದರೂ ಇರಬಹುದು, ೫ ವರ್ಷಗಳಾದರೂ ಇರಬಹುದು, ಆ ಪ್ರಶ್ನೆ ಬೇರೆ. ನೀವು ಸಂಪೂರ್ಣವಾಗಿ ರೈತರಿಗೆ, ಬಡವರಿಗೆ. ದೀನದಲಿತರಿಗೆ ಸಾಮಾಜಿಕ ನೀತಿ, ಆರ್ಥಿಕ ಪ್ರಗತಿಯ ಬಗ್ಗೆ, ಪ್ರಗತಿ ಪರವಾದ ಕಾರ್ಯಕ್ರಮಗಳ ಬಗ್ಗೆ ಯಾವುದಾದರೂ ನೀತಿಯನ್ನು ಹೇಳಿದರೆ ನಿಜವಾಗಿಯೂ ಸಂತೋಷಪಡುತ್ತಿದ್ದೆ. ಆದರೆ ಪ್ರಗತಿ ಪರವಾದ ಕಾರ್ಯಕ್ರಮಗಳು ಯಾವುದು ಇಲ್ಲ. ತಮ್ಮ ಕಾರ್ಯಕ್ರಮ ಸರ್ಕಾರವನ್ನು ಭದ್ರಗೊಳಿಸಿಕೊಳ್ಳ ತಕ್ಕಂಥ ಕಾರ್ಯಕ್ರಮಗಳು ಶಾಸಕರನ್ನು ಎಳೆಯತಕ್ಕಂಥ ಕಾರ್ಯಕ್ರಮಗಳಾಗಿವೆ ಎನ್ನತಕ್ಕ ಭಾವನೆ ಬಂದಿದೆ. ತಾವು ಅಧಿಕಾರದಲ್ಲಿ ಮುಂದು ವರಿಯುವುದಕ್ಕೆ, ಅಧಿಕಾರವನ್ನು ಭದ್ರಗೊಳಿಸುವುದಕ್ಕೆ ಅವರು ತಮ್ಮದೇ ಆದಂಥ ಸ್ವಂತ ನೀತಿಯನ್ನು ಹಾಕಿಕೊಂಡು ಶಾಸಕರನ್ನು ಸೆಳೆಯುತಕ್ಕಂಥ ದಾರಿಯನ್ನು ಕಂಡುಹಿಡಿದುಕೊಂಡಿದ್ದಾರೆ. ಮುಂದೆ ಬರತಕ್ಕಂಥವರನ್ನು, ಉಳಿದಿರತಕ್ಕಂಥವರನ್ನು, ಸ್ವತಂತ್ರರಾಗಿರ ತಕ್ಕಂಥವರನ್ನು, ಬಿಜೆಪಿಯವರನ್ನು, ಸಿ.ಪಿ.ಐ, ಸಿ.ಪಿ.ಎಂ. ಎಲ್ಲರನ್ನು ಸೇರಿಸಿಕೊಂಡು....

ಶ್ರೀ ಬಿ. ಎಸ್. ಯಡಿಯೂರಪ್ಪ.—ನಮ್ಮನ್ನೇನು ಅವರು ಕೈ ಹಿಡಿದಿಲ್ಲ. ನಾವು ಜನತಾ ಪಕ್ಷಕ್ಕೆ ಬೆಂಬಲವನ್ನು ಕೊಡುತ್ತಿರುವುದು ಜನತೆಯ ಅಪೇಕ್ಷೆಯಿಂದ.

ಶ್ರೀ ಎಸ್. ಬಂಗಾರಪ್ಪ.—ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಜನತಾ ಪಕ್ಷದ ಸರಕಾರ ಬೇಕು ಈ ದೇಶದಲ್ಲಿ, ಕೇಂದ್ರದಲ್ಲಿರತಕ್ಕಂಥ ಕಾಂಗ್ರೆಸ್ ಸರ್ಕಾರಕ್ಕೆ ಒಂದು ಪರ್ಯಾಯ ಪಕ್ಷ ಬೇಕು ಎನ್ನುವುದಾದರೆ ಎಷ್ಟು ಜನರ ಬೆಂಬಲ ನಿಮ್ಮ ಪಕ್ಷದ ಸರ್ಕಾರಕ್ಕೆ ಇದೆ ಎಂಬುದನ್ನು ತೋರಿಸ ಬೇಕು. ನನ್ನನ್ನು ಡೆಪ್ಯುಟಿ ಚೀಫ್ ಮಿನಿಸ್ಟರ್ ಆಗಿ ಮಾಡುತ್ತೇವೆ. ಜನತಾ ಪಕ್ಷಕ್ಕೆ ಸೇರಬೇಕು ಎಂದು ಹೇಳಿದರು. ಅದಕ್ಕೆ ನಾನು ಒಪ್ಪುವುದಿಲ್ಲವೆಂದು ಹೇಳಿದ್ದೇನೆ. ಇದರ ಬಗ್ಗೆ ಸ್ಟೇಟ್‌ಮೆಂಟ್ ಕೂಡ ಕೊಟ್ಟಿದ್ದೇನೆ.

(ಗೊಂದಲ)

ತಾವು ಓದದಿದ್ದರೆ ನಾನು ಏನು ಮಾಡಲಿ. ನಿಮಗೆ ಗೊತ್ತಿಲ್ಲ. ವಿವರಗಳು ಇದ್ದಾವೆ, ನಾನು ಹೇಳಿಕೆಯನ್ನು ಕೂಡ ಕೊಟ್ಟಿದ್ದೇನೆ, ಆಗ ನಾನು ಏನು ಮಾತನ್ನು ಹೇಳಿದ್ದೇನೆ ಎಂಬುದು ಸ್ಪಷ್ಟವಾಗಿ ಪತ್ರಿಕೆಗಳಲ್ಲಿ ಬಂದಿದೆ. ತಾವು ಓದಬೇಕಾದರೆ ತೋರಿಸುತ್ತೇನೆ. ಜನತಾ ಪಕ್ಷಕ್ಕೆ ಸೇರಿ ತಾವು ಮುಖ್ಯ ಮಂತ್ರಿಗಳಾಗಬೇಕೆಂದು ಹೇಳಿದರೂ ಕೂಡ ಜನತಾ ಪಕ್ಷದ ಮುಖ್ಯಮಂತ್ರಿಯಾಗುವುದಕ್ಕೆ ನಾನು ಒಪ್ಪುವುದಿಲ್ಲವೆಂಬ ಮಾತನ್ನು ಸ್ಪಷ್ಟಪಡಿಸಿದ್ದೇನೆ.

(ಗೊಂದಲ)

ಕ್ರಾಂತಿ ರಂಗ ಜನತಾಪಕ್ಷದೊಡನೆ ಮರ್ಜ್‌ಮಾಡಿದ್ದು, ಜನತಾ ಪಕ್ಷದ ಸರ್ಕಾರ ಇರಬೇಕೆಂದು ಮೂಲ ಉದ್ದೇಶದಿಂದ ಮರ್ಜ್‌ಮಾಡಿದ್ದೆ ಹೊರತು ಮುಖ್ಯಮಂತ್ರಿಯಾಗಬೇಕೆಂದು ಮರ್ಜ್ ಆಗಲಿಲ್ಲ. ನಾನು ಆ ಮಾತನ್ನು ಎಂದೂ ಹೇಳಲಿಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರೇ ಈ ಸಂದರ್ಭದಲ್ಲಿ ಜನತಾ ಪಕ್ಷದ ಸರ್ಕಾರ ಕರ್ನಾಟಕದಲ್ಲಿ ಇದೆ ಎಂದು ತೋರಿಸಬೇಕೆಂಬ ಉದ್ದೇಶ ಅವರದಾಗಿದೆ.

ಇನ್ನು ಟೂರ್ ಪ್ರೋಗ್ರಾಮ್ ಬಗ್ಗೆ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಎಷ್ಟು ದಿವಸ ಟ್ಯೂರ್ ಮಾಡಿದ್ದಾರೆ ? ಕರ್ನಾಟಕ ರಾಜ್ಯದಿಂದ ಹೊರಗೆ, ಅಂದರೆ ಡೆಲ್ಲಿಗೆ ಎಷ್ಟು ಬಾರಿ ಹೋಗಿದ್ದಾರೆ ? ಅವರು ಅಲ್ಲಿ ರಾಜ್ಯದ ಹಿತದೃಷ್ಟಿಯಿಂದ ಏನು ಮಾತನಾಡಿದ್ದಾರೆ ಎಂಬುದನ್ನೆಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ. ಅಲ್ಲಿ ಹೋಗಿ ಮಾತನಾಡುವುದು ಬೇಡ ಎಂದು ಹೇಳುವುದಿಲ್ಲ. ಆದರೆ ಜನರಲ್ ಆಗಿ ಹೇಳುವುದಾದರೆ ಡಿ.ಪಿ.ಎ.ಪಿ, ಎಲೆಕ್ಷನ್ ಮಿನಿಸ್ಟರ್, ಮಂತ್ರಿ ಮಂಡಲ ಎಲ್ಲ ಇದೆ.

(ಗೊಂದಲ)

ಆದ್ದರಿಂದ ಈವತ್ತು ಬಿಟ್ಟರೆ ನಾಳೆಯುದಿವಸ ಮಾತನಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಮಾನ್ಯ ಸಭಾಧ್ಯಕ್ಷರೇ ಜನತಾಪಕ್ಷದ ಸರ್ಕಾರ ಇದೆ ಎಂದು ತೋರಿಸುವುದಕ್ಕೋಸ್ಕರವಾಗಿ ಶಾಸನ ಸಭಾ ಸದಸ್ಯರಾಗಿರತಕ್ಕಂಥ ಸದಸ್ಯರು ಶ್ರೀಮಾನ್ ರಾಮಕೃಷ್ಣ ಹೆಗಡೆಯವರನ್ನು ನಾಯಕರನ್ನಾಗಿ ಮುಖ್ಯ ಮಂತ್ರಿಗಳಾಗಿ ಆರಿಸುವ ಕಾಲಕ್ಕೆ ಆ ಪಕ್ಷದ ಸದಸ್ಯರುಗಳು ಮಾತನಾಡಿದರು. ಅನೇಕ ಜನ ಪಕ್ಷದ ರಾಜಕಾರಣಿಗಳಿಗೆ ಇದು ಗೊತ್ತಾಗಲಿಲ್ಲ. ಆಗಿನ ಸಂದರ್ಭ ಆರೀತಿ ಬಂದು ತೀರ್ಮಾನವಾಯಿತು, ಪರವಾಗಿಲ್ಲ, ಜನತಾಪಕ್ಷದ ಸರ್ಕಾರ ಆಗಬಾರದು ಎಂದು ಅಲ್ಲ. ಜನತಾ ಪಕ್ಷದ ಸರ್ಕಾರ ಆಡಳಿತಕ್ಕೆ ಬರುತ್ತದೆ ಒಳ್ಳೆಯ ಆಡಳಿತವನ್ನು ಕರ್ನಾಟಕದ ಜನತೆಗೆ ಕೊಡಬಹುದೆಂದು ತಿಳಿದುಕೊಂಡಿದ್ದೆವು. ಜನತಾ ಪಕ್ಷದ ಸರ್ಕಾರ ಮಾಡಬೇಕು ಎನ್ನುವ ಉದ್ದೇಶದಿಂದಲೇ ಅವರು ಏತಕ್ಕೆ ಸ್ವಾತಂತ್ರ ಪಕ್ಷದವರನ್ನು ಮಂತ್ರಿಗಳಾಗಿ ತೆಗೆದುಕೊಳ್ಳಲಿಲ್ಲ, ಏತಕ್ಕೆ ಸಂಯುಕ್ತರಂಗದ, ಜನತಾ ರಂಗದವರನ್ನು ತೆಗೆದುಕೊಳ್ಳಲಿಲ್ಲವೆಂಬುದನ್ನು ವಿಚಾರ ಮಾಡಿದರೆ ನಾನು ಸ್ಪಷ್ಟವಾಗಿ ತಿಳಿಸುತ್ತೇನೆ. ಸಂಯುಕ್ತ ರಂಗ ಸರ್ಕಾರ ಜನತೆಗೆ ಕೊಟ್ಟಂಥ ವಚನ ಅರ್ಥವಾಗುತ್ತದೆ. ಅದನ್ನು ಜನತಾ ಪಕ್ಷದ ಸರ್ಕಾರದವರು ಮಾಡಬೇಕು ಎನ್ನುವ ಗುರಿಯನ್ನು ಇಟ್ಟುಕೊಂಡು ರಾಜಕಾರಣ ಮಾಡಿದ್ದಾರೆ ಎನ್ನುವ ಅಂಶ ಇವೆಲ್ಲವನ್ನು ಹೇಳಿದ್ದೇನೆ. ಪತ್ರಿಕೆಗಳಲ್ಲೂ ಬಂದಿದೆ. ಆ ಒಂದು ಗುರಿಯನ್ನು ಇಟ್ಟುಕೊಂಡು ಸಾಧನೆ ಮಾಡತಕ್ಕಂಥ ಅಪೂರ್ವ ಸಂದರ್ಭವನ್ನು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಕಾರ್ಯಕ್ರಮಗಳಲ್ಲಿ ಉಪಯೋಗಿಸಿಕೊಂಡಿಲ್ಲ ಆ ರೀತಿಯಾಗಿ ಮಾಡತಕ್ಕಂಥ ಭಾವನೆಯನ್ನು ಸಹ ಅವರು ಇಟ್ಟುಕೊಂಡಿಲ್ಲ. ಮಾನ್ಯ ಸಭಾಧ್ಯಕ್ಷರೇ, ಅವರು ಯಾವ ಮಟ್ಟಕ್ಕೆ ಹೋಗಿದ್ದಾರೆ ಎಂದರೆ ಹಿಂದಿನ ಸರ್ಕಾರವನ್ನು ಟೀಕೆ ಮಾಡತಕ್ಕಂಥ ವಿಚಾರದಲ್ಲಿಯೇ ಮಗ್ನರಾಗಿದ್ದಾರೆ. ಇನ್ನು ರಾಜ್ಯದ ಹಣಕಾಸಿನ ವಿಚಾರದಲ್ಲಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಜವಾಬ್ದಾರಿಯಿಂದ ಇರಬೇಕೆಂದು ಪದೇ ಪದೇ ಹೇಳಿದ್ದೇನೆ. ರಾಜ್ಯದ ಹಣ ಜನತೆಯ ಹಣ, ಹಣ ಪೋಲಾಗದ ರೀತಿಯಲ್ಲಿ ಕೆಲಸ ಮಾಡಬೇಕು. ಅದು ೫ ರೂಪಾಯಿ ಇರಬಹುದು, ೫ ಲಕ್ಷ ರೂಪಾಯಿ ಇರಬಹುದು, ಹಣ ಹಣವೇ, ಸರ್ಕಾರದ ಬೊಕ್ಕಸಕ್ಕೆ ಕಾನೂನು ಬಾಹಿರವಾದ ಪ್ರಯತ್ನ ಮಾಡಿದರೆ ಆತಂಕ ಬರುತ್ತದೆ. ನಮ್ಮ ಮಿತ್ರರು ಇದನ್ನು ಅರ್ಥ ಮಾಡಿಕೊಳ್ಳುತ್ತಾರೆಂದು ಭಾವಿಸುತ್ತೇನೆ. ಏತಕ್ಕೆಂದರೆ ಮಾನ್ಯ ರಾಚಯ್ಯನವರ ಅಳಿಯ ಒಬ್ಬ ಡಾಕ್ಟರಿಗೆ ನೇರವಾಗಿ ೪೫ ಸಾವಿರ ರೂಪಾಯಿಗಳನ್ನು ಏಮ್ಮ ಸರ್ಕಾರದವರು ಕೊಟ್ಟಿದ್ದಾರೆ. ಇದು ಕಾನೂನು ವಿರುದ್ಧವಾಗಿರುತ್ತದೆ. ಇದು ಒಂದು ದೊಡ್ಡ ತಪ್ಪು. ಮಾನ್ಯ ಸಿಂಧ್ಯರವರು ಆರೋಗ್ಯ ಖಾತೆಯ

ಮಂತ್ರಿಗಳಾಗಿದ್ದಾರೆ. ಇಲಾಖೆಗೆ ಹಣಬೇಕು. ಜನರು ಆಸ್ಪತ್ರೆಗಳಿಗೆ ಬರುತ್ತಾರೆ. ಆಸ್ಪತ್ರೆಗಳಲ್ಲಿ ಔಷಧಿಯನ್ನು ಒದಗಿಸಲು ಹಣ ಖರ್ಚಾಗುತ್ತದೆ. ಆದರೆ ಡೈರೆಕ್ಟಾಗಿ ೪೦ ಸಾವಿರ ರೂಪಾಯಿಗಳನ್ನು ಒಬ್ಬರಿಗೆ ಕೊಡಲು ತೀರ್ಮಾನ ಮಾಡುವುದಾದರೆ ಹಿಂದಿನ ಸರ್ಕಾರದವರು ಮಾಡಿರತಕ್ಕಂಥದ್ದನ್ನು ಹೇಳಲು ನಿಮಗೆ ಏನು ಹಕ್ಕು ಇದೆ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಇನ್ನೊಂದು ಸರ್ಕಾರದ ಆಜ್ಞೆಯೂ ಕೂಡ ಇದೆ. ಅದರ ಬಗ್ಗೆ ಒಂದು ಪತ್ರಿಕಾ ಗೋಷ್ಠಿಯಲ್ಲಿಯೂ ಕೂಡ ಹೇಳಿದ್ದಾರೆ. ೧೪ನೇ ಜುಲೈ ೮೩ಕ್ಕೆ ಹಿರಣ್ಣಯ್ಯ ಮಿತ್ರ ಮಂಡಳಿಯವರು ಅಮೇರಿಕಾಕ್ಕೆ ಹೋಗಲು ಸರ್ಕಾರದವರು ಕಳುಹಿಸಿಕೊಟ್ಟಿದ್ದಾರೆ. ಇದನ್ನು ನಾವು ವಿಚಾರ ಮಾಡಬೇಕಾಗಿದೆ. ತ್ರಿವೇಣಿ ಕಲಾ ಸಂಘದವರು ಪೆನ್‌ಸಲ್‌ವೇನಿಯಾದಲ್ಲಿ ಒಂದು ಕನ್ನಡ ಸಮ್ಮೇಳನವನ್ನು ಮಾಡಬೇಕೆಂದು ಅವರು ಖಾಸಗಿಯಾಗಿ ಪತ್ರವನ್ನು ಬರೆದಿದ್ದಾರೆ. ಅದಕ್ಕೆ ನಾನು ಅವರನ್ನು ಹೋಗಬೇಡಿ ಎಂದು ಹೇಳುವುದಿಲ್ಲ. ಅವರು ಸರ್ಕಾರಕ್ಕೂ ಪತ್ರ ಬರೆದಿದ್ದರೆ ಬೇಡವೆಂದು ಹೇಳುವುದಿಲ್ಲ. ಆದರೆ ಅಲ್ಲಿಗೆ ಹೋಗಬೇಕಾದರೆ ಯಾರು ನಿಜವಾಗಿ ಆರ್ಟಿಸ್ಟ್, ಯಾರು ಕಲೆಯಲ್ಲಿ, ಸಂಗೀತದಲ್ಲಿ, ನಾಟಕದಲ್ಲಿ ಅನುಭವ ಇರತಕ್ಕಂಥವರು ಇರುತ್ತಾರೋ ಅಂಥವರನ್ನು ಕಳುಹಿಸಬೇಕಾಗಿತ್ತು. ಹಾಗೆ ಮಾಡಿದರೆ ಅದನ್ನು ಬೇಡವೆಂದು ಹೇಳುತ್ತಿರಲಿಲ್ಲ. ನಮ್ಮ ಭಾಷೆಯನ್ನು ನಮ್ಮ ಭಾವನೆಗಳನ್ನು, ನಮ್ಮ ಕಲೆಯನ್ನು ಪ್ರತಿಬಿಂಬಿಸತಕ್ಕ ದೇಶದ ಜನರನ್ನು ಪ್ರತಿಬಿಂಬಿಸತಕ್ಕಂಥವರನ್ನು ಕಳುಹಿಸಬೇಕಾಗಿತ್ತು. ಏತಕ್ಕೆಂದರೆ ಆ ದೇಶದ ಜನರೂ ಕೂಡ ಇಲ್ಲಿಗೆ ಬಂದು ನಮ್ಮ ಕಾರ್ಯಕ್ರಮಗಳನ್ನು ನೋಡುತ್ತಾರೆ. ತ್ರಿವೇಣಿ ಅಸೋಸಿಯೇಷನ್ಸ್‌ರವರು ಹಿರಣ್ಣಯ್ಯ ಮಿತ್ರಮಂಡಲಿಯವರಿಗೆ ಒಂದು ಕಾಗದ ಬರೆದರು, ಹಿರಣ್ಣಯ್ಯ ಮಿತ್ರ ಮಂಡಲಿಯವರು ರಾಜ್ಯಸರ್ಕಾರಕ್ಕೆ ಪತ್ರ ಬರೆದರು, ಇವರು ಜಿ.ಓ. ಇಶ್ಯೂ ಮಾಡಿದರು.

This is a wonderful Government Order. The Government Order is issued on 14-7-1983.

I will just read the operative portion;

> "After considering all the aspects, sanction is accorded for the payment of Rs. One lakh only towards the journey expenses only to Sri K. Hiranayya Mithra Mandali, Bangalore to participate in the North America Kannada Conference on 2nd and 3rd September 1983. This order issues with the concurrence of the Finance Department."

ಆ ಪ್ರಶ್ನೆ ಇರಲಿ, ಫೈನಾನ್ಸ್ ಮಿನಿಸ್ಟರ್ ಅವರೊಡನೆಯೂ ಪತ್ರ ವ್ಯವಹಾರ ಮಾಡಿದ್ದಾರೆ. ಇವರು ಹಣವನ್ನು ನೇರವಾಗಿ ಸ್ಯಾಂಕ್ಷನ್ ಮಾಡಿದ್ದಾರೆ, ಅವರು ಒಂದು ಲಕ್ಷದ ೨೫ ಸಾವಿರ ರೂಪಾಯಿಗಳನ್ನು ಕೇಳಿದರೆ, ಇವರು ಒಂದು ಲಕ್ಷ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿದರು. ಇದರಲ್ಲಿ ಪ್ರೊಪ್ರೈಟರಿ ಆಫ್ ದಿ ಆರ್ಡರನ್ನು ನಾನು ಪ್ರಶ್ನೆ ಮಾಡಬೇಕಾಗಿದೆ, ಹಿರಣ್ಣಯ್ಯ ಮಿತ್ರ ಮಂಡಲಿ ಎಂದರೆ ಯಾರು? ಅವರ ನಾಟಕದ ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಸಾಮಾನ್ಯವಾಗಿ ಬಳಸತಕ್ಕಂಥ ಭಾಷೆ, ಕನ್ನಡವನ್ನು ಪ್ರತಿಬಿಂಬಿಸತಕ್ಕಂಥ ಒಂದು ವಿಚಾರವನ್ನು ನಾವು ಕಾಣಬಹುದೆ?

ಶ್ರೀ ಎಸ್. ಬಂಗಾರಪ್ಪ.—ಏಕೆಂದರೆ, ಅವರು ಮಾಡುವಂತಹ ಕೆಲಸವೇನೆಂದರೆ ಒಂದು ಸಲ ಅವರನ್ನು ಕೆಡಹುವುದು, ಇನ್ನೊಂದು ಸಲ ಇವರನ್ನು ಕೆಡಹುವುದು ; ಇದರ ಬಗ್ಗೆ ನಾನು ಹೆಚ್ಚು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಇವರು ಆಡುವಂತಹ ನಾಟಕಗಳಿಂದ ಕಲೆ ಬೆಳೆದಿಲ್ಲ. ಅವರು ಕನ್ನಡದ ಬಗ್ಗೆ ಕಲಿಯುವುದು ಬಹಳವಿದೆ. ಈ ಸರ್ಕಾರದ ಆಜ್ಞೆಯಲ್ಲಿ ಕೆ. ಹಿರಣ್ಣಯ್ಯ ಮಿತ್ರ ಮಂಡಲಿ ಎಂದು ಹೇಳಿದ್ದಾರೆಯೋ ಹೊರತು ಯಾರು ಯಾರು ಹೋಗಬೇಕೆಂಬುದನ್ನು ಹೇಳಿಲ್ಲ. ಈ ಕಾರಣದಿಂದ ಈಗ ಹಿರಣ್ಣಯ್ಯನವರು, ಅವರ ಹೆಂಡತಿ ಹಾಗೂ ಮಕ್ಕಳು ಹೋಗಿದ್ದಾರೆ. ಅಡಿಗೆ ಮಾಡುವವರೂ ಸಹ ಹೋಗಿದ್ದಾರೆ. ಇವರಿಗೆಲ್ಲಾ ನಾಟಕವಾಡಲು ಬರುತ್ತದೆಯೇ ? ಇವರು ಹೋಗಿರುವುದಕ್ಕೆ ಆಗುವಂತಹ ಖರ್ಚನ್ನು ನಾವು ತೆರಿಗೆ ರೂಪದಲ್ಲಿ ಕೊಡಬೇಕಾಗಿದೆ. ಇವೊತ್ತು ಬಡವರು ತಿನ್ನುವಂಥ ಅಕ್ಕಿ, ಎಣ್ಣೆಯ ಮೇಲೂ ಸಹ ತೆರಿಗೆ ಬೀಳುತ್ತಿದೆ. ಈ ರೀತಿ ತೆರಿಗೆಯಿಂದ

ಬಂದ ಹಣದಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ರೀತಿ ತಪ್ಪು ಮಾಡಿರುವ ನಿಮಗೆ, ನಿಮಗಿಂತ ಹಿಂದೆ ಇದ್ದವರು ತಪ್ಪು ಮಾಡಿದ್ದಾರೆಂದು ಹೇಳುವ ನೈತಿಕ ಹಕ್ಕು ಎಲ್ಲಿದೆ? I am questioning the propriety of their line of thinking. I am questioning the propriety of this Government Order. ಇಂತಹ ತಪ್ಪುಗಳನ್ನು ಯಾರೂ ಮಾಡಿದರೂ ಸಹ ತಪ್ಪೇ ಎಂದು ನಾನು ಹೇಳುತ್ತೇನೆ. ಇವರನ್ನು ಅಲ್ಲಿಗೆ ಕಳುಹಿಸಿಕೊಡುವುದಕ್ಕೆ ಮೊದಲು ನಮ್ಮ ರಾಜ್ಯದಲ್ಲಿರುವಂತಹ ಕನ್ನಡ ಸಂಘದವರನ್ನು ಕರೆದು ಯಾರನ್ನು ಕಳಿಸಬೇಕು ಎಂದು ಕೇಳಬಹುದಾಗಿತ್ತು. ಅವರನ್ನು ಒಂದು ಸಲ ಕೇಳಿ ಕಳುಹಿಸಿಕೊಟ್ಟಿದ್ದರೆ ನಾನು ಸಂತೋಷಪಡುತ್ತಿದ್ದೆ. ಆದರೆ ಈಗ ಯಾರು ಯಾರೋ ಹೋಗಿದ್ದಾರೆ

ಶ್ರೀ ಜೀವರಾಜ ಆಳ್ವ.—ಶ್ರೀ ಹಿರಣ್ಣಯ್ಯನವರು ನಾಟಕಕಾರರಲ್ಲ, ಕಲಾವಿದರಲ್ಲ ಎಂದು ತಾವು ಹೇಳುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ನಾನು ಅದನ್ನು ಹೇಳಲಿಲ್ಲ. ಆದರೆ ಅವರಿಗಿಂತ ಒಳ್ಳೆಯ ಪಂಡಿತರಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ಹಾಗಿದ್ದರೆ ಅವರ ಮನೆಯ ಅಡಿಗೆಯವರನ್ನು ಸಹ ಕಲಾವಿದರೆಂದು ಕರೆಯಬೇಕೇ ?

ಶ್ರೀ ರಾಜವರ್ಧನ್.—ಅಡಿಗೆಯವರು ಕಲಾವಿದರ ಪಾತ್ರ ಮಾಡಿದರೆ ತಪ್ಪೇನಿದೆ ?

ಶ್ರೀ ಎಸ್. ಬಂಗಾರಪ್ಪ.—ತಾವು ಮಂತ್ರಿಗಳಾಗಿ ಈ ರೀತಿ ವ್ಯಾಖ್ಯಾನ ಮಾಡುತ್ತಿದ್ದರೆ ನಾಳೆ ಹೊರದೇಶಗಳಿಗೆ ಎಲ್ಲರೂ ಹೋಗುತ್ತಾರೆ. ತಾವು ಹಣ ಕೊಡಿ.

ಶ್ರೀ ತಿಪ್ಪಯ್ಯ.—ನಾಟಕಗಳಲ್ಲಿ ಎಲ್ಲರ ಪಾತ್ರವೂ ಇರುತ್ತದೆ.

ಶ್ರೀ ಎನ್. ಚಿಕ್ಕೇಗೌಡ.—ನಾಟಕಗಳಲ್ಲಿ ಅಡಿಗೆಯವರ ಪಾತ್ರವೂ ಇದೆಯೇ ?

ಶ್ರೀ ಕೆ. ಎಚ್. ರಂಗನಾಥ್.—ಎಲ್ಲರ ಪಾತ್ರವೂ ಬೇಕು ಎನ್ನುವುದಾದರೆ ಜಾಗಟೆ ಹೊಡೆಯುವವರನ್ನು ಶಂಖ ಊದುವವರನ್ನೂ ಸಹ ಕಳಿಸಿಕೊಡಿ.

ಶ್ರೀ ಎಸ್. ಬಂಗಾರಪ್ಪ.—ನಾನು ಇದನ್ನು ಅಲ್ಲಿಗೇ ಬಿಡುತ್ತೇನೆ. ಸಾರ್ವಜನಿಕರ ಕುಂದುಕೊರತೆಗಳನ್ನು ತಿಳಿದುಕೊಳ್ಳುವುದಕ್ಕಾಗಿಯೇ ಈಗ ಒಂದು ಇಲಾಖೆ ಇದೆ. ಇದಕ್ಕೆ ಈಗ ಶ್ರೀ ಲಕ್ಷ್ಮೀಸಾಗರ್ ಅವರು ಇನ್ ಚಾರ್ಜ್ ಮಿನಿಸ್ಟರ್ ಎಂದು ಕಾಣುತ್ತದೆ. ಪ್ರಜಾಪ್ರಭುತ್ವವೆಂದರೆ ಅದು ಶ್ರೀ ರಾಮಕೃಷ್ಣ ಹೆಗಡೆಯವರ ಮನೆಯಿಂದಲೇ ಹುಟ್ಟಿ ಬೆಳೆದು ಬಂದಿದೆ ಎನ್ನುವಂತೆ, ಜನರ ಕಷ್ಟಗಳನ್ನೆಲ್ಲಾ ಪರಿಹರಿಸಲು ಈ ಇಲಾಖೆ ಹುಟ್ಟಿದೆ. ಸಾರ್ವಜನಿಕರು ತಮ್ಮ ಕುಂದುಕೊರತೆಗಳನ್ನು ಹೇಳಿಕೊಳ್ಳಲು ವಿಧಾನಸೌಧಕ್ಕೆ ಬರುವಾಗ ಗಂಡಹೆಂಡತಿಯರ ಜಗಳದ ಬಗ್ಗೆಯೂ ಹೇಳುತ್ತಾರೆಂದು ಶ್ರೀ ಲಕ್ಷ್ಮೀಸಾಗರ್ ಅವರು ಹೇಳಿದ್ದು ಪತ್ರಿಕೆಗಳಲ್ಲಿ ಬಂದಿದೆ. ಮಾನ್ಯ ಮಂತ್ರಿಗಳಿಗೆ ಅಂತಹ ಪರಿಸ್ಥಿತಿ ಏನಾದರೂ ಬಂದಿದ್ದರೆ ಅವರ ಈ ದುಃಖದಲ್ಲಿ ನಾನೂ ಸಹ ಭಾಗಿಯಾಗುತ್ತೇನೆ. ಇವರಿಗೆ ಮಂತ್ರಿ ಕೆಲಸ ಮಾಡುವುದಕ್ಕೆ ಸಾಕಷ್ಟು ಸಮಯ ಇರುವುದಿಲ್ಲ. ಆದರೂ ಸಹ ಸಾರ್ವಜನಿಕರ ಕುಂದುಕೊರತೆಗಳನ್ನು ಇವರು ವಿಚಾರಿಸಬೇಕಾಗಿದೆ. ಈಗ ವಿಭಿನ್ನವಾದಂಥ ಸರ್ಕಾರ ಅಧಿಕಾರಕ್ಕೆ ಬಂದಿದೆ. ಈ ಸರ್ಕಾರಕ್ಕೆ ಕೊಟ್ಟ ಅರ್ಜಿಗಳಿಗೆಲ್ಲಾ ಪರಿಹಾರ ದೊರಕಿಸಿಕೊಡುತ್ತಾರೆಂದು ಜನರು ಮೊದಲು ನಂಬಿದ್ದರು. ಆದರೆ ಆಗಿದ್ದೇನು ? ಇಲ್ಲಿಯವರೆಗೆ ಜನರಿಂದ ಬಂದ ಅರ್ಜಿಗಳೆಷ್ಟು ? ಎಷ್ಟು ಜನರಿಗೆ ಸಹಾಯ ಕೊಟ್ಟಿದ್ದೀರಿ ? ಎಂಬುದನ್ನು ತಾವು ತಿಳಿಸಬೇಕು. ನಿಮಗೆ ಅರ್ಜಿ ಕೊಟ್ಟರೆ ನಿಮಗೆ ಏನೂ ಮಾಡುವುದಕ್ಕಾಗುವುದಿಲ್ಲವೆಂಬ ತೀರ್ಮಾನಕ್ಕೆ ಜನರು ಈಗಾಗಲೇ ಬಂದಿದ್ದಾರೆ. ಈ ಕಾರಣದಿಂದ ಈಗ ಅರ್ಜಿಗಳೇ ಬರುತ್ತಿಲ್ಲವೆಂದು ಹೇಳಬಹುದು. ಒಂದು ಸಲ ಜನರು ನಿಮ್ಮನ್ನು ನಂಬುತ್ತಾರೆ. ಆಮೇಲೆ ಏನಾದರೂ ನಿಮ್ಮ ಬಗ್ಗೆ ಅಪನಂಬಿಕೆ ಬಂದರೆ ಅದನ್ನು ರಿಪೇರಿ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಅಧಿಕಾರ ವಹಿಸಿಕೊಂಡ ಕೂಡಲೇ ಒಂದು ಹೊಸ ವಿಚಾರಧಾರೆಯನ್ನು ಕರ್ನಾಟಕದ ಜನತೆಗೆ ಕೊಟ್ಟರು. ಮುಂದೆ ಈ ವಿಚಾರಧಾರೆಯೇ ನಿಮಗೆ ತಿರುಗುಬಾಣವಾದರೆ ನಾನು ಆಶ್ಚರ್ಯಪಡುವುದಿಲ್ಲ. ಅಂತಹ ಒಂದು ಸಂದರ್ಭ ಬಂದರೆ ಅದನ್ನೆದುರಿಸುವುದಕ್ಕೆ ನೀವು ಸಿದ್ಧರಾಗಿರಬೇಕು.

ಇನ್ನು ಫೈರಿಂಗ್ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ಈಗಾಗಲೇ ವಿವರವಾಗಿ ಹೇಳಿದ್ದಾರೆ. ಕಾನೂನಿನ ದುರುಪಯೋಗವನ್ನು ಇವರು ಯಾವ ರೀತಿ ಮಾಡಿದ್ದಾರೆಂಬುದನ್ನು ಹೇಳಬೇಕಾಗಿದೆ, ಈ ವಿಚಾರದಲ್ಲಿ ನಾನು ಯಾರ ಹೆಸರನ್ನೂ ಹೇಳುವುದಿಲ್ಲ. ಮುಖ್ಯವಾಗಿ ಖಾಸಗಿ ಕೆಲಸಗಳಿಗೆಲ್ಲಾ ನಮ್ಮ ಸರ್ಕಾರದ ಒಂದು ಇಲಾಖೆಯ ಹಣ ಹಾಗೂ ಕಾಲ ವ್ಯಯವಾಗಬಾರದು, ಮತ್ತು ಖಾಸಗಿ ಕೆಲಸಗಳಿಗೆ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳಬಾರದೆಂಬುದು ಒಂದು ನೀತಿ. ಆದರೆ ಮಾನ್ಯ ಮಂತ್ರಿಗಳಾದ ಶ್ರೀ ಜೆ. ಎಚ್. ಪಟೇಲ್ ಅವರ ಮಗನ ಮದುವೆ ಸಮಯದಲ್ಲಿ ಏನು ನಡೆಯಿತೆಂಬುದು ಪತ್ರಿಕೆಗಳಲ್ಲಿ ಬಂದಿದೆ, ಶ್ರೀ ನಿಜಲಿಂಗಪ್ಪನವರ ಬಗ್ಗೆ ನನಗೆ ಗೌರವವಿದೆ, ಅವರು ಯಜಮಾನರು. ಇವರಿಗೆ ಮದುವೆಯ ವಿಚಾರವನ್ನು ತಿಳಿಸಬೇಕೆಂದು ವೈರ್‌ಲೆಸ್ ಮೆಸೇಜ್ ಹೋಗಿದೆ. ಈ ರೀತಿಯಿಂದ ಅಧಿಕಾರ ದುರುಪಯೋಗ ಮಾಡಿಕೊಳ್ಳುವುದು ಸರಿಯಲ್ಲವೆಂದು ಈ ಹಿಂದೆ ಮಾನ್ಯ ದೇವೇಗೌಡರು, ಶ್ರೀ ಲಕ್ಷ್ಮೀಸಾಗರ್ ಅವರು ಶ್ರೀ ಬೊಮ್ಮಾಯಿ ಅವರು ಈ ಕಡೆ ಇದ್ದಾಗ ಹೇಳಿದ್ದಾರೆ, ಆದರೆ ಈಗ ಇವರೇ ಈ ಕೆಲಸ ಮಾಡಿದ್ದಾರೆ. ಪೋಲೀಸ್ ಆಫೀಸರ್ ಒಬ್ಬರನ್ನು ಶ್ರೀ ನಿಜಲಿಂಗಪ್ಪನವರ ಮನೆಗೆ ಕಳುಹಿಸಿಕೊಟ್ಟಿದ್ದಾರೆ. A Police Officer is not supposed to attend this kind of work. Is it not, misuse of power. ಪೋಲೀಸ್ ಅಧಿಕಾರಿಗಳಿಂದ ಇಂತಹ ಕೆಲಸ ಮಾಡಿಸುವುದು. ನಾಳೆ ಅವರು ತಪ್ಪು ಮಾಡಿದರೆಂದು ಸಸ್ಪೆಂಡ್ ಮಾಡುವುದು ಏನಿದೆ, ಇದು ಅಧಿಕಾರದ ದುರುಪಯೋಗವಲ್ಲವೇ ? ಇಂತಹ ತಪ್ಪು ಮಾಡಿರುವಂತಹ ನಿಮಗೆ ಈ ಹಿಂದಿನವರು ತಪ್ಪು ಮಾಡಿದ್ದಾರೆಂದು ಹೇಳುವಂತಹ ನೈತಿಕ ಹಕ್ಕು ಏನಿದೆ ? ಇಂತಹ ತಪ್ಪು ಮಾಡಿರುವ ನಿಮಗೆ ಕರ್ನಾಟಕದ ಜನತೆಗೆ ನೀತಿಭೋದನೆ ಮಾಡುವಂತಹ ಹಕ್ಕು ಇದೆಯೇ ? ಜನತಾ ಪಕ್ಷದ ಸರ್ಕಾರಕ್ಕೆ ಈ ಹಕ್ಕು ಇದೆಯೇ ? ಇದಕ್ಕೆ ತಾವು ಉತ್ತರ ಕೊಡಬೇಕು ? ಪೋಲೀಸ್ ಠಾಣೆಯಲ್ಲಿ ಜನರನ್ನು ಅಸಾಲ್ಟ್ ಮಾಡಿದಂಥ ಅನೇಕ ವಿಚಾರಗಳು ಇಲ್ಲಿ ಚರ್ಚೆಯಾಗಿದೆ. ಆದ್ದರಿಂದ ಈಗ ನಾನು ಹೆಚ್ಚು ಹೇಳಲು ಹೋಗುವುದಿಲ್ಲ. ಪೋಲೀಸ್ ಕಾನ್ಸ್‌ಟೇಬಲ್‌ಗಳು ಏನಾದರು ತಪ್ಪು ಮಾಡಿದರೆ ಅವರಿಗೆ ಶಿಕ್ಷೆ ವಿಧಿಸಬೇಕಾಗುತ್ತದೆ. ಮತ್ತು ವಿಚಾರಣೆ ಮಾಡಬೇಕಾಗುತ್ತದೆ. ಆದರೆ ಇವರುಗಳೂ ಸಹ ನಮ್ಮ ಅಣ್ಣತಮ್ಮಂದಿರಂತೆ ಕೆಲಸ ಮಾಡುತ್ತಿದ್ದಾರೆಂದು ಮರೆಯಬಾರದು. ಶ್ರೀ ದೇವರಾಜ ಅರಸ್ ಅವರ ಕಾಲದಲ್ಲಿ ಇವರಿಗೆ ಟೆರಿಕಾಟ್ ಬಟ್ಟೆಯ ಸಮವಸ್ತ್ರ ಕೊಡಬೇಕೆಂದು ತೀರ್ಮಾನ ಮಾಡಲಾಯಿತು. ಆಗ್ಗೆ ನಾನೂ ಸಹ ಆ ಮಂತ್ರಿಮಂಡಲದಲ್ಲಿದ್ದೆ. ಆ ಬಟ್ಟೆಗಳನ್ನು ಕೊಟ್ಟರೆ ಚೆನ್ನಾಗಿ ಬಾಳಿಕೆ ಬರುತ್ತದೆ ಮತ್ತು ಸ್ವಚ್ಛವಾಗಿರುತ್ತದೆಂದು ಒಂದು ತೀರ್ಮಾನಕ್ಕೆ ಬರಲಾಯಿತು. ಆದರೆ ಈಗ ಯಾವುದೋ ಒಂದು ಕಂಪನಿಯ ವಕ್ರದೃಷ್ಟಿ ಈ ಸರ್ಕಾರದ ಮೇಲೆ ಬಿದ್ದಿರುವಂತೆ ಕಾಣುತ್ತದೆ. ಮತ್ತೆ ಖಾಕಿ ಬಟ್ಟೆಯನ್ನು ಕೊಡಲು ಏರ್ಪಾಡಾಗಿದೆ. ಸಮವಸ್ತ್ರಗಳೂ ಸಿದ್ಧವಾಗಿದೆ ಎಂದು ನಮಗೆ ತಿಳಿದುಬಂದಿದೆ. ಇದು ಸರಿಯಲ್ಲ, ಈಗಿನಂತೆ ಟೆರಿಕಾಟ್ ಸಮವಸ್ತ್ರವನ್ನೇ ಮುಂದುವರೆಸಬೇಕೆಂದು ಹೇಳುತ್ತೇನೆ. ಈಗ ಇವರಿಗೆ ಕೊಟ್ಟಿರುವ ಟೋಪಿಗಳು ಕೂಡ ಎಷ್ಟೋ ಗ್ರಾಮುಗಳಷ್ಟು ತೂಕವಾಗಿವೆ ಎಂದು ಹೇಳುತ್ತಾರೆ. ಇವು ನಾಟಕದಲ್ಲಿ...

ಶ್ರೀ ರಾಮಕೃಷ್ಣ ಹೆಗಡೆ.—ಟೋಪಿಗಳ ಬಗ್ಗೆ ವಿರೋಧ ಪಕ್ಷದ ನಾಯಕರು ಉತ್ತರ ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.—ಈ ಪೋಲೀಸ್ ಕಾನ್ಸ್‌ಟೇಬಲ್‌ಗಳಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ಅವರ ಪರವಾಗಿ ಯಾರೋ ಬಂದು ಶಾಸಕರುಗಳಿಗೆ ತಿಳಿಸಿದ್ದಾರೆ. ಇವರು ಮನೆ ಕಟ್ಟಿಕೊಳ್ಳಲು ಸಾಲ ಪಡೆಯಬೇಕಾದರೆ ಲಂಚ ಕೊಡಬೇಕೆಂದು ಹೇಳುತ್ತಿದ್ದಾರೆ. ಇದನ್ನು ತಕ್ಷಣವೇ ನಿಲ್ಲಿಸಬೇಕು. ಈಗ ಉಪಾಧ್ಯಾಯರುಗಳಿಗೆ ಚೆಕ್ ಮೂಲಕ ಸಂಬಳ ಕೊಡುತ್ತಿರುವಂತೆ ಇವರಿಗೂ ಸಹ ಚೆಕ್ ಮೂಲಕವೇ ಸಂಬಳ ಕೊಡಬೇಕು. ಈಗ ಸಂಬಳ ಕೊಡುವಾಗ ಹತ್ತು ರೂಪಾಯಿಗಳನ್ನು ಹಿಡಿದುಕೊಂಡು ಕೊಡುತ್ತಿದ್ದಾರಂತೆ. ಇದನ್ನು ತಪ್ಪಿಸಲು ಚೆಕ್ ಮೂಲಕ ಸಂಬಳ ಕೊಡಬೇಕೆಂಬ ವಿಚಾರವನ್ನು ಅವರು ಸರ್ಕಾರದ ಮುಂದಿಟ್ಟಿದ್ದಾರೆ. ಇದನ್ನು ಸರ್ಕಾರ ಪರಿಶೀಲಿಸಬೇಕು.

೧-೩೦ ಪಿ.ಎಂ.

ಪೋಲೀಸ್ ಬೆನವಲೆಂಟ್ ಫಂಡ್ ಎಂದು ಇದೆ ಅದು ಸಹ ದುರುಪಯೋಗವಾಗುತ್ತಿದೆ. ಅದು ಸದುಪಯೋಗವಾಗಬೇಕು ಎನ್ನುವ ಅಭಿಪ್ರಾಯವನ್ನು ಎಲ್ಲರೂ ಸ್ಪಷ್ಟವಾಗಿ ತಿಳಿಸಿದ್ದಾರೆ. ಹೀಗೆ ಅನೇಕ ವಿಚಾರಗಳಲ್ಲಿ ಪೊಲೀಸ್‌ನವರಿಗೆ ಸಂಬಂಧಪಟ್ಟ ಹಾಗೆ ಅದರ ಕಡೆಗೆ ಗಮನ ಕೊಡದಿದ್ದರೆ ಈ ವರ್ಗಕ್ಕೆ ಅನ್ಯಾಯ ಮಾಡಿದಂತಾಗುತ್ತದೆ.

ಇನ್ನು ಸ್ಟೈಪೆಂಡರಿ ಗ್ರಾಜುಯೇಟ್ಸ್‌ಗಳ ಬಗ್ಗೆ ಹಿಂದಿನ ಸರ್ಕಾರ ಸಹಾನುಭೂತಿಯಿಂದ ಆ ಮಾತನ್ನು ಹೇಳಿದ್ದಾರೆ. ಅವರು ತೀರ್ಮಾನ ತೆಗೆದುಕೊಳ್ಳುವುದು ತಡವಾಗಿರಬಹುದು ಸ್ಟೈಫಂಡರಿ ಗ್ರಾಜುಯೇಟ್ಸ್‌ಗಳು ಕಷ್ಟಪಟ್ಟು ದುಡಿಯುತ್ತಿದ್ದಾರೆ ಅವರನ್ನು ಖಾಯಂ ಮಾಡಬೇಕೆಂದು ಈ ಒಂದು ಅಭಿಪ್ರಾಯಕ್ಕೆ ಬಂದರು. ಈ ಸರ್ಕಾರ ಚುನಾವಣಾ ಪ್ರಣಾಳಿಕೆಯಲ್ಲಿ ಸ್ಟೈಫಂಡರಿ ಗ್ರಾಜುಯೇಟ್ಸ್‌ಗಳನ್ನು ಖಾಯಂ ಮಾಡುತ್ತೇವೆಂದು ಹೇಳಲಾಗಿದೆ. ತಾವು ಅಧಿಕಾರಕ್ಕೆ ಬಂದಮೇಲೆ ಅವರು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದಾರೆ. ಆಗ ಶೇಕಡ ೫೦ರಷ್ಟು ಸ್ಟೈಫಂಡರಿ ಗ್ರಾಜುಯೇಟ್ಸ್‌ಗಳನ್ನು ರಿಕ್ರೂಟ್‌ಮೆಂಟ್ ಕಮಿಟಿಗಳ ಮುಖಾಂತರ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಆ ರೀತಿ ಮಾಡಿದಾಗ ಉಳಿದ ೫೦ ಪರ್ಸೆಂಟ್ ಹೊರಟುಹೋದರು. ೧೩ ಸಾವಿರ ಸ್ಟೈಫಂಡರಿ ಗ್ರಾಜುಯೇಟ್ಸ್‌ಗಳ ಸಂಬಳವನ್ನು ಜಾಸ್ತಿ ಮಾಡಬೇಕೆಂದು ಅವರು ಕೇಳಿಕೊಂಡಿದ್ದಾರೆ. ಅವರು ಮುಖ್ಯಮಂತ್ರಿಗಳನ್ನು ನೋಡಿರಬಹುದು, ಅವರು ನಮಗೆ ನೀವು ಕೊಡುತ್ತಿರುವ ಸಂಬಳ ಊಟಕ್ಕೆ ಸಾಕಾಗುತ್ತಿಲ್ಲವೆಂದು ಹೇಳಿದ್ದಾರೆ. ಆ ವಿಷಯವನ್ನು ನಾವು ಇಲ್ಲಿ ಚರ್ಚೆ ಮಾಡಿದ್ದೇವೆ. ಈ ವಿಷಯ ಹೈಕೋರ್ಟ್‌ಗೆ ಹೋಗಿದೆ. ಹೈಕೋರ್ಟ್‌ನಲ್ಲಿ ತೀರ್ಮಾನವಾಗಿದೆ ಎನ್ನುವ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ತೀರ್ಮಾನವಾದ ಮೇಲೆ ಸ್ಟೈಪೆಂಡರಿ ಗ್ರಾಜುಯೇಟ್ಸ್‌ಗಳಿಗೆ ಎಲ್ಲಾ ರೀತಿಯ ಸೌಲಭ್ಯ ಮತ್ತು ಸೌಕರ್ಯವನ್ನು ತಾವು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ ಇನ್ನು ಹೇಳಬೇಕಾದ ವಿವರಗಳು ಬೇಕಾದಷ್ಟು ಇವೆ, ಸಮಯದ ಅಭಾವವಿರುವುದರಿಂದ ಹೆಚ್ಚಿಗೆ ಮಾತನಾಡಲಿಕ್ಕೆ ಹೋಗುವುದಿಲ್ಲ ಈ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಜನರ ಪ್ರೀತಿ ವಿಶ್ವಾಸವನ್ನು ಎಷ್ಟು ಪ್ರಮಾಣದಲ್ಲಿ ಗಳಿಸಬೇಕಾಗಿತ್ತೋ ಅಷ್ಟು ಪ್ರಮಾಣದಲ್ಲಿ ಜನರ ಪ್ರೀತಿ ವಿಶ್ವಾಸವನ್ನು ಗಳಿಸುವ ಬದಲು ಕಳೆದುಕೊಂಡಿರುವುದು ಕರ್ನಾಟಕ ಜನತೆಯ ದುರ್ದೈವದ ಸಂಗತಿ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಮುಖ್ಯಮಂತ್ರಿಗಳು ಈಗಲಾದರೂ ಕೂಡ ವಿಚಕ್ಷಣತೆಯಿಂದ ಇದನ್ನು ಗೌಣವೆಂದು ಕಾಣಬಾರದು. ಮಾನ್ಯ ಸದಸ್ಯರುಗಳು ಆ ಕಡೆಯವರು ಮತ್ತು ಈ ಕಡೆಯವರು ಕೊಟ್ಟಿರತಕ್ಕ ಸಲಹೆಗಳನ್ನು ಗಮನಕ್ಕೆ ತೆಗೆದುಕೊಂಡು ಕಾರ್ಯಕ್ರಮಗಳನ್ನು ಹಾಕತಕ್ಕ ಹೃದಯ ಶ್ರೀಮಂತಿಕೆ ಇರಬೇಕು. ಇದಕ್ಕಾಗಿ ಹೃದಯದಲ್ಲಿ ಸ್ವಲ್ಪ ಜಾಗ ಇಟ್ಟರೆ ಮಾತ್ರ ಸಾಧ್ಯ. ಇಲ್ಲದಿದ್ದರೆ ಎಷ್ಟೇ ಪ್ರಯತ್ನ ಮಾಡಿದರೂ ಸಾಧ್ಯವಿಲ್ಲ. ಆ ಒಂದು ತೀರ್ಮಾನಕ್ಕೆ ಬಂದು ಕಾರ್ಯಕ್ರಮಗಳನ್ನು ಹಾಕಿ ಕೊಂಡು ಜಾರಿಗೆ ಕೊಡಿ. ಭ್ರಷ್ಟಾಚಾರವನ್ನು ತೆಗೆದುಹಾಕುತ್ತೇವೆಂದು ಹೇಳಿದ್ದಾರೆ, ಅದನ್ನು ನೀವು ಒಬ್ಬರೇ ಮಾಡುವುದಕ್ಕಾಗುವುದಿಲ್ಲ ಅದನ್ನು ನಾನು ಒಪ್ಪುತ್ತೇನೆ. ಕೇಂದ್ರಕ್ಕೂ ಅದರ ಜವಾಬ್ದಾರಿ ಇದೆ. ಆದರೆ ನೀವು ಏನು ಮಾಡಿದ್ದೀರಿ? ಎಲ್ಲಿ ಹೋಯಿತು ನಿಮ್ಮ ಜವಾಬ್ದಾರಿ? ಮೊದಲು ನಿಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಣೆ ಮಾಡಿ. ಸದಸ್ಯರುಗಳು ಕೊಟ್ಟಿರತಕ್ಕ ಸಲಹೆಗಳನ್ನು ಗಮನದಲ್ಲಿಟ್ಟು ಮಾಡಿ. ನಾನು ಸಹ ಕೆಲವು ಸಲಹೆಗಳನ್ನು ಕೊಟ್ಟಿದ್ದೇನೆ. ಇದರ ಬಗ್ಗೆ ಕೂಡ ತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ ಮಾಡಿ. ಇನ್ನು ಅನೇಕ ವಿಚಾರಗಳನ್ನು ಹೇಳಬೇಕಾಗಿತ್ತು ಇಷ್ಟು ಅಭಿಪ್ರಾಯಗಳನ್ನು ತಮ್ಮ ಮುಂದೆ ಇಟ್ಟು ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಮುಂದೆ ಇಟ್ಟಿರತಕ್ಕ ೧೬ ಬೇಡಿಕೆಗಳನ್ನು ಪ್ರಸ್ತಾಪ ಮಾಡಿ, ನಾಲ್ಕಾರು ಮಾತುಗಳನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ ಪ್ರಸ್ತಾಪ ಮಾಡುವುದಕ್ಕೆ ಮುಂಚೆ ಈ ಬೇಡಿಕೆಗಳು ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟಿರುವುದರಿಂದ ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಅನೇಕ ಹೇಳಿಕೆಗಳನ್ನು ಪತ್ರಿಕೆಗಳಿಗೆ ಕೊಡುತ್ತಾ ಬಂದಿದ್ದಾರೆ. ಮುಖ್ಯಮಂತ್ರಿಗಳು ಕೊಟ್ಟಿರತಕ್ಕ ಎಲ್ಲಾ ಹೇಳಿಕೆಗಳನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವು

---

† ಈ ಚಿಹ್ನೆಯುಳ್ಳ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ದಿಲ್ಲ. ಎರಡು ಹೇಳಿಕೆಗಳನ್ನು ಮಾತ್ರ ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ಒಂದು ಸಲ ಮಾತನಾಡುತ್ತಾ ಹೇಳಿದ್ದಾರೆ.

> "Ours is a people's Government. As long as people support, even a single hair cannot be shaken. The previous Government was in a different plane in the air while the people were earth-bound. The new Government's aim was to go near the People and instil in them a feeling that 'this is our Government',
> Deccan Herald on 14-2-1983.

ಇನ್ನೊಂದು ಸ್ಟೇಟ್‌ಮೆಂಟ್‌ನಲ್ಲಿ ಅವರ ಪಕ್ಷದ ಅಧ್ಯಕ್ಷರಾದ ಶ್ರೀ ಚಂದ್ರಶೇಖರ್‌ರವರು ಬಂದಾಗ ಇನ್ನೊಂದು ಮಾತು ಹೇಳಿದ್ದಾರೆ. ಅದು ಏನೆಂದರೆ.

> "I will also refer Deccan Herald dated on 26-5-1983. He has said, 'that there will no more repetition of what happened in 1977-79"

ಈ ಎರಡೂ ಸ್ಟೇಟ್‌ಮೆಂಟ್ ಏನು ತೋರಿಸುತ್ತವೆ, ಅಂದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಆತ್ಮವಿಶ್ವಾಸ ಬಹಳ ಜಾಸ್ತಿಯಿಂದೆ ಎನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಜನ ಇವತ್ತು ಮತ ನೀಡಿದ್ದಾರೆ. ಜನ ಮತ ನೀಡಿರುವುದರಿಂದ ನಾವು ಜನಗಳಿಗೆ ಕೆಲಸ ಮಾಡುವ ಜವಾಬ್ದಾರಿ ನಮ್ಮ ಮೇಲೆ ಇದೆ, ಜನರ ಹಿತರಕ್ಷಣೆ ಮಾಡಿದರೆ ಯಾರೂ ಅಧಿಕಾರವನ್ನು ಕಿತ್ತುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಬಹಳ ಸಂತೋಷ. ಅದೇ ರೀತಿ ಜನತಾ ಪಕ್ಷದ ಶಾಸಕರಿಗೆ ಒಂದು ಎಚ್ಚರಿಗೆ ಕೊಟ್ಟಿದ್ದಾರೆ. ಜನತಾ ಪಕ್ಷ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಏನು ತಪ್ಪು ಮಾಡಿತ್ತು ಅದನ್ನು ಮಾಡುವುದಿಲ್ಲ, ಅದನ್ನು ಮಾಡಕೂಡದೆಂದು ಜನತಾ ಪಕ್ಷದ ಶಾಸಕರಿಗೆ ಒಂದು ಎಚ್ಚರಿಕೆಯನ್ನು ಕೊಡುವ ರೀತಿಯಲ್ಲಿ ಹೇಳಿದ್ದಾರೆ ಅದು ಕೂಡ ಒಳ್ಳೆಯ ಮಾತು. ಈ ಎರಡೂ ಹೇಳಿಕೆಗಳ ಆಧಾರದ ಮೇಲೆ ಇವತ್ತು ಜನತಾ ಪಕ್ಷದ ಆಳ್ವಿಕೆಯಲ್ಲಿ ಇಂತಹ ಹೇಳಿಕೆಗಳು ಎಷ್ಟು ದೂರ ಹೋಯಿತು ? ಇವರು ಹೇಳುವುದಕ್ಕೂ ಮಾಡಿರುವುದಕ್ಕೂ ತಾರತಮ್ಯವಿದೆ. ಇವರು ಏನು ಮಾಡಿದ್ದಾರೆಂಬುದನ್ನು ಯೋಚನೆ ಮಾಡಬೇಕಾಗಿದೆ. ಏಕೆಂದರೆ ಮುಖ್ಯಮಂತ್ರಿಗಳು ಮಾಡಬೇಕಾದ ಬೇಕಾದಷ್ಟು ಕೆಲಸಗಳು ಇವೆ. ಮುಖ್ಯಮಂತ್ರಿಗಳ ಕೈಯಲ್ಲಿ ಹೋಮ್ ಡಿಪಾರ್ಟ್‌ಮೆಂಟ್, ಡಿಪಿಎಆರ್, ಫೈನಾನ್ಸ್, ಪ್ಲಾನಿಂಗ್ Prisons ಇತರ ಇಲಾಖೆಗಳು ಇವೆ. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದಾರೆ, ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಮುಖ್ಯಮಂತ್ರಿಗಳು ಭಾರಿ ಜವಾಬ್ದಾರಿಯನ್ನು ಹೊತ್ತಿಕೊಂಡಿದ್ದಾರೆ. ಅವರು ಇರತಕ್ಕ ಭಾರವನ್ನು ಸ್ವಲ್ಪಮಟ್ಟಿಗೆ ಸಡಿಲ ಮಾಡಿಕೊಂಡರೆ ಒಳ್ಳೆಯದು ಇಲ್ಲದಿದ್ದರೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ಹಿಂದೆ ತಾವು ಅರ್ಥ ಮಂತ್ರಿಗಳಾಗಿದ್ದಾಗ ನಾನು ಶಾಸಕನಾಗಿದ್ದೆ. ಅರ್ಥ ಇಲಾಖೆಯನ್ನು ಹೊತ್ತಾ ಕೊಂಡವರು ಬಹಳ ಅಭ್ಯಾಸ ಮಾಡಬೇಕಾಗುತ್ತದೆ. ಅಭ್ಯಾಸಮಾಡಿ ರಾಜ್ಯವನ್ನು ಆರ್ಥಿಕವಾಗಿ ಹೇಗೆ ಮುನ್ನಡೆಸಬೇಕು ಎಂಬುದರ ಕಡೆಗೆ ಗಮನಹರಿಸಬೇಕಾಗುತ್ತದೆ, ಹೀಗೆ ಹಲವಾರು ವಿಷಯಗಳು ಇವೆ, ಸಮಸ್ಯೆಗಳು ಇವೆ. ನಮ್ಮ ರಾಜ್ಯ ಆರ್ಥಿಕವಾಗಿ ಮುಂದಕ್ಕೆ ಒರಬೇಕಾದರೆ ಅದಷ್ಟು ಮಟ್ಟಿಗೆ ಕಡಿಮೆ ಜವಾಬ್ದಾರಿ ಇರತಕ್ಕವರು ಅಭ್ಯಾಸಮಾಡಿ ಕೆಲಸಮಾಡಿದರೆ ಅದು ಸಾಧ್ಯವಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ ಕಡಿಮೆ ಜವಾಬ್ದಾರಿ ಇದ್ದರೆ ಮುಖ್ಯಮಂತ್ರಿಗಳು ಕೆಲಸ ಮಾಡುವುದಕ್ಕೆ ಹೆಚ್ಚಿಗೆ ಗಮನಹರಿಸುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ತಾವು ಟೀಕೆಯೆಂದು ತೆಗೆದುಕೊಳ್ಳಬಹುದು, ಆ ರೀತಿ ಮಾಡುವದಿಲ್ಲವೆಂದು ನನ್ನ ಅಭಿಪ್ರಾಯ ರಾಜ್ಯದ ಹೊರಭಾಗಗಳಲ್ಲಿ ಎಷ್ಟು ದಿವಸ ಪ್ರವಾಸ ಮಾಡಿದ್ದಾರೆ, ಬೇರೆ ರಾಜ್ಯಗಳಲ್ಲಿ ಎಷ್ಟು ಕಾಲ ವ್ಯಯ ಮಾಡಿದ್ದಾರೆ, ಕರ್ನಾಟಕ ರಾಜ್ಯದಲ್ಲಿ ಎಷ್ಟು ಕಾಲ ವ್ಯಯ ಮಾಡಿದ್ದಾರೆ ದೆಹಲಿಯಲ್ಲಿ ಎಷ್ಟು ದಿವಸ ಇದ್ದಾರೆ ಅದನ್ನೆಲ್ಲಾ ನಾನು ಹೇಳುವುದಕ್ಕೆ ಹೋಗುವುದಿಲ್ಲ, ಮಾನ್ಯ ಮೊಯಿಲಿಯವರು ಹೇಳಿದ್ದಾರೆ. ಇದಕ್ಕಿಂತ ಮುಖ್ಯವಾಗಿ ಬೇರೆ ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಕೆಲಸವನ್ನು ಮಾಡಿದ್ದೇವೆಂದು ಹೇಳುವುದಕ್ಕೆ ಬದಲಾಗಿ, ಸರ್ಕಾರ ಯಾವರೀತಿ ಬಂತು ಎನ್ನುವುದನ್ನು ತಾವು ಯೋಚನೆ ಮಾಡಬೇಕು. ಮಹಿಳಾ ಸದಸ್ಯರಾದ ಶ್ರೀಮತಿ

ನಾಗರತ್ನಮ್ಮನವರು ಮಾತನಾಡುತ್ತಾ ಜನತೆ ಇವತ್ತಿನ ದಿವಸ ಬದಲಿ ಸರ್ಕಾರ ಬೇಕೆಂದು ಯೋಚನೆ ಮಾಡಿದ್ದರಿಂದ ಅವರು ಬಂದರು ಎಂದು ಹೇಳಿದರು. ಇದು ನಿಜ, ಒಳ್ಳೆಯ ಮಾತು. ಅಷ್ಟು ಹೇಳಿದರೆ ಸಾಲದು, ತಾವು ಬಂದದ್ದು ಬದಲಿ ಮಾತ್ರವಲ್ಲ, ಹಿಂದಿನ ಸರ್ಕಾರ ಜನಗಳಿಗೆ ಯಾವರೀತಿ ಮಾಡಿತ್ತು. ರೈತರು ಕಾರ್ಮಿಕರು ಸರ್ಕಾರದ ಗುಂಡಿಗೆ ಬಲಿಯಾದರು. ಅನೇಕ ಜನಗಳನ್ನು ಗುಂಡಿಟ್ಟು ಕೊಂದರು. ೧೩೦ ಜನರಿಗೆ ಸರ್ಕಾರ ಗುಂಡು ಹಾಕಿದ್ದರಿಂದ ಸತ್ತರು. ರೈತರನ್ನು ಅವತ್ತಿನ ದಿವಸ ಗುಂಡಿಕ್ಕಿ ಕೊಂದುಹಾಕಿದ್ದರಿಂದ ಕಾರ್ಮಿಕರನ್ನು ವಧೆ ಮಾಡಿದ್ದರಿಂದ ಜನ ಬೇಸತ್ತು ಬೆಂಡಾಗಿ ಬಳಲಿ ಅವತ್ತಿನದಿವಸ ಬೇರೆಯವರಿಗೆ ಓಟು ಹಾಕಿದ್ದಾರೆ ಎನ್ನುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅವತ್ತಿನ ದಿವಸ ಸರ್ಕಾರದ ವಿರುದ್ಧ ರೈತರು ಕಾರ್ಮಿಕರು ಹೋರಾಟ ಮಾಡಿದ್ದಾರೆ. ಹಿಂದೆ ನಡೆದಂಥ ನವಲಗುಂದ ಮತ್ತು ನರಗುಂದದ ಹೋರಾಟದ ಜಾಥಾದಲ್ಲಿ ಮಾನ್ಯಮುಖ್ಯಮಂತ್ರಿಗಳು ಭಾಗ ವಹಿಸಿರಲಿಲ್ಲ, ಮಾನ್ಯ ದೇವೇಗೌಡರು ಭಾಗವಹಿಸಿರಲಿಲ್ಲ ಮಾನ್ಯ ಬೊಮ್ಮಾಯಿಯವರು ಭಾಗವಹಿಸಿರಲಿಲ್ಲ ಮಾನ್ಯ ಚಂದ್ರಶೇಖರ್‌ರವರು ಭಾಗವಹಿಸಿರಲಿಲ್ಲ, ತಾವು ಅಧ್ಯಕ್ಷರು ನವಲಗುಂದ ಮತ್ತು ನರಗುಂದದ ಜಾಥಾದಲ್ಲಿ ಭಾಗವಹಿಸಿದ್ದೀರಿ. ಮಾನ್ಯ ದೇವರಾಜ ಅರಸರವರು ಭಾಗವಹಿಸಿದ್ದರು. ಭಾರಿ ದೊಡ್ಡ ಪ್ರಮಾಣದಲ್ಲಿ ರೈತರು ಹೋರಾಟಮಾಡಿ ಚಳುವಳಿ ನಡೆಸಿ ನರಗುಂದದಿಂದ ಪಂಜನ್ನು ತೆಗೆದುಕೊಂಡು ಬಂದಾಗ ಸಾಮಾನ್ಯ ಜನ, ಕಾರ್ಮಿಕರು ಅವತ್ತಿನ ದಿವಸ ರೈತರಿಗೆ ಕೊಟ್ಟಂತಹ ಬೆಂಬಲ ಅಮೋಘ ವಾದುದು ಹುಬ್ಬಳ್ಳಿ, ಧಾರವಾಡ, ತುಮಕೂರು, ಬೆಂಗಳೂರು ಇಲ್ಲಿನ ಜನಗಳು ಬೆಂಬಲ ಕೊಟ್ಟಿರು ವುದು ಬಹಳ ಅಮೋಘವಾದುದಾಗಿತ್ತು.

ಸುಮಾರು ೮೦ ದಿವಸಗಳ ಕಾಲ ಕಾರ್ಮಿಕರು ಮತ್ತು ಕೃಷಿ ಕಾರ್ಮಿಕರು ರಾಜ್ಯದಲ್ಲಿ ಸತ್ಯಾಗ್ರಹ ವನ್ನು ಮಾಡಿದರು. ಆದರೆ ಕೇಂದ್ರ ಸರ್ಕಾರದ ಒಂದು ಹಟಮಾರಿತನದಿಂದ ರಾಜ್ಯ ಸರ್ಕಾರ ಯಾವುದೇ ಒಂದು ರೀತಿಯ ನಿಲುವನ್ನು ಕೂಡ ತೆಗೆದುಕೊಳ್ಳಲಿಲ್ಲ. ಆ ಒಂದು ಸತ್ಯಾಗ್ರಹದ ಹಿನ್ನೆಲೆಯಲ್ಲಿ ಹೊಸ ಸರ್ಕಾರ ರಾಜ್ಯದಲ್ಲಿ ಬರುವುದಕ್ಕೆ ಸಾಧ್ಯವಾಯಿತು. ಮತ್ತು ಅದೇ ರೀತಿಯಲ್ಲಿ ರೈತರು ಸಹ ಚಳುವಳಿಯನ್ನು ಮಾಡಿ ರಾಜ್ಯದ ನಾನಾ ಕಡೆಗಳಿಂದ ಜಾಥಾ ಬಂದರು. ಆಗ ದಿವಂಗತ ಮಾಜಿ ಮುಖ್ಯ ಮಂತ್ರಿಗಳಾದಂಥ ಶ್ರೀಮಾನ್ ದೇವರಾಜ ಅರಸ್‌ರವರು ಮತ್ತು ನಮ್ಮ ಇಂದಿನ ಅಧ್ಯಕ್ಷರು ಕೂಡ ಆ ಜಾಥಾದಲ್ಲಿ ಭಾಗವಹಿಸಿದ್ದರು, ಆಗ ಜನತಾ ಪಕ್ಷ ಮಾತ್ರ ಭಾಗವಹಿಸಿರಲಿಲ್ಲವೆಂದು ನಾನು ಹೇಳುತ್ತೇನೆ. ಜನತಾ ಪಕ್ಷ ಬಿಟ್ಟು ಕ್ರಾಂತಿರಂಗ, ಸಿ.ಪಿ.ಐ. ಮತ್ತು ಸಿ.ಪಿ.ಎಂ. ಮೂರು ರಾಜಕೀಯ ಪಕ್ಷಗಳು ಸೇರಿ ಆ ದಿವಸ ಜಾಥಾವನ್ನು ಯಶಸ್ವಿ ಮಾಡಿದವು. ಆ ಒಂದು ಹಿನ್ನೆಲೆಯಲ್ಲಿ ಇವತ್ತು ಜನತಾ ಸರ್ಕಾರ ಅಧಿಕಾರಕ್ಕೆ ಬಂತು. ಮತ್ತು ಜನತಾ ಪಕ್ಷ ತಮ್ಮ ಮಿತ್ರ ಪಕ್ಷಗಳೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡು ಇವತ್ತು ಸರ್ಕಾರವನ್ನು ರಚಿಸಿದೆ ಎಂದು ನಾನು ಹೇಳುತ್ತೇನೆ. ಇವತ್ತಿನ ದಿವಸ ರಾಜ್ಯದ ಜನತೆಯಲ್ಲಿ ವಿಶ್ವಾಸವನ್ನು ಗಳಿಸಿ ಕೊಂಡಿರತಕ್ಕಂಥ ಪಕ್ಷ ಈ ನಾಲ್ಕು ಪಕ್ಷಗಳು. ಮತ್ತು ಪ್ರಜಾಪ್ರಭುತ್ವದ ತತ್ವದಲ್ಲಿ ನಂಬಿಕೆ ಇಟ್ಟುಕೊಂಡಿರತಕ್ಕಂಥ ಪಕ್ಷಗಳು ಈ ನಾಲ್ಕು ಪಕ್ಷಗಳು ಎಂದು ಜನತೆಗೆ ಸಂಪೂರ್ಣವಾಗಿ ಗೊತ್ತಾಗಿದೆ. ಈ ನಾಲ್ಕು ಪಕ್ಷಗಳು ಚುನಾವಣೆಯ ಸಂದರ್ಭದಲ್ಲಿ ಒಂದು ಒಡಂಬಡಿಕೆಯನ್ನು ಮಾಡಿಕೊಂಡಿದ್ದರಿಂದ ಮಾತ್ರ ಚುನಾವಣೆಯನ್ನು ಎದುರಿಸಲು ಸಾಧ್ಯ ವಾಯಿತು. ಇಲ್ಲದಿದ್ದರೆ ಕಾಂಗ್ರೆಸ್ ಪಕ್ಷವನ್ನು ಎದುರಿಸಲು ಸಾಧ್ಯವಾಗುತ್ತಿರಲಿಲ್ಲ. ಇವತ್ತು ಈ ನಾಲ್ಕು ಪಕ್ಷಗಳು ಒಂದಾಗಿ ಪಟ್ಟಭದ್ರ ಹಿತಾಸಕ್ತಿಗಳನ್ನು ಬಗ್ಗುಬಡಿಯಲು ಸಾಧ್ಯವಾಯಿತು. ಆದ್ದರಿಂದ ನಾನು ಹೇಳುವುದೇನೆಂದರೆ ಇವತ್ತು ರಾಜ್ಯದಲ್ಲಿ ಯಾವ ರೀತಿ ಹೊಂದಾಣಿಕೆಯನ್ನು ಮಾಡಿ ಕೊಂಡು ಚುನಾವಣೆಯನ್ನು ಎದುರಿಸಿದೆವೋ ಅದೇ ರೀತಿಯಲ್ಲಿ ಕೇಂದ್ರದಲ್ಲಿಯೂ ಕೂಡ ಹೊಂದಾಣಿಕೆ ಮಾಡಿಕೊಂಡರೆ ಒಳ್ಳೆಯದು. ಆದರೆ ರಾಜ್ಯದಲ್ಲಿ ಇವತ್ತು ಸರ್ಕಾರ ರಚನೆ ಮಾಡಬೇಕಾದರೆ ನಮ್ಮ ಒಂದು ಸಹಕಾರ ಕೂಡ ಇದೆ ಎಂದು ನಾನು ಹೇಳುತ್ತೇನೆ. ಆದರೆ ಇವತ್ತು ಜನತಾ ಸರ್ಕಾರದ ಮೇಲೆ ಜನತಾಭಿಮಾನ ಜಾಸ್ತಿಯಾಗಿದೆ. ಜನರು ದೊಡ್ಡ ಪ್ರಮಾಣದಲ್ಲಿ ನಿರೀಕ್ಷೆಯನ್ನು ಇಟ್ಟು ಕೊಂಡಿದ್ದಾರೆ. ಆ ನಿರೀಕ್ಷೆಯನ್ನು ತಾವು ಸ್ವಲ್ಪ ಮಟ್ಟಿಗಾದರೂ ಪ್ರಯೋಜನವಾಗುವಂತಹ ಕೆಲಸ ಕಾರ್ಯಗಳನ್ನು ಮಾಡಬೇಕೆಂದು ನಾನು ಸೂಚನೆ ಕೊಡುತ್ತೇನೆ. ಮತ್ತು ಸಾಮಾನ್ಯ ಜನರ ಸಮಸ್ಯೆ ಗಳನ್ನು ಸರ್ಕಾರ ತಿಳಿದುಕೊಂಡು ಪರಿಹಾರ ಮಾಡುವುದಕ್ಕೆ ಆದಷ್ಟು ಪ್ರಯತ್ನ ಪಡಬೇಕಾಗುತ್ತದೆ. ಸಂಪೂರ್ಣವಾಗಿ ಒಂದೇ ಸಾರಿ ಪರಿಹಾರ ಮಾಡಬೇಕೆಂದು ನಾನು ಹೇಳುತ್ತಿಲ್ಲ. ಆದರೆ ಹಂತಹಂತವಾಗಿ

ಸಮಸ್ಯೆಗಳನ್ನು ಬಗೆಹರಿಸಬೇಕಾಗುತ್ತದೆ. ನೀವು ಅಧಿಕಾರಕ್ಕೆ ಬಂದು ಸುಮಾರು ಎಂಟು ತಿಂಗಳಾಗುತ್ತಾ ಬಂತು. ಆದರೆ ಯಾವ ಸಮಸ್ಯೆಯನ್ನು ಸಹ ಪರಿಹಾರ ಮಾಡಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಇವತ್ತು ಮುಖ್ಯವಾಗಿ ಕಾರ್ಮಿಕರ ಸಮಸ್ಯೆ ಇದೆ. ರೈತರ ಸಮಸ್ಯೆಗಳು ಇವೆ. ಹರಿಜನ ಮತ್ತು ಗಿರಿಜನರ ಸಮಸ್ಯೆಗಳು ಇವೆ. ಹಿಂದುಳಿದಿರತಕ್ಕಂಥವರ ಸಮಸ್ಯೆಗಳು ಇವೆ. ಈ ಎಲ್ಲಾ ವರ್ಗಗಳ ಸಮಸ್ಯೆಗಳನ್ನು ಕೂಡ ಬಗೆಹರಿಸಲು ಸರ್ಕಾರದವರು ಕಾಳಜಿ ವಹಿಸಬೇಕಾಗುತ್ತದೆ. ಆದ್ದರಿಂದ ಜನತೆ ಜನತಾ ಸರ್ಕಾರದ ಮೇಲೆ ಇಟ್ಟಿರತಕ್ಕಂಥ ದೊಡ್ಡದಾದ ನೀರಿಕ್ಷೆಯನ್ನು ನಾವು ತಪ್ಪು ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ವಿರೋಧ ಪಕ್ಷದ ಸ್ನೇಹಿತರು ತಮ್ಮ ಸರ್ಕಾರವಿದ್ದಾಗ ಈ ವಿಷಯವನ್ನು ಏತಕ್ಕೆ ಯೋಚನೆ ಮಾಡಿರಲಿಲ್ಲವೆಂದು ನಾನು ಕೇಳುತ್ತೇನೆ. ಆದರೆ ಅವರು ಮಾಡಿದಂಥ ಕೆಲಸವನ್ನು ತಾವು ಮಾಡುವುದಕ್ಕೆ ಹೋಗಬಾರದೆಂದು ನಾನು ಹೇಳುತ್ತೇನೆ. ಆದರೆ ಜನತೆಯ ಆಸೆಯನ್ನು ಪೂರೈಸಲು ಪ್ರಯತ್ನ ಮಾಡಬೇಕೆಂದು ನಾನಾ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ತಾವು ಇದುವರೆಗೂ ಪ್ರಯತ್ನ ಮಾಡಿಲ್ಲವೆಂದು ನಾನು ಹೇಳುವುದಿಲ್ಲ. ಈ ಸರ್ಕಾರ ಕೆಲವಾರು ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಿದೆ. ಆದರೆ ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕಂಥ ವರದಿಯನ್ನು ನೋಡಿದರೆ ಆ ಬಗ್ಗೆ ನಾನು ಹೆಚ್ಚು ಮಾತನಾಡಬೇಕೆಂದು ಇದ್ದೇನೆ. ಆದರೆ ವೇಳೆಯ ಅಭಾವದಿಂದಾಗಿ ಕೆಲವು ಮುಖ್ಯವಾದಂಥ ವಿಷಯವನ್ನು ಮಾತ್ರ ಹೇಳುತ್ತೇನೆ. ಫೈನಾನ್ಸ್ ರಿಪೋರ್ಟ್ ೧೯೮೨–೮೩ನೇ ಸಾಲಿನಲ್ಲಿ ಒಟ್ಟಾರೆ ನೋಡಿದರೆ ನಮಗೆ ಇದರಿಂದ ಏನು ಗೊತ್ತಾಗುತ್ತದೆ ಎಂದರೆ ರೆವಿನ್ಯೂ ರಿಸೀಟ್ ಜಾಸ್ತಿಯಾಗಿರುವಂತೆ ಕಂಡು ಬರುತ್ತಿದೆ. ಆದರೆ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಖರ್ಚು ಮಾಡಿರತಕ್ಕಂಥ ಹಣ ಮಾತ್ರ ಬಹಳ ಕಡಿಮೆ. ಅದೇ ರೀತಿಯಲ್ಲಿ ಪುಟ ಎರಡಲ್ಲಿ ಸೇಲ್ಸ್ ಟ್ಯಾಕ್ಸ್ ಬಗ್ಗೆ ಹೇಳಿದ್ದಾರೆ. ಅದನ್ನು ನಾವು ಸ್ವಲ್ಪ ವಿಮರ್ಶೆ ಮಾಡಿ ನೋಡಿದರೆ ೧೯೭೭–೭೮ ರಲ್ಲಿ ೧೨೭.೧೨. ಕೋಟಿ ರೂಪಾಯಿಗಳು, ಮತ್ತೆ ೧೯೭೮–೭೯ ರಲ್ಲಿ ೧೯೮.೨೬ ಕೋಟಿ ರೂಪಾಯಿಗಳು ಮತ್ತೆ ೧೯೭೯–೮೦ ರಲ್ಲಿ ೨೩೬ ಕೋಟಿ ರೂಪಾಯಿಗಳು, ಮತ್ತೆ ೧೯೮೦–೮೧ನೇ ಸಾಲಿನಲ್ಲಿ ೨೭೫ ಕೋಟಿ ರೂಪಾಯಿಗಳು. ಮತ್ತೆ ೧೯೮೧–೮೨ ರಲ್ಲಿ ೩೬೮.೫೧ ಕೋಟಿ ರೂಪಾಯಿಗಳು. ಆದರೆ ಯಾವುದೇ ಪ್ರಮಾಣದಲ್ಲಿ ನಾವು ನೋಡಿದರೂ ಕೂಡ ವರಮಾನ ಜಾಸ್ತಿಯಾಗಿಲ್ಲ. ಕಡಿಮೆಯಾಗುತ್ತಲೇ ಬಂದಿದೆ. ೧೯೭೭–೭೮ ರಲ್ಲಿ ೧೨.೬ ಪರ್ಸೆಂಟ್ ಜಾಸ್ತಿಯಾಗುತ್ತದೆ. ಮತ್ತೆ ೧೬.೫೮ ಜಾಸ್ತಿಯಾಗಿದೆ. ಅದೇ ರೀತಿಯಲ್ಲಿ ಮತ್ತೆ ೧೩.೬೧ ಕಡಿಮೆಯಾಗಿದೆ. ಮತ್ತೆ ೨೫.೩೬ಕ್ಕೆ ಹೆಚ್ಚಿದೆ. ಆದರೆ ಇದರಲ್ಲಿ ಒಂದು ವರ್ಷ ಜಾಸ್ತಿಯಾಗಿದೆ. ಮತ್ತೆ ಒಂದು ವರ್ಷ ಕಡಿಮೆಯಾಗಿದೆ. ಈ ರೀತಿಯ ಪರಿಣಿತಗಳು ಆಗಲು ಕಾರಣವೇನು? ಪ್ರತಿ ವರ್ಷ ಸೇಲ್ಸ್ ಟ್ಯಾಕ್ಸ್ ಅಸೆಸ್‌ಮೆಂಟ್ ಮಾಡಿಲ್ಲ. ಮಾನ್ಯ ಮಂತ್ರಿಗಳು ಎಲ್ಲಾ ಸೇರಿಸಿ ಅಸೆಸ್ ಮಾಡಿ ನಮಗೆ ವರದಿಯನ್ನು ಕೊಟ್ಟಿದ್ದಾರೆ. ಆದರೆ ಹೊಸ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸೇಲ್ಸ್ ಟ್ಯಾಕ್ಸ್ ಜಾಸ್ತಿ ಕಲೆಕ್ಟ್ ಮಾಡಿದ್ದೀರಾ ಅಥವಾ ಕಡಿಮೆ ಮಾಡಿದ್ದೀರಾ ಎಂಬುದನ್ನು ತಾವು ವಿಮರ್ಶೆ ಮಾಡಿ ವಿವರಣೆಯನ್ನು ಕೊಡಬೇಕಾಗಿತ್ತು. ಆದರೆ ಆ ಬಗ್ಗೆ ತಾವು ಏನೂ ಕೊಟ್ಟಿಲ್ಲ. ಇದರಿಂದ ಏನಾಗುತ್ತದೆ ಎಂದರೆ ತಾವು ಯಾವ ಕೆಲಸವನ್ನು ಮಾಡಿಲ್ಲವೆಂದು ನಮಗೆ ಅರ್ಥವಾಗುತ್ತದೆ. ಇನ್ನು ನಮ್ಮ ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಕೆಲವಾರು ಮಾತುಗಳನ್ನು ಹೇಳಬೇಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳೇ ಇದಕ್ಕೆ ಜವಾಬ್ದಾರರು. ಆದರೆ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಬಂಗಾರಪ್ಪನವರು ಮಾತನಾಡುತ್ತಾ ಹೇಳಿದರು, ಮತ್ತೇ ಶ್ರೀಮಾನ್ ವೀರಪ್ಪಮೊಯ್ಲಿಯವರು ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಮತ್ತು ಸರ್ಕಾರವನ್ನು ಬಹಳ ಕಟುವಾಗಿಯೂ ಟೀಕಿಸಿದ್ದಾರೆ. ಮತ್ತೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಈ ಸರ್ಕಾರದಲ್ಲಿ ಮೂರು ಜನ ಉತ್ಸವ ಮೂರ್ತಿಗಳು ಇದ್ದ ಹಾಗೆ ಇದ್ದಾರೆ ಎಂದು ಹೇಳಿದರು ಅವರು ಬಹಳ ಶಕ್ತಿಯುತವಾದಂಥ ಮಂತ್ರಿಗಳು ಎಂದು. ಆ ಉತ್ಸವ ಮೂರ್ತಿಗಳು ಯಾರ್ಯಾರೆಂದರೆ ಮಾನ್ಯ ಮುಖ್ಯ ಮಂತ್ರಿಗಳು ಶ್ರೀಮಾನ್ ದೇವೇಗೌಡರು ಹಾಗೂ ಶ್ರೀಮಾನ್ ಬೊಮ್ಮಾಯಿಯವರು. ಈ ಮೂರೇ ಜನರು ಸರ್ಕಾರವನ್ನು ನಡೆಸುತ್ತಿದ್ದಾರೆಂದು ಹೇಳಿದರು. ಆದರೆ ಆ ಬಗ್ಗೆ ಮಾನ್ಯ ಮೊಯ್ಲಿಯವರು ಯಾವ ಕಲ್ಪನೆಯನ್ನು ಇಟ್ಟುಕೊಂಡು ಮಾತನಾಡಿದರೂ ನನಗಂತೂ ಗೊತ್ತಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.—ಮೂರು ಜನ ಉತ್ಸವ ಮೂರ್ತಿಗಳು ಸರ್ಕಾರ ನಡೆಸುತ್ತಿದ್ದಾರೆ. ಆದರೆ ಒಬ್ಬೊಬ್ಬರ ಕುದುರೆ ಒಂದೊಂದು ಕಡೆ ಹೋದರೆ ಏನು ಮಾಡುವುದೆಂದು ನನಗೆ ಭಯ.

ಶ್ರೀ ಹೆಚ್. ಡಿ. ದೇವೇಗೌಡ.—ತಾವು ವಿಷಯದ ವಾಸ್ತವಾಂಶಕ್ಕೆ ಬಂದರೆ ಒಳ್ಳೆಯದು. ತಾವು ಇಟ್ಟುಕೊಂಡಿರತಕ್ಕಂಥದ್ದು ಬರೀ ಭ್ರಮೆ. ಮಾನ್ಯ ವಿರೋಧ ಪಕ್ಷದ ನಾಯಕರು ಇನ್ನೂ ಕನಸು ಕಾಣುತ್ತಿದ್ದಾರೆ. ಆದ್ದರಿಂದ ತಾವು ಆ ಬಗ್ಗೆ ಯೋಚನೆ ಮಾಡುವುದು ಅನಗತ್ಯ.

ಉಪಾಧ್ಯಕ್ಷರು.—ಮಾನ್ಯ ಕೃಷ್ಣನ್ ರವರು ಬಹಳ ಬುದ್ಧಿವಂತರು.

ಶ್ರೀ ಎಂ. ಎಸ್. ಕೃಷ್ಣನ್.—ನಿಜಾಂಶವೇನೆಂದರೆ, ಹೇಳಿದಂಗೂ ಇರಬೇಕು, ಹೇಳದ ಹಾಗೂ ಇರಬೇಕು. ಜನಗಳಲ್ಲಿ ಬಂದ ಅಭಿಪ್ರಾಯವೇನೆಂದರೇ ಈ ಸರ್ಕಾರ ಮೂರು ದಿಕ್ಕುಗಳಲ್ಲಿ ಹೊರಟು ಹೋಗುತ್ತದೆಯೆಂದು. ಎರಡನೆಯದಾಗಿ, ನಿಮ್ಮ ಪಕ್ಷದಿಂದ ಜನ ಆ ಕಡೆಗೆ ಹೋಗುತ್ತಿದ್ದಾರೆ. ಆದ್ದರಿಂದ ಅವರು ಮಾಡಿರುವುದು ತಪ್ಪು ಎಂದು ಹೇಳುತ್ತೇನೆ. ಆದರೆ ನಿಮ್ಮ ಪಕ್ಷದಿಂದ ಏಕೆ ಆ ಕಡೆಗೆ ಹೋಗುತ್ತಾರೆ ಇವೊತ್ತಿನ ದಿವಸ ನಿಮ್ಮ ಪಾರ್ಟಿಯಿಂದ ಯಾರಾದರೂ ಹೋಗುತ್ತಾರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಕೃಷ್ಣನ್‌ರವರು, ನಮ್ಮ ಸರ್ಕಾರ ಬಂದ ಒಂದು ವಾರದಲ್ಲೇ ಈ ಸರ್ಕಾರ ಒಂದು ತಿಂಗಳಲ್ಲಿಯೇ ಹೊರಟು ಹೋಗುತ್ತದೆಂದು ಹೇಳುವುದಕ್ಕೆ ಅವರು ಶುರು ಮಾಡಿದರು ಈಗಲೂ ಹೇಳಿಕೊಂಡು ಬರುತ್ತಿದ್ದಾರೆ ಅದನ್ನು ಇನ್ನೂ ಸ್ವಲ್ಪ ಕಾಲ ಕಾದು ನೋಡೋಣ.

ಶ್ರೀ ಕೆ. ಹೆಚ್. ರಂಗನಾಥ್.—ಸ್ವಾಮಿ ಒಂದು ವಿಚಾರವನ್ನು ಹೇಳುತ್ತೇನೆ. ಇವೊತ್ತಿನ ದಿನ ತಾನೇ ವರ್ತಮಾನ ಬಂದಿದೆ ಅವರ ಪಕ್ಷದ ರಾಜ್ಯ ಸಭೆಯ ಮುಖಂಡರಾದ ಶ್ರೀ ಯೋಗೇಂದ್ರಶರ್ಮಾರವರು ಇಂದಿರಾಗಾಂಧಿಯವರ ಫಾರಿನ್ ಫಾಲಿಸಿಗೆ ಒ..ಗೆ ಕೊಟ್ಟಿದ್ದಾರೆಂಬ ಕಾರಣಕ್ಕಾಗಿ ಅವರನ್ನು ಪಕ್ಷದಿಂದ ತೆಗೆದುಹಾಕಿದ್ದಾರೆ. ಅದೇ ರೀತಿ ಮೋಹನ ಕುಮಾರ ಮಂಗಳಂ ಅವರೂ ಬದಲಾಣೆಯಾಗಲಿಲ್ಲವೇ?

ಶ್ರೀ ಎಂ. ಎಸ್. ಕೃಷ್ಣನ್.—ನಾನು ಹೇಳುವುದೇನೆಂದರೇ ನಮ್ಮ ಪಕ್ಷಕ್ಕೂ **ಅವರ** ಪಕ್ಷಕ್ಕೂ ಬಹಳ ವ್ಯತ್ಯಾಸವಿದೆ.

ಶ್ರೀ ಕೆ. ಹೆಚ್. ರಂಗನಾಥ್.—ನಿನ್ನೆ ರಾತ್ರಿ ಟಿವಿಯಲ್ಲಿ ವರ್ತಮಾನ ಬಂದಿದೆ ಯೋಗೇಂದ್ರ ಶರ್ಮಾರವರನ್ನು ನ್ಯಾಷನಲ್ ಕೌನ್ಸಿಲ್‌ನಿಂದ ತೆಗೆದುಹಾಕಿದ್ದಾರೆಂದು. ಇದಕ್ಕೆ ಕಾರಣ ಸಹ ಕೊಟ್ಟಿದ್ದಾರೆ. ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, ರಾಜೇಶ್ವರರಾವ್ ಅವರ ಥಿಯರಿಗೂ ಎನ್. ಕೆ ಕೃಷ್ಣನ್ ರವರ ಥಿಯರಿಗೂ ಬಹಳ ವ್ಯತ್ಯಾಸವಿದೆ. ಆದ್ದರಿಂದ ಇಲ್ಲಿಂದ ಹೋಗಿರುವವರು ಸಹ ನನ್ನ ಸ್ನೇಹಿತರಾಗಿರುವ ಶಾಂತಮೂರ್ತಿಯವರೆ. ಆದರೆ ಇವರು ಯೋಗೇಂದ್ರ ಶರ್ಮಾರವರನು ಕಡ್ಡಾಯವಾಗಿ ಕೂತುಕೊಳಿಸಬಹುದಿತ್ತಲ್ಲ. ಕಮ್ಯುನಿಸ್ಟ್ ಪಕ್ಷದ ಡಾಂಗೆಯವರನ್ನು ನೀವು ಉಳಿಸಿಕೊಳ್ಳಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಮ್ಮ ಪಕ್ಷದ ನೀತಿಯೇನೆಂದರೆ ಯಾರು ರಾಜಕೀಯ ನೀತಿಗೆ ವಿರುದ್ಧವಾಗಿ ವರ್ತಿಸುತ್ತಾರೋ ಅಂಥವರಿಗೆ ಈ ಪಕ್ಷದಲ್ಲಿ ಅವಕಾಶ ಕೊಡುವುದಿಲ್ಲ. ನಿಮ್ಮ ಪಕ್ಷದಲ್ಲಿ ಬೇಕಾದರೆ ಬ್ಲಾಕ್ ಮಾರ್ಕೆಟ್ ಮಾಡುವವರಿದ್ದಾರೆ, ಅದನ್ನು ವಿರೋಧ ಮಾಡುವವರಿದ್ದಾರೆ, ಜಮೀನ್ದಾರರನ್ನು ವಿರೋಧ ಮಾಡುವವರಿದ್ದಾರೆ. ಅವರನ್ನು ಬೆಂಬಲಿಸುವವರೂ ಇದ್ದಾರೆ, ಹಾಗೆಯೇ ಕೋಮುವಾರ ಶಕ್ತಿಯನ್ನು ಬೆಂಬಲಿಸುವವರೂ, ವಿರೋಧಿಸುವವರೂ ಇದ್ದಾರೆ, ಒಂದು ಹೆಜ್ಜೆ ಮುಂದಕ್ಕೆ ಹೋಗುವುದಾದರೆ ನಿಮ್ಮ ಇಂದಿರಾ ಗಾಂಧಿಯವರು ಅಟಲ್ ಬಿಹಾರಿ ವಾಜಪೇಯಿಯವರ ಹಿಂದೂ ಸಮಾಜದ ಅಭಿಪ್ರಾಯಕ್ಕೆ ಮಣಿದು ಪ್ರಚಾರವನ್ನು ಮಾಡಿದರು, ಹಿಂದೂಗಳು ಒಂದಾಗ ಬೇಕೆಂಬ ಅಭಿಪ್ರಾಯ ಬಂದಮೇಲೆ ನಮ್ಮ ಪಕ್ಷದಲ್ಲಿ ಇಂತಹ ನಿಲುವು ಇದುವರೆವಿಗೂ ಬಂದಿಲ್ಲ. ನಮ್ಮ ಪಕ್ಷ ಕಮ್ಯುನಿಷ್ಟ ಪಕ್ಷ, ನಿಮ್ಮ ಹಾಗೆ ಬಟರ್‌ಫ್ಲೈಯಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಬಹಳ ಚನ್ನಾಗಿ ಮಾತನಾಡುತ್ತಿದ್ದಾರೆ. ಆದರೆ ಮಾತನಾಡುವಾಗ ಒಬ್ಬರನ್ನು ಒಬ್ಬರ ಮೇಲೆ ಎತ್ತಿಕಟ್ಟುವುದು ಸರಿಯಲ್ಲ. ಶ್ರೀಮಾನ್ ಹೆಗ್ಗಡೆಯವರು ಒಳ್ಳೆಯವರು. ಅವರು ಸಮತೋಲನದಿಂದ ಹೋಗುತ್ತಿದ್ದಾರೆ, ಆದರೆ ದೇವೇಗೌಡರ, ಬೊಮ್ಮಾಯಿಯವರು ಬೇರೆ ಬೇರೆ ದಿಕ್ಕಿನಲ್ಲಿ ಹೋಗುತ್ತಿದ್ದಾರೆಂದು ಹೇಳುತ್ತಿದ್ದೇನೆ. ಅದಕ್ಕೆ ಜೆ. ಹೆಚ್. ಪಟೇಲ್ ಅವರು ಒಂದೇ ಸಾರಿ ಚನ್ನಾಗಿ ಉತ್ತರ ಕೊಟ್ಟಿದ್ದಾರೆ. ಅಂದರೆ ಯಾವ ಜಾತಿಯವರು ಯಾವ ಯಾವ ರೀತಿ ವರ್ತನೆ ಮಾಡುತ್ತಿದ್ದಾರೆಂದು. ಅದನ್ನು ಪ್ರತಿಯೊಂದು

ಸಾರಿಯೂ ಹೇಳಬೇಕಾಗುತ್ತದೆ. ಆದರೆ ಗೋಮುಖ ವ್ಯಾಘ್ರದ ಕೋಮುವಾರು ಶಕ್ತಿಗಳು ಕೆಲವರು ಬುದ್ಧಿವಂತರಾಗಿ ಕೆಲಸ ಮಾಡುತ್ತಿದ್ದಾರೆ, ಕೆಲವರು ಬ್ರೂಟ್ ಆಗಿ ಕೆಲಸ ಮಾಡುತ್ತಿದ್ದಾರೆ, ಮತ್ತು ಕೆಲವರು ಗೋಪ್ಯವಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ ಗೋಮುಖ ವ್ಯಾಘ್ರ ಸಂಸ್ಕೃತಿ ಮತ್ತು ಇಂತಹ ಶಕ್ತಿಗಳನ್ನು ನೀವು ಬೆಳೆಸುತ್ತಿದ್ದೀರೆಂದು ಇಡೀ ದೇಶದಲ್ಲಿ ಪ್ರಚಾರವಿದೆ. ಇದಕ್ಕೆ ಏನು ಹೇಳುತ್ತೀರಾ ?

ಶ್ರೀ ಎಂ. ಎಸ್. ಕೃಷ್ಣನ್.—ಅಂತಹ ಶಕ್ತಿಗಳನ್ನು ನಾವು ಬೆಳೆಸಿದ್ದೇವೆಂದು, ಪ್ರಚಾರವಿದೆ ಯೆಂದು ಮಾನ್ಯ ಮೊಯಿಲಿಯವರು ಹೇಳುತ್ತಿರುವುದು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ನನಗೆ ತಿಳಿದ ಮಟ್ಟಿಗೆ ಎಲ್ಲಿಂದಲೂ ಇಂತಹ ವಿಚಾರ ಬಂದಿಲ್ಲ ಒಂದೊಂದು ನ್ಯಾಷನಲ್ ಕೌನ್ಸಿಲ್ ನಡೆದಾಗಲೂ ಸಹ ಅದರ ಹಿಂದಿನ ದಿವಸ ಏನಾದರೂ ಒಂದು ವಿಷಯ ಪತ್ರಿಕೆಯಲ್ಲಿ ಬರುತ್ತದೆ. ಏಕೆಂದರೆ, ಪತ್ರಿಕೆಗಳೆಲ್ಲ ಬಂಡವಾಳಶಾಹಿ ಪತ್ರಿಕೆಗಳು. ನಮ್ಮ ಪಕ್ಷ ಬದ್ರುವಾಗುತ್ತದೆ. ನೂರಾರು ಸಲ ಒಡೆದುಹೋಗುತ್ತದೆ: ಹೀಗೆ ಇತ್ಯಾದಿ ಪತ್ರಿಕೆಗಳಲ್ಲಿ ಬರುತ್ತದೆ. ಆದರೆ ಒಂದು ನಿಜ ವಿಚಾರ ವೇನೆಂದರೆ ಭಿನ್ನಾಭಿಪ್ರಾಯ ಎಲ್ಲ ಪಕ್ಷಗಳಲ್ಲೂ ಇದೆ, ಅದು ರಂಗನಾಥ್‌ರವರು ಹೇಳಿದ ಹಾಗಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ನಾನು ವಾಮಪಕ್ಷಗಳನ್ನು ಪುಷ್ಟೀಕರಣ ಮಾಡತಕ್ಕಂಥ ಪತ್ರಿಕೆ ಗಳಲ್ಲಿ ಬಂದಂಥ ವಿಚಾರವನ್ನು ಹೇಳಿದ್ದು, ಬರೇ ಭಂಡವಾಳಶಾಹಿ ಪತ್ರಿಕೆಗಳದ್ದಲ್ಲ ಲೆಫ್ಟಿಸ್ಟ್ ಪತ್ರಿಕೆ ಗಳಲ್ಲೂ ಕೂಡ ಈ ವಿಚಾರ ಬಂದಿದೆ.

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮ ಪಕ್ಷದಲ್ಲೂ ಸಹ ಭಿನ್ನಾಭಿಪ್ರಾಯವಿದೆ ಆದರೆ ಇಲ್ಲಿ ಯೋಗೇಂದ್ರಶರ್ಮಾರಂಥರವರ ಬಗ್ಗೆ ನ್ನ ವಿವರಣೆ ಕೊಡಬೇಕಾಗಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಏಕೆಂದರೆ ಈ ಸದನದಲ್ಲಿ ತಾವು ರಾಷ್ಟ್ರದ ರಾಜಕೀಯದಲ್ಲಿ ಯಾರು ಹೇಗಿದ್ದಾರೆ ಎಂಬುದನ್ನು ಮಾತನಾಡುವುದಕ್ಕೆ ಅಡ್ಡಿಯಿಲ್ಲ. ಆದರೆ ತಾವು ಎತ್ತಿದುದ್ದರಿಂದ ತಮ್ಮ ಪಾದಕ್ಕೆ ಬೇರೆ ಮುಖ ಕೂಡ ಇದೆ ಎಂಬುದನ್ನು ಹೇಳಬೇಕಾಗುತ್ತದೆ.ಶ್ರೀಮತಿ ಇಂದಿರಾ ಗಾಂಧಿ ಮತ್ತು ಹಿಂದೂ ಮಹಾಸಭಾದ ವಿಚಾರವನ್ನು ಚರ್ಚೆ ಮಾಡಲು ಇದು ವೇದಿಕೆಯಲ್ಲ. ಅದಕ್ಕೆ ಪ್ರತ್ಯೇಕ ವೇದಿಕೆಯನ್ನು ಮಾಡಿದ ಚರ್ಚೆ ನೋಡೋಣ ಯಾವ ಸಿದ್ಧಾಂತ ಯಾರಿಗಿದೆ ಎಂಬುದರ ಬಗ್ಗೆ ಗಂಟೆ ಗಟ್ಟಲೇ ಮಾತನಾಡಬಹುದು. ಆದುದರಿಂದ ಇಷ್ಟು ಹೇಳಿದೆ. ತಾವು ಬಹಳ ಬುದ್ಧಿವಂತರು ತಮ್ಮ ಬುದ್ಧಿವಂತಿಕೆ ತಮಗೆಲ್ಲ ಬರಬೇಕು ?

ಶ್ರೀ ಎಂ. ಎಸ್ ಕೃಷ್ಣನ್.—ನಾನು ಬುದ್ಧಿವಂತಿಕೆಯಿಂದ ಮಾತನಾಡುತ್ತಿಲ್ಲ. ಆದರೆ ಪ್ರಚೋದನೆ ಮಾಡಿದಂತವರು ತಮ್ಮ ಪಕ್ಕದಲ್ಲಿ ಕುಳಿತಿದ್ದಾರೆ. ಅವರು ಆ ರೀತಿ ಪ್ರಚೋದನೆ ಮಾಡಿದಾಗ ಅದಕ್ಕೆ ಉತ್ತರವನ್ನು ತೆಗೆದುಕೊಳ್ಳುವುದಕ್ಕೆ ತಯಾರು ಇರಬೇಕು.

ಶ್ರೀ ಕೆ. ಹೆಚ್. ರಂಗನಾಥ್,—ನಾನು ಪ್ರಚೋನೆಯನ್ನೇನೂ ಮಾಡಿಲ್ಲ, ಇದ್ದ ವಿಚಾರವನ್ನು ಹೇಳಿದ್ದೇನಷ್ಟೇ.

ಶ್ರೀ ಎಂ. ಎಸ್. ಕೃಷ್ಣನ್,—ನಾನು ಹೇಳುವುದಿಷ್ಟೆ, ಭಿನ್ನಾಭಿಪ್ರಾಯವಿಲ್ಲವೆಂದಲ್ಲ. ಆದರೆ ನಮ್ಮ ಪಕ್ಷ ಕಡೆಯವರೆಗೂ ಉಳಿಯುತ್ತದೆ. ತಮ್ಮ ಪಕ್ಷದಲ್ಲಿ ಏನಾದರೂ ಇಂತಹ ಯೋಗೇಂದ್ರ ಶರ್ಮಾರಂಥವರನ್ನು ಹೊರಗಡೆ ಕಳುಹಿಸಿದರೆ ಏನೇನೋ ಆಗುತ್ತಿತ್ತು. ಆ ರೀತಿಯೇನು ಡಾಂಗೆ ಹೋದಾಗಲೂ ಆಗಲಿಲ್ಲ. ಅವರನ್ನು ಪಕ್ಷದ ಮುಖ್ಯವಾದ ಸ್ಥಾನದಿಂದ ಮಾತ್ರ ತೆಗೆದಿದ್ದಾರೆ. ಆದರೆ ಅವರು ಪಕ್ಷದ ಸದಸ್ಯರಾಗಿ ಇನ್ನೂ ಮುಂದುವರಿದಿದ್ದಾರೆ. ಮತ್ತು ನಮ್ಮ ಪಕ್ಷ ಬೇರೆ ಪಕ್ಷದ ರೀತಿಯಲ್ಲಿಲ್ಲ. ಮಾನ್ಯ ಅಧ್ಯಕ್ಷರೇ ನಮಗೆ ಪ್ರಚೋದನೆ ಮಾಡುವುದಕ್ಕೆ ಅವಕಾಶ ಕೊಡಬೇಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮುಖ್ಯ ಮಂತ್ರಿಗಳಿಗೆ ಹೊಗಳುವುದಾದರೆ ಹೊಗಳಿ, ಅಂದರೆ ಸರ್ಕಾರವನ್ನು ಹೊಗಳಬೇಕಾದರೆ ನೇರವಾಗಿ ಹೊಗಳಿ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಯಾವ ರೀತಿ ಮಾತನಾಡಬೇಕೆಂದು ಶ್ರೀ ಮೊಯಿಲಿ ಯವರಿಂದ ಕಲಿಯಬೇಕಾಗಿಲ್ಲ.

೨–೦೦ ಪಿ. ಎಂ.

ನಾನು ಏನು ಮಾತನಾಡಬೇಕೋ ಅದನ್ನು ಮಾತನಾಡುತ್ತೇನೆ. ಅವರು ಏನು ಮಾತನಾಡ ಬೇಕೋ ಅದನ್ನು ಮಾತನಾಡಿದ್ದಾರೆ.

ಉಪಾಧ್ಯಕ್ಷರು.—ಕೃಷ್ಣನ್ ಅವರೇ ತಾವು ವಿಷಯಕ್ಕೆ ಬನ್ನಿ.

ಶ್ರೀ ಎಂ. ಎಸ್. ಕೃಷ್ಣನ್ ವಿಷಯ ಇಷ್ಟೇ. ಜನಗಳ ಮಧ್ಯೆ ಇವತ್ತಿನ ದಿವಸ ಈ ಅಭಿಪ್ರಾಯ ಇದೆ. ಇದರ ಬಗ್ಗೆ ತಾವು ಹುಶಾರಾಗಿರಬೇಕು. ಉದಾಹರಣೆಗೆ ಇವತ್ತಿನ ದಿವಸ ಅಡ್ಮಿನಿಸ್ಟ್ರೇಷನ್‌ನಲ್ಲಿ ಬೇಕಾದಷ್ಟು ಜನ ಐಎಎಸ್ ಅಧಿಕಾರಿಗಳು ಇದ್ದಾರೆ. ಅವರು ಯಾರೇ ಇರಲಿ ಇನ್‌ಕರಪ್ಟಿವ್ ಆಗಿರ ಬೇಕು. ಅವರು ಯಾರೇ ಇರಲಿ, ಕೋಮು ಜಾತಿಯ ಪ್ರಶ್ನೆ ಅಲ್ಲ. ಅವರು ನಿಷ್ಪಕ್ಷಪಾತರಾಗಿ ಜನರ ಸಮಸ್ಯೆಗಳನ್ನು ಬಗೆ ಹರಿಸುವ ವಿಷಯ ತಿಳಿದುಕೊಳ್ಳುವ ಶಕ್ತಿ ಸಾಮರ್ಥ್ಯ ಹೊಂದಿದವರಾಗಿರ ಬೇಕು. ಎಲ್ಲಾ ಹಂತಗಳಲ್ಲೂ ಅಂತಹವರು ಇರಬೇಕು, ಹಾಗಾದರೆ ಮಾತ್ರ ಈ ಸರ್ಕಾರ ಒಳ್ಳೆಯ ಸರ್ಕಾರ ಎನಿಸಿಕೊಳ್ಳಲು ಸಾಧ್ಯವಾಗುತ್ತದೆ. ಇದೇನೂ ಜಾತಿಯ ಪ್ರಶ್ನೆ ಅಲ್ಲ. ಮೇಲೆ ಸರಿಯಾಗಿ ನಡೆದರೆ ಕೆಳಗೆ ಕೂಡ ಚೆನ್ನಾಗಿ ನಡೆಯುತ್ತದೆ. ಬೆಸ್ಟ್ ಆಫ್ ದಿ ಮ್ಯಾನ್ ಐಡೆಂಟಿಫೈ ಮಾಡಿ ತೆಗೆದುಕೊಂಡು ಬಂದಿದ್ದಾರೆಯೋ? ಎಂದು ಕೇಳಿದರೆ ಇಲ್ಲವೆಂದೇ ಹೇಳಬೇಕಾಗಿದೆ. ಇದು ನಮ್ಮನು ನಿಮ್ಮ ಮೇಲೆ ಇರತಕ್ಕಂಥ ಟೀಕೆ ನಾನು ಯಾರು ಏನು ಎಂದು ಹೇಳುವುದಕ್ಕೆ ಹೋಗುವು ದಿಲ್ಲ. ಇದರಲ್ಲಿ ಅನೇಕ ಜನ ಮಂತ್ರಿಗಳು ಕೆಲವು ಶಾಸಕರು ಸಹ ಇವತ್ತಿನ ದಿನ ಜಾತಿಯ ಆಧಾರದ ಮೇಲೆ ಮತ್ತಿತರ ಕನ್ಸಿಡರೇಶನ್‌ಗಾಗಿ ಇಂತಿಂಥ ಅಧಿಕಾರಿಗಳನ್ನು ಇಂತಿಂಥ ಕಡೆ ಇರಬೇಕೆಂದು ಒತ್ತಾ ಯಿಸುತ್ತಿದ್ದಾರೆ ಎಂದು ನನ್ನಗೆ ತಿಳಿದು ಬಂದಿದೆ. ಒಂದು ಕ್ಷೇತ್ರದಲ್ಲಿ ಮಾನ್ಯ ಅಧ್ಯಕ್ಷರೇ...............

ಶ್ರೀ ಪಿ. ರಾಮದೇವ್.—ಮಾನ್ಯ ಕೃಷ್ಣನ್ ಅವರು ಸ್ವಲ್ಪ ಕ್ಲಾರಿಫೈ ಮಾಡಬೇಕಾಗಿದೆ. ಜಾತಿಯ ಆಧಾರ ಮತ್ತು ಮತ್ತಿತರ ಕನ್ಸಿಡರೇಶನ್ ಅಂದರೆ ಏನು? ಇನ್ನಾವ ಕನ್ಸಿಡರೇಶನ್ ಮೇಲೆ ಮಾಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಯಾವ ಕನ್ಸಿಡರೇಶನ್ ಅಂದರೆ ನನಗೆ ರಾಮದೇವ್ ಅವರು ಗೊತ್ತು. ಬಹಳ ಒಳ್ಳೆಯವರು ತೆಗೆದುಕೊಂಡು ಬಿಡಿ ಎಂದು ನಾನು ಹೇಳುತ್ತೇನೆ. ವಾಸ್ತವವಾಗಿ ಅವರು ಅಧ್ಯಕ್ಷರಾಗಿರಬಹುದು, What is the consideration? That I am your friend is the consideration. ನಾವು ನೀವು ಒಂದೇ ಜಾತಿಯವರಾದ ಮೇಲೆ ಮಾಡುವು ದೆಲ್ಲಾ ಸರಿಯೇ? ಉದಾಹರಣೆಯೊಂದನ್ನು ಹೇಳುವುದಾದರೆ ಒಂದು ಕಡೆ ತಹಸೀಲ್ದಾರರು. ಬಿಡಿಓ ಮತ್ತು ಇತರ ಅಧಿಕಾರಿಗಳು ಎಲ್ಲರೂ ಒಂದೇ ಒಂದು ಕೋಮಿಗೆ ಸೇರಿದವರನ್ನು ನೇಮಕ ಮಾಡ ಬೇಕೆಂಬ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದಾರೆಂದು ಗೊತ್ತಾಗಿದೆ ಯಾರು ಅಂತ ಹೇಳುವುದಕ್ಕೆ ನಾನು ತಯಾರಾಗಿಲ್ಲ. ಇದಕ್ಕೆ ಏನು ಕಾರಣ ಎಂದರೆ ಈ ತರಹ ಪದ್ಧತಿ ಮೇಲ್ಮಟ್ಟದಲ್ಲೂ ಇದೆ. ಆದ್ದರಿಂ ದಲೇ ಈ ಪರಿಸ್ಥಿತಿ ಬಂದಿದೆ. ಎಂದು ಹೇಳಬೇಕಾಗಿದೆ. ಈ ಸಂದರ್ಭದಲ್ಲಿ ಒಂದು ವಿಷಯ ನನಗೆ ಜ್ಞಾಪಕ ಬರುತ್ತದೆ ಅದು ಮಾನ್ಯ ದೇವೇಗೌಡರಿಗೂ ಗೊತ್ತಿರಬಹುದು. ಅವರು ಅವಾಗ ಅಸೆಂಬ್ಲಿ ಮೆಂಬರಾಗಿದ್ದರು ಶ್ರೀ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಮಹಾತ್ಮಾಗಾಂಧಿ ಹೈಡ್ರೋ ಎಲೆಕ್ಟ್ರಿಕ್ ಸ್ಕೀಮ್‌ನಲ್ಲಿ ಒಂದು ಸಮಸ್ಯೆ ಬಂದೂ ಚೀಫ್ ಇಂಜಿನೀಯರ್ ಸೂಪರಿಂಟೆಂಡೆಂಟ್ ಇಂಜಿನೀಯರ್, ಎಕ್ಸಿಕ್ಯೂಟಿವ್ ಇಂಜಿನಿಯರ್, ಅಸಿಸ್ಟೆಂಟ್ ಇಂಜಿನೀಯರ್ಸ್ ಜೂನಿಯರ್ ಇಂಜಿನೀಯರ್ಸ್ ಎಲ್ಲಾ ಒಂದೇ ಕೋಮಿನವರು. ಅಸೆಂಬ್ಲಿಯಲ್ಲಿ ಈ ವಿಷಯದ ಬಗ್ಗೆ ಭಾರಿ ಗಲಾಟೆ ಆಯಿತು ಶ್ರೀ ವೀರೇಂದ್ರ ಪಾಟೀಲರು ಆಗ ಪಿಡಬ್ಲ್ಯೂಡಿ ಮಂತ್ರಿಯಾಗಿದ್ದರು. ಮಾನ್ಯ ರಾಮಕೃಷ್ಣ ಹೆಗ್ಗಡೆಯವರು ಡೆಪ್ಯುಟಿ ಮಿನಿಸ್ಟರ್ ಆಗಿದ್ದರು. ಈ ರೀತಿ ಆಗಬಾರದೆಂಬ ಕಳಕಳಿಯನ್ನು ನಾನು ಇಲ್ಲಿ ವ್ಯಕ್ತಪಡಿಸುತ್ತಿದ್ದೇನೆ ಜನ ಇದನ್ನು ಮೆಚ್ಚುವುದಿಲ್ಲ. ಹೀಗೆ ಮಾಡುವುದು ಸರಿಯಲ್ಲ. ಆದುದರಿಂದ ಇದನ್ನು ಬೇರೆ ಯಾವ ದೃಷ್ಟಿಯಿಂದಲೂ ನಾನು ಹೇಳುತ್ತಿಲ್ಲ. ಆದರೆ ಇವತ್ತು ಟ್ರಾನ್ಸ್ ಫರ್ಸ್‌ನಲ್ಲಿ ಇಂಟರ್‌ಫಿಯರೆನ್ಸ್ ಬಗ್ಗೆ ಪಿಡಬ್ಲ್ಯೂಡಿ ಮಂತ್ರಿಗಳು ಕೂಡ ಮಾತನಾಡಿದ್ದಾರೆ. ಹಿಂದೆ ದೇವರಾಜ ಅರಸು ಅವರ ಕಾಲದಲ್ಲಿ ಇಂಟರ್‌ಫಿಯರೆನ್ಸ್ ಎಲ್ಲಾ ಡಿಪಾರ್ಟ್‌ಮೆಂಟ್‌ಗಳಲ್ಲೂ ನೇರವಾಗಿ ಮಾಡುತ್ತಿದ್ದರು. ಅವರ ಸ್ಟೇಚರ್ ಹಾಗೆ ಇತ್ತು. ಎಲ್ಲಾ ನಡೆದುಕೊಂಡು ಹೋಗುತ್ತಿತ್ತು. ಶ್ರೀ ಗುಂಡೂರಾಯರ ಮಂತ್ರಿಮಂಡಲ ಬಂದಾಗ ಎಲ್ಲಾ ಬ್ಯೂರೋಕ್ರಾಸಿಗೆ ಬಿಟ್ಟುಬಿಟ್ಟಿದ್ದರು. ಏನು

ಬೇಕಾದರೂ ಮಾಡಿ ಬಿಡಿ ಅಂತ ತಪ್ಪು ತಿಳಿಯಬೇಡಿ, ಇದು ನನ್ನ ಅಭಿಪ್ರಾಯ ನನ್ನ ಅಭಿಪ್ರಾಯದಲ್ಲಿ ಇದು ಸರಿ ಅಲ್ಲ. ಇವಾಗ ಏನು ಆಗಿದೆ ಎಂದರೆ ಕೆಲವು ಮಂತ್ರಿಗಳು ಅಧಿಕಾರಿಗಳ ಮಾತನ್ನು ಕೇಳುತ್ತಾರೆ. ಐಎಎಸ್ ಅಧಿಕಾರಿಗಳು ಎಂದರೆ ಅವರಿಗೆ ಪರಮ ಪವಿತ್ರರು, ಪರಬ್ರಹ್ಮರು ಎಲ್ಲಾ ವಿಷಯಗಳನ್ನು ತಿಳಿದವರು ಆಗಿದ್ದಾರೆ ಎಂಬ ಭಾವನೆ ಕೆಲವು ಮಂತ್ರಿಗಳಿಗೆ ಇದೆ. ಮಂತ್ರಿಗಳ ಮಟ್ಟವೇ ಆ ರೀತಿ ಇದೆಯೋ ಗೊತ್ತಿಲ್ಲ. ಅಧಿಕಾರಿಗಳು ಹೇಳಿದ ಹಾಗೆ ಅವರು ಕೇಳುತ್ತಾರೆ..........

ಶ್ರೀ ಹೆಚ್. ಡಿ. ದೇವೇಗೌಡ.—ಯಾರು ನಿಮಗೆ ಹೇಳಿದವರು ?

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮ ಬಗ್ಗೆ ನಾನು ಹೇಳಲಿಲ್ಲ. ನೀವು ಈ ರೀತಿ ನಡೆದುಕೊಳ್ಳಬಾರದು ಎಂದಷ್ಟೇ ನಾನೇ ಹೇಳುತ್ತಿರುವುದು, ಮಂತ್ರಿಗಳಾಗಲೀ ಯಾರೇ ಆಗಲಿ, ಬ್ಯೂರೊಕ್ರಸಿಯನ್ನು ಹದ್ದುಬಸ್ತಿನಲ್ಲಿ ಇಟ್ಟರೆ ಮಾತ್ರ ಅಡ್ಮಿನಿಸ್ಟ್ರೇಶನ್ ಸರಿಯಾಗಿ ನಡೆಯುತ್ತದೆ ಇಲ್ಲದಿದ್ದರೆ ಅವರು ನಿಮ್ಮನ್ನು ನುಂಗಿಹಾಕಿ ಬಿಡುತ್ತಾರೆ. ಹಿಂದೆ ಈ ಪ್ರಯತ್ನ ನಡೆಯಿತು. ಇನ್ನೊಂದು ವಿಷಯ ನೋಡಿ ಅಡ್ವೋಕೇಟ್ಸ್‌ನ್ನು ಯಾವ ರೀತಿ ನೇಮಕ ಮಾಡಿದ್ದಾರೆ ಎಂದರೆ ಇಲ್ಲೆ ಅಲ್ಲ. ಡೆಲ್ಲಿಯಲ್ಲಿ. ನಮ್ಮ ರಾಜ್ಯದ ಹಿತರಕ್ಷಣೆ ಮಾಡುವುದಕ್ಕೆ ಕೆಲವರು ವಕೀಲರನ್ನು ಹಿಂದಿನ ಸರ್ಕಾರ ನೇಮಕ ಮಾಡಿದರು. ಅವರು ಎಲ್ಲಾ ವಿಷಯವನ್ನು ತಿಳಿದವರು ಕೃಷ್ಣಾ ಗೋದಾವರಿ ಒಪ್ಪಂದ ವಿಷಯವಾಗಲೀ, ಇನ್ಯಾವ ವಿಷಯವೇ ಆಗಲಿ ಅವರು ತಿಳಿದವರಾಗಿದ್ದರು. ಈ ಸರ್ಕಾರ ಬಂದ ಮೇಲೆ ಅವರನ್ನೆಲ್ಲಾ ಕಿತ್ತು ಹಾಕಿ ಹೊಸಬರನ್ನು ನೇಮಕ ಮಾಡಿದ್ದಾರೆ ಅಧಿಕಾರವನ್ನು ಯಾವ ರೀತಿ ಉಪಯೋಗಿಸುತ್ತೀರಿ ಎನ್ನುವುದಕ್ಕೆ ಇದೊಂದು ಉದಾಹರಣೆ. ನಮ್ಮ ರಾಜ್ಯದ ಹಿತಕ್ಕೆ ಧಕ್ಕೆ ಬರುವ ರೀತಿಯಲ್ಲಿ ಮಾಡಿದ್ದಾರೇ ಈ ನೇಮಿಂಕಾತಿಯಲ್ಲಿ ಕರ್ನಾಟಕದ ವಕೀಲರನ್ನು ಬಿಟ್ಟು ಬಿಟ್ಟರು, ಉತ್ತರ ಭಾರತದ ಕೆಲವರನ್ನು ನೇಮಿಂಸಿದ್ದೀರಿ. ಏಕೆ ನಮ್ಮ ರಾಜ್ಯದವರು ಇಲ್ಲವೆ ? ಮೇಧಾವಿ ವಕೀಲರು, ಸುಪ್ರೀಂ ಕೋರ್ಟಿನಲ್ಲಿ ವಾದ ಮಾಡುವ ವಕೀಲರು ನಮ್ಮಲ್ಲಿ ಇಲ್ಲವೆ ? ಅಂತಹವರನ್ನು ಕಂಡುಹಿಡಿಯಬೇಕು ಅವರನ್ನು ಬಿಟ್ಟು ಬೇರೆಯವರನ್ನು ನೇಮಕ ಮಾಡಿದರೆ ಹೇಗೆ ? Government is it continuity or is it not continuity ? Where are you going ? Are you really defending tho interest of the people or are you helping somebody ? ಎನ್ನುವ ಪ್ರಶೆ ಬಂದು ಬಿಡುತ್ತದೆ, ಎಲ್ಲಿ ಹೋಗುತ್ತಿದ್ದೀರಿ ? ಯಾರ ಹಿರತರಕ್ಷಣೆ ಮಾಡುತ್ತಿದ್ದೀ ? ಆದುದರಿಂದ ತಾವು ಈ ಕೆಲಸವನ್ನೇನು ಮಾಡಿದ್ದೀರಿ ಅದನ್ನು ಸರಿಪಡಿಸಬೇಕೆಂದು ಹೇಳ,ವುದಕ್ಕೆ ಇಷ್ಟಪಡುತ್ತೇನೆ. ಇಷ್ಟು ಮಾತ್ರವಲ್ಲ, ಲಕ್ಷಗಟ್ಟಲೆ ಲ್ಯಾಂಡ್ ಟ್ರಿಬ್ಯುನಲ್ ಕೇಸುಗಳು ಹೈಕೋರ್ಟಿನಲ್ಲಿ ಕೊಳೆಯುತ್ತಿವೆ.

ಉಪಾಧ್ಯಕ್ಷರು.—ಡಿಮ್ಯಾಂಡ್ ಮೇಲೆ ಮಾತನಾಡಿ.

ಶ್ರೀ ಎಂ. ಎಸ್. ಕೃಷ್ಣನ್.—ಅಪಿಲೇಟ್ ಟ್ರಿಬ್ಯುನಲ್‌ಗೆ ಅಪೀಲ್ ಮಾಡುವುದಕ್ಕೆ ಅವಕಾಶ ಕೊಡಿ ಎಂದು ಹೇಳಿದ್ದೇವೆ. ಅದನ್ನು ಮಾಡಬೇಕೆಂದು ಹೇಳಬೇಕಾಗಿದೆ ಇನ್ನು. ನಾನು ಯೋಜನೆ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ, ಇದರ ಬಗ್ಗೆ ಬಹಳ ದೀರ್ಘವಾಗಿ ಕೆಲವು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ಆದರೆ, ಒಂದು ವಿಷಯವನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಒಂದು ವಾದ ಇದೆ ಅದೇನೆಂದರೆ, ಈ ಸರ್ಕಾರ ಬಂದ ಮೇಲೆ ನಾನ್ ಪ್ಲಾನ್ ಎಕ್ಸಪೆಂಡಿಚರ್ ಜಾಸ್ತಿಯಾಗಿದೆ, ಪ್ಲಾನ್ ಎಕ್ಸಪೆಂಡಿಚರ್ ಕಡಿಮೆ ಆಗಿದೆ ಎಂದು ಕೆಲವು ಸದಸ್ಯರು ಅಭಿಪ್ರಾಯ ಪಟ್ಟರು. ನಾನು ಅಂಕಿ ಅಂಶಗಳನ್ನು ನೋಡಿದ್ದೇನೆ. ಅದರ ಪ್ರಕಾರ ನನಗನ್ನಿಸುವುದು ಏನೆಂದರೆ, ಪ್ರಮಾಣದಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಆಗಿರಬಹುದು, ಆದರೆ ಪರ್ಸೆಂಟೇಜ್‌ನಲ್ಲಿ ಯಾವ ಕೊರತೆಯೂ ಆಗಿಲ್ಲ, ಪ್ಲಾನ್ ಎಕ್ಸ್‌ಪೆಂಡಿಚರ್ ಯಾವಾಗಲೂ ಕಡಿಮೆ ಇರುತ್ತದೆ. ಇದು ಮೊದಲಿನಿಂದಲೂ ನಡೆದುಕೊಂಡು ಬಂದಿದ್ದು, ಕೇಂದ್ರವೇ ಎಲ್ಲಾ ಕೇಂದ್ರೀಕೃತವಾಗಿ ಇಟ್ಟುಕೊಂಡ ಮೇಲೆ ಏನು ಮಾಡುವುದಕ್ಕಾಗುವುದಿಲ್ಲ, ಆದ್ದರಿಂದ ಇವತ್ತಿನ ದಿವಸ ಈ ವಾದ ಸರಿಯಾದುದಲ್ಲ. ನಾನ್ ಪ್ಲಾನ್ ಎಕ್ಸಪೆಂಡಿಚರ್ ಕಡಿಮೆ ಮಾಡಬೇಕು, ಪ್ಲಾನ್ ಎಕ್ಸ್‌ಪೆಂಡಿಚರ್ ಜಾಸ್ತಿ ಮಾಡಬೇಕೆಂದರೆ ಅದಕ್ಕೆ ಬೇಕಾದಂತಹ ರಿಸೋರ್ಸಸ್ ಬೇಕು. ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸಹ ಬಹಳ ಚನ್ನಾಗಿ ಹೇಳಿದ್ದಾರೆ. ಪ್ರೋಸೀಡಿಂಗ್ಸ್‌ನಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ಒಪ್ಪಿಕೊಳ್ಳಬೇಕಾದ ಅಂಶ ಅದು ಸಾಲ್ಕನೇ ಪುಟದಲ್ಲಿ. ಅಲ್ಲಿ ಹೀಗಿದೆ—

"According to the latest position that is available to me i. e. during 1982-83 the States non-plan and non-development expenditure has gone up so much mainly on account of the instalments of D A. as the State Governments are bound to follow suit whenever the Union Government gives increased D. A. to its employees."

ಇದು ಬಹಳ ವರ್ಷಗಳಿಂದ ಬಂದಿರುವ ವಿಷಯ, ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಜಾಸ್ತಿಯಾಗುತ್ತಿದೆ, ನೌಕರರಿಗೆ ಡಿ. ಎ. ಮತ್ತೊಂದನ್ನು ಕೊಡುವುದಕ್ಕೆ ಕೇಂದ್ರ ಸರ್ಕಾರ ಒಪ್ಪಿಕೊಳ್ಳಿ ಎಂಬುದಾಗಿ ರಾಜ್ಯ ಸರ್ಕಾರದವರು ಹೇಳಬೇಕಾಗುತ್ತದೆ, ಆ ಮಾತನ್ನು ನಮ್ಮ ವಿರೋಧಪಕ್ಷದ ನಾಯಕರು ಹೇಳಲಿಲ್ಲ. ಅದನ್ನು ಅವರು ಹೇಳಬೇಕಾಗಿತ್ತು. ನೌಕರರಿಗೆ ಡಿ. ಎ. ಅಂತ ೩-೪ ಕಂತುಗಳನ್ನು ಕೊಟ್ಟರೆ, ಕೊಡಬೇಕಾಗುತ್ತದೆ. ಅದಕ್ಕೆ ಕೇಂದ್ರ ಸರ್ಕಾರ ಸಹಾಯ ಮಾಡಬೇಕೆಂದು ಹೇಳಿದ್ದರೆ ಒಪ್ಪಿಕೊಳ್ಳುತ್ತಿದ್ದೆ. ಅದರ ಬಗ್ಗೆ ಲಕ್ಷ್ಯವಹಿಸಿ.

ಇನ್ನು ರಿಸೋರ್ಸಸ್ ಮೊಬಲೈಜೇಷನ್ ಬಗ್ಗೆ ಬಹಳ ಎಚ್ಚರಿಕೆಯಿಂದ ಇರಬೇಕೆಂದು ತಾವು ಮುಖ್ಯಮಂತ್ರಿಗಳಿಗೆ ಹೇಳಬೇಕು. (ದೇವೇಗೌಡರನ್ನು ಕುರಿತು) ರಿಸೋರ್ಸಸ್ ಮೊಬಿಲೈಜೇಸನ್ ಮಾಡುವ ಬಗ್ಗೆ ಯೋಚನೆ ಮಾಡುತ್ತಿದ್ದೇವೆಂದು ಒಂದು ಕಡೆ ಮುಖ್ಯಮಂತ್ರಿಗಳು ಹೇಳಿದ್ದಾರೆ. ಮತ್ತೊಂದು ಕಡೆ, ನಮ್ಮ ಕರ್ನಾಟಕದಲ್ಲಿ ರಾಜ್ಯದಲ್ಲಿ ಇನ್ನೂ ತೆರಿಗೆಯನ್ನು ಹಾಕುವುದಕ್ಕೆ ಅವಕಾಶ ಇಲ್ಲ ಎನ್ನುವ ರೀತಿಯಲ್ಲಿ ಮಾತನಾಡಿದ್ದಾರೆ. ಅವರೇ ಕೊಟ್ಟಿರತಕ್ಕಂತಹ ವರದಿಯ ಪೇಜ್ ಐದನ್ನು ನೋಡಿ. ಅದರಲ್ಲಿ ಏನು ಹೇಳುತ್ತಾರೆಂದರೆ.—

"The non-plan expenditure having shot up inevitably, the per capita plan outlay has come down. If you take all-India average, if the per capita expenditure during the current plan period is Rs. 872. the per capita plan outlay in Karnataka is Rs. 773. This is in spite of the fact that Karnataka, perhaps, is rated almost foremost in regard to additional resource mobilisation. Today, as most of you are aware, Karnataka is one of the highest taxed States. There are three States, if I could remember correctly, which have 14% per capita and Karnataka is one of them with slightly above 14%."

ಜಾಸ್ತಿ ಟ್ಯಾಕ್ಸನ್ನು ಕೊಡತಕ್ಕಂತಹ ಮೂರು ರಾಜ್ಯಗಳಿವೆ. ಅದರಲ್ಲಿ ಕರ್ನಾಟಕ ರಾಜ್ಯವೂ ಒಂದು. ಕರ್ನಾಟಕ ರಾಜ್ಯದಲ್ಲಿ ಶೇಕಡ ೧೪ರಷ್ಟು ಪರ್‌ಕ್ಯಾಪಿಟಾ ಟ್ಯಾಕ್ಸನ್ನು ಕೊಡುತ್ತಿದ್ದಾರೆ. ಇನ್ನೂ ಹೆಚ್ಚಿಗೆ ತೆರಿಗೆಯನ್ನು ಹಾಕದೆ ಇರತಕ್ಕಂತಹ ಪರಿಸ್ಥಿತಿಗೆ ಬಂದು ಮುಟ್ಟಿದೆ, ಎಂಬುದಾಗಿ ಮುಖ್ಯ ಮಂತ್ರಿಗಳೇ ಹೇಳಿದ್ದಾರೆ. ಆದರೂ ಟ್ಯಾಕ್ಸನ್ನು ಹೆಚ್ಚು ಹಾಕಬೇಕಾಗಿ ಬರುತ್ತದೆಂದು ಅದರೊಳಗೆ ಮತ್ತೊಂದು ಕಡೆ ಹೇಳಿದ್ದಾರೆ. ಇದು ಒಂದಕ್ಕೊಂದು ವಿರೋಧಾಭಾಸವಾಗಿದೆ. ಅವರು ಮತ್ತೆ ಒಂದು ಸಾರ್ವಜನಿಕ ಸಭೆಯಲ್ಲಿ ಹೆಚ್ಚು ಟ್ಯಾಕ್ಸ್ ಹಾಕಬೇಕಾಗುತ್ತದೆಂದು ಹೇಳಿದ್ದಾರೆ. ೧೦೪ ಕೋಟಿ...

ಶ್ರೀ ಕೆ. ಎಚ್. ರಂಗನಾಥ್.—ಅವರು ಸೆಕ್ಟರ್‌ವೈಸ್ ಎಷ್ಟೆಷ್ಟು ಬರುತ್ತನೆ ಮತ್ತು ಈ ೧೦೪ ಕೋಟಿ ರೂಪಾಯಿಗಳನ್ನು ಹೇಗೆ ಕೂಡಿಸಿಕೊಳ್ಳಬಹುದು ಎಂಬುದನ್ನೂ ಕೂಡ ಹೇಳಿದ್ದಾರೆ ಅದನ್ನು ಹೇಳೋವಾಗ ಯಾವ ರೀತಿ ಟ್ಯಾಕ್ಸ್ ಹಾಕುತ್ತಾರೆ ಎಂಬುದನ್ನು ಸ್ಪಷ್ಟಪಡಿಸಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ರಿಸೋರ್ಸಸ್ ಮೊಬಲೈಜೇಸನ್ ಮಾಡುವುದರಲ್ಲೂ ಹಲವಾರು ರೀತಿ ಇವೆ, If it is resource mobilisation by taxing on the rich ಶ್ರೀಮಂತರ ಕಡೆಯಿಂದ ಪಡೆಯುವಂತಹ ಅಭಿಪ್ರಾಯ ಪಟ್ಟರೆ ಅದಕ್ಕೆ ನನ್ನ ಅಭ್ಯಂತ ಇಲ್ಲ

ಆದರೆ ಸಾಮಾನ್ಯ ಜನಗಳಿಗೆ ತೆರಿಗೆಯನ್ನು ಹಾಕಬೇಕಾಗಿ ಬಂದು ತೆರಿಗೆಯನ್ನು ಹಾಕಿದರೆ ಜನ ಅದನ್ನು ವಿರೋಧ ಮಾಡುತ್ತಾರೆ. ಸೀಮೆಎಣ್ಣೆ ಬೆಲೆ ಜಾಸ್ತಿಯಾಯಿತು. ಪೆಟ್ರೋಲ್ ಬೆಲೆ ಜಾಸ್ತಿಯಾಯಿತು ಅಂತ ನೀವೂ ಕೂಡ ನಾಳೆ ಹಾಲಿನ ಬೆಲೆ ಜಾಸ್ತಿ ಮಾಡುವುದು, ಕೆ.ಎಸ್.ಆರ್.ಟಿ.ಸಿ.ಯಲ್ಲಿನ ದರವನ್ನು ಹೆಚ್ಚು ಮಾಡುವುದು ಕೆ. ಇ. ಬಿ.ಯಲ್ಲಿ ಜಾಸ್ತಿ ಮಾಡುವುದು ಅಂತ ಹೋದರೆ It is going to be an indirect tax. Already people are suffering from indirect taxation to the extent of more than 50%. After the additional tax how they are going to bear ? ಅದರ ಬಗ್ಗೆ ಹುಷಾರಾಗಿರಬೇಕು. ಮತ್ತು ರಿಸೋರ್ಸಸ್ ಮೊಬಲೈಜೇಸನ್‌ಗೋಸ್ಕರ, ಕೇಂದ್ರದ ೮ ನೇ ಆರ್ಥಿಕ ಆಯೋಗದ ಗಮನಕ್ಕೆ ಒಳ್ಳೆಯ ರೀತಿಯಲ್ಲಿ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಅದಕ್ಕಾಗಿ ನಮ್ಮ ಮುಖ್ಯಮಂತ್ರಿಗಳಿಗೆ ಸಹಭಾಷ್‌ಗಿರಿ ಕೊಡಬೇಕು. ಮಾನ್ಯ ಮೊಯ್ಲಿಯವರು ಮಾತನಾಡುವಾಗ ಅವರು ಅದಕ್ಕೆ ಸಹಭಾಶ್‌ಗಿರಿ ಕೊಡುತ್ತಾರೆಂದು ನಾನು ಭಾವಿಸಿದ್ದೆ. ಆದರೆ ಅವರು ಅದನ್ನು ಮಾಡಲಿಲ್ಲ, ಎಲ್ಲ ತಪ್ಪೆಂದು ಹೇಳಿದರೆ ಸರಿ ಇರುವುದಿಲ್ಲ. ೮ನೇ ಆರ್ಥಿಕ ಆಯೋಗಕ್ಕೆ ಕೊಟ್ಟಿರುವ ಮೆಮೊರ್ಯಾಂಡಮನ್ನು ನಾನು ನೋಡಿದರೆ, ಅದರಲ್ಲಿ ಹೊಸ ವಿಚಾರಧಾರೆ ಇದೆ. ಹಳೇ ಬುಡಿ ಜಾಡು ಇಲ್ಲ. ಆದರಲ್ಲಿ ಎರಡು ಇಂಡಿಕೇಟರ್ಸ್ ಬಗ್ಗೆ ಹೇಳಿದ್ದಾರೆ. ಇಂಡೆಕ್ಸ್ ತೆರಿಗೆಯ ಬಗ್ಗೆ ವ್ಯಾಖ್ಯಾನ ಮಾಡಿದ್ದಾರೆ. ಹೊಸ ರೀತಿಯಲ್ಲಿ ಇರಬೇಕು ಅಂತ. Composite index development and another is index of resource mobilisation......ತಮ್ಮ ರಿಸೋರ್ಸಸ್ ಬಗ್ಗೆ ಎಲ್ಲ ಸರ್ಕಾರಗಳೂ ಯೋಚನೆ ಮಾಡುತ್ತಿವೆ. ಬೇರೆ ಬೇರೆ ರಾಜ್ಯಗಳು ಕೊಟ್ಟಿರುವ ಮೆಮೊರಾಂಡಮನ್ನು ನಾನು ಓದಿದ್ದೇನೆ, ಅವುಗಳೆಲ್ಲವೂ ಹಳೇ ರೀತಿಯಲ್ಲೇ ಇವೆ. ಆದರೆ ಇವರು ಮಾತ್ರ ಹೊಸ ರೀತಿಯಲ್ಲಿ ಹೇಳಿದ್ದಾರೆ. ಒಳ್ಳೆಯದು ಇದೆ, ಒಪ್ಪಿಕೊಳ್ಳುತ್ತೇವೆ. ರಿಸೋರ್ಸಸ್ ಮೊಬಿಲೈಜೇಸನ್ ಮಾಡುವುದಕ್ಕೆ ಪ್ರಯತ್ನ ಮಾಡಿ. ಆದರೆ ಟ್ಯಾಕ್ಸ್ ಹಾಕುವಂತಹದ್ದು ಮತ್ತು ಯಾವ ಜನಗಳ ಮೇಲೆ ಹಾಕತಕ್ಕಂತಹದ್ದನ್ನು ಮೊದಲು ಯೋಚನೆ ಮಾಡಿ ಎಂಬುದಾಗಿ ಹೇಳಬೇಕಾಗುತ್ತದೆ.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಕೃಷ್ಣನ್‌ರವರು ಒಳ್ಳೆಯ ಅಭಿಪ್ರಾಯವನ್ನೇ ಹೇಳುತ್ತಿದ್ದಾರೆ. ೧೦೪ ಕೋಟಿ ರೂಪಾಯಿಗಳ ಸಂಪನ್ಮೂಲವನ್ನು ಒದಗಿಸಿಕೊಳ್ಳುವ ಬಗ್ಗೆ ರಾಜ್ಯ ಸರ್ಕಾರ ವ್ಯವಸ್ಥೆಗೊಳಿಸುತ್ತಿದೆ, ಎಂದರೆ ಹೇಗೆ ಎಂಬುದನ್ನು ಇನ್ನೂ ಸ್ಪಷ್ಟಪಡಿಸಿಲ್ಲ. ನಾಳೆ ಮುಖ್ಯ ಮಂತ್ರಿಗಳು ಅದರ ಬಗ್ಗೆ ಹೇಳಬಹುದು. ಮಾನ್ಯ ಕೃಷ್ಣನ್‌ರವರು ಭಾಷಣವನ್ನು ನಾನು ಬಹಳ ಆಸಕ್ತಿಯಿಂದ ಕೇಳುತ್ತಿದ್ದೇನೆ. ಈ ಸಭೆಯಲ್ಲಿ ಭಿನ್ನಾಭಿಪ್ರಾಯ ಬರಬಹುದು. ನಮಗೆ ಹಲವಾರು ಸಮಸ್ಯೆಗಳು ಇದ್ದಾವೆ. ಒಂದೊಂದರ ಬಗ್ಗೆ ಮಾತನಾಡುವಾಗ ಒಂದೊಂದು ದೃಷ್ಟಿಕೋನ ಇಟ್ಟು ಮಾತನಾಡುತ್ತಿರುತ್ತೇವೆ. ಆಗ ಸಮಗ್ರ ದೃಷ್ಟಿಕೋನವನ್ನೇ ಕೈ ಬಿಡತಕ್ಕಂತಹ ಪರಿಸ್ಥಿತಿ ಬರಬಹುದು ಲೋಕೋಪಯೋಗಿ ಹಾಗೂ ನೀರಾವರಿ ಇಲಾಖೆಯ ಪ್ರಶ್ನೆ ಬಂದಾಗ ೫೫ ಲಕ್ಷ ಹೆಕ್ಟೇರ್ಸ್ ಭೂಮಿಗೆ ನೀರನ್ನು ಕೊಟ್ಟು ನೀರಾವರಿಯನ್ನಾಗಿ ಮಾಡಿಕೊಳ್ಳಬಹುದಾದಷ್ಟು ನೀರು ನಮ್ಮಲ್ಲಿದೆ. ಇನ್ನೊಂದು ಮಾತು ಕೃಷ್ಣ–ವ್ಯಾಲಿ ಹಾಗೂ ಕಾವೇರಿ ವ್ಯಾಲಿಯಲ್ಲಿರತಕ್ಕಂತಹ ನೀರನ್ನು ನಾವು ಬಳಸಿಕೊಳ್ಳಬೇಕು ಅತಿ ಶೀಘ್ರವಾಗಿ ಬಳಸಿಕೊಳ್ಳಬೇಕು ಎನ್ನತಕ್ಕಂತಹ ಅಭಿಪ್ರಾಯಕ್ಕೆ ಬರುತ್ತಿದ್ದೇವೆ. ಈ ಹಿನ್ನಲೆಯಲ್ಲಿ ಒಂದು ಮಾತನ್ನು ಹೇಳಿದರೆ ತಪ್ಪಾಗಲಾರದು. ನರಗುಂದ ಹಾಗೂ ನವಲಗುಂದದಿಂದ ಬಂದಂತಹ ರೈತರ ಜಾಥಾದಲ್ಲಿ ಅವರು ಕೊಟ್ಟಂತಹ ಬೇಡಿಕೆಗಳು ಏನಾಯಿತು ? ಅದರ ಬಗ್ಗೆ ನಾನು ಹೋಗುವುದಿಲ್ಲ. ಒಂದು ಪ್ರಶ್ನೆ ಏನಾಗಿದೆ ಎಂದರೆ, ನಮ್ಮಲ್ಲಿರತಕ್ಕಂತಹ ಹಣದಿಂದ ಎಲ್ಲಿ ಜೀವನ ನದಿ ಇದ್ದಾವೆಯೋ ಅಂತಹ ಕಡೆ ಅಣೆಕಟ್ಟುಗಳನ್ನು ಕಟ್ಟಿ ನೀರನ್ನು ರೈತರಿಗೆ ಒದಗಿಸುತ್ತಿದ್ದೇವೆ, ಇದರಲ್ಲಿ ಅನುಕೂಲ ಪಡೆದುಕೊಳ್ಳುವವರು ೧೦೦ಕ್ಕೆ ೫೦ ರಷ್ಟು ಜನರಿದ್ದಾರೆ, ಆದರೆ ಉಳಿದ ೫೦ ಅಥವಾ ೬೦ ರಷ್ಟು ಜನ ಒಂದು ಬಾವಿಯನ್ನು ತೆಗೆದುಕೊಳ್ಳಬೇಕಾದರೂ ಪಿ. ಎಲ್. ಡಿ. ಬ್ಯಾಂಕಿನಿಂದ ಸಾಲ ಮಾಡಿ ಬಾವಿಯನ್ನು ತೆಗೆದುಕೊಳ್ಳಬೇಕಾಗಿದೆ. ಜೀವ ನದಿ ಇರುವ ಕಡೆ ಅಣೆಕಟ್ಟನ್ನು ಕಟ್ಟಿ ಅದರಿಂದ ಅನುಕೂಲವನ್ನು ಪಡೆಯುತ್ತಿರ ತಕ್ಕಂತಹವರಿಂದ ಸರ್ಕಾರಕ್ಕೆ ವಾಟರ್ ರೇಟ್ ಬರಬೇಕಾಗಿದೆ. ಇದರ ಬೆಟರ್‌ಮೆಂಟ್ ಲೆವಿಯಿಂದ ಹಣ ಬರಬೇಕಾಗಿದೆ ಇದರ ಬಗ್ಗೆ ಜನಾಭಿಪ್ರಾಯವನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಆ ರೀತಿ ರೂಪಿಸಿದರೂ ಎಷ್ಟು ಹಾಕಬೇಕೆಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಏನೂ ಕೊಡಬೇಡಿ ಅಂತ ಅವನಿಗೆ ಹೇಳಿದರೆ

ಹೇಗೆ ಆಗುತ್ತದೆ. ೧೦೦ಕ್ಕೆ ೬೦ರಷ್ಟು ಭಾಗದಲ್ಲಿ ವರ್ಷಕ್ಕೆ ೧೦ ಇಂಚು, ೧೫ ಇಂಚು ಮಳೆ ಬೀಳ ತಕ್ಕಂತಹ ಪ್ರದೇಶಗಳಲ್ಲಿ, ನಾವು ಇದ್ದೇವೆ, ಉಪಾಧ್ಯಕ್ಷರೆ, ತಾವು ಇದ್ದೀರಿ. ನಮಗೆ ಮಳೆ ಬಂದರೆ ಮಾತ್ರ ಬೆಳೆ. ಇಲ್ಲದಿದ್ದರೆ ಇಲ್ಲ. ವ್ಯವಸಾಯಕ್ಕಾಗಿ ನಾವು ಹೆಚ್ಚು ಹಣವನ್ನು ಖರ್ಚು ಮಾಡ ಬೇಕಾಗಿರುವಂತಹ ಪರಿಸ್ಥಿತಿ ಬಂದಿದೆ. ವ್ಯವಸಾಯ ಮಾಡುವುದೂ ಒಂದು ಶಿಕ್ಷಾರ್ಹವಾಗಿದೆ. ಇಂತಹ ಒಂದು ವ್ಯವಸ್ಥೆ ಇದ್ದರೂ ಅವರು ರಾಜ್ಯಕ್ಕೆ ತೆರಿಗೆಯನ್ನು ಕೊಡುತ್ತಿದ್ದಾರೆ. ಅದರ ಬಗ್ಗೆ ಮಾನ್ಯ ಕೃಷ್ಣನ್‌ರವರು ತಮ್ಮ ಅಭಿಪ್ರಾಯವನ್ನು ಹೇಳಬೇಕು. ರಾಜ್ಯದ ಬಗ್ಗೆ ಮಾತನಾಡುತ್ತೇವೆ. ಸ್ವಾತಂತ್ರ್ಯ ಬಂದು ಸುಮಾರು ದಿವಸಗಳಾಯಿತು. ಇವತ್ತು ಈ ಗತಿಗೆ ಬಂದಿದ್ದೇವೆ. ಕೃಷ್ಣಾ ಆವಾರ್ಡ್ ಆಯಿತು. ನೀರನ್ನು ಬಳಸಿಕೊಳ್ಳಬೇಕಾಗಿದೆ. ಅತಿ ಶೀಘ್ರವಾಗಿ ಬಳಸಿಕೊಳ್ಳಬೇಕಾದ ಪ್ರಸಂಗ ಇದೆ. ೮ನೇ ಆರ್ಥಿಕ ಆಯೋಗದಲ್ಲಿ ಮುಂದೆ ಮಾನ್ಯ ಮುಖ್ಯ ಮಂತ್ರಿಗಳವರು ಕೊಟ್ಟಿರುವ ಹೇಳಿಕೆ ಪ್ರಕಾರವಾಗಿ ಇನ್ನೂ ಹೆಚ್ಚು ಟ್ಯಾಕ್ಸ್‌ನ್ನು ಹಾಕುವಂತಹ ಮಟ್ಟಕ್ಕೆ ಬಂದಿರುವುದರಿಂದ. ರಿಸೋರ್ಸಸ್ ಮೊಬಿಲೈಸೇಷನ್‌ನಲ್ಲಿ ಅವರಿಂದ ಹಣವನ್ನು ತೆಗೆದುಕೊಳ್ಳಬೇಕೋ ಬೇಡವೋ ? ತೆಗೆದುಕೊಳ್ಳುವುದಾದರೆ ಎಷ್ಟು ? ಯಾವ ರೀತಿ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ವಿವರವನ್ನು ಅವರು ಕೊಡುತ್ತಾರೆ. ಅವರ ತತ್ವವನ್ನು ಒಪ್ಪಿಕೊಳ್ಳಬೇಕೋ ? ಬೇಡವೋ ? ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ರಂಗನಾಥ್‌ರವರು ನಾನು ಹೇಳಿದ್ದರಲ್ಲಿ ಅಪಾರ್ಥ ಮಾಡಿಕೊಂಡಿದ್ದಾರೇನೋ.

ಶ್ರೀ ಕೆ. ಎಚ್, ರಂಗನಾಥ್.— ನಾನು ಅಪಾರ್ಥ ಮಾಡಿಕೊಂಡಿಲ್ಲ. ತಾವು ಇದರ ಬಗ್ಗೆ ಆಳವಾಗಿ ಅಭ್ಯಾಸ ಮಾಡಿದ್ದೀರಿ. ತಮ್ಮ ಅಭಿಪ್ರಾಯವನ್ನು ಈ ಬಗ್ಗೆ ವ್ಯಕ್ತ ಮಾಡಿ, ಹಾಗೂ ನಿಮ್ಮ ಪಕ್ಷದ ಅಭಿಪ್ರಾಯವೇನು? ಅದರ ಬಗ್ಗೆ ಯೋಚನೆ ಮಾಡಿದ್ದೀರಾ? ಆ ದೃಷ್ಟಿಯಿಂದ ನಾನು ಕೇಳಿದ್ದು.

ಶ್ರೀ ಎಂ. ಎಸ್, ಕೃಷ್ಣನ್.— ಬಹಳ ಮುಖ್ಯವಾದ ಪ್ರಶ್ನೆಯನ್ನು ಮಾನ್ಯ ರಂಗನಾಥ್‌ರವರು ಎತ್ತಿದ್ದಾರೆ. ಹಲವಾರು ಯೋಜನೆಗಳನ್ನು ಮಾಡಿದ್ದೇವೆ. ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಿ ಕೊಟ್ಟ ಮೇಲೆ ಅದರ ಬೆಲೆಯೂ ಕೂಡ ಜಾಸ್ತಿಯಾಗುತ್ತಿದೆ. ಹೀಗೆ ಅಭಿಪ್ರಾಯ ಬರುತ್ತದೆ. ಆದ್ದರಿಂದ ಇದರ ಉಪಯೋಗವನ್ನು ಪಡೆದುಕೊಂಡವರು. ವಾಟರ್ ರೇಟ್ ಅಥವಾ ಬೆಟರ್‌ಮೆಂಟ್ ಲೆವಿಯನ್ನು ಕೊಡಬೇಕೇ, ಅಥವಾ ಕೊಡಬಾರದೇ ಎಂಬುದು ಮುಖ್ಯವಾದ ಪ್ರಶ್ನೆ. ನಾನು ತಿಳಿದುಕೊಂಡಿರುವ ಹಾಗೆ, ನನ್ನ ಅಭಿಪ್ರಾಯದಲ್ಲಿ ಟ್ಯಾಕ್ಸ್ ಕೊಡಬೇಕು, ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಇಲ್ಲದಿದ್ದರೆ ಸರ್ಕಾರವನ್ನು ನಡೆಸುವುದಕ್ಕಾಗುವುದಿಲ್ಲ. ಏನನ್ನೂ ಕೊಡಕೂಡದು ಅಂತ ಹೇಳುವುದಕ್ಕಾಗುವುದಿಲ್ಲ. ಯಾರು ಕೊಡಬೇಕು? ಎಷ್ಟು ಕೊಡಬೇಕು? ಹೇಗೆ ಕೊಡಬೇಕು? ಇದರ ಬಗ್ಗೆ ಕೂಲಂಕುಷವಾಗಿ ವಿಚಾರ ಮಾಡಬೇಕು. ಈಗಲೇ ಅದಕ್ಕೆ ಉತ್ತರ ಕೊಡುವಂತಹ ಪರಿಸ್ಥಿತಿಯಲ್ಲಿಲ್ಲ. ನಾನಾದರೂ ಹೇಳುತ್ತೇನೆ. ಇದರ ಬಗ್ಗೆ ಕೂಲಂಕುಷವಾಗಿ ಯೋಚನೆ ಮಾಡಬೇಕು. ತೆರಿಗೆ ಇಲ್ಲದ ಯಾವುದೇ ಸರ್ಕಾರವನ್ನು ನಡೆಸುವುದಕ್ಕಾಗುವುದಿಲ್ಲ. ಸಮಾಜವಾದದ ರಾಷ್ಟ್ರಗಳಾದ ಸೋವಿಯತ್ ಯೂನಿಯನ್‌ನಲ್ಲೂ ತೆರಿಗೆಗಳು ಇವೆ. ಅವನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅವರ ತೆರಿಗೆ ಬಹಳ ಕಡಿಮೆ. ಆದರೆ ನಮ್ಮಲ್ಲಿ ಶೇಕಡಾ ೫೦ರಷ್ಟು ತೆರಿಗೆಯನ್ನು ಪರೋಕ್ಷವಾಗಿ ಕೊಡುತ್ತಿದ್ದೇವೆ. ಅಲ್ಲಿರುವುದು ಬಹಳ ಕಡಿಮೆ. ಆ ರೀತಿ ಮಾಡುವುದಕ್ಕೆ ಸಾಧ್ಯವಿಲ್ಲ. ರಿಸೋರ್ಸಸ್ ಮೊಬಲೈಜೇಷನ್ ಮಾಡಿದರೂ ಕೂಡ ಶ್ರೀಮಂತ ವರ್ಗದವರ ಮೇಲೆ ತೆರಿಗೆಯನ್ನು ಹಾಕಿ. ಆದರೆ ಬಡವರ ಮೇಲೆ ಹೆಚ್ಚು ಹಾಕಬೇಡಿ ಅಂತ ಹೇಳುತ್ತೇನೆ.

ನಮ್ಮ ರಾಜ್ಯದಲ್ಲಿ ಕೇಂದ್ರ ಮತ್ತು ರಾಜ್ಯದ ಮಧುರ ಸುಮಧುರ ಭಾಂದವ್ಯದ ಬಗ್ಗೆ ಒಂದು ಸೆಮಿನಾರ್ ನಡೆಯಿತು. ಆ ವಿಚಾರದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ವೀರಪ್ಪ ಮೊಯ್ಲಿಯವರು ಕೂಲಂಕುಷವಾಗಿ ಹೇಳಿದ್ದಾರೆ. ಈ ರೀತಿಯಾದ ಒಂದು ಸೆಮಿನಾರ್ ನಮ್ಮ ರಾಜ್ಯದಲ್ಲಿ ನಡೆದದ್ದು ಒಳ್ಳೆಯದು ಎಂದು ಹೇಳುತ್ತೇನೆ. ಮಾನ್ಯ ವೀರಪ್ಪಮೊಯ್ಲಿ ಅವರು ಈ ರೀತಿ ಸೆಮಿನಾರ್ ನಡೆದ್ದನ್ನು ಕನ್‌ಫ್ರಂಟೇಷನ್ ಎನ್ನುವ ರೀತಿಯಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಾನು ಈ ಸಂದರ್ಭದಲ್ಲಿ ಅವರನ್ನು ಕೇಳುತ್ತೇನೆ, ಈ ಬಗ್ಗೆ ಸೆಮಿನಾರ್ ಮಾಡಿದ್ದು ತಪ್ಪೆ? ಅದರಲ್ಲಿ ಏನು ತಪ್ಪಿದೆ? ಈ ಸೆಮಿನಾರ್‌ಅನ್ನು ಯಾರೇ ಮಾಡಲಿ, ನಮ್ಮ ಸರ್ಕಾರದ ಮುಖ್ಯಮಂತ್ರಿಗಳು ಮಾಡಿದರೂ ಹಾಗೆ ಮಾಡುವುದರಲ್ಲಿ ತಪ್ಪೇನಿಲ್ಲವಲ್ಲಾ ಎಂದು ನಾನು ತಿಳಿದುಕೊಂಡಿದ್ದೇನೆ. ಕಾರಣ ಇದರಿಂದ ವಿಷಯ

ಗಳನ್ನು ತಿಳಿದುಕೊಳ್ಳುವುದಕ್ಕೆ ಅವಕಾಶವಾಗುವುದಿಲ್ಲವೆ? ಕೇಂದ್ರ ಮತ್ತು ರಾಜ್ಯಗಳ ಒಂದು ಮಧುರ ಬಾಂಧವ್ಯದ ಬಗ್ಗೆ ಸೆಮಿನಾರ್ ಮಾಡುವುದನ್ನು ಎಲ್ಲರೂ ಒಪ್ಪುತ್ತಾರೆ ಎಂದು ನನ್ನ ಭಾವನೆ ಕಾರಣ ಕೇಂದ್ರ ಮತ್ತು ರಾಜ್ಯಗಳ ಸಂಬಂಧ ಉತ್ತಮವಾಗಬೇಕೆನ್ನುವ ದೃಷ್ಟಿಯಿಂದ ಮಾಡುತ್ತಾರೆ. ಮತ್ತು ಇದನ್ನು ಮಾಡುವ ಉದ್ದೇಶ ರಾಜ್ಯಗಳಿಗೆ ಹೆಚ್ಚು ಹೆಚ್ಚು ಅಧಿಕಾರಬೇಕು, ಫೈನಾನ್ಸ್ ವಿಷಯದಲ್ಲೇ ಆಗಲಿ, ರಾಜಕೀಯ ವಿಷಯದಲ್ಲೇ ಆಗಲಿ, ಆರ್ಥಿಕವಾಗಿಯಾಗಲಿ ಇದು ಒಳ್ಳೆಯದೇ ಎಂದು ಹೇಳುತ್ತೇನೆ. ದಿವಂಗತ ಸಿ. ರಾಜಗೋಪಾಲಚಾರಿಯವರು ಒಂದು ಮಾತು ಹೇಳಿದ್ದು ನನಗೆ ಜ್ಞಾಪಕಕ್ಕೆ ಬರುತ್ತದೆ. ಅದು ಏನೆಂದರೆ ನಾವೆಲ್ಲಾ ಭಿಕ್ಷೆ ಬೇಡುವ ಜನವಲ್ಲ. ಆ ರೀತಿ ಆಗಕೂಡದು ಎನ್ನುವ ಮಾತನ್ನು ಹೇಳಿದ್ದಾರೆ. ಅದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಆದುದರಿಂದ ಈ ಒಂದು ದೃಷ್ಟಿಯಲ್ಲಿ ನೋಡಿದರೆ ಇಂಥಾ ಸೆಮಿನಾರ್ ಮಾಡುವುದರಲ್ಲಿ ತಪ್ಪೇನೂ ಆಗುವುದಿಲ್ಲ. ಈ ಮಾತು ಹೇಳುವುದು ಸರಿಯೇ? ನನಗೆ ಅನ್ನಿಸುತ್ತದೆ ಅವರು ಕನ್‌ಫ್ರಂಟೇಷನ್ ಅನ್ನುವುದನ್ನು ಯಾವುದೋ ದೃಷ್ಟಿ ಇಟ್ಟುಕೊಂಡು ಹೇಳಿದ್ದಾರೆ ಈಗ ಇದರ ಬಗ್ಗೆ ಸರ್ಕಾರಿಯಾ ಆಯೋಗ ಒಂದನ್ನು ಕೇಂದ್ರ ಸರ್ಕಾರದವರು ರಚನೆ ಮಾಡಿದ್ದಾರೆ. ಅದರ ಟರ್ಮ್ಸ್ ಆಫ್ ರೆಫರೆನ್ಸ್ ಏನು ಅನ್ನುವುದು ನಮಗೆ ಗೊತ್ತಿಲ್ಲ. ಆ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಇನ್ನೂ ಹೆಚ್ಚು ವಿಷಯಗಳನ್ನು ಸೇರಿಸಬೇಕು. ರಾಜ್ಯಗಳಿಗೆ ಹೆಚ್ಚು ಹೆಚ್ಚು ಅಧಿಕಾರ ಕೊಡಬೇಕು, ಅವರಿಗೆ ಹೆಚ್ಚು ಹಕ್ಕು ಬಂದರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಇನ್ನು ನಾನು ಟ್ರಾನ್ಸ್‌ಫರ್ ಬಗ್ಗೆ ಮತ್ತು ಕೆಲವು ಇಲಾಖೆಗಳ ಆಡಳಿತ ಬಗ್ಗೆ ಏನು ಹೇಳಿದ್ದೇನೆ ಅದನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನು ಪೋಲೀಸ್ ಇಲಾಖೆ ಬಗ್ಗೆ ಹೇಳುವುದಾದರೆ ಇದಕ್ಕೆ ಒಂದು ಹೊಸ ಔಟ್‌ಲುಕ್ ಬರಬೇಕು ಎಂದು ಹೇಳುತ್ತೇನೆ. ಹಾಗೆ ಬರುವುದೂ ಇಲ್ಲ ಎಂದು ನನಗೆ ಗೊತ್ತಿದೆ. ಕಾರಣ ಸಮಾಜ ಹಾಗೆ ಇದೆ ಯಾವಾಗಲೂ ಇಟ್ ಈಸ್ ಆ್ಯನ್ ಆರ್ಗನ್ ಆಫ್ ರೆಪ್ರೆಷನ್. ಈ ಒಂದು ಹೊಸ ಔಟ್‌ಲುಕ್ ಅನ್ನು ಜನತೆ ನಿರೀಕ್ಷೆ ಮಾಡುತ್ತಿದ್ದಾರೆ. ಅದು ಕಾರ್ಯತಃ ಬರುವುದಿಲ್ಲ. ನಾನು ಮಾರ್ಕ್ಸ್‌ವಾದಿಯಾದರೂ ಕೂಡ ಇದರ ಬಗ್ಗೆ ಥಿಯರಿ ಹೇಳುವುದಿಲ್ಲ. ನಾನು ಇದರ ಥಿಯರಿ ಹೇಳಿದರೆ ನೀವು ಇದನ್ನು ಬದಲಾವಣೆ ಮಾಡಿದ ಹಾಗಾವುದಿಲ್ಲ. ಶ್ರೀಮಾನ್ ಧರ್ಮವೀರರ ಅಧ್ಯಕ್ಷತೆಯಲ್ಲಿ ಒಂದು ಪೋಲೀಸ್ ಕಮೀಷನ್ ಅಂತ ರಚನೆ ಮಾಡಿದರು. ಅವರು ಈ ಇಲಾಖೆ ಬಗ್ಗೆ ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಆ ರಿಪೋರ್ಟ್ ನನಗೆ ಇನ್ನೂ ಸಿಕ್ಕಿಲ್ಲಾ ದಯವಿಟ್ಟು ಈವೊತ್ತು ಪೋಲೀಸಿನವರು ತಿಳಿದುಕೊಳ್ಳಬೇಕಾಗಿದೆ. ಈವೊತ್ತು ಪೋಲೀಸಿನವರು ಕಾರ್ಮಿಕರ ಮೇಲೆ, ಹುಡುಗರ ಮೇಲೆ ಏನು ಒಂದು ದಬ್ಬಾಳಿಕೆ ಮಾಡುತ್ತಿದ್ದಾರೆ, ಅದನ್ನು ಮಾಡಬೇಡಿ ಎಂದು ಹೇಳುತ್ತೇನೆ. ಊರಿಂದ ಆಚೆಗೆ ಹಾಕುವುದು ಮತ್ತು ಎಕ್ಸ್‌ಟರ್ಮಿನೇಟ್ ಆರ್ಡರ್ ಏನು ಇದೆ ಅದನ್ನು ನಿಲ್ಲಿಸಬೇಕು ಎಂದು ಹೇಳುತ್ತೇನೆ. ಉದಾಹರಣೆಗೆ ಶಹಬಾದ್‌ನಲ್ಲಿ ಗುರುನಾಥ್ ಎನ್ನುವರು ಇದ್ದಾರೆ ಅವರು ಒಬ್ಬರು ಅಲ್ಲಿಯ ಪ್ರಮುಖ ಲೀಡರ್, ಹಾಗೆಯೇ ಚಿತ್ರದುರ್ಗದಲ್ಲಿ ಅಲ್ಲಿಯ ಮುಖಂಡರಾದ ಶ್ರೀ ಒಡೆಯರ್ ಹಾಗೆ ಇನ್ನೊಬ್ಬ ಇವರ ಮೇಲೆಲ್ಲಾ ಎಕ್ಸ್‌ಟರ್ಮಿನೇಟ್ ಆರ್ಡರ್ ಉಪಯೋಗಿಸಿದ್ದಾರೆ. ಏತಕ್ಕೆ ಅವರನ್ನು ಊರಿಂದ ಹೊರಗೆ ಓಡಿಸಬೇಕು ? ಅವರೇನೂ ಗೂಂಡಾಗಳಲ್ಲ. ಇನ್ನೊಂದು ಉದಾಹರಣೆ ೧೯ ಜನವರಿ ೧೯೮೧ ರಂದು ಭಾರತ ಬಂದ್ ನಡೆಯಿತು. ಭಾರತ ದೇಶದಲ್ಲಿ ಎಲ್ಲಾ ಕಡೆಯಲ್ಲೂ ಮುಷ್ಕರ ನಡೆಯಿತು. ಈ ಸಂಬಂಧವಾಗಿ ಭಾಗವಹಿಸಿದ ಕೇಂದ್ರ ಕಾರ್ಮಿಕರು ಏನು ಇದ್ದಾರೆ, ಅವರಲ್ಲಿ ಕೆಲವರ ಮೇಲೆ ಕೇಸ್ ಹಾಕಿದ್ದಾರೆ. ನಮ್ಮ ಕಡೆಯ ಶ್ರೀ ಕೆ.ಜಿ. ಮಹೇಶ್ವರಪ್ಪ ಮತ್ತು ಶ್ರೀ ಪಂಪಾಪತಿ ಇನ್ನೂ ಇತರರ ಮೇಲೆ ಈ ಸಂಬಂಧವಾಗಿ ಕೇಸು ಹಾಕಿದ್ದಾರೆ. ಆ ಕೇಸಸ್ ಇದುವರೆಗೂ ಇನ್ನೂ ಇತ್ಯರ್ಥವಾಗಿಲ್ಲ. ಆದುದರಿಂದ ನಾನು ಈ ಸಂಬಂಧದಲ್ಲಿ ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ ಈ ಹುಡುಗರ ಮೇಲೆ ಕಾರ್ಮಿಕರ ಮೇಲೆ ಇನ್ನೂ ಇತರರ ಮೇಲೆ ಈ ಸಂಬಂಧವಾಗಿ ಕೇಸಸ್‌ಗಳು ಏನು ಹಾಕಿದ್ದೀರೋ ಅದನ್ನು ಕೂಡಲೇ ವಾಪಸ್ಸು ತೆಗೆದುಕೊಳ್ಳಬೇಕು ಜೊತೆಗೆ ಎಕ್ಸ್‌ಟರ್ಮಿನೇಟ್ ಆರ್ಡರ್ ಏನು ಇದೆ ಅದನ್ನು ನಿಲ್ಲಿಸಬೇಕು ಎಂದು ಹೇಳುತ್ತೇನೆ.

ಇನ್ನು ಪೋಲೀಸ್ ಕ್ವಾರ್ಟರ್ಸ್ ಬಗ್ಗೆ ಹೇಳುವುದಾದರೆ ಮಾನ್ಯ ಮಂತ್ರಿಗಳು ದಯವಿಟ್ಟು ನನ್ನ ಜೊತೆಯಲ್ಲಿ ಬಂದರೆ ಕರೆದುಕೊಂಡು ಹೋಗಿ ತೋರಿಸುತ್ತೇನೆ. ಆ ಪೋಲೀಸ್ ಕ್ವಾರ್ಟರ್ಸ್ ನೋಡಿದರೆ ಒಂದು ದನದ ದೊಡ್ಡಿ ಇದ್ದ ಹಾಗೆ ಇದೆ. ಆ ತರಹ ಮಾಡಿ ಇಟ್ಟಿದ್ದೀರಿ. ಜೊತೆಗೆ ಅಲ್ಲಿ ನೀರಿನ

ಸೌಕರ್ಯ ಇಲ್ಲ, ಬೀದಿ ದೀಪ ಇಲ್ಲ ಮತ್ತು ಸುತ್ತಮುತ್ತ ಪಾರ್ಥೇನಿಯಂ ಗಿಡ ಬೆಳೆದುಕೊಂಡಿದೆ. ಹೀಗಿದ್ದರೆ ಅವರು ಹೇಗೆ ಅಲ್ಲಿ ವಾಸ ಮಾಡಬೇಕು ? ಅವರ ಮೇಲೆ ಏತಕ್ಕೆ ತಮಗೆ ಅನುಕಂಪ ಇರಬಾರದು ? ಆ ಬಗ್ಗೆ ತಾವು ಗಮನ ಕೊಡಬೇಕು ಎಂದು ಹೇಳುತ್ತೇನೆ.

ಇನ್ನು ನಮ್ಮ ರಾಜಧಾನಿನಗರದಲ್ಲಿ ಸರ್ಕಾರೀ ಕ್ವಾರ್ಟರ್ಸ್‌ನಲ್ಲಿ ನೌಕರರು ಏನು ಇದ್ದಾರೆ ಅಲ್ಲೂ ಸಹ ಹೀಗೆ ಇವೆ. ಆ ಬಗ್ಗೆಯೂ ಸಹ ತಾವು ಗಮನಕ್ಕೆ ತೆಗೆದುಕೊಂಡು ಅವರಿಗೆ ಸೌಕರ್ಯಗಳನ್ನು ಒದಗಿಸಿ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಪ್ರಿಜನ್ಸ್ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ನಾನೂ ಸಹ ಅನೇಕ ಸಾರಿ ಜೈಲಿಗೆ ಹೋಗಿದ್ದೇನೆ. ಒಂದು ವರ್ಷಗಳ ಕಾಲ ಜೈಲಿನಲ್ಲಿ ಇದ್ದೇನೆ. ಆದರೆ ನಾವೇನೂ ಪಂಚರಂಗಿಯವರ ಹಾಗಲ್ಲ. ನಾವು ರಾಜಕೀಯವಾಗಿ ಜೈಲಿಗೆ ಹೋಗಿ ಬಂದವರು. ಯಾವುದೂ ಕಳ್ಳ ಮಾಡಿ ಜೈಲಿಗೆ ಹೋದವರಲ್ಲ. ರಾಜಕೀಯವಾಗಿ ಹೋಗಿದ್ದೇವೆ. ಈವೊತ್ತು ತಾವು ಬೆಂಗಳೂರಿನಲ್ಲಿ ಒಂದು ಹೊಸ ಸೆಂಟ್ರಲ್ ಜೈಲ್‌ನ್ನು ಕಟ್ಟುವುದಕ್ಕೆ ೮ ಕೋಟಿ ರೂಪಾಯಿ ಆಗುತ್ತದೆ ಎಂದು ಹೇಳಿದ್ದೀರಿ ಆದರೆ ಈವೊತ್ತು ಇದಕ್ಕೆ ನೀವು ಸ್ಯಾಂಕ್ಷನ್ ಮಾಡಿರುವುದು ಎಷ್ಟು ಎಂದರೆ ೧೫–೧೬ ಲಕ್ಷ. ಹೀಗಾದರೆ ಆ ಕಟ್ಟಡವನ್ನು ಪೂರೈಸಬೇಕಾದರೆ ಇನ್ನೂ ೫೦ ವರ್ಷ ಬೇಕಾಗುತ್ತದೆ. ಈ ಕೆಲಸ ತ್ವರಿತ ಗತಿಯಲ್ಲಿ ಆಗುವ ಹಾಗೆ ಯೋಜನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಈ ಜೈಲಿನಲ್ಲಿರುವ ಖೈದಿಗಳಿಗೆ ಸಂಬಳವನ್ನು ರೂ. ೧–೫೦ ರಿಂದ ೨ ರೂಪಾಯಿ ಮಾಡಿದ್ದೀರಲ್ಲಾ ಇದು ೧೯೪೮ನೇ ಇಸವಿಯಲ್ಲಿ ಆದುದ್ದು. ಇದು ಬಹಳ ಕಡಿಮೆ. ಕಾಶ್ಮೀರದಲ್ಲಿ ಇವರಿಗೆ ೬ ರೂಪಾಯಿ ಮಾಡಿದ್ದಾರೆ ನೀವು ೪ ರೂಪಾಯಿಗಳನ್ನಾದರೂ ಮಾಡಬೇಕು ಎಂದು ಹೇಳುತ್ತೇನೆ. ಇನ್ನೊಂದು ವಿಷಯ ಏನೆಂದರೆ ಪೋಲೀಸಿನವರಿಗೆ, ವಾರ್ಡನ್ಸ್‌ನವರಿಗೆ ಟೆರಿಕಾಟ್ ಯೂನಿಫಾರಂನ್ನು ಕೊಡಬೇಕು ಎಂದು ಹೇಳುತ್ತೇನೆ. ಇನ್ನು ಇದರಲ್ಲಿ ಕಿರಿಯ ಅಪರಾಧಿಗಳು ಏನು ಇದ್ದಾರೆ, ಅವರನ್ನು ಇಟ್ಟುಕೊಂಡು ಏತಕ್ಕೆ ಓಂಪೆ ಕೊಡುತ್ತೀರಾ ಅವರನ್ನೆಲ್ಲಾ ಬಿಟ್ಟುಬಿಡಬೇಕು ಎಂದು ಹೇಳುತ್ತೇನೆ.

ಇನ್ನು ಸ್ಕೇಲ್ಸ್ ಆಫ್ ಪೇ ವಿಚಾರದಲ್ಲಿ ಹೇಳುವುದಾದರೆ ಜಾಯಿಂಟ್ ಸೂಪರಿಂಟೆಂಡೆಂಟ್ ಸ್ಕೇಲ್ ಅನ್ನು ಎಸ್.ಪಿ.ಗೆ ಸಮಾನ ಮಾಡಿದ್ದೀರಿ ಹಾಗೆಯೇ ಅಸಿಸ್ಟೆಂಟ್ ಜೈಲರ್ ಸ್ಕೇಲ್ ಅನ್ನು ಡಿ.ಎಸ್.ಪಿ. ಗ್ರೇಡ್‌ಗೆ ಸಮಾನ ಮಾಡಿದ್ದೀರಿ ಹಾಗೆಯೇ ಚೀಫ್ ಜೈಲರ್ ಸ್ಕೇಲ್ ಅನ್ನು ಸರ್ಕಲ್ ಇನ್ಸ್‌ಪೆಕ್ಟರ್ ಗ್ರೇಡ್‌ಗೆ ಸಮಸಮಾನವಾಗಿದ್ದರೂ ಕೂಡ ಪೋಲೀಸ್ ಇಲಾಖೆಯಲ್ಲಿರುವವರಿಗೆ ಸಂಬಳ ಜಾಸ್ತಿ ಬರುತ್ತದೆ ಈ ಪ್ರಿಸನ್ಸ್‌ನಲ್ಲಿರುವವರಿಗೆ ಕಡಿಮೆ ಸಂಬಳ ಬರುತ್ತದೆ. ಈ ತಾರತಮ್ಯ ಏತಕ್ಕೆ ? ಈ ತಾರತಮ್ಯವನ್ನು ಹೋಗಲಾಡಿಸಿ ಪ್ರಿಸನ್ಸ್‌ನಲ್ಲಿರುವ ಅಧಿಕಾರಿಗಳಿಗೆ ಅನುಕೂಲ ಮಾಡಿಕೊಡಬೇಕು ಎಂದು ಹೇಳುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಈ ಪ್ರಿಜನ್ಸ್ ಅಧಿಕಾರಿಗಳಿಗೆ ಕ್ವಾರ್ಟರ್ಸ್‌ನ್ನು ಬೆಂಗಳೂರಿಗೆ ೧೦ ಮೈಲಿ ದೂರದಲ್ಲಿ ಏನು ಕಟ್ಟಿದ್ದೀರಿ, ಅಲ್ಲಿಂದ ಅವರು ಇಲ್ಲಿಗೆ ಬರುವುದು ಹೇಗೆ ? ಆದುದರಿಂದ ಅವರಿಗೆ ಟ್ರಾನ್ಸ್‌ಪೋರ್ಟ್ ಫೆಸಿಲಿಟೀಸ್ ಅನ್ನು ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ. ಹಾಗೆಯೇ ಸ್ಟೈಫಂಡರಿ ಗ್ರ್ಯಾಜುಯೇಟ್ಸ್ ಬಗ್ಗೆ ಹೇಳುವುದಾದರೆ ಮಾನ್ಯ ಸದಸ್ಯರುಗಳು ಇವರ ಬಗ್ಗೆ ಏನು ಒಂದು ಬೆಂಬಲವನ್ನು ವ್ಯಕ್ತಪಡಿಸಿದರೋ ಅದೇ ರೀತಿಯಾಗಿ ನಾನೂ ಸಹ ಅವರ ಬಗ್ಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

ಇನ್ನು ಸರ್ಕಾರದ ಪರ್‌ಫಾರ್ಮೆನ್ಸ್ ಬಗ್ಗೆ ಹೇಳುವುದಾದರೆ ನನ್ನ ಅಭಿಪ್ರಾಯದಲ್ಲಿ ಈಗ ಹೋಗುತ್ತಾ ಇರುವ ದಾರಿ ನೋಡಿದರೆ ಎಲ್ಲಿ ತಪ್ಪು ದಾರಿಗೆ ಹೋಗುತ್ತದೋ ಎನ್ನುವುದು ದುಃಖವಾಗುತ್ತದೆ. ತಾವು ಚುನಾವಣೆಯಲ್ಲಿ ಯಾವ ಒಂದು ವಚನ ಕೊಟ್ಟಿದ್ದಿರೋ ಅದರಿಂದ ಹಿಂದಕ್ಕೆ ಹೋದರೆ ಅದು ಸರಿಯಲ್ಲ. ತಮಗೆ ಹೇಳಬೇಕಾದರೆ ಹುಬ್ಬಳ್ಳಿಯಲ್ಲಿ ರಾತ್ರಿಯೆಲ್ಲಾ ಎರಡು ಗಂಟೆಯವರೆಗೆ ಕೂತುಕೊಂಡು ಮೇಯರ್ ಮತ್ತು ಡೆಪ್ಯೂಟಿ ಮೇಯರ್ ಚುನಾವಣೆ ಬಗ್ಗೆ ಒಂದು ಒಪ್ಪಂದ ಮಾಡಿಕೊಂಡೆವು. ಇದು ಮಾನ್ಯ ಹೊಮ್ಮಾಯಿಯವರಿಗೆ ಗೊತ್ತಿದೆ. ಆದರೆ ಬೆಳಗ್ಗೆ ೫ ಗಂಟೆಗೆ ನೋಡಿದರೆ ನಮ್ಮನ್ನು ಕೈಬಿಟ್ಟರು. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನಿಸಬೇಕಾಗಿತ್ತು, ಅದಕ್ಕೆ ಹೇಳುತ್ತಿದ್ದೇನೆ. ಹೀಗೆ ಕೈ ಬಿಟ್ಟರಲ್ಲಾ ಇದರಿಂದ ನೀವು ಕೊಟ್ಟ ವಚನ ಏನಾಯಿತು ? ನಿಮ್ಮ ಪಾರ್ಟಿಯವರು ಮುಸ್ಲಿಂ ಜನಾಂಗದವರ ಯಾರ ಕೈಗೂ ಕೊಡಬಾರದು, ಅಂತ ಏನೇನೊ ಹೇಳುತ್ತಿದ್ದರೋ ಆದರೆ ಈಗ ನೋಡಿದರೆ ಮತ್ತೆ ಅವರ ಕೈಗೇ ಕೊಟ್ಟಂತಾಗಿದೆ. ಅದೇನೇ ಇರಲಿ

ಈ ಸರ್ಕಾರ ಜಾತ್ಯಾತೀತ ಪಕ್ಷ ಸಮಾಜಕ್ಕಾಗಿ ಹೋರಾಟ ಮಾಡತಕ್ಕಂಥಾ ಸರ್ಕಾರ ಎಂದು ಪರಿಗಣಿಸುವ ಹಾಗೆ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಭೀಮಣ್ಣ ಖಂಡ್ರೆ (ಭಾಲ್ಕಿ).—ಮಾನ್ಯ ಉಪಾಧ್ಯಕ್ಷರೇ. ಈ ಸರ್ಕಾರದ ನಡವಳಿಕೆಗಳಿಗೆ ಬಗ್ಗೆ ಏನೊಂದು ಟೀಕೆ ಟಿಪ್ಪಣಿಗಳನ್ನು ಕೆಲವು ಸದಸ್ಯರು ಮಾಡಿದ್ದಾರೆ ಅದನ್ನೇ ನಾನೂ ಸಹ ಮುಂದುವರೆಸಿ ಈವೊತ್ತು ಈ ಸಭೆಯಯ ಮುಂದಿರತಕ್ಕಂಥಾ ಬೇಡಿಕೆಗಳನ್ನೂ ವಿರೋಧ ಮಾಡುತ್ತೇನೆ. ಅದಕ್ಕೆ ಕಾರಣವಾದರೂ ಇಷ್ಟೆ, ಕೆಲವರು ಹಿಂದಿನ ಸರ್ಕಾರದವರು ಆ ಕೆಲಸ ಮಾಡಿದರು ಈ ಕೆಲಸ ಮಾಡಿದರು ಎಂದು ಹೇಳಿದರು, ಅದೇನೇ ಇರಲಿ ನಾನು ಹೇಳುವುದೇನೆಂದರೆ ಈ ಜನತಾ ಸರ್ಕಾರ ಬಂದಮೇಲೆ ಈ ೯ ತಿಂಗಳಲ್ಲಿ ಏನೇನು ಕೆಲಸಗಳನ್ನು ಮಾಡಿದ್ದಾರೆ ಎನ್ನುವುದನ್ನು ಕೇಳುತ್ತೇನೆ. ಅಲ್ಲದೆ ಅವರು ಅಧಿಕಾರಕ್ಕೆ ಬರುವ ಮುನ್ನ ನಾವು ಅಧಿಕಾರಕ್ಕೆ ಬಂದರೆ ಏನೇನ್ನು ಕೆಲಸಗಳನ್ನು ಮಾಡಿಕೊಡುತ್ತೇವೆಂದು ತಮ್ಮ ಒಂದು ಪ್ರಣಾಳಿಕೆಯಲ್ಲಿ ಹೇಳಿದ್ದರೋ, ಈ ೯ ತಿಂಗಳ ಅವಧಿಯಲ್ಲಿ ನೋಡಿದರೆ ಅದಾವುದೂ ಕೂಡ ಸಿದ್ಧಿಸಿಲ್ಲ ಅನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

2-30 P.M.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಅದಲ್ಲದೆ ಇವರು ಏನು ಹೇಳುತ್ತಿದ್ದಾರೆ ಏನು ಮಾಡುತ್ತಿದ್ದಾರೆ ಎನ್ನುವುದನ್ನು ನೋಡಿದರೆ ಬಹಳ ವ್ಯತ್ಯಾಸ ಇದೆ. ನಮ್ಮಲ್ಲಿ ಒಂದು ಮಾತು ಹೇಳುತ್ತಾರೆ, ಯಾರು ಬಹಳ ಹೇಳುತ್ತಾರೆ ಅವರು ಏನೂ ಮಾಡುವುದಿಲ್ಲ. ಅವರ ಮಾತು ಬರೀ ಮಾತೇ. ಕಾರ್ಯದಲ್ಲಿ ಯಾವುದೂ ಬಂದಿಲ್ಲ ಎನ್ನತಕ್ಕ ಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಮಾನ್ಯ ಸದಸ್ಯರಾದ ಬಂಗಾರಪ್ಪನವರು ಮಾತನಾಡುತ್ತಾ ಈ ೯ ತಿಂಗಳ ಕೂಸು ಏನಿದೆ ಇದು ಆರೋಗ್ಯವಾಗಿದೆಯೋ ಹೇಗೆ ? ಅಥವಾ ಇಲ್ಲವೇ ಎನ್ನುವುದನ್ನು ಡಾಕ್ಟರಿಗೆ ತೋರಿಸಬೇಕು ಎಂದು ಹೇಳಿದರು. ನನ್ನ ಅಭಿಪ್ರಾಯದಲ್ಲಿ ಇನ್ನೂ ಕೂಸೇ ಆಗಿಲ್ಲ, ಗರ್ಭ ಮಾತ್ರ ಇದೆ, ಅಂದರೆ ಇವರದು ಬರೀ ಮಾತು ಎಂದರ್ಥ. ಕೆಲಸವನ್ನು ಇವರು ಏನೂ ಮಾಡಿಲ್ಲವೆಂದು ಸ್ಪಷ್ಟವಾಗಿ ತೋರಿಸುತ್ತದೆ. ಸರ್ಕಾರದವರು ಯಾವುದೇ ಕೆಲಸವನ್ನು ಮಾಡಿದರೂ ಸಹ ಅದು ಸರಿಯಾಗಿದ್ದರೆ ಸರಿಯಾಗಿದೆ, ಇಲ್ಲದಿದ್ದರೆ ಇಲ್ಲವೆಂದು ಹೇಳುತ್ತೇನೆ. ಸೆಂಟರ್ ಮತ್ತು ಸ್ಟೇಟ್‌ನ ರಿಲೇಷನ್ ಬಗ್ಗೆ ಮಾತನಾಡುವಾಗ, ಮಾನ್ಯ ಮುಖ್ಯಮಂತ್ರಿಗಳು ನಾವು ಸೆಂಟರ್‌ನವರಿಂದ ನಮಗೆ ಇಷ್ಟು ಹಣ ಬೇಕು ಎಂದು ಕೇಳಿದ್ದೇವೆ, ಅವರು ಇಷ್ಟು ಕೊಟ್ಟಿದ್ದಾರೆ ಎಂದು ಹೇಳಿದರು. ತಾವು ಹಣ ಕೇಳುವುದಕ್ಕೆ ನಮ್ಮ ವಿರೋಧವಿಲ್ಲ. ಆದರೆ ಹಣವನ್ನು ಬೇಡುವುದರಲ್ಲಿಯೂ ತಾವು ರಾಜಕೀಯವನ್ನು ಮಾತ್ರ ಮಾಡುವುದು ಬೇಡ. ರಾಜಕೀಯವನ್ನು ಉಪಯೋಗ ಮಾಡಿರುವುದಕ್ಕೆ ತಾವು ಹೊರಟರೆ ಇದರಲ್ಲಿ ನಮಗೆ ಸ್ವಲ್ಪ ವ್ಯತ್ಯಾಸ ಬರುತ್ತದೆ, ಇಲ್ಲದಿದ್ದರೆ ನಮ್ಮ ಸ್ಟೇಟ್‌ಗೆ ಎಷ್ಟು ಹಣ ಬರಬೇಕೋ ಅಷ್ಟು ಬರಬೇಕು ಎನ್ನುವುದರಲ್ಲಿ ನಾವು ಯಾರೂ ವಿರೋಧ ಮಾಡುವುದಿಲ್ಲ. ಸರ್ಕಾರಕ್ಕೆ ಕೇಂದ್ರದಿಂದ ಎಷ್ಟೇ ಹಣ ಬಂದರೂ ಸಹ ಅದನ್ನು ಹೆಚ್ಚಾಗಿ ನಗರಗಳಲ್ಲಿ ಬೆಳಗಾಂ ಅಂಥ ನಗರಗಳಲ್ಲಿ ಖರ್ಚು ಮಾಡುತ್ತಾರೆಯೋ ಹೊರತು ಜಿಲ್ಲಾ ಕೇಂದ್ರಗಳಲ್ಲಿ ಮತ್ತು ಬ್ಯಾಕವರ್ಡ್ ಏರಿಯಾಗಳಲ್ಲಿ ಖರ್ಚು ಮಾಡುತ್ತಿಲ್ಲ. ಇಲ್ಲಿಯೂ ಸಹ ಸರ್ಕಾರದವರು ಹೆಚ್ಚು ಹಣವನ್ನು ಖರ್ಚು ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ. ಇಲ್ಲಿಯವರಿಗೆ ತಾವು ಬ್ಯಾಕ್‌ವರ್ಡ್ ಏರಿಯಾಗಳನ್ನು ನೆಗ್ಲೆಟ್ ಮಾಡಿದ್ದೀರಿ ಎನ್ನುವ ಒಂದು ಭಾವನೆ ನಮಗೆ ಬಂದಿದೆ. ಹಳ್ಳಿಗಳ ಪರಿಸ್ಥಿತಿಯನ್ನು ನಾವು ನೋಡಿದರೆ ಅಲ್ಲಿ ೩೫ ವರ್ಷಗಳ ಹಿಂದೆ ಯಾವ ಪರಿಸ್ಥಿತಿ ಇತ್ತೋ ಅದೇ ಪರಿಸ್ಥಿತಿ ಈಗಲೂ ಇದೆ. ಅಲ್ಲಿ ರಸ್ತೆಗಳು ಇಲ್ಲ, ಶಾಲೆಗಳು ಇಲ್ಲ, ಟೀಚರ್ಸ್ ಇಲ್ಲ ಟೀಚರ್ಸ್ ಇದ್ದರೆ ಸರಿಯಾದ ವ್ಯವಸ್ಥೆ ಇಲ್ಲ. ಇಂಥ ಪರಿಸ್ಥಿತಿ ನಮ್ಮಲ್ಲಿದೆ. ಇದನ್ನು ತಾವೂ ಒಪ್ಪಿಕೊಳ್ಳುತ್ತೀರಿ. ಈ ಒಂದು ಹಿನ್ನೆಲೆಯಲ್ಲಿ ಹಿಂದಿನ ಸರ್ಕಾರದವರು ಹೈದರಾಬಾದ್ ಕರ್ನಾಟಕ ಏರಿಯಾವನ್ನು ಈ ಭಾಗಕ್ಕೆ ಸೇರಿಸಿಕೊಂಡರು. ಒಳ್ಳೆಯ ಭಾವೈಕ್ಯತೆಯ, ಸಂಸ್ಕೃತಿಯ ದೃಷ್ಟಿಯಿಂದ ನಾವೆಲ್ಲರೂ ಇಲ್ಲಿ ಸೇರಿದ್ದೇವೆ. ಆದರೆ ಅಲ್ಲಿ ಇವತ್ತಿನವರಿಗೂ ಇಷ್ಟು ವರ್ಷಗಳಾದರೂ ಸಹ ತಾರತಮ್ಯ ಹೋಗಿಲ್ಲ. ಯಾವುದೇ ಸರ್ಕಾರ ಬರಲೀ, ನಮ್ಮ ಹಳ್ಳಿಗಳ ಬಗ್ಗೆ ನಮ್ಮ ಏರಿಯಾ ಬಗ್ಗೆ ಕಾಳಜಿ ಮಾತ್ರ ತೆಗೆದುಕೊಂಡಿಲ್ಲ ಎನ್ನುವುದನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ಆದಕ್ಕಾಗಿ ಹಿಂದಿನ ಸರ್ಕಾರ ನಮ್ಮ ಒಂದು ಒತ್ತಾಯದ ಮೇರೆಗೆ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂದು ಒಂದು ಸಂಸ್ಥೆಯನ್ನು ಮಾಡಿತು. ಇದರಲ್ಲಿ ಸುಮಾರು ೩೦೦ ಕೋಟಿ ರೂಪಾಯಿಗಳನ್ನು ಒದಗಿಸಿ ೧೦ ವರ್ಷಗಳಲ್ಲಿ ಇದನ್ನು ಖರ್ಚು ಮಾಡಬೇಕು ಎನ್ನುವ ಕಾರ್ಯಕ್ರಮವನ್ನು ಅವರು ಹಾಕಿಕೊಂಡಿದ್ದರು. ಜನತಾ ಸರ್ಕಾರ ಅಧಿಕಾರಕ್ಕೆ ಬಂದನಂತರ ಇದು ಮಣ್ಣಾಗಿ ಹೋಯಿತು. ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಕಾರ್ಪೊರೇಷನ್ ಏನು ಇದೆ ಅದರ ಬಗ್ಗೆ ಇವರು ಏನು ಡಿಸಿಷನ್ ತೆಗೆದುಕೊಂಡಿದ್ದಾರೆ ಎಂದು ನೋಡಿದಾಗ ಇವರು ಇದಕೆ ಮಣ್ಣನ್ನು ಹಾಕಿದ್ದಾರೆ ಎಂದು ನಾನು ಜನತಾ ಪಾರ್ಟಿಗೆ ಚಾರ್ಜ್ ಮಾಡಬೇಕಾಗಿದೆ.

ಶ್ರೀ ಎಚ್. ಡಿ ದೇವೇಗೌಡ.—ಮಾನ್ಯ ಸದಸ್ಯರು ಮಾತನಾಡುವಾಗ ರಾಜಕೀಯ ಮಾಡದೆ ಮಾತನಾಡಿದರೆ ಒಳ್ಳೆಯದು, ರಾಜಕೀಯ ಮಾಡಿದರೆ ಅದಕ್ಕೆ ಮಹತ್ವ ಬರುವುದಿಲ್ಲ.

ಶ್ರೀ ಭೀಮಣ್ಣ ಖಂಡ್ರೆ.—ಹೈದರಾಬಾದ್ ಕರ್ನಾಟಕ ಏರಿಯಾ ಬ್ಯಾಕ್‌ವರ್ಡ್ ಇದ್ದು ಮಹಾರಾಜರ ಕಾಲದಿಂದ ತೆಗೆದುಕೊಂಡರೂ ಸಹ, ಇತರೆ ಭಾಗಗಳಲ್ಲಿ ೧೦೦ ಸ್ಕ್ವಯರ್‌ಮೀಟರ್ ರಸ್ತೆಯಾಗಿದ್ದರೆ ನಮ್ಮಲ್ಲಿ ೫೧ಸ್ಕ್ವಯರ್ ಮೀಟರ್ ರಸ್ತೆಯಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—೧೯೫೬ರಲ್ಲಿ ನೀವು ಇಲ್ಲಿಗೆ ಬಂದಾಗ ಏನು ಇತ್ತು. ಈಗ ಏನಾಗಿದೆ ಎನ್ನುವುದನ್ನು ಹೇಳಿ ?

ಶ್ರೀ ಭೀಮಣ್ಣ ಖಂಡ್ರೆ.—೧೯೫೬ರಲ್ಲಿ ಇದ್ದ ಹಾಗೆ ಈಗಲೂ ಇರಬೇಕು ಎಂದು ಹೇಳುತ್ತೀರಾ ?

ನಮ್ಮ ಕಾಲ ಮೇಲೆ ನಾವು ನಿಂತುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಹಾಗಿದ್ದರೆ, ನಿಮ್ಮ ಕಾಲ ಮೇಲೆ ನೀವು ನಿಂತುಕೊಳ್ಳಿ, ನಮ್ಮನ್ನು ಏಕೆ ತಾವು ಟೀಕೆ ಮಾಡಬೇಕು ಇಲ್ಲಿ ತಾವು ರಾಜಕೀಯ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಭೀಮಣ್ಣ ಖಂಡ್ರೆ.—ನಾವು ಹೇಳಿದ್ದಕ್ಕೆ ತಾವು ಉತ್ತರ ಕೊಡಬೇಕೇ ಹೊರತು ಕೋಪ ಮಾಡಿಕೊಳ್ಳಬಾರದು.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ನಮ್ಮ ಭಾಷೆಯಲ್ಲಿ ಮಣ್ಣು ಹಾಕಿದ್ದೀರಿ ಎಂದರೆ ನೆಗ್ಲೆಕ್ಟ್ ಮಾಡಿದ್ದೀರಿ ಎಂದು ಅರ್ಥ.

ಶ್ರೀ ಎಚ್ ಡಿ ದೇವೇಗೌಡ.—ನಾವು ಏನು ಮಾಡಿದ್ದೇವೆಂದು ನಾವು ಹೇಳುತ್ತೇವೆ, ನೀವು ಏನು ಮಾಡಿದ್ದೀರಿ ಎಂಬುದನ್ನು ಹೇಳಿ ? ತಾವು ಇಲ್ಲಿ ರಾಜಕೀಯ ಮಾಡುವುದಕ್ಕೆ ಹೋದರೆ ನಮಗೂ ಸಹ ರಾಜಕೀಯ ಮಾಡುವುದಕ್ಕೆ ಬರುತ್ತದೆ. ನಾವು ಮಣ್ಣು ಹಾಕಿದ್ದೇವೆಂದು ಹೇಳಿದರೆ ಏನು ಅರ್ಥ?

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಸದಸ್ಯರು ನೆಗ್ಲೆಕ್ಟ್ ಮಾಡಿದ್ದಾರೆಂದು ಹೇಳುವುದಕ್ಕೆ ಆ ರೀತಿಯಾಗಿ ಹೇಳಿದ್ದಾರೆ. ಇದಕ್ಕೆ ತಾವು ಏತಕ್ಕೆ ಕೋಪ ಮಾಡಿಕೊಳ್ಳಬೇಕು.

ಅಧ್ಯಕ್ಷರು.—ಭೀಮಣ್ಣನವರು ಒಳ್ಳೆಯ ವಕೀಲರು ತಾವು ಏಕೆ ಅವರಿಗೆ ವಕಾಲತ್ತು ವಹಿಸುತ್ತಿದ್ದೀರಿ ?

SRI MALLIKARJUNA M. KHARGE.—That is a different matter. What he is charging is that this Government is neglecting the Hyderabad Karnataka Area. If you are not a Minister, we would not have asked you. Because you are in the Government we are asking you.

ಶ್ರೀ ಎಚ್. ಡಿ. ದೇವೇಗೌಡ.—ನಮಗೆ ಅದಕ್ಕೆ ಉತ್ತರ ಹೇಳುವುದಕ್ಕೆ ಅಧಿಕಾರ ಇದೆ.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಮುಖ್ಯ ಮಂತ್ರಿಗಳಿಗೆ ಉತ್ತರ ಕೊಡಲಿಕ್ಕೆ ನಾನು ಬೇಡ ಎಂದು ಹೇಳುವುದಿಲ್ಲ. ಅವರು ಅಧಿಕಾರಕ್ಕೆ ಬಂದು ೯ ತಿಂಗಳಾಗಿದೆ, ಏನೂ ಕೆಲಸ ಮಾಡಿಲ್ಲ ಎಂದು ಹೇಳುವಾಗ ಅವರು ನಮಗೆ ನಂತರ ಉತ್ತರ ಕೊಡಬೇಕು.

ಶ್ರೀ ಎಚ್. ಡಿ. ದೇವೇಗೌಡ.—ನೀವು ಅಧಿಕಾರದಲ್ಲಿದ್ದಾಗ ಕಾರಂಜಿಯ ಪ್ರಾಜೆಕ್ಟಗೆ ಎರಡು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ನಾವು ಇದಕ್ಕೆ ೩ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ, ಇದಕ್ಕೆ ನೀವು ಸರ್ಕಾರವನ್ನು ಅಭಿನಂದಿಸಬೇಕಾಗಿತ್ತು

SRI MALLIKHARJUN M. KHARGE.—Karanja and Irrigation projects are not alone achievements. It may be in Mr. Devegowda's dept. What about other departments ?

ಶ್ರೀ ಎಚ್. ಡಿ. ದೇವೇಗೌಡ.—೩೦ ವರ್ಷಗಳಲ್ಲಿ ಇವರು ಇದನ್ನೂ ಸಹ ಮಾಡಲಿಲ್ಲ. ೯ ತಿಂಗಳಲ್ಲಿ ನಾವು ಸ್ವರ್ಗವನ್ನು ಧರೆಗೆ ಇಳಿಸುವುದಕಾಗುತ್ತದೆಯೇ ?

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಮಂತ್ರಿಗಳು ಇದನ್ನು ತಮ್ಮ ಪ್ರಾಪರ್ಟಿಯಾಗಿ ತಿಳಿದು ಕೊಂಡಂತೆ ಕಾಣುತ್ತದೆ. ಸರ್ಕಾರದ ಹಣ ನಿಮ್ಮ ಆನ್ಸೆಸ್ಟರಲ್ ಪ್ರಾಪರ್ಟಿಯೇ ? ನೀವು ರಾಜರ ಹಾಗೆ ಯಾವಾಗಳೂ ಆಳುತ್ತೀರಿ ಎಂದು ತಿಳಿದುಕೊಂಡಿದ್ದೀರಾ ! Your are not the whole and sole. It is not your property.

ಶ್ರೀ ಎಚ್. ಡಿ. ದೇವೇಗೌಡ.—ವಿಷಯಗಳನ್ನು ಮಾತನಾಡುವಾಗ ನಮ್ಮ ಏರಿಯಾಕ್ಕೆ ಮಣ್ಣು ಹಾಕಿದ್ದಾರೆ, ಎಂದರೆ ಏನು ಅರ್ಥ ? ಇಲ್ಲಿ ರಾಜಕೀಯವನ್ನು ಮಾಡುವುದು ಬೇಡ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅವರ ಭಾಷೆಯೇ ಹಾಗೆ, ಉರ್ದು ಮಿಕ್ಸ್ ಆಗಿರುತ್ತದೆ.

ಶ್ರೀ ಎಸ್. ಎಂ. ಪಾಟೀಲ್.—ನಮ್ಮಲ್ಲಿಯ ಭಾಷೆಯೇ ಆ ರೀತಿಯಿದೆ. ಇಲ್ಲಿ ತಿಂಡಿ ತೀರಿಸಿ ಕೊಂಡು ಹೋಗ್ರಿ ಎಂದು ಹೇಳುತ್ತಾರೆ, ನಮ್ಮಲ್ಲಿ ಇದೇ ಮಾತನ್ನು ಹೇಳಿದರೆ ಬೇರೆ ಅರ್ಥ ಕೊಡುತ್ತದೆ. ಇದಕ್ಕೆ ತಾವು ಕೋಪ ಮಾಡಿಕೊಳ್ಳಬಾರದು.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಮಂತ್ರಿಗಳು ಇದಕ್ಕೆ ಕೋಪ ಮಾಡಿಕೊಳ್ಳಬಾರದು. ನಾವು ಕನ್ನಡವನ್ನು ಸರಿಯಾಗಿ ಕಲೆತಿಲ್ಲ ನಮ್ಮ ಮಾತೃಭಾಷೆ ಕನ್ನಡವಾದ್ದರಿಂದ ಮಾತನಾಡುತ್ತಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಭಾಷೆಯ ವ್ಯತ್ಯಾಸದಿಂದ ಈ ವ್ಯತ್ಯಾಸವಾಗಿದೆ.

ಶ್ರೀ ಭೀಮಣ್ಣ ಖಂಡ್ರೆ.—ಕಾರಂಜಿ ಪ್ರಾಜೆಕ್ಟಗೆ ತಾವು ಏನು ಹಣವನ್ನು ಕೊಟ್ಟಿದ್ದೀರಿ ಅದಕ್ಕೆ ನಾನು ಆಭಾರಿಯಾಗಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ನೀವು ಕೊಟ್ಟಿರುವುದಕ್ಕಿಂತ ಹೆಚ್ಚು ಹಣವನ್ನು ನಾವು ಕೊಟ್ಟಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇವತ್ತು ನಿಮ್ಮ ಮುಖ್ಯಮಂತ್ರಿಗಳು ಏನು ಮಾಡಿದ್ದಾರೆ ಅದಕ್ಕೆ ನೂರುಪಟ್ಟು ನಾವು ಮಾಡಿದ್ದೇವೆ. ಹೈದರಾಬಾದ್ ಕರ್ನಾಟಕ ಏರಿಯಾದಲ್ಲಿ ೧೯೭೨ ರಿಂದ ೧೯೮೦ರವರೆಗೆ ಏನು ಮಾಡಿದ್ದೇವೆಂದು ನಿಮ್ಮ ಮುಖ್ಯಮಂತ್ರಿಗಳನ್ನು ಕೇಳಿ ?

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯಸದಸ್ಯರು ಅಂಕಿಅಂಶಗಳನ್ನು ಇಟ್ಟುಕೊಂಡು ಮಾತನಾಡ ಬೇಕು. ಇಲ್ಲಿ ಸಂತೆ ಭಾಷಣ ಮಾಡಿದರೆ ಏನೂ ಪ್ರಯೋಜನ ಇಲ್ಲ.

ಶ್ರೀ ಭೀಮಣ್ಣ ಖಂಡ್ರೆ.—ನಾವು ಅದೇ ಹೇಳುತ್ತಾ ಇದ್ದೇವೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಪಿ.ಡಬ್ಲ್ಯು.ಡಿ.ಯಲ್ಲಿ ಅವರು ಸಾಧನೆ ಮಾಡಿರತಕ್ಕ ವಿಚಾರ ಹೇಳಿದರೆ ಮುಖಭಂಗವಾಗುತ್ತದೆ. ಸುಮ್ಮನೆ ಏತಕ್ಕೆ ಮಾತನಾಡುವುದಕ್ಕೆ ಹೋಗುತ್ತಾರೆ ?

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೆ, ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ಜೊತೆಯಲ್ಲಿ ಮಾತನಾಡುವುದು ಮುಖ್ಯ. ಬರೀ ಸಂತೆಯ ಮಾತಲ್ಲ. ನಾನು ಅವರಿಗೆ ಹೇಳುತ್ತಾ ಇದ್ದೇನೆ. ಕಾರಂಜ ಪ್ರಾಜೆಕ್ಟ್‌ನಲ್ಲಿ ಹೋದಸಾರಿ ೫ ಕೋಟಿ ರೂಪಾಯಿ ಕೊಟ್ಟಿದ್ದೇವೆ, ಅಧಿಕಾರಿಗಳು ಖರ್ಚು ಮಾಡಲಿಲ್ಲ, ೩ ಕೋಟಿ ೫೦ ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ, ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ನೋಡಿಕೊಳ್ಳಿ. ಈ ವರ್ಷ ನೀವು ೨೨೦ ಲಕ್ಷ ಕೊಟ್ಟಿದ್ದೀರಿ, ಇದು ಸರಿ ಇಲ್ಲ ಎನ್ನತಕ್ಕ ಮಾತನ್ನು ಹೇಳುತ್ತಾ ಇದ್ದೇನೆ.

ಅಧ್ಯಕ್ಷರು.—ಈ ಬೇಡಿಕೆ ಇರಿಗೇಷನ್‌ಗೆ ಸಂಬಂಧ ಪಟ್ಟಿದ್ದು ಅಲ್ಲ.

ಶ್ರೀ ಭೀಮಣ್ಣ ಖಂಡ್ರೆ.—ಜನರಲ್ ಅಡ್ಮಿನಿಸ್ಟ್ರೇಷನ್ ಇದೆ. ಇರಿಗೇಷನ್ ಯಾವ ಪ್ರಕಾರ ಇದೆ ಎಂದು ಹೇಳುತ್ತಾ ಇದ್ದೇನೆ. ಸ್ಟೇಟ್ ಅಂಡ್ ಸೆಂಟರ್ ರಿಲೇಷನ್‌ಶಿಪ್ ಬಗ್ಗೆ ಮಾತನಾಡುತ್ತಾ ಇದ್ದೀರಿ.

ಒಬ್ಬ ಮಾನ್ಯ ಸದಸ್ಯರು.—ಸ್ವಾಮಿ ಅವರು ಯಾವ ಡಿಮ್ಯಾಂಡ್ ಮೇಲೆ ಮಾತನಾಡುತ್ತಾ ಇದ್ದಾರೆಂದು ಗೊತ್ತಾಗುತ್ತಾ ಇಲ್ಲ.

ಶ್ರೀ ಭೀಮಣ್ಣ ಖಂಡ್ರೆ.—ನಾನು ಜನರಲ್ ಅಡ್ಮಿನಿಸ್ಟ್ರೇಶನ್ ಮೇಲೆ ಮಾತನಾಡುತ್ತಾ ಇದ್ದೇನೆ. ಇದು ಒಂದು. ಮತ್ತೆ ಫೈನಾನ್ಸ್ ಮಿನಿಸ್ಟರದೂ ಜೊತೆಗೆ ಇದ್ದ ಕಾರಣ ಫೈನಾನ್ಸ್ ಡಿಮ್ಯಾಂಡ್ ಇದರಲ್ಲಿ ಬಂದಿದೆ. ಫೈನಾನ್ಸ್ ಯಾವ ಪ್ರಕಾರ ಡಿಸ್ಟ್ರಿಬ್ಯೂಟ್ ಮಾಡುತ್ತಾ ಬಂದಿದ್ದೀರಿ ಎನ್ನುವುದನ್ನು ಹೇಳುತ್ತಾ ಇದ್ದೇನೆ. ನೀವು ಸೆಂಟರ್‌ನಿಂದ ಫೈನಾನ್ಸ್ ಬೇಡುವಾಗ, ನಮ್ಮ ಷೇರ್ ಕೊಡಿ ಎಂದು ಬೇಡುವಾಗ ನಾವೂ ನಿಮ್ಮ ಜೊತೆಯಲ್ಲಿ ಇದ್ದೇವೆ ಎಂದು ಹೇಳುತ್ತಾ ಇದ್ದೇನೆ. ಅಲ್ಲಿ ಯಾವ ಗವರ್ನಮೆಂಟ್, ಇಲ್ಲಿ ಯಾವ ಗವರ್ನಮೆಂಟ್ ಎನ್ನುವುದು ಸ್ವಲ್ಪ ನಿಮ್ಮ ತಲೆಯಲ್ಲಿ ಇದ್ದಿರಬೇಕು, ನನ್ನ ತಲೆಯಲ್ಲಿ ಇಲ್ಲ. ನೀವು ಯಾವ ಷೇರ್ ಬೇಡುತ್ತಾ ಇದ್ದೀರಿ ಹಾಗೆಯೇ, ಕರ್ನಾಟಕ ರಾಜ್ಯದಲ್ಲಿ ೨೬ ಸಾವಿರ ಹಳ್ಳಿಗಳಲ್ಲಿ ಎಲ್ಲೆಲ್ಲಿ ಬ್ಯಾಕ್‌ವರ್ಡ್ ಏರಿಯಾ ಇದೆ ಅಲ್ಲಿಗೆ ಹೆಚ್ಚಾಗಿ ಕೊಡಬೇಕು ಎಂದು ಹೇಳುತ್ತಾ ಇದ್ದೇನೆ, ಮತ್ತು ತಾರತಮ್ಯ ಮಾಡಬೇಡಿ ಎಂದು ಹೇಳುತ್ತಾ ಇದ್ದೇನೆ. ಈಗ ಕಾರಂಜ ಪ್ರಾಜೆಕ್ಟ್ ಬಗ್ಗೆ ತಮ್ಮ ಮುಂದೆ ಇಡುತ್ತಾ ಇದ್ದೇನೆ. ಈ ೬ ತಿಂಗಳವರೆಗೆ ಎಷ್ಟು ಖರ್ಚು ಮಾಡಿದ್ದೀರಿ ಅಂದರೆ, ೪೦ ಲಕ್ಷ ಖರ್ಚು ಮಾಡಿದ್ದೀರಿ, ಇನ್ನು ೬ ತಿಂಗಳಲ್ಲಿ ಎಷ್ಟು ಖರ್ಚು ಮಾಡುತ್ತೀರಿ ? ೪ ಕೋಟಿ, ಅಥವಾ ೫ ಕೋಟಿ ಖರ್ಚು ಮಾಡುತ್ತೇವೆ ಎಂದು ನೀವು ಹೇಳಿದಿರಿ, ಅದನ್ನು ಮಾಡಿದ ನಂತರ ಹೇಳಿರಿ, ನಾನು ಆಗ ಅಪ್ರಿಸಿಯೇಟ್ ಮಾಡುತ್ತೇನೆ. ಆದರೆ ಯಾವ ರೀತಿಯ ಕೆಲಸ ಆಗುತ್ತಾ ಇಲ್ಲ, ೬ ತಿಂಗಳಾದರೂ ಒಂದು ಟೆಂಡರ್ ಕಾಲ್‌ಫಾರ್ ಮಾಡಲಿಲ್ಲ. ಇನ್ನು ೬ ತಿಂಗಳಾದರೂ ಆಗುವುದಿಲ್ಲ. ಆ ದೃಷ್ಟಿಯಿಂದ ಮುಂದಿನ ಫ್ಯೂಚರನ್ನು ಹೇಳುತ್ತಾ ಇದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.—೧೦ನೇ ತಾರೀಖು ಜನವರಿ ಈ ಸರ್ಕಾರ ಆಡಳಿತಕ್ಕೆ ಬಂತಲ್ಲ ಅಲ್ಲಿಂದ ಇಲ್ಲಿಯವರೆಗೆ ಅಂದರೆ ಜೂನ್‌ವರೆಗೆ ೧೫೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಜನವರಿ ೧೦ನೇ ತಾರೀಖು ಈ ಸರ್ಕಾರ ಬಂತು. ಅಲ್ಲಿಂದ ಜೂನ್ ೧೯೮೩ರವರೆಗೆ ೧೫೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇದು ಒಂದು ಎರಡನೆಯದಾಗಿ ಮಾನ್ಯ ಖಂಡ್ರೆಯವರಲ್ಲಿ ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ, ಬಹುಶಃ ಮಾನ್ಯ ಭೀಮಣ್ಣ ಖಂಡ್ರೆಯವರು ಮಂತ್ರಿಯಾದರೆ ಯಾವ ರೀತಿ ಆಡಳಿತ ನಡೆಸುತ್ತಾರೋ ಗೊತ್ತಿಲ್ಲ. ಸಂಪನ್ಮೂಲಗಳ ಕೊರತೆ ತುಂಬಿಕೊಳ್ಳುವಾಗ ಎಲ್ಲರ ಸಹಕಾರ ಬೇಕು ಎಂದು ಹೇಳಿದ್ದೇನೆ. ದುಡ್ಡನ್ನು ಒದಗಿಸಿ ಕೊಡದೇ ಹೋದರೆ ಬರೀ ಭಾಷಣ ಮಾಡುತ್ತಾರೆ. ನಾನು ಅದಕ್ಕೆ ಉತ್ತರ ಹೇಳುತ್ತೇನೆ. ಕೆಲಸ ಮಾತ್ರ ಅಲ್ಲಿಗೆ ನಿಂತಿರುತ್ತದೆ.

ಶ್ರೀ ಭೀಮಣ್ಣ ಖಂಡ್ರೆ.—ಸಂಪನ್ಮೂಲಗಳ ಬಗ್ಗೆ ನಾನು ಮಾತನಾಡುತ್ತೇನೆ. ತಾವು ೧ ಕೋಟಿ ಖರ್ಚು ಮಾಡಿದ್ದೇವೆಂದು ಹೇಳಿದಿರಿ, ಕೆನಾಲ್ ವರ್ಕ್ ಅಲ್ಲಿಗೆ ಕ್ಲೋಸ್ ಆಗಿದೆ. ಇದು ತಮಗೆ ಗೊತ್ತಿರುವ ವಿಷಯ. ದೊಡ್ಡ ಕಂಟ್ರಾಕ್ಟರಿಗೆ ಕಾಂಪನ್ಸೇಷನ್ ಕೊಟ್ಟಿರಬಹುದು, ಅದರಲ್ಲಿ ಖರ್ಚು ಆಗಿರಬಹುದು ಎನ್ನತಕ್ಕ ಮಾತನ್ನು ಹೇಳುತ್ತಾ ಇದ್ದೇನೆ. ಆದರೆ ವಾಸ್ತವಿಕವಾಗಿ ಎಷ್ಟು ಖರ್ಚಾಗಿದೆ ಎನ್ನುವುದನ್ನು ಉತ್ತರದಲ್ಲಿ ಹೇಳಬೇಕು. ನಿಮ್ಮದು ಸಂಪನ್ಮೂಲ ಇದೆ. ಕೇಂದ್ರದಿಂದ ಷೇರ್, ಫೈನಾನ್ಸ್ ಯಾವ ರೀತಿ ಬೇಡುತ್ತೀರೋ ಹಾಗೆಯೆ ನಮಗೂ ಷೇರ್ ಕೊಡಿ ಎಂದು ಹೇಳುತ್ತಾ ಇದ್ದೇನೆ ಇದರ ಜೊತೆಗೆ ಬ್ಯಾಕ್‌ವರ್ಡ್ ಏರಿಯ ಇದೆ, ಇದರ ಬಗ್ಗೆ ಸಂಪೂರ್ಣವಾದ ವರದಿ ತಮ್ಮ ಮುಂದಿದೆ. ಆದ್ದರಿಂದ ಹೆಚ್ಚಿಗೆ ಹೇಳುವುದಿಲ್ಲ. ಅಂಕೆ ಸಂಖ್ಯೆಗಳನ್ನು ಹೇಳುತ್ತಾ ಇದ್ದೇನೆ. ಇದರಲ್ಲಿ ಪ್ರತಿಯೊಂದು ಸ್ಟೇಟಿನ ಆವರೇಜ್ ೫೧ ಇದೆ, ನಮ್ಮ ರಾಜ್ಯದ್ದು ೩೬ ಇದೆ. ಆ ಡಿಸ್‌ಪ್ಯಾರಿಟಿ ದೂರ ಮಾಡಬೇಕಾದರೆ ೧೫೫ ಲಕ್ಷ ಖರ್ಚು ಆಗಬೇಕಾಗಿತ್ತು, ಈವರೆಗೆ ಅದು ಆಗಿದ್ದಿಲ್ಲ, ಮುಂದೆಯಾದರೂ ಆಗತಕ್ಕ ಸಂಶಯವಿದೆ. ಅದಕ್ಕೆ ವಾಸ್ತವಿಕವಾಗಿ ನ್ಯಾಯ ಕೊಡಬೇಕಾದರೆ ಖರ್ಚು ಮಾಡಬೇಕು ಎಂದು ಹೇಳುತ್ತಾ ಇದ್ದೇನೆ. ಇವತ್ತು ತಾವು ಸಂಪನ್ಮೂಲದ ಬಗ್ಗೆ ಮಾತನಾಡುತ್ತಾ, ಯಾವ

ಪ್ರಕಾರ ಹಣ ಒದಗಿಸಬೇಕು ಎಂದು ಹೇಳುತ್ತಾ ಇದ್ದೀರಿ. ಈಗ ಹಣ ಸರ್ಕಾರಕ್ಕೆ ಏನು ಬರುತ್ತಾ ಇದೆ ಅದರಲ್ಲಿ ಮೂರನೇ ಒಂದು ಭಾಗ ಬರೀ ಸ್ಯಾಲರಿ ಕೊಡುತ್ತಾ ಇದ್ದೀರಿ. ಇನ್ನು ಮೂರನೇ ಎರಡು ಭಾಗದಲ್ಲಿ ಕಾಲು ಭಾಗ ಕರಪ್ಷನ್‌ಗೆ ಹೋಗುತ್ತಿದೆ ನೀವು ಭ್ರಷ್ಟಾಚಾರ ಬಂದ್ ಮಾಡಿದರೆ ಆ ಹಣ ಉಳಿಯುತ್ತದೆ. ಟ್ಯಾಕ್ಸ್ ಹಾಕುವ ಅವಶ್ಯಕತೆ ಇಲ್ಲ. ಇವತ್ತು ಟ್ಯಾಕ್ಸ್‌ನ ಗತಿ ಮೀರಿ ಆಕಾಶಕ್ಕೆ ಮುಟ್ಟಿದೆ. ನಮ್ಮಲ್ಲಿ ಎಷ್ಟು ಟ್ಯಾಕ್ಸ್ ಇದೆ. ಅಷ್ಟು ಇಡೀ ಇಂಡಿಯಾದಲ್ಲಿ ಯಾವ ರಾಜ್ಯದಲ್ಲೂ ಇಲ್ಲ. ಅಷ್ಟೊಂದು ಟ್ಯಾಕ್ಸ್ ಇದೆ. ಈಗ ಸರ್ಕಾರಕ್ಕೆ ಏನು ಇನ್‌ಕಂ ಇದೆ ಅದನ್ನು ಸರಿಯಾಗಿ ಖರ್ಚು ಮಾಡಿದರೆ, ಮತ್ತು ತಮ್ಮ ಇಲಾಖೆಯಲ್ಲಿ ಏನು ಭ್ರಷ್ಟತನವಿದೆ, ಆ ಭ್ರಷ್ಟತನವನ್ನು ದೂರಮಾಡಿದರೆ ಹೆಚ್ಚಿನ ಹಣ ಒದಗಿಸಬಹುದು, ೨೦–೩೦ ಪರ್ಸೆಂಟ್ ಇರಿಗೇಷನ್ ಪ್ರಾಜೆಕ್ಟ್‌ನ್ನು ಕಂಪ್ಲೀಟ್ ಮಾಡಬಹುದು. ಆದುದರಿಂದ ಕರಪ್ಷನ್ ಬಂದ್ ಮಾಡುವುದಕ್ಕೆ ಪ್ರಯತ್ನ ಮಾಡಿ ಇಡೀ ರಾಜ್ಯದಲ್ಲಿ ರೈತರು ಎಷ್ಟು ಸಫರ್ ಆಗಿದ್ದಾರೆ ಅಷ್ಟು ಯಾರೂ ಆಗಿಲ್ಲ.

ಶ್ರೀ ಎಸ್. ಆರ್, ಲಕ್ಷ್ಮಯ್ಯ.— ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ. ಮಾನ್ಯ ಭೀಮಣ್ಣ ಖಂಡ್ರೆಯವರು ಬಹಳ ಚೆನ್ನಾಗಿ ಮಾತನಾಡುತ್ತಾ ಇದ್ದಾರೆ. ಸರ್ಕಾರದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ ಎಂದು ಹೇಳಿದರು. ಹಿಂದಿನ ಸರ್ಕಾರ ಇದ್ದಾಗಲೂ ಸಹ ಭ್ರಷ್ಟಾಚಾರ ಯಾವ ಮಟ್ಟದಲ್ಲಿ ಹರಿಯುತ್ತಿತ್ತು ಎನ್ನುವುದು ಅವರಿಗೆ ಚೆನ್ನಾಗಿ ಗೊತ್ತಿದೆ. ಅವರು ಹಿರಿಯರು, ಜೂನಿಯರ್ ಇಂಜನಿಯರಿಗೆ...

ಅಧ್ಯಕ್ಷರು.—ಇದರಲ್ಲಿ ಏನೂ ಪಾಯಿಂಟ್ ಆಫ್ ಆರ್ಡರ್ ಇಲ್ಲ, ಮಾನ್ಯ ಲಕ್ಷ್ಮಯ್ಯನವರೆ ಕುಳಿತುಕೊಳ್ಳಿ.

ಶ್ರೀ ಎಸ್. ಆರ್. ಲಕ್ಷ್ಮಯ್ಯ,—ಜೂನಿಯರ್ ಇಂಜನಿಯರ್ ಲೆವೆಲ್‌ನಲ್ಲಿ ಎಷ್ಟು ಭ್ರಷ್ಟಾಚಾರ ನಡೆಯುತ್ತಿತ್ತು ಎನ್ನುವುದು ಗೊತ್ತಿದೆ.

ಶ್ರೀ ಭೀಮಣ್ಣ ಖಂಡ್ರೆ.—ಪಾಯಿಂಟ್ ಆಫ್ ಆರ್ಡರ್‌ಪ್ರಶ್ನೆ ಇಲ್ಲ ಎಂದು ಹೇಳಿದ್ದಾರೆ, ಅವರು ಕೊಡಬೇಕು. ಈ ಭ್ರಷ್ಟಾಚಾರ ಜನತಾ ಸರ್ಕಾರ ಬಂದಾಗಲೇ ಬಂದಿದೆ ಎಂದು ಹೇಳಿದರೆ ಆ ಮಾತು ಹೇಳಬೇಕು. ಭ್ರಷ್ಟಾಚಾರ ಬಹಳ ದಿವಸದಿಂದ ಇದೆ. ಭ್ರಷ್ಟಾಚಾರ್ ಮಾಡುವುದರಲ್ಲಿ ನಾವು ನೀವು ಎಂದು ಅಲ್ಲ, ಆದಕ್ಕೆ ಪಾರ್ಟಿ ಎಂದು ಇಲ್ಲ, ಜಾತಿ ಎಂದು ಇಲ್ಲ. ಪ್ರತಿಯೊಂದು ಜಾತಿಯಲ್ಲೂ, ಪಾರ್ಟಿಯಲ್ಲೂ ಪ್ರತಿಯೊಂದು ವರ್ಗದಲ್ಲೂ ಭ್ರಷ್ಟಾಚಾರ ನಡೆಯುತ್ತಾ ಇದೆ, ಅದರ ಬಗ್ಗೆ ವಾದ ಇಲ್ಲ. ಆದರೆ ಅದನ್ನು ತಡೆಗಟ್ಟಬೇಕು ಎನ್ನುವ ವಾದವನ್ನು ತಮ್ಮ ಮುಂದೆ ಇಡುತ್ತಾ ಇದ್ದೇನೆ. ನಮ್ಮ ಸರ್ಕಾರ ಇದ್ದಾಗ, ನಮ್ಮ ಮಂತ್ರಿಗಳು ಇದ್ದಾಗ ಭ್ರಷ್ಟಾಚಾರ ಇದ್ದರೆ ಅದನ್ನು ಸಹ ನಾನು ಈ ಅಸೆಂಬ್ಲಿಯಲ್ಲಿ ಹೇಳಿದ್ದೇನೆ. ಅದರ ಬಗ್ಗೆ ಕಾಳಜಿ ಮಾಡುವುದಕ್ಕೆ ಕಾರಣವಿಲ್ಲ. ಇವತ್ತು ಭ್ರಷ್ಟಾಚಾರ ಬಂದಾಗಿದ್ದರೆ ಯಾವುದೇ ಟ್ಯಾಕ್ಸ್ ಹಾಕಬೇಕಾದ ಅವಶ್ಯಕತೆ ಇರಲಿಲ್ಲ ಎಂದು ಹೇಳುತ್ತಾ ಇದ್ದೇನೆ. ಮಾನ್ಯ ದೇವೇಗೌಡರಿಗೆ ಹೇಳುತ್ತಾ ಇದ್ದೇನೆ ತಮ್ಮ ಸರ್ಕಾರ ಬೆಟರ್‌ಮೆಂಟ್ ಲೆವಿ ತರಬೇಕು ಅಥವಾ ವಾಟರ್ ರೇಟ್ ಹೆಚ್ಚು ಮಾಡಬೇಕು ಎಂದು ಪ್ರಯತ್ನ ಮಾಡುತ್ತಿದೆ, ಇದು ಸರಿಯಲ್ಲ. ಏಕೆಂದರೆ, ಇವತ್ತು ಜನ ಬಹಳ ತೊಂದರೆಯಲ್ಲಿದ್ದಾರೆ. ಟ್ಯಾಕ್ಸ್ ಹೆಚ್ಚು ಮಾಡಬೇಕು ಎನ್ನುವ ಪ್ರಶ್ನೆ ಬಂದಾಗ, ನೀವು ಬೆಟರ್‌ಮೆಂಟ್ ಲೆವಿ ಹಾಕಬೇಕು ಎಂದು ಇದ್ದರೆ, ವಾಟರ್ ರೇಟ್ ಹೆಚ್ಚು ಮಾಡಬೇಕು ಎಂದು ಇದ್ದರೆ ಎಲ್ಲರೂ ಕೂಡ ಮಾಡಿದರೆ ಮಾಡೋಣ. ಆದರೆ ನಮ್ಮ ಪತಿಯಿಂದ ಅಥವಾ ಕಾಂಗ್ರೆಸ್ ಪಕ್ಷದ ಪತಿಯಿಂದ ನಾನು ಸ್ಪಷ್ಟವಾಗಿ ಹೇಳಬಹುದು ಅದಕ್ಕೆ ನಾವು ಸಹಕಾರ ಮಾಡುವುದಿಲ್ಲ, ಸಹಕಾರ ಮಾಡುವುದಕ್ಕೆ ಸಾಧ್ಯವಿಲ್ಲ, ಅದು ಅನ್ಯಾಯ. ಬೆಟರ್‌ಮೆಂಟ್ ಲೆವಿಯನ್ನು ಮತ್ತೊಮ್ಮೆ ಹಾಕುವುದಕ್ಕೆ ಪ್ರಯತ್ನ ಮಾಡಿದರೆ ಕಿಸಾನ್‌ಸೆಲ್‌ನಿಂದ ಇಡೀ ರಾಜ್ಯದ್ಯಾಂತ ಒಂದು ದೊಡ್ಡ ಅಜಿಟೇಷನ್ ಆಗುತ್ತದೆ, ಆದ್ದರಿಂದ ಟ್ಯಾಕ್ಸ್ ಹಾಕುವುದಕ್ಕೆ ಹೋಗುವುದು ಸರಿಯಲ್ಲ. ಇವತ್ತು ಎಷ್ಟು ಹಣ ಬಂದಿದೆ, ನಾವೇನು ಕೊಡುತ್ತೇವೆ ಅದನ್ನು ಸರಿಯಾಗಿ ಉಪಯೋಗ ಮಾಡಬೇಕು. ಇವತ್ತಿನ ದಿವಸ ರೈತರು ದೇಶದಲ್ಲಿ ಬದುಕುವುದಕ್ಕೆ ಸಾಧ್ಯವಿಲ್ಲ. ತಾವು ಯಾವ ಪ್ರಕಾರ ಕಂಟ್ರೋಲ್ ಮಾಡಿದಿರಿ ಅಂದರೆ ಸೀಲಿಂಗ್‌ನೊಳಗೆ ಅಂದರೆ ಯಾವ ಮನುಷ್ಯನೂ ೨೦ ಸಾವಿರಕ್ಕಿಂತ ಹೆಚ್ಚು ಇನ್‌ಕಂ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಯಾವುದೇ ದೃಷ್ಟಿಯಿಂದ ಟ್ಯಾಕ್ಸ್‌ನ್ನು ಹೆಚ್ಚು ಮಾಡಿದರೆ ನಾವು ಪ್ರತೀಕಾರ ಮಾಡುತ್ತೇವೆ ಎಂದು ನಾನು ತಮಗೆ ಸ್ಪಷ್ಟವಾಗಿ ತಿಳಿಸುತ್ತಾ ಇದ್ದೇನೆ,

ಶ್ರೀ ಎಚ್. ಡಿ. ದೇವೇಗೌಡ.—ಅಧ್ಯಕ್ಷರೇ ಒಂದು ವಿವರಣೆ ಕೊಡುತ್ತೇನೆ. ಮಾನ್ಯ ಭೀಮಣ್ಣ ಖಂಡ್ರೆಯವರೇ ಮುಖ್ಯ ಮಂತ್ರಿಗಳಾದಾಗ ಇಡೀ ಭ್ರಷ್ಟಾಚಾರವನ್ನು ತೆಗೆದು ಹಾಕಲಿ. ಭ್ರಷ್ಟಾಚಾರದಿಂದ ಬರತಕ್ಕ ಹಣದಿಂದ ಕಾರಂಜ ಮತ್ತು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗಳಿಗೆ ಉಪಯೋಗ ಮಾಡಿ ಆ ಕೆಲಸಗಳನ್ನು ಬೇಗನೇ ಮಾಡಿಕೊಳ್ಳಲಿ ಬೇಡವೆಂದು ಹೇಳುವುದಿಲ್ಲ.

ಶ್ರೀ ಭೀಮಣ್ಣ ಖಂಡ್ರೆ.—ನಾನು ಮುಖ್ಯ ಮಂತ್ರಿಯಾಗುವ ವಿಷಯ ಬೇರೆ ಬಿಡಿ. ಇವತ್ತು ಸರ್ಕಾರಕ್ಕೆ ಬರತಕ್ಕ ಹಣ ಏನಿದೆ ಅದೇ ಸರಿಯಾಗಿ ಬರುತ್ತಿಲ್ಲ ಅದರ ಬಗ್ಗೆ ನಾನು ಹೇಳುತ್ತಿದ್ದೇನೆ. ಸೇಲ್ಸ್ ಟ್ಯಾಕ್ಸ್‌ಗಳಿಂದ ಇನ್‌ಕಂ ಬರುತ್ತದೆ ಎನ್ನತಕ್ಕ ಕಲ್ಪನೆ ಇದೆ, ಆದರೆ ಅದು ಕಡಿಮೆಯಾಗುತ್ತಿದೆ ಅದರ ಬಗ್ಗೆ ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ಇಟ್ಟುಕೊಂಡೇ ನಾನು ಮಾತನಾಡುತ್ತಿದ್ದೇನೆ. ೪ ಪರ್ಸೆಂಟ್ ಫುಡ್‌ಗ್ರೇನ್ ಮೇಲೆ ಏನು ಹಾಕಿದ್ದೀರಿ ಇದರಿಂದ ಎಲ್ಲಾ ಆಹಾರ ವಸ್ತುಗಳು ಮಹಾರಾಷ್ಟ್ರ ಮತ್ತು ಆಂಧ್ರ ಮತ್ತು ತಮಿಳುನಾಡಿಗೆ ಹೋಗುತ್ತಿದೆ. ನಮ್ಮ ಭಾಲ್ಕಿ ತಾಲ್ಲೂಕಿನ ವಿಷಯ ತಗೆದುಕೊಂಡರೆ ಈ ೪ ಪರ್ಸೆಂಟ್ ಸೇಲ್ಸ್ ಟ್ಯಾಕ್ಸನ್ನು ಹಾಕಿರುವುದರಿಂದ ಮುಂಚೆ ೫ ಲಕ್ಷ ಇನ್‌ಕಂ ಬರುತ್ತಿದ್ದುದು ಈಗ ೩ ಲಕ್ಷ ಇನ್‌ಕಂ ಕೂಡ ಬರುತ್ತಿಲ್ಲ. ಇದಕ್ಕೆ ಕಾರಣವೇನೆಂದರೆ ಆಹಾರ ವಸ್ತುಗಳೆಲ್ಲಾ ಪಕ್ಕದ ರಾಜ್ಯಗಳಿಗೆ ಹೋಗುತ್ತಿದೆ, ಆದುದರಿಂದ ಇದರ ಬಗ್ಗೆ ಸರ್ಕಾರದವರು ಗಮನಹರಿಸಬೇಕೆಂದು ಹೇಳ ಬಯಸುತ್ತೇನೆ.

ಇನ್ನು ನೀವು ಅಧಿಕಾರಕ್ಕೆ ಬಂದು ೯ ತಿಂಗಳಾಯಿತು ಇಷ್ಟರವರೆಗೆ ಲ್ಯಾಂಡ್ ರಿಫಾರಂಸ್ ಪ್ರಕಾರವಾಗಿ ಎಷ್ಟು ಕೇಸ್‌ಗಳನ್ನು ಇತ್ಯರ್ಥ ಮಾಡಿದ್ದೀರಿ ? ಅದರಲ್ಲಿ ಯಾವ ಕೆಲಸವೂ ಆಗಿಲ್ಲ. ಜನತಾ ಮನೆಗಳ ಕೆಲಸ ಕೂಡ ಸರಿಯಾಗಿ ಆಗುತ್ತಿಲ್ಲ. ಹೋದ ವರ್ಷ ಎಷ್ಟು ಮನೆಗಳ ಕೆಲಸವಾಗಿತ್ತೋ ಅದು ಈ ವರ್ಷ ಅಷ್ಟೇನೂ ಆಗಿಲ್ಲ. ಇನ್ನು ಬೆಗ್ಗರ್ಸ್ ಹೋಂಗೋಸ್ಕರವಾಗಿ ಏನು ಹಣವನ್ನು ಇಟ್ಟಿದ್ದೀರಿ ಆ ಹಣವೆಲ್ಲಾ ಲ್ಯಾಪ್ಸ್ ಆಗಿದೆ. ಸಮಾಜವಾದ ಎಂದು ಹೇಳುವ ಜನರಿಂದ ಇವತ್ತಿನ ದಿವಸ ವೀಕರ್ಸ್ ಸೆಕ್ಷನ್‌ರವರಿಗೋಸ್ಕರವಾಗಿ ಯಾವ ಕೆಲಸವೂ ಸರ್ಕಾರದಿಂದ ಆಗಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇನ್ನು ಪೋಲೀಸ್ ಇಲಾಖೆಯ ಬಗ್ಗೆ ಹೇಳುವುದಾದರೆ ಲಾ ಅಂಡ್ ಆರ್ಡರ್ ಸಿಚುಯೇಷನ್ ಕೆಟ್ಟು ಹೋಗಿದೆ, ಚಾಕು ಚೂರಿ ಸಂಸ್ಕೃತಿಯನ್ನು ಸಂಪೂರ್ಣವಾಗಿ ತಡೆಗಟ್ಟುತ್ತೇವೆ ಎನ್ನುವ ಮಾತನ್ನು ಹೇಳಿದ್ದಿರಿ, ಆದರೆ ಅದು ಇನ್ನು ಹೆಚ್ಚಾಗಿ ಬೆಳೆಯುತ್ತಿದೆಂದು ನಾನು ಚಾರ್ಜ್ ಮಾಡುತ್ತಿದೇನೆ. ಜನತಾ ಸರ್ಕಾರ ಬಂದ ನಂತರ ಪೋಲೀಸಿನವರನ್ನು ರಾಜಕೀಯಕೋಸ್ಕರವಾಗಿ ಬಳಕೆ ಮಾಡುತ್ತಿದ್ದೀರಿ ಎನ್ನತಕ್ಕ ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಮ್ಮ ಭಾಲ್ಕಿಯಲ್ಲಿ ಮೊನ್ನೆ ಚುನಾವಣೆ ನಡೆದಾಗ ೬೦ ಗುಂಡಾಗಳು ಚಾಕು ಚೂರಿ ತೆಗೆದುಕೊಂಡು ಬಂದು ಕಾಂಗ್ರೆಸ್ (ಐ) ನವರು ಎಲ್ಲೂ ಬಾವುಟ ಹಾರಿಸಬಾರದು, ವೋಟಿಂಗ್ ಮಾಡಬಾರದೆಂದು ಹೆದರಿಸಿ ಬೆದರಿಸಿ ಮರ್ಡರ್ ಮಾಡುವವರೆಗೂ ಹೋಗಿದ್ದರು. ಪೋಲೀಸಿನವರೇ ಆ ಗೂಂಡಾಗಳಿಗೆ ಸಪೋರ್ಟ್ ಮಾಡುತ್ತಿದ್ದರು. ಜನತಾ ಪಕ್ಷದವರು ಈ ರೀತಿಯಾಗಿ ಮಾಡುವುದು ಸರಿಯಲ್ಲವೆಂದು ಪೋಲೀಸಿನವರ ಹತ್ತಿರ ದೂರು ಕೊಟ್ಟರೆ ಏನೂ ಕ್ರಮವನ್ನು ಅವರ ಮೇಲೆ ತೆಗೆದುಕೊಂಡಿಲ್ಲ. ಡಿ.ಐ.ಜಿ.ಯವರು ಬಂದಾಗ ಅವರಿಗೆ ಹೇಳಿದರೆ ನೀವು ಹಾಗೆ ಮಾಡಿ ಎನ್ನುವ ಮಾತನ್ನು ಅವರು ಆಡುತ್ತಿದ್ದರು. ಆದುದರಿಂದ ತಾವು ಹೇಳುತ್ತಿರುವುದಕ್ಕೂ ಮಾಡುತ್ತಿರುವುದಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಇದರಿಂದ ನಮ್ಮ ರಾಜ್ಯದಲ್ಲಿ ಲಾ-ಲೆಸ್‌ನೆಸ್ ಜಾಸ್ತಿಯಾಗಿದೆ. ಮರ್ಡರ್, ಡಕಾಯತಿ, ಕಳ್ಳತನ, ರೇಪ್ ಕೇಸ್‌ಗಳು ಈ ೯ ತಿಂಗಳಲ್ಲಿ ಹೆಚ್ಚಾಗಿದೆ ಎಂದು ನಾನು ನಿಮ್ಮ ಸರ್ಕಾರದ ಮೇಲೆ ಚಾರ್ಜ್ ಮಾಡುತ್ತಿದ್ದೇನೆ, ಇನ್ನು ರಿಸೋರ್ಸಸ್ ಮೊಬಲೈಜೇಷನ್ ಬಗ್ಗೆ ಒಂದು ಮಾತನ್ನು ಹೇಳುವುದಾದರೆ ಲಾಟರಿಯನ್ನು ಮೊದಲು ತೆಗೆದು ಹಾಕಬೇಕೆಂದು ಸಲಹೆ ಮಾಡುತ್ತಿದ್ದೇನೆ. ಇದರಿಂದ ಇನ್‌ಕಂ ಇಲ್ಲ ಏನೂ ಇಲ್ಲ. ಜನರು ಮಾತ್ರ ಮಟ್ಕಾ ಆಡುವುದಕ್ಕೆ ಉತ್ತೇಜನವನ್ನು ಕೊಡುತ್ತಿದ್ದೀರಿ. ಲಾಟರಿಯಿಂದ ೧೯೮೦-೮೧ರಲ್ಲಿ ಗ್ರಾಸ್ ರಿಸೀಪ್ಟ್ಸ್ ೭೨೧ ಲಕ್ಷ ಇದ್ದರೆ. ಎಕ್ಸ್‌ಪೆಂಡಿಚರ್ ೫೨೦ ಲಕ್ಷ ಇದೆ ಉಳಿಕೆ ಕೇವಲ ೨೦೦ ಲಕ್ಷ ಮಾತ್ರ. ೧೯೮೨-೮೩ರಲ್ಲಿ ೬೭೮ ಗ್ರಾಸ್ ರಿಸೀಪ್ಟ್ಸ್ ಇದ್ದರೆ ಖರ್ಚು ೫೬೮ ಲಕ್ಷ. ಇನ್ನು ಉಳಿಯುವುದು ಎಷ್ಟು ? ಆದುದರಿಂದ ಲಾಟರಿ ಯೋಜನೆ ನ್ನು ಕೈ ಬಿಟ್ಟು ಇವತ್ತು ನಮ್ಮ ರಾಜ್ಯದ ಪ್ರತಿಯೊಂದು ಹಳ್ಳಿಯಲ್ಲೂ ಮಟ್ಕಾ ಏನು ನಡೆಯುತ್ತಿದೆ ಅದನ್ನು ಕೂಡಲೇ ರದ್ದು ಮಾಡ ಬೇಕೆಂದು ಒತ್ತಾಯ ಮಾಡುತ್ತೇನೆ. ಕ್ಷಾಮದ ದೃಷ್ಟಿಯಿಂದ ಹೇಳುವುದಾದರೆ ನಮ್ಮ ಹೈದರಾಬಾದ್ ಕರ್ನಾಟಕಕ್ಕೆ ಎಷ್ಟೆಷ್ಟು ಕೆಲಸಗಳನ್ನು ಮಂಜೂರು ಮಾಡಿ ಮಾಡಿಸಬೇಕಾಗಿತ್ತೋ ಅಷ್ಟು ಕೆಲಸಗಳು

ಆಗುತ್ತಿಲ್ಲ. ಅದಕ್ಕೆ ಹೆಚ್ಚಿನ ಗಮನ ನೀಡಬೇಕೆಂದು ಹೇಳುತ್ತೇನೆ. ಇನ್ನು ಆಸ್ಪತ್ರೆಗಳಲ್ಲಿ ಔಷಧಗಳು ಸರಿಯಾಗಿ ಸಿಗುತ್ತಿಲ್ಲ ಇದಕ್ಕೆ ಕಾರಣ ಹಣವಿಲ್ಲವೆಂದು ಹೇಳುತ್ತಾರೆ. ಆದುದರಿಂದ ಮಾನ್ಯ ಮುಖ್ಯ ಮಂತ್ರಿಗಳವರು ಇದಕ್ಕೆ ಹೆಚ್ಚಿನ ಹಣವನ್ನು ಒದಗಿಸಿ ಬಡವರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನು ಶುಗರ್ ಫ್ಯಾಕ್ಟರಿಗಳಿಂದ ಏನು ಸೆಸ್ ಕಲೆಕ್ಟ್ ಮಾಡುತ್ತಿದ್ದೀರಿ ಆ ಹಣದಿಂದ ಇವತ್ತು ನೀವು ರೈತರ ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡುತ್ತಿಲ್ಲ. ಯಾವ ಯಾವ ಏರಿಯಾದಲ್ಲಿ ಎಷ್ಟೆಷ್ಟು ಸೆಸ್ ಖರ್ಚಾಗುತ್ತದೆ ಅದನ್ನು ಆಯಾಯಾ ಏರಿಯಾದ ಅಭಿವೃದ್ಧಿಗೋಸ್ಕರವಾಗಿ ಖರ್ಚು ಮಾಡಬೇಕೆಂದು ಹೇಳುತ್ತೇನೆ.

ನಾನು ಆಗಲೇ ಹೇಳಿದ ಹಾಗೆ ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಲಾ ಅಂಡ್ ಆರ್ಡರ್ ಪೂರ್ಣವಾಗಿ ಫೇಲ್ಯೂರ್ ಆಗಿದೆ. ಮರ್ಡರ್ ಕೇಸ್‌ಗಳು ಎಷ್ಟೋ ಆಗಿವೆ, ಅದರ ಬಗ್ಗೆ ಪೋಸ್ಟ್ ಮಾರ್ಟಮ್ ಮಾಡಲು ಗುಲ್ಬರ್ಗ, ಬಿಜಾಪುರದಿಂದ ಬೆಂಗಳೂರಿಗೆ ಕಳುಹಿಸಬೇಕಾಗಿದೆ. ಇಲ್ಲಿಗೆ ದೂರವಾಗುತ್ತದೆಂದು ಹೈದರಾಬಾದ್‌ಗೆ ಕಳುಹಿಸಿದ್ದರು ಅಲ್ಲಿ ಕೂಡ ತಡವಾದುದರಿಂದ ಅದನ್ನು ಇಲ್ಲಿಯ ಬೆಂಗಳೂರಿನ ಫೊರೆನ್ಸಿಕ್ ಸೈನ್ಸ್ ಲ್ಯಾಬೋರೇಟರಿಗೆ ೫-೬ ತಿಂಗಳು ಕಳೆದ ಮೇಲೆ ಕಳುಹಿಸಿರುವುದರಿಂದ, ಅವರು ಸಹ ರಿಪೋರ್ಟ್‌ನ್ನು ತಡವಾಗಿ ಕೊಡುತ್ತಿರುವುದರಿಂದ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಲು ಆಗುತ್ತಿಲ್ಲ. ಆದುದರಿಂದ ಫೋರೆನ್ಸಿಕ್ ಸೈನ್ಸ್ ಲ್ಯಾಬೋರೇಟರಿಗಳನ್ನು ಗುಲ್ಬರ್ಗ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಒಂದೊಂದು ಪ್ರಾರಂಭ ಮಾಡಬೇಕೆಂದು ಸರ್ಕಾರದವರಲ್ಲಿ ಒತ್ತಾಯ ಮಾಡಬಯಸುತ್ತೇನೆ. ಇದು ಕೇಸ್‌ಗಳನ್ನು ಬೇಗ ಇತ್ಯರ್ಥ ಮಾಡಲು ತುಂಬಾ ಅವಶ್ಯಕವಾಗಿದೆ, ಆದುದರಿಂದ ಮಾನ್ಯ ಮುಖ್ಯ ಮಂತ್ರಿಗಳವರು ಇದರ ಬಗ್ಗೆ ಶೀಘ್ರವಾಗಿ ಕ್ರಮವನ್ನು ಕೈಗೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

೩-೦೦ ಪಿ.ಎಂ.

† ಶ್ರೀ ರಾಮದೇವ್.—(ಮಲ್ಲೇಶ್ವರಂ) ಸನ್ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳು ಸಭೆಯ ಮುಂದೆ ಮಂಡಿಸತಕ್ಕ ಎಲ್ಲ ಬೇಡಿಕೆಗಳನ್ನು ಸಮರ್ಥಿಸುತ್ತಾ ನಾಲ್ಕು ಮಾತುಗಳನ್ನಾಡುವುದಕ್ಕೆ ಇಷ್ಟಪಡುತ್ತೇನೆ. ಈ ರಾಜ್ಯದ ಇತಿಹಾಸದಲ್ಲಿ ಬಹುಶಃ ೩೫ ವರ್ಷಗಳ ನಂತರ ಒಂದು ಹೊಸ ಸರ್ಕಾರ ಇಲ್ಲಿ ರಚನೆಯಾಗಿದೆ. ಇದುವರೆಗೆ ಕಾಂಗ್ರೆಸ್ ಒಂದೇ ಒಂದು ಪಕ್ಷದ ಅಧಿಕಾರ ಈ ರಾಜ್ಯದಲ್ಲಿ ನಡೆದಿದೆ. ಇದನ್ನು ಬದಲಾಯಿಸಬೇಕು, ಬೇರೆ ಪಕ್ಷದ ಸರ್ಕಾರವನ್ನು ತರಬೇಕೆಂಬ ಪ್ರಯತ್ನವನ್ನು ಸತತವಾಗಿ ಮಾಡಿರತಕ್ಕ ಅನೇಕ ಪಕ್ಷಗಳು ಇವತ್ತು ಸಂತೋಷದಿಂದ ಬೇರೊಂದು ಸರ್ಕಾರವನ್ನು ರಚನೆ ಮಾಡಿವೆ. ಈ ಸಂದರ್ಭದಲ್ಲಿ, ಕಾಂಗ್ರೆಸ್ಸಿನ ಒಂದು ಕಲ್ಚರ್ ಏನಿದೆ ಅದನ್ನು ಒಪ್ಪದೆ ಇರತಕ್ಕ ಜನ ಈ ಒಂದು ಸರ್ಕಾರವನ್ನು ಬದಲಾವಣೆ ಮಾಡಬೇಕೆಂದು ಪ್ರಾಮಾಣಿಕವಾಗಿ ದುಡಿದು ಹೊಸ ಪಕ್ಷದ ಸರ್ಕಾರಕ್ಕೆ ಉತ್ತೇಜನ ನೀಡಿದ್ದಾರೆ. ಅಕ್ಕಪಕ್ಕದ ರಾಜ್ಯಕ್ಕೆ ಹೋಲಿಸಿ ನೋಡಿದಾಗ ಇಲ್ಲಿ ನಾವು ನಮ್ಮ ಜನರಿಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಬೇಕು. ತಮಿಳ್ನಾಡಿನಲ್ಲಿ ಕೇವಲ ಭಾಷೆ ಮತ್ತು ಸಿನೇಮಾ ವ್ಯಾಪ್ತಿಯಲ್ಲಿ ಅಥವಾ ಅದರ ಪ್ರಭಾವದಲ್ಲಿ ಅಲ್ಲಿನ ಸರ್ಕಾರದ ಬದಲಾವಣೆಯಾಯಿತು. ಯಾವ ರಾಜಕೀಯ ಸಿದ್ಧಾಂತದ ಮೇಲೂ ಅಲ್ಲಿನ ಸರ್ಕಾರ ಬದಲಾವಣೆಯಾಗಲಿಲ್ಲ ಆಂಧ್ರದಲ್ಲೂ ಹಾಗೆ ಆಯಿತು. ರಾಜಕೀಯ ಸಿದ್ಧಾಂತಕ್ಕೆ ಹೊಂದಿಕೊಂಡು ಆಂಧ್ರದ ತೆಲುಗರ ಒಂದು ಸಂಸ್ಕೃತಿ ಅಥವಾ ಆ ಒಂದು ಸಿನೇಮಾ ಪ್ರಭಾವದ ಮೇಲೆ ಬದಲಾವಣೆಯಾಯಿತು. ನಮ್ಮ ರಾಜ್ಯದಲ್ಲಿ ಮಾತ್ರ ಅದು ಯಾವುದೂ ಕೆಲಸ ಮಾಡಲಿಲ್ಲ. ನಾವು ಏನು ಚುನಾವಣಾ ಪ್ರಣಾಳಿಕೆಯನ್ನು ಕೊಟ್ಟಿದ್ದೆವು ಅದು ಕೆಲಸ ಮಾಡಿದೆ. ಭ್ರಷ್ಟಾಚಾರದ ವಿರುದ್ಧ ಕೊಟ್ಟಿದ್ದ ಪ್ರಣಾಳಿಕೆ, ದಬ್ಬಾಳಿಕೆಯ ವಿರುದ್ಧ ಕೊಟ್ಟಂತಹ ಪ್ರಣಾಳಿಕೆಯ ಹಿನ್ನಲೆಯಲ್ಲಿ ಜನತೆ ಇದನ್ನು ಅರ್ಥ ಮಾಡಿಕೊಂಡು ೩೫ ವರ್ಷಗಳಿಂದ ಕಾಂಗ್ರೆಸ್ ಸರ್ಕಾರಕ್ಕೆ ಅಧಿಕಾರವನ್ನು ಕೊಟ್ಟುಕೊಂಡು ಬಂದಿದ್ದಂತಹ ಜನತೆ ವಿಚಾರ ಮಾಡಿ ಒಮ್ಮೆಲೇ ತನ್ನ ನಿಲುವನ್ನು ಬದಲಾಯಿಸಿ ನಮ್ಮ ಪಕ್ಷಕ್ಕೆ ಅಧಿಕಾರ ಕೊಟ್ಟಿತು. ದಬ್ಬಾಳಿಕೆ ಭ್ರಷ್ಟಾಚಾರಗಳು ದಿನೇ ದಿನೇ ಹೆಚ್ಚುತ್ತಿದ್ದವು. ಭ್ರಷ್ಟಾಚಾರ ಇಡೀ ರಾಜ್ಯವನ್ನೇ ಆವರಿಸಿಕೊಂಡಾಗ ಈ ಸರ್ಕಾರವನ್ನು ಬದಲಾವಣೆ ಮಾಡಬೇಕು, ಬೇರೆ ಸರ್ಕಾರವನ್ನು ತರಬೇಕು ಎಂಬ ಏಕೈಕ ದೃಷ್ಟಿಯಿಂದ ನಮ್ಮ ಸರ್ಕಾರವನ್ನು

ತಂದರು. ನಾವು ಚುನಾವಣಾ ಪ್ರಣಾಳಿಕೆಯನ್ನು ಕೊಟ್ಟಾಗ ಕೆಲವೊಂದು ಮಾತುಗಳನ್ನು ಹೇಳಿದೆವು. ಕಳೆದ ೫ ವರ್ಷಗಳ ಅವಧಿಯಲ್ಲಿ ಅದರಲ್ಲೂ ಕಳೆದ ೩ ವರ್ಷಗಳ ಅವಧಿಯಲ್ಲಿ ನಡೆದ ದೌರ್ಜನ್ಯ, ದಬ್ಬಾಳಿಕೆ, ಭ್ರಷ್ಟಾಚಾರಗಳು ಅಷ್ಟಿಷ್ಟಲ್ಲ. ಅಂಥ ದುಷ್ಟಭ್ರಷ್ಟ ಸರ್ಕಾರವನ್ನು ತೊಲಗಿಸಿ ಶಿಷ್ಟ ಸರ್ಕಾರವನ್ನು ಕೊಡುತ್ತೇವೆಂಬ ಮಾತುಗಳನ್ನು ಹೇಳಿ ನಾವು ಅಧಿಕಾರಕ್ಕೆ ಬಂದೆವು. ಅಂದು ನಾವು ಚುನಾವಣಾ ಪ್ರಣಾಳಿಕೆಯಲ್ಲಿ ಏನು ಭರವಸೆ ಕೊಟ್ಟು ಅಧಿಕಾರಕ್ಕೆ ಬಂದೆವೋ ಅದನ್ನು ಈಡೇರಿಸುವ ಕಡೆ ಹೆಜ್ಜೆ ಹಾಕಲೇಬೇಕೆಂದು ಹೇಳುತ್ತೇನೆ. ನಮ್ಮ ಸರ್ಕಾರ ಬಂದ ಹೊಸದರಲ್ಲಿ ಅಧಿಕಾರಿಗಳಲ್ಲಿ ಒಂದು ರೀತಿಯ ಭಯ ಬಂತು. ಯಾವುದೇ ಕ್ಷೇತ್ರದಲ್ಲಿ ನೋಡಿದರೂ ಭಯದ ವಾತಾವರಣವಿತ್ತು. ಇನ್ನು ಹಿಂದಿನಂತೆ ಇರುವುದಕ್ಕೆ ಆಗುವುದಿಲ್ಲ, ಲಂಚದ ಕೆಲಸ ನಡೆಯುವುದಿಲ್ಲ. ನಾವು ಭ್ರಷ್ಟರಾಗಿದ್ದರೆ ನಮ್ಮನ್ನು ಒದ್ದೋಡಿಸುತ್ತಾರೆ, ಆದ್ದರಿಂದ ನಾವು ಹೋಗತಕ್ಕ ದಾರಿಯನ್ನು ಬದಲಾಯಿಸ ಬೇಕೆಂಬುದು ಅವರ ಮನಸ್ಸಿನಲ್ಲಿ ಬಂತು. ಅದು ಒಂದು ರೀತಿಯ ಮಾರಲ್ ಫೀಯರ್. ನಾವು ಯಾರನ್ನೂ ಸಸ್ಪೆಂಡ್ ಮಾಡಿದ್ದರೂ ಆ ಮಾರಲ್ ಫೀಯರ್ ಬಂತು. ಅಧಿಕಾರಿಗಳ ವರ್ಗದಲ್ಲಿ ಭ್ರಷ್ಟಾಚಾರಕ್ಕೆ ಹೋಗದೆ, ಲಂಚ ಸ್ವೀಕರಿಸದೆ ಇರುವ ಮನೋಭಾವನೆ ಅವರಲ್ಲಿ ಬಂತು. ಅದನ್ನು ನಾವು ಇನ್ನಷ್ಟು ಮುಂದುವರಿಸಿಕೊಂಡು ಹೋಗತಕ್ಕ ಪಥದಲ್ಲಿ ಹೋಗಬೇಕು. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಅದು ಸಡಿಲವಾದಂತೆ ಕಾಣುತ್ತದೆ. ಎಷ್ಟೇ ವಿಜಿಲೆನ್ಸ್ ಕಮಿಷನ್, ಸಿಒಡಿ, ಎನ್‌ಕ್ವೈರಿ ಮಾಡಿದರೂ ಆ ಒಂದು ಮಾರಲ್ ಫೀಯರ್ ಎನ್ನುವುದು ರದಿದ್ದರೆ ಈ ಬ ರಾಜ್ಯದಲ್ಲಿ ಭ್ರಷ್ಟಾಚಾರವನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಈ ದೃಷ್ಟಿಯಲ್ಲಿ ನಮ್ಮ ಸರ್ಕಾರ ಇನ್ನೂ ಹೆಚ್ಚಿನ ಒಂದು ಸಾಧನೆ ಮಾಡಬೇಕಾಗಿದೆ ಎಂಬ ಮಾತನ್ನು ಹೇಳುತ್ತೇನೆ. ಈ ಮಾತನ್ನು ಹೇಳುತ್ತಾ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ನಾವು ಪ್ರಣಾಳಿಕೆಯಲ್ಲಿ ಇನ್ನೊಂದು ಮಾತನ್ನು ಹೇಳಿ ದ್ದೇವೆ. ಅದೇನೆಂದರೆ, ಪ್ರತಿನಿಧಿಗಳು ನಿರಂಕುಶ ಪಾರುಪತ್ಯ ತೊಡೆದು ಜನತೆಯ ಕೈಗೆ ನಿಜವಾದ ಅಧಿಕಾರ ನೀಡುವುದೇ ನಮ್ಮ ಉದ್ದೇಶ ಎಂದು. ಕಳೆದ ಹಲವಾರು ವರ್ಷಗಳಲ್ಲಿ ಪ್ರತಿನಿಧಿಗಳಾಗಿ ಬಂದಿರ ತಕ್ಕವರು ಯಾವ ರೀತಿ ನಿರಂಕುಶ ಅಧಿಕಾರ ನಡೆಸಿಕೊಂಡು ಹೋದರೂ ಚುನಾವಣೆ ಆಗುವಾಗ ಅದು ಇಲ್ಲದೆ ಇರುವ ವಾತಾವರಣ ಉಂಟಾಗಿದೆ. ಅಲ್ಲಿ ಕುಳಿತು ಮಾತನಾಡುವಾಗ ಜನರು ನಿಮ್ಮನ್ನು ನಾವು ನೋಡಿ ಓಟು ಕೊಟ್ಟಿಲ್ಲ, ಇಂದಿರಾಗಾಂಧಿಯವರನ್ನು ನೋಡಿ ಓಟುಕೊಟ್ಟಿದ್ದೇವೆಂದು ಹೇಳತಕ್ಕದ್ದನ್ನು ಕೇಳಿದ್ದೆವು, ಮತ್ತು ಆರಿಸಿ ಬಂದವರು ನಿರಂಕುಶ ಅಧಿಕಾರ ನಡೆಸುವುದನ್ನು ನೋಡಿದ್ದೆವು. ಈಗ ಏನು ವಚನ ಕೊಟ್ಟು ಬಂದಿದ್ದೇವೆಂದರೆ, ಆ ನಿರಂಕುಶ ಅಧಿಕಾರವನ್ನು ಕಿತ್ತು ಹಾಕುತ್ತೇವೆ. ಸಹಕಾರ ಮತ್ತಿತರ ಸಂಘ ಸಂಸ್ಥೆಗಳ ಚುನಾವಣೆಗಳನ್ನು ಮಾಡುತ್ತೇವೆ, ಜನತೆಗೆ ಹೆಚ್ಚು ಅಧಿಕಾರ ಕೊಡುವ ದೃಷ್ಟಿಯಿಂದ ಜಿಲ್ಲಾ ಪರಿಷತ್ತನ್ನು ಮಾಡಬೇಕೆಂದು ಮಾಡಿದ್ದೇವೆಂದು ಹೇಳಿದ್ದೇವೆ. ಈ ಸಂದರ್ಭದಲ್ಲಿ ಒಂದೇ ಒಂದು ಗುರಿ ಏನೆಂದರೆ ಅಧಿಕಾರ ವಿಕೇಂದ್ರೀಕರಣ ಮಾಡಬೇಕೆಂಬುದನ್ನು ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹಾಕಿದ್ದೇವೆ. ಆಡಳಿತದ ನೆರವನ್ನು ಎಲ್ಲ ಹಂತಗಳಲ್ಲೂ ಹೆಚ್ಚೆಚ್ಚು ನೀಡಲು ಮತ್ತು ಅಧಿಕಾರ ವಿಕೇಂದ್ರೀಕರಣ ಮಾಡಲು ಶಕ್ತಿ ಮೀರಿ ಶ್ರಮಿಸುತ್ತೇವೆಂದು ಹೇಳಿದ್ದೇವೆ. ಅಧಿಕಾರ ವಿಕೇಂದ್ರೀಕರಣ ಎಲ್ಲಿಂದ ಆಗಬೇಕೆಂದರೆ ಮೊದಲು ಮೇಲಿನಿಂದ ಪ್ರಾರಂಭವಾಗಬೇಕು, ಆಗ ಕೆಳಗಡೆ ಆಗೇ ಆಗುತ್ತದೆ. ಮುಖ್ಯಮಂತ್ರಿಗಳ ಸ್ಥಾನದಿಂದ ಅದು ಪ್ರಾರಂಭವಾಗಬೇಕು. ಇವತ್ತು ಇದು ಆಗಿದೆ ಎಂದು ಸಂತೋಷದಿಂದ ಹೇಳಬೇಕಾಗಿದೆ. ಹಿಂದೆಂದೂ ಮುಖ್ಯಮಂತ್ರಿಗಳಾಗಿರತಕ್ಕವರು ಇತರ ಮಂತ್ರಿಗಳಿಗೆ ಆಯಾಯ ಇಲಾಖೆಯ ಸ್ವಾತಂತ್ರ್ಯವನ್ನು ಕೊಟ್ಟಿರತಕ್ಕದ್ದನ್ನು ನೋಡಿರಲಿಲ್ಲ. ಡಿ. ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದಾಗಲೂ ನಾನು ಇದ್ದೆ ಮತ್ತು ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದಾಗಲೂ ಇದ್ದೆ. ಆಗ ಎಲ್ಲ ಅಧಿಕಾರವನ್ನು ಮುಖ್ಯಮಂತ್ರಿ ಗಳು ತಮ್ಮ ಕೈಯಲ್ಲಿ ಇಟ್ಟುಕೊಳ್ಳುತ್ತಿದ್ದರು. ಯಾವುದೇ ಒಂದು ಸಣ್ಣ ವಿಚಾರವನ್ನು ತೆಗೆದು ಕೊಂಡರೂ ಅದು ಮುಖ್ಯ ಮಂತ್ರಿಗಳ ಕೈಯಲ್ಲಿ ಆಗಬೇಕಾಗಿತ್ತು. ಮತ್ತು ಅದಕ್ಕೆ ಮುಖ್ಯ ಮಂತ್ರಿ ಗಳನ್ನು ನೋಡಬೇಕಾಗಿತ್ತು. ಯಾವ ಮಂತ್ರಿಗಳಿಗೂ ಸ್ವತಂತ್ರ ಅಧಿಕಾರ ಕೊಟ್ಟು ತೀರ್ಮಾನ ಮಾಡತಕ್ಕದ್ದನ್ನು ಕಂಡಿರಲಿಲ್ಲ. ಮಂತ್ರಿಗಳನ್ನು ನೋಡಿ ಕೆಲಸ ಆಗಬೇಕೆಂದಾಗ ಮುಖ್ಯ ಮಂತ್ರಿಗಳಿಗೆ ಹೇಳಿ ಎಂಬ ಮಾತು ಕೇಳುತ್ತಿತ್ತು. ಆದರೆ ಈಗ ಎಲ್ಲ ಮಂತ್ರಿಗಳಿಗೂ ಇವತ್ತು ಸ್ವತಂತ್ರ ಕೊಟ್ಟಿ ದ್ದಾರೆ. ತಮ್ಮ ತಮ್ಮ ಇಲಾಖೆಯ ಬಗ್ಗೆ ವ್ಯವಹಾರ ಮಾಡುವುದಕ್ಕೆ ಯಾವ ಭಯವೂ ಇಲ್ಲದೆ ನಿಸ್ಸಂಕೋಚವಾಗಿ ಕೆಲಸ ಮಾಡತಕ್ಕ ಸ್ವಾತಂತ್ರ್ಯವನ್ನು ಕೊಟ್ಟಿರತಕ್ಕದ್ದು ಮೊಟ್ಟಮೊದಲನೆಯದಾಗಿ

ಈ ಮುಖ್ಯಮಂತ್ರಿಗಳೇ ಎಂಬುದನ್ನು ನಾವು ಕಾಣಬಹುದು. ಇದರಿಂದ ಇವತ್ತು ಯಾವ ರೀತಿ
ಅಧಿಕಾರ ವಿಕೇಂದ್ರಿಕರಣವಾಗಿದೆ ಎಂಬುದನ್ನು ನೋಡಬಹುದು, ಹಿಂದೆ ನಾವು ಶಾಸಕರಾಗಿದ್ದಾಗ
ಮುಖ್ಯಮಂತ್ರಿಗಳನ್ನು ನೋಡಬೇಕಾದರೆ ಬಹಳ ಕಷ್ಟವಾಗುತ್ತಿತ್ತು. ಅರಸುರವರು ಮತ್ತು
ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದಾಗ ಕಾಗದ ಬರೆದು ಸಂದರ್ಶನ ಕೊಡಬೇಕೆಂದು ಕೇಳು
ತ್ತಿದ್ದೆವು. ನಂತರ ಸಂದರ್ಶನ ಚೀಟಿ ಪಡೆದು ಅವರನ್ನು ಭೇಟಿಯಾಗಬೇಕಾಗಿತ್ತು. ಶಾಸಕರಾದ ನಮಗೇ
ಅವಗು ಸಿಗುತ್ತಿರಲಿಲ್ಲ. ಅವರ ಹತ್ತಿರ ಹೋಗಿ ರಾಜ್ಯದಲ್ಲಿ ಏನು ನಡೆಯುತ್ತಿದೆ, ನಮ್ಮಲ್ಲಿ ಏನಾಗಿದೆ
ಎಂಬುದನ್ನು ಹೇಳಬೇಕೆಂದರೆ ಆಗುತ್ತಿರಲಿಲ್ಲ. ಹಿಂದೆ ಯಾವ ಅಧಿಕಾರ ನಿರಂಕುಶ ನಡೆಸುತ್ತಿದ್ದರು
ಎಂಬುದಕ್ಕೆ ಇದು ಉದಾಹರಣೆ. ಇವತ್ತಿನ ದಿವಸ, ಬೆಳಿಗ್ಗೆ ೮ರಿಂದ ರಾತ್ರಿ ಯಾವ ಸಮಯದಲ್ಲಾದರೂ
ಯಾವ ಶಾಸಕರು ಬೇಕಾದರೂ ಮುಖ್ಯಮಂತ್ರಿಗಳನ್ನು ಕಂಡು ಯಾವ ಸಂಕೋಚವೂ ಇಲ್ಲದೆ ವಿಚಾರ
ಗಳನ್ನು ಹೇಳತಕ್ಕ ವಾತಾವರಣವನ್ನು ಕಲ್ಪಿಸಿಕೊಟ್ಟಿರತಕ್ಕವರು ಎಂದರೆ ಶ್ರೀ ರಾಮಕೃಷ್ಣ ಹೆಗಡೆ
ಯವರು ಎಂದು ಅಂದುಕೊಂಡಿದ್ದೇವೆ.

ಶ್ರೀ ಪಿ. ರಾಮದೇವ್ —ಹಳ್ಳಿಹಳ್ಳಿಗಳಿಂದ ಜನ ಬಂದು ಮುಖ್ಯಮಂತ್ರಿಗಳನ್ನು ಮನೆಯಲ್ಲಿ
ನೋಡುತ್ತಿದ್ದಾರೆ. ಮಂತ್ರಿಗಳನ್ನು ನೋಡುತ್ತಿದ್ದಾರೆ. ಆಫೀಸಿನಲ್ಲಿ ಸದಾ ಕಾಲ ಜನ ಕಾದಿರು
ತ್ತಾರೆ. ಅಂದರೆ ೧೬–೧೮ ಗಂಟೆಗಳ ಕಾಲ ಎಲ್ಲರಿಗೂ ನೋಡುವುದಕ್ಕೆ ಸಿಗತಕ್ಕ ಅವಕಾಶವನ್ನು
ಮಾಡಿಕೊಟ್ಟಿರತಕ್ಕ ಮುಖ್ಯಮಂತ್ರಿಗಳು ರಾಮಕೃಷ್ಣ ಹೆಗಡೆಯವರು ಎಂಬುದನ್ನು ಸಭೆಯ ಗಮನಕ್ಕೆ
ತರುವುದಕ್ಕೆ ಇಚ್ಛೆಪಡುತ್ತೇನೆ. ಇದರಿಂದೇನಾಗಬಹುದು ಎಂದು ಕೇಳಬಹುದು. ಹಿಂದಿನ ಕಾಲದಲ್ಲಿ
'ದೊರೆತನಕ ದೂರು' ಎಂದು ಹೇಳುತ್ತಿದ್ದರು. ಆ ರೀತಿ ಇಲ್ಲಿ ಮುಖ್ಯಮಂತ್ರಿಗಳ ಹತ್ತಿರ ಕಷ್ಟ—
ಸುಖ ಹೇಳಿಕೊಳ್ಳುವುದಕ್ಕೆ ಅವಕಾಶವಿದೆ, ಜನರಿಗೆ ಸಮಸ್ಯೆ ಹೇಳಿದಾಗ ಸಮಾಧಾನವಾಗುತ್ತದೆ.
ಜೊತೆಗೆ ಪರಿಹಾರ ಸಿಕ್ಕಿದರೆ ಇನ್ನೂ ಸಂತೋಷಪಡುತ್ತಾರೆ. ಇವತ್ತು ಸಾಧಾರಣ ಪ್ರಜೆಯಿಂದ
ಹಿಡಿದು ಎಲ್ಲರಿಗೂ ಮುಖ್ಯಮಂತ್ರಿಗಳನ್ನು ನೋಡುವುದಕ್ಕೆ ಅವಕಾಶ ಶಿಕ್ಕಿರುವುದನ್ನು ನೋಡಿ
ಸಂತೋಷಪಡಬೇಕು. ಇದೇ ಅಡ್ಮಿನಿಸ್ಟ್ರೇಷನ್‌ನಲ್ಲಿ ದೊಡ್ಡ ಸಾಧನೆ ಎಂದರೆ ತಪ್ಪಾಗಲಾರದು. ನಾನು
ಸಾಧಾರಣವಾಗಿ ಮಂತ್ರಿಗಳ ಮನೆಗಳಿಗೆ ಕಚೇರಿಗಳಿಗೆ ಯಾವಾಗಲೂ ಹೋಗುವುದಿಲ್ಲ. ಆದರೆ ಜನ
ಹೇಳುತ್ತಾರೆ. ಮಂತ್ರಿಗಳ ಮನೆಗಳಲ್ಲಿ ಆಫೀಸಿನಲ್ಲಿ ಯಾವಾಗಲೂ ಜನ ತುಂಬಿರುತ್ತಾರೆ ಎಂದು. ಎಲ್ಲ
ಮಂತ್ರಿಗಳೂ ಜನರ ಕೈಗೆ ಸಿಗತಕ್ಕದ್ದು, ಜನತೆಯ ಅಹವಾಲುಗಳನ್ನು ಕೇಳತಕ್ಕದ್ದು ಪ್ರಜಾಪ್ರಭುತ್ವ
ದಲ್ಲಿ ಬಹಳ ಮುಖ್ಯವಾದುದು ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಧಾಟಿಯಲ್ಲೇ, ಈ
ಜಾಡಿನಲ್ಲೇ ಮಾನ್ಯ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಕೆಲಸವನ್ನು ಮುಂದುವರೆಸಿಕೊಂಡು
ಹೋಗಬೇಕು. ಈಗ ಹೆಚ್ಚಿನ ಸಮಯವೆಲ್ಲಾ ಜನರನ್ನು ನೋಡುವುದಕ್ಕೆ ಆಗುತ್ತಿದೆ. ಬೆಲೆ ಏರಿಕೆ ಆಗಿ
ದ್ದಾಗೂ ಜನ ಏನೂ ಹೇಳುತ್ತಿಲ್ಲ ಚಳುವಳಿ ಮಾಡುತ್ತಿಲ್ಲ ಎಂದು ಮಾನ್ಯ ನಾಗರತ್ನಮ್ಮನವರು ಭಾಷಣ
ಮಾಡುವಾಗ ಹೇಳಿದ್ದರು. ಏತಕ್ಕಾಗಿ ಜನ ಆ ರೀತಿ ಮಾಡುತ್ತಿಲ್ಲ ಎಂದರೆ ಅವರು ಸದಾ ಮಂತ್ರಿಗಳ
ಹತ್ತಿರವೇ ಬಂದು ಹೇಳುತ್ತಿದ್ದಾರೆ. ಈ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತದೆ ಎಂದು ಜನ
ನಂಬಿದ್ದಾರೆ. ಆದ್ದರಿಂದ ಯಾವರೀತಿಯ ಚಳುವಳಿಯೂ ಆಗುತ್ತಿಲ್ಲ. ಮಾನ್ಯ ವೈ. ರಾಮಕೃಷ್ಣ
ಅವರು ಮತ್ತು ಮಲ್ಲಿಕಾರ್ಜುನ ಖರ್ಗೆಯವರು ಇದನ್ನು ಒಪ್ಪುತ್ತಾರೆ ಎಂದು ತಿಳಿದುಕೊಂಡಿದ್ದೇನೆ.
ಹಿಂದೆ ಮುಖ್ಯಮಂತ್ರಿಗಳನ್ನು ನೋಡುವುದಕ್ಕೆ ಎರಡು ಮೂರು ದಿವಸ ಕಾದಿದ್ದು ಇದೆ.

ಶ್ರೀ ಬಿ. ಭೈರಪ್ಪಾಜಿ.—ಮುಖ್ಯಮಂತ್ರಿಗಳನ್ನು ನೋಡಬಹುದು ಎಂಬುದೊಂದೇ ಇವರ
ಬಂಡವಾಳ. ಎಷ್ಟು ಪರ್ಸೆಂಟ್ ಕರಪ್ಷನ್ ನಿಲ್ಲಿಸಿದ್ದೀರಿ ಎಂಬುದನ್ನು ಹೇಳಿ.

ಶ್ರೀ ಪಿ. ರಾಮದೇವ್.—ಆ ದಿಕ್ಕಿನಲ್ಲಿ ಕೆಲಸ ಮಾಡತಕ್ಕ ಮಂತ್ರಿಮಂಡಲ ಚುನಾವಣೆಯ
ಪ್ರಣಾಳಿಕೆಯಲ್ಲಿ ಏನು ಹೇಳಿತ್ತೋ ಅದರ ಬಗ್ಗೆ ಗಮನ ಕೊಡಬೇಕಾಗಿದೆ. ಮಾನ್ಯ ಖರ್ಗೆಯವರ
ಸಹಕಾರವನ್ನು ಈ ಸಂದರ್ಭದಲ್ಲಿ ಕೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ರಾಮದೇವ್ ಅವರು ಸಮಸ್ಯೆಗಳನ್ನು ಹೇಳಿ
ಕೊಂಡು ಬರುತ್ತಿದ್ದಾಗ ನಾವು ಎಷ್ಟೋ ಸಾರಿ ಪರಿಹಾರ ಮಾಡಿದ್ದೇವೆ. ಅವರು ಸದಸ್ಯರಾಗಿದ್ದಾಗ
ತಿಂಗಳಿಗೊಂದು ಸಾರಿ, ೧೫ ದಿವಸಕ್ಕೊಂದು ಸಾರಿ ಮಂತ್ರಿಗಳು ಮೀಟಿಂಗ್ ಮಾಡಿ ಅವರ ಸಮಸ್ಯೆ
ಗಳನ್ನು ಕೇಳುತ್ತಿದ್ದರು ನಮ್ಮ ಕಾಲದಲ್ಲಿ ಇದೆಲ್ಲಾ ನಡೆಯುತ್ತಿತ್ತು. ಈಗ ಹೊಸ ಮಂತ್ರಿಮಂಡಲ
ಬಂದಮೋಲೆ ಮಂತ್ರಿಗಳು ಎಷ್ಟು ಸಲ ಸಭೆ ಕರೆದಿದ್ದಾರೆ? ನಗರಾಭಿವೃದ್ಧಿ ಮಂತ್ರಿಗಳದ್ದೇ ಹೇಳಿ ಸಾಕು
ಬೇರೆ ಬೇಡ.

ಶ್ರೀ ಪಿ. ರಾಮದೇವ್.—ನಾನು ನನ್ನ ಅನುಭವ ಹೇಳುತ್ತಿದ್ದೇನೆ. ನಿಮ್ಮ ಅನುಭವ ಏನಿದೆಯೋ ಗೊತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ತಾವು ವಿರೋಧಪಕ್ಷದಲ್ಲಿದ್ದರೂ ಕೂಡ ೧೫ ದಿವಸಕ್ಕೊಂದು ಸಾರಿ ಅಥವಾ ತಿಂಗಳಿಗೊಂದು ಸಾರಿ ಕರೆಸಿ ತಮ್ಮ ಸಮಸ್ಯೆಗಳನ್ನು ಕೇಳುತ್ತಿದ್ದೆವು. ಈಗ ಈ ಮಂತ್ರಿಗಳು ಎಷ್ಟು ಸಾರಿ ಕರೆಸಿ ಸಮಸ್ಯೆಗಳನ್ನು ಕೇಳಿದ್ದಾರೆಂಬುದನ್ನೂ ಹೇಳಿ.

ಶ್ರೀ ಪಿ. ರಾಮದೇವ್.—ಹಿಂದೆ ಧರ್ಮಸಿಂಗ್ ಅವರು ಮಂತ್ರಿಗಳಾಗಿದ್ದಾಗ ಮಾಡುತ್ತಿದ್ದರು ಎಂದು ತಾವು ಹೇಳುತ್ತಿದ್ದೀರಿ. ಧರ್ಮಸಿಂಗ್ ಅವರು ಆ ರೀತಿ ಮಾಡುತ್ತಿದ್ದರು. ಇಲ್ಲ ಎಂದು ಹೇಳುವುದಿಲ್ಲ. ಈಗಲೂ ಬೆಂಗಳೂರು ನಗರದ ೧೨ ಜನ ಶಾಸಕರನ್ನು ಈ ಮಂತ್ರಿಗಳು ಕರೆಸುತ್ತಾರೆ. ಕೇವಲ ೯ ತಿಂಗಳಲ್ಲಿ ೫ ವರ್ಷಗಳಲ್ಲಿ ಮಾಡಬೇಕಾದ ಕೆಲಸವನ್ನು ಮಾಡಿ ಎಂದು ಹೇಳಿದರೆ ಅದು ಸರಿಯಾದ ತರ್ಕವಲ್ಲ. ಈ ೯ ತಿಂಗಳಲ್ಲಿ ಸಾಧನೆ ಆಗಿದೆ.

ಶ್ರೀ ಬಿ. ಭೈರಪ್ಪಾಜಿ.—೩ ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ಆಗಿದೆ. ಇದೇ ಇವರ ಸಾಧನೆ.

ಶ್ರೀ ಮಲ್ಲನಗೌಡ ಪಾಟೀಲ್.—ಬದಲಾವಣೆ ಏನೂ ಆಗಿಲ್ಲ ಈಗ. ಆಗಿರುವುದಿಷ್ಟೆ old wine in new bottle. ಅವರೂ ಮೊದಲಿನಿಂದ ಕಾಂಗ್ರೇಸ್‌ನಲ್ಲಿದ್ದರು.

ಶ್ರೀ ಪಿ. ರಾಮದೇವ್.—ನಾವು ಮೊದಲಿನಿಂದ ವಿರೋಧಪಕ್ಷದಲ್ಲೇ ಇದ್ದೇವೆ, ಯಾವತ್ತೂ ನಿಮ್ಮ ಪಕ್ಷದಲ್ಲಿಲ್ಲ. ಕೇಂದ್ರದಲ್ಲಿ ಕಾಂಗ್ರೇಸ್ (ಐ) ಸರ್ಕಾರ ಇದೆ. ರಾಜ್ಯದಲ್ಲಿ ಜನತಾ ಸರ್ಕಾರ ಬಂದಿದೆ. ಕೇಂದ್ರ ಮತ್ತು ರಾಜ್ಯಗಳ ಸಂಬಂಧದ ಬಗ್ಗೆ ಸಾಕಷ್ಟು ಚರ್ಚೆಯಾಗುತ್ತಿದೆ. ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ಈ ಬಗ್ಗೆ ಮಾತನಾಡುತ್ತಾರೆ ಎಂದು ನಾನಾದರೂ ತಿಳಿದುಕೊಂಡಿದ್ದೆ. ಆದರೆ ಅದನ್ನು ಅವರು ಹೇಳಲಿಲ್ಲ. ಪಟ್ಟಭದ್ರಹಿತಾಸಕ್ತಿಗಳು ಈ ಸರ್ಕಾರವನ್ನು ಉರುಳಿಸುವ ಪ್ರಯತ್ನವನ್ನು ಮಾಡುತ್ತಿವೆ. ಮೊದಲಿನಿಂದ ಇದು ನಡೆಯುತ್ತಿದೆ. ಈ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬಾರದು ಎಂದು ಈ ಶಕ್ತಿಗಳು ಕೆಲಸ ಮಾಡುತ್ತಿವೆ. ಈ ರೀತಿ ಸರ್ಕಾರ ಬದಲಾವಣೆಯಾದಾಗ ಕೇಂದ್ರದವರ ಜವಾಬ್ದಾರಿ ಜಾಸ್ತಿ ಇರುತ್ತದೆ. ನಾವು ಜನಗಳ ಕಷ್ಟಕಾರ್ಪಣ್ಯಗಳನ್ನು ಅವರ ಗಮನಕ್ಕೆ ತಂದಾಗ ಅದನ್ನು ಪರಿಹರಿಸುವುದಕ್ಕೆ ಪ್ರಯತ್ನ ಮಾಡಬೇಕು. ಆ ರೀತಿ ಮಾಡುವುದು ಬಿಟ್ಟು ಈಗ ಪ್ರತಿಯೊಂದು ವಿಚಾರದಲ್ಲೂ ಅಡ್ಡಗಾಲು ಹಾಕುತ್ತಿದ್ದಾರೆ. ಉದಾಹರಣೆಗೆ ನಮಗೆ ಕೊಡತಕ್ಕ ಆಹಾರ ಸಾಮಗ್ರಿಗಳನ್ನು ಕಡಿಮೆ ಮಾಡಿದ್ದಾರೆ. ಸೀಮೆ ಎಣ್ಣೆ ನಮಗೆ ಸರಿಯಾಗಿ ಕೊಡುತ್ತಿಲ್ಲ. ವಿದ್ಯುಚ್ಛಕ್ತಿಯಲ್ಲಿ ನಮಗೆ ಅನ್ಯಾಯವಾಗುತ್ತಿದೆ. ವಿಜಯನಗರ ಉಕ್ಕಿನ ಕಾರ್ಖಾನೆ ಮಾಡುವುದರಲ್ಲಿ ಅನ್ಯಾಯ ಮಾಡಿದ್ದಾರೆ. ಎಲೆಕ್ಟ್ರಾನಿಕ್ ಕಾರ್ಖಾನೆಯನ್ನು ಮಧ್ಯ ಪ್ರದೇಶಕ್ಕೆ ಷಿಫ್ಟ್ ಮಾಡುವುದಕ್ಕೆ ಪ್ರಯತ್ನ ನಡೆಯುತ್ತಿದೆ. ಗಡಿವಿವಾದ, ನದಿ ನೀರಿನ ವಿವಾದವನ್ನು ಇತ್ಯರ್ಥ ಮಾಡುತ್ತಿಲ್ಲ. ಬರಗಾಲ ಪರಿಹಾರಕ್ಕೆ ಕೊಡತಕ್ಕ ಹಣದಲ್ಲಿ ಮಹಾರಾಷ್ಟ್ರಕ್ಕೆ ೪೦ ಕೋಟಿ ರೂಪಾಯಿಗಳನ್ನು ಕೊಟ್ಟು ಇಲ್ಲಿ ೧೫ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಮ್ಮಲ್ಲಿ ಭೀಕರವಾದ ಬರಗಾಲ ಬಂದಿದೆ, ಆದರೂ ಕೇಂದ್ರಸರ್ಕಾರ ಹೆಚ್ಚಿನ ಸಹಕಾರ ಕೊಡುತ್ತಿಲ್ಲ. ನಮಗೆ ಹೆಚ್ಚಿನ ಸಹಕಾರ ಕೊಡುವುದು ಬಿಟ್ಟು ಪ್ರತಿಯೊಂದಕ್ಕೂ ಅಡ್ಡಗಾಲು ಹಾಕಿ ಸರ್ಕಾರವನ್ನು ಪೇಚಿಗೆ ಸಿಕ್ಕಿಸಬೇಕು, ಈ ಸರ್ಕಾರಕ್ಕೆ ಕೆಟ್ಟ ಹೆಸರು ಬರುವಂತೆ ಮಾಡಬೇಕು, ಈ ಸರ್ಕಾರದ ಮೇಲೆ ಜನರಿಗೆ ವಿಶ್ವಾಸ ಹೋಗಬೇಕು ಎಂದು ಪ್ರಯತ್ನ ಮಾಡುತ್ತಿರುವುದು ಸರಿಯಲ್ಲ. ಹೇಗಾದರೂ ಮಾಡಿ ಈ ಸರ್ಕಾರವನ್ನು ಉರುಳಿಸಬೇಕು ಎಂದು ಪಾರ್ಲಿಮೆಂಟ್ ಸದಸ್ಯರು, ಕೇಂದ್ರದ ಮಂತ್ರಿಗಳು, ಎಲ್ಲರೂ ಪ್ರಯತ್ನ ಮಾಡುತ್ತಿದ್ದಾರೆ. ಏತಕ್ಕೆ ಸ್ವಾಮಿ ನಮಗೆ ಐದು ವರ್ಷ ಇರುವುದಕ್ಕೆ ಅವಕಾಶ ಕೊಡುವುದಿಲ್ಲ ? ಈ ಪ್ರಯತ್ನ ಏತಕ್ಕೆ ಮಾಡುವುದಕ್ಕೆ ಹೋಗುತ್ತೀರಿ ? ನಮಗೆ ಅವಕಾಶ ಕೊಟ್ಟು ನೋಡಿ. ನಾವು ಸರಿಯಾಗಿ ಕೆಲಸ ಮಾಡದಿದ್ದರೆ ಜನರೇ ನಮ್ಮನ್ನು ಉರುಳಿಸುತ್ತಾರೆ. ನೀವು ಏತಕ್ಕೆ ಒಗಸಂಚು ಮಾಡುತ್ತೀರಿ ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ತಾವಾಗಿಯೇ ಕುಸಿದು ಬಿದ್ದರೆ ನಾವೇನು ಮಾಡುವುದಕ್ಕಾಗುತ್ತದೆ ?

ಶ್ರೀ ಪಿ. ರಾಮದೇವ್.—ಈ ಸರ್ಕಾರವನ್ನು ಬುಡಮೇಲು ಮಾಡತಕ್ಕ ಪ್ರಯತ್ನವನ್ನು ಮಾಡುತ್ತಿಲ್ಲವೆಂದು ಪ್ರಾಮಾಣಿಕವಾಗಿ ಹೇಳಿ,

ಶ್ರೀ ಎಂ. ಮಲ್ಲಿಕಾರ್ಜುನ ಎಂ. ಖರ್ಗೆ,—ನೀವು ಬಿದ್ದು ನಮ್ಮನ್ನು ಆಳು ಎಂದರೆ ನಾವು ಕಣ್ಣು ಮುಚ್ಚಿಕೊಂಡು ಕುಳಿತುಕೊಳ್ಳುವುದಕ್ಕಾಗುತ್ತದೆಯೇ ?

ಶ್ರೀ ಪಿ. ರಾಮದೇವ್.—ನಾವು ಬೀಳುತ್ತಿಲ್ಲ. ಗಟ್ಟಿಯಾಗಿದ್ದೇವೆ. ನಮಗೆ ಎಷ್ಟರಮಟ್ಟಿಗೆ ತೊಂದರೆ ಕೊಡುತ್ತಿದ್ದಾರೆಂದರೆ ಕೇಂದ್ರದವರು ನಮ್ಮ ಟೆಲಿಫೋನಿನ ಸಂಭಾಷಣೆಯನ್ನು ಕದ್ದು ಕೇಳುತ್ತಿದ್ದಾರೆ. ಮಂತ್ರಿಗಳ ಟೆಲಿಫೋನ್‌ಗಳನ್ನು ಕದ್ದು ಕೇಳುತ್ತಿದ್ದಾರೆ. ರೆವಿನ್ಯೂ ಇಂಟೆಲಿಜೆನ್ಸ್ ಎಂದು ಜಯನಗರದಲ್ಲಿದೆ ಅವರು ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ಮಾತನಾಡಿದ್ದನ್ನು ಟೇಪ್ ಮಾಡಿ ನೇರವಾಗಿ ಪ್ರಧಾನಮಂತ್ರಿಗಳಿಗೆ ಮತ್ತು ಅಲ್ಲಿನ ಇಂಟೆಲಿಜೆನ್ಸ್ ಆಫೀಸರ್‌ಗೆ ಕಳುಹಿಸಿಕೊಡುತ್ತಾರೆ. ಇದೆಲ್ಲಾ ಏತಕ್ಕೆ ? ನಾವೇನೂ ಕೇಂದ್ರದ ವಿರುದ್ಧ ಇಲ್ಲಿ ಪಿತೂರಿ ಮಾಡುತ್ತಿಲ್ಲವಲ್ಲ. ನಮ್ಮ ಮಂತ್ರಿಮಂಡಲ ಸ್ವತಂತ್ರವಾಗಿ ನಿರ್ಭಯವಾಗಿ ಕೆಲಸ ಮಾಡುವುದಕ್ಕೆ ಏತಕ್ಕೆ ಅಡಚಣೆ ಮಾಡುತ್ತೀರಿ ?

ಅಧ್ಯಕ್ಷರು.—ನಿಮ್ಮ ಭಾಷಣ ಪ್ರಾರಂಭವಾಗಿ ೨೦ ನಿಮಿಷ ಆಯಿತು. ಜಾಗ್ರತೆ ಮುಗಿಸಿ.

ಶ್ರೀ ಪಿ. ರಾಮದೇವ್,—ಈ ರೀತಿ ಕನಸು ಕಾಣುವುದಕ್ಕೆ ಪ್ರಯತ್ನ ಪಡಬೇಡಿ. ೫ ವರ್ಷ ಏನೂ ಮಾಡುವುದಕ್ಕಾಗುವುದಿಲ್ಲ. ಜನತಾ ಸರ್ಕಾರಕ್ಕೆ ಈಗ ಹೆಚ್ಚು ಹೆಚ್ಚು ಶಕ್ತಿ ಬರುತ್ತಿದೆ. ಕೇಂದ್ರದವರು ನಮ್ಮ ಕಡೆ ನೋಡುತ್ತಿರುವ ನೋಟವನ್ನು ಬದಲಾವಣೆ ಮಾಡಿದರೆ ಜನ ಅವರಿಗೆ ಶಹಬಾಸ್ ಗಿರಿ ಕೊಡುತ್ತಾರೆ. ಇನ್ನು ಪೋಲೀಸ್ ಇಲಾಖೆಯ ಬಗ್ಗೆ ಒಂದು ಮಾತನ್ನು ಹೇಳಬೇಕಾಗುತ್ತದೆ. ಈ ದಿನ ಬೆಂಗಳೂರು ನಗರದಲ್ಲಿ ಇರುವ ಪೋಲೀಸ್ ಕಾನ್‌ಸ್ಟೇಬಲ್‌ನಿಂದ ಹಿಡಿದು ಹೆಚ್ಚಿನ ಅಧಿಕಾರಿಗಳವರೆವಿಗೂ ಅವರಿಗೆ ಕ್ವಾರ್ಟರ್ಸ್ ಏನು ಕೊಡಬೇಕೋ ಅದನ್ನು ಕೊಟ್ಟಿಲ್ಲ. ಆಂಧ್ರದಲ್ಲಿ ಪೋಲೀಸ್ ಹೌಸಿಂಗ್ ಸ್ಕೀಮ್‌ಗೋಸ್ಕರವಾಗಿ ಕೋಟ್ಯಾಂತರೆ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಕೇರಳ ತಮಿಳುನಾಡಿನಲ್ಲಿ ವಸತಿ ಸೌಕರ್ಯಕೊಟ್ಟಿದ್ದಾರೆ. ಕೇಂದ್ರ ಸರ್ಕಾರದಿಂದ ಪೋಲೀಸಿನವರಿಗೆ ಸಿಗಬೇಕಾದ ಸೌಕರ್ಯ ಸಿಕ್ಕಿಲ್ಲವೆಂದು ಹೇಳುತ್ತೇನೆ. ನ್ಯಾಯವಾಗಿ ಇವರಿಗೆ ಬರಬೇಕಾದ ಸೌಲಭ್ಯಗಳನ್ನು ಕೊಡದೇ ಹೋದರೆ ಹೇಗೆ ? ಇವರು ಜನರ ಜೊತೆ ವ್ಯವಹಾರ ಮಾಡುವುದಕ್ಕಾಗುತ್ತದೆಯೇ ? ಇವತ್ತು ಬೆಂಗಳೂರು ನಗರದಲ್ಲಿ ಸುಮಾರು ೨೦–೨೨ ಪೋಲೀಸ್ ಠಾಣೆಗಳನ್ನು ಹೊಸದಾಗಿ ಮಾಡಬೇಕಾಗಿದೆ. ಇವತ್ತಿನ ದಿವಸ ಬೆಂಗಳೂರಿನಲ್ಲಿ ಅಪರಾಧಗಳ ಸಂಖ್ಯೆ ಜಾಸ್ತಿ ಆಗುತ್ತಿದೆ, ಇವತ್ತಿನ ದಿವಸ ಬೆಂಗಳೂರು ನಗರ ಕೆಲವು ದಾಖಲೆಗಳ ನಗರವಾಗುತ್ತಿದೆ.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ.—ಮಾನ್ಯ ರಾಮ್‌ದೇವ್ ಅವರು ಪೋಲೀಸ್ ಸ್ಟೇಷನ್‌ಗಳನ್ನು ಕೇಳುತ್ತಿದ್ದಾರೆ. ಮಾನ್ಯ ಎಂ.ಎಸ್. ಕೃಷ್ಣನ್‌ರವರು ಜೈಲು ಕಟ್ಟಡ ಜಾಸ್ತಿ ಮಾಡಬೇಕೆಂದು ಹೇಳಿದರು. ಇದೇನಿದು ನನಗೆ ಅರ್ಥವಾಗುತ್ತಾ ಇಲ್ಲ.

ಶ್ರೀ ಪಿ. ರಾಮ್‌ದೇವ್.—ಅದಷ್ಟು ಬೇಗ ಬೆಂಗಳೂರು ನಗರಕ್ಕೆ ಇನ್ನು ಹೆಚ್ಚಿನ ಪೋಲೀಸ್ ಠಾಣೆಗಳನ್ನು ಕೊಡಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ರುಕ್ಮಯ್ಯ ಪೂಜಾರಿ (ವಿಠ್ಠಲ್).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳ ಬಗ್ಗೆ ಆದಷ್ಟು ಚುಟುಕಾಗಿ ಒಂದೆರಡು ವಿಷಯಗಳನ್ನು ಹೇಳುತ್ತೇನೆ. ಜನತಾ ಸರ್ಕಾರ ಅಧಿಕಾರಕ್ಕೆ ಬಂದಾಗ ನಾವು ತುಂಬಾ ಆಶಾವಾದವನ್ನು ಹೊಂದಿದ್ದೆವು. ಆದರೆ ಈ ೯ ತಿಂಗಳ ಅವಧಿಯಲ್ಲಿ ನಮಗೆ ನಿಜವಾಗಿಯೂ ನಿರಾಶೆಯಾಗಿದೆ. ಆದರೂ ಕೂಡಾ ನಮಗೆ ಈ ಸರ್ಕಾರದ ಬಗ್ಗೆ ವಿಶ್ವಾಸ ಇನ್ನೂ ಕೂಡ ಇದೆ. ಆದರೆ ಮುಖ್ಯವಾಗಿ ಭ್ರಷ್ಟಾಚಾರದಿಂದ ಈ ಆಡಳಿತ ಸಂಪೂರ್ಣ ಮುಕ್ತಿ ಹೊಂದಿಲ್ಲ. ಮಾನ್ಯ ಸದಸ್ಯರಾದ ರಾಮ್‌ದೇವ್ ಅವರು ಪ್ರಾರಂಭದಲ್ಲಿ ಜನತಾ ಸರ್ಕಾರ ಅಧಿಕಾರಕ್ಕೆ ಬಂದಾಗ ಅಧಿಕಾರಿಗಳಲ್ಲಿ ಭ್ರಷ್ಟಾಚಾರ ಕಡಿಮೆಯಾಗುತ್ತಾ ಬಂದಿತ್ತು ಎಂದು ಹೇಳಿದರು. ಅದು ನಿಜ. ಆದರೆ ಕ್ರಮೇಣ ಭ್ರಷ್ಟಾಚಾರ ಪುನಃ ಅಧಿಕಾರಿಗಳಲ್ಲಿ ಪ್ರಾರಂಭವಾಗುತ್ತಿದೆ. ಇದರ ಬಗ್ಗೆ ಸರ್ಕಾರ ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ. ಜನತಾ ಸರ್ಕಾರ ಗ್ರಾಮಾಂತರ ಜನತೆಯ ಹತ್ತಿರ ನಿಕಟ ಸಂಪರ್ಕವನ್ನು ಇಟ್ಟುಕೊಳ್ಳುವ ಬಗ್ಗೆ ಏನು ಯೋಜನೆಗಳನ್ನು ಹಾಕಿಕೊಂಡಿದೆ? ಅದನ್ನು ಗ್ರಾಮಾಂತರ ಜನರಿಗೆ ತಲುಪಿಸುವ ಸಲುವಾಗಿ ತಾಲ್ಲೂಕು ಮಟ್ಟದ ಅಧಿಕಾರಿ

ಗಳು ಪ್ರತಿ ವರ್ಷ ಗ್ರಾಮಗಳಿಗೆ ಹೋಗಿ, ಅಲ್ಲಿಯ ಜನತೆ ಸಂಪರ್ಕ ಬೆಳೆಸಿ ಅಂಗವಿಕಲರ ವೇತನ ಮುಂತಾದ ಹಲವಾರು ಯೋಜನೆಗಳು ಏನಿವೆ ಅವು ಆ ಜನರಿಗೆ ಸಿಗುವ ಹಾಗೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ನಿವೃತ್ತಿ ಹೊಂದಿದ ನೌಕರರಿಗೆ ಆದಷ್ಟು ಬೇಗ ನಿವೃತ್ತಿ ವೇತನ, ಗ್ರ್ಯಾಚ್ಯುಟಿ ಸಿಗುವ ಹಾಗೆ ಮಾಡಬೇಕು. ಆದರೆ ಈ ಸೌಲತ್ತುಗಳು ಏನಿವೆ ಅವು ಸ್ವಲ್ಪ ಪ್ರಭಾವಿ ವ್ಯಕ್ತಿಗಳಿಗೆ ಮಾತ್ರ ಬೇಗ ಸಿಗುತ್ತವೆ, ನಿಜವಾಗಿಯೂ ಬಡ ನೌಕರರು ಏನಿದ್ದಾರೆ ಅವರಿಗೆ ೮–೧೦ ವರ್ಷಗಳಾಗಿದ್ದರೂ ಕೂಡಾ ನಿವೃತ್ತಿ ವೇತನ ಸಿಕ್ಕಿಲ್ಲ, ಉದಾಹರಣೆಗೆ ಹೇಳುವುದಾದರೆ, ನಮ್ಮ ಬಂಟ್ವಾಳದಲ್ಲಿ ಎನ್. ಕೃಷ್ಣಾಭಟ್ ಎಂಬ ಒಬ್ಬ ರಿಟೈರ್ಡ್ ಕನ್ನಡ ಪಂಡಿತರು ಇದ್ದಾರೆ. ಅವರು ನಿವೃತ್ತಿಯಾಗಿ ೮ ವರ್ಷ ಆಗಿದ್ದರೂ ಕೂಡಾ ಅವರಿಗೆ ಬರಬೇಕಾದ ೨೬ ತಿಂಗಳ ಸಂಬಳ ಬಂದಿಲ್ಲ, ಗ್ರ್ಯಾಚುಟಿ, ನಿವೃತ್ತಿ ವೇತನ ಸಿಕ್ಕಿಲ್ಲ. ಇಂತಹ ಪರಿಸ್ಥಿತಿ ಇದೆ. ಇಂತಹ ಹಲವಾರು ಕೇಸ್‌ಗಳು ನಮ್ಮ ಪ್ರಾಂತದಲ್ಲಿ ಇವೆ. ಇಂತಹ ಪರಿಸ್ಥಿತಿ ನಿವಾರಣೆಯಾಗಬೇಕು. ಇನ್ನು ಪೋಲೀಸ್ ಇಲಾಖೆಯ ಬಗ್ಗೆ ಹೇಳುವುದಾದರೆ ಜನಗಳಿಗೆ ಈ ಇಲಾಖೆಯ ಬಗ್ಗೆ ವಿಶ್ವಾಸ ಕಡಿಮೆಯಾಗಿದೆ. ಹಾಗೂ ಪೋಲೀಸರ ಸಮಸ್ಯೆಗಳನ್ನೂ ಸಹಾ ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಇಂದು ಬಡ ಜನರು ನ್ಯಾಯ ಕೇಳಲು ಪೋಲೀಸ್ ಠಾಣೆಗೆ ಹೋದರೆ ಅಲ್ಲಿ ಕರೆದು ಕೂರಿಸಿ ವಿಷಯಗಳನ್ನು ತಿಳಿದುಕೊಂಡು ಪರಿಹಾರ ಕೊಡಿಸಿಕೊಡುವ ಪರಿಸ್ಥಿತಿ ಇಲ್ಲ. ಯಾರು ಪ್ರಭಾವಿ ವ್ಯಕ್ತಿಗಳು, ಆರ್ಥಿಕವಾಗಿ ಮುಂದುವರಿದಿರುವವರು ಇದ್ದರೆ ಅಂತವರು ಅಲ್ಲಿಗೆ ಹೋದರೆ ಅವರನ್ನು ಕರೆದು ಕೂರಿಸಿ, ಅವರು ತಪ್ಪು ಮಾಡಿದ್ದರೂ ಕೂಡಾ ಗೌರವ ಕೊಡುವ ಪರಿಸ್ಥಿತಿ ಈಗ ಇದೆ, ಇದು ಸಂಪೂರ್ಣ ನಿವಾರಣೆಯಾಗಿ ಸಾಮಾಜಿಕ ಪರಿವರ್ತನೆಯಾಗಬೇಕಾಗಿದೆ. ಇನ್ನು ಪೋಲೀಸರ ಕಷ್ಟದ ಬಗ್ಗೆಯೂ ಹೇಳಬೇಕಾಗುತ್ತದೆ. ನಮ್ಮ ವಿಟ್ಲ ಪೋಲೀಸ್ ಠಾಣೆಯಲ್ಲಿ ೬–೭ ಪೋಲೀಸರಿದ್ದಾರೆ. ಅಲ್ಲಿ ಪೋಲೀಸರ ಸಂಖ್ಯೆ ಹೆಚ್ಚಾಗಬೇಕು. ಅವರಿಗೆ ಸರಿಯಾದ ವಸತಿ ಸೌಕರ್ಯ ಒದಗಿಸಬೇಕು. ಮೊನ್ನೆ ಒಂದು ಘಟನೆ ನಡೆಯಿತು. ಭೂ ವಿವಾದದ ಬಗ್ಗೆ ಅಣ್ಣ ತಮ್ಮಂದಿರಲ್ಲಿ ಘರ್ಷಣೆ ನಡೆಯುತಕ್ಕ ಕಾಲದಲ್ಲಿ ಪೋಲೀಸರು ಆ ಜಾಗಕ್ಕೆ ಹೋದಾಗ ಕೆಲವರು ಅವರನ್ನು ಹಿಡಿದು ನಾಲ್ಕೈದು ಗಂಟೆಗಳ ಕಾಲ ಒಂದು ಮನೆಯಲ್ಲಿ ಕೂಡಿ ಹಾಕಿ ಬೀಗ ಹಾಕಿದ್ದಾರೆ. ಇಂತಹ ಸಮಸ್ಯೆಗಳನ್ನೂ ಪೋಲೀಸಿನವರು ಎದುರಿಸಬೇಕಾಗುತ್ತದೆ. ಇನ್ನು ಆರ್.ಟಿ.ಓ. ಬಗ್ಗೆ ಹೇಳಬೇಕೆಂದರೆ ಈ ಇಲಾಖೆಯ ಅಧಿಕಾರಿಗಳು ಸಣ್ಣ ವಿಷಯಕ್ಕೆಲ್ಲಾ ಸಾರ್ವಜನಿಕರಿಗೆ ತೊಂದರೆ ಕೊಡುತ್ತಿದ್ದಾರೆ. ವಾಹನದಲ್ಲಿ ಲೈಟ್ ಇಲ್ಲ, ಪೇಂಟ್ ಇಲ್ಲ, ಸ್ಕ್ರೂ ಲೂಸ್ ಆಗಿದೆ ಎಂದೆಲ್ಲ ಆರ್.ಟಿ.ಓ. ಇಲಾಖೆಯವರು ಜನರಿಗೆ ಕೊಡುತ್ತಿದ್ದಾರೆ. ಇದು ಸಂಪೂರ್ಣವಾಗಿ ತೊಲಗಬೇಕು. ಮತ್ತು ಈ ಒಂದು ಇಲಾಖೆಗೆ ತೆರಿಗೆ ರೂಪದಲ್ಲಿ ಬರಬೇಕಾದ ಹಣ ಏನಿದೆ ಅದು ಬಹಳ ಬಾಕಿ ಉಳಿದಿದೆ. ಮಂಗಳೂರು ಆರ್.ಟಿ.ಓ.ನಲ್ಲೇ ಕೋಟಿಗಟ್ಟಲೆ ಹಣ ವಸೂಲಾಗದೇ ಬಾಕಿ ಉಳಿದಿದೆ. ಇಲ್ಲಿ ಒಂದು ಕಡೆ ಇಷ್ಟು ಹಣ ಬಾಕಿ ಇರುವಾಗ ರಾಜ್ಯದ ಇನ್ನಿತರ ಕಡೆ ಎಷ್ಟು ಹಣ ಬಾಕಿ ಇರಬಹುದು ? ಇನ್ನು ನೆರೆ ಪರಿಹಾರ ಸಾಕಷ್ಟು ಪ್ರಗತಿಯಿಂದ ಸಾಗುತ್ತಿದೆಯೆಂದು ಹೇಳುತ್ತಿದ್ದಾರೆ. ಆದರೆ ನಮ್ಮ ಜಿಲ್ಲೆಯಲ್ಲಿ ಕಳೆದ ವರ್ಷ ಮಳೆ ಒಂದು ತಿಂಗಳು ವಿಳಂಬವಾಗಿ ಬಂದುದರ ಕಾರಣ ನಮ್ಮ ಜಿಲ್ಲೆಯ ಆರ್ಥಿಕ ಬೆಳೆಯಾದ ತೆಂಗು ಹಾಗೂ ಅಡಿಕೆ ತೋಟಗಳು ಸಂಪೂರ್ಣ ನಾಶವಾಗಿ ಎಷ್ಟೋ ಕುಟುಂಬಗಳು ನಿರ್ಗತಿಕಾರಾಗಿದ್ದಾರೆ. ಇವರಿಗೆ ಆದಷ್ಟು ಶೀಘ್ರ ಪರಿಹಾರ ಒದಗಿಸಬೇಕೆಂದು ಸರ್ಕಾರಕ್ಕೆ ಕೇಳಿಕೊಂಡಿದ್ದರೂ ಸರ್ಕಾರ ಗಮನಹರಿಸಿಲ್ಲ. ಸರ್ಕಾರ ಈ ಕಡೆ ಗಮನ ಹರಿಸಿ ನ್ಯಾಯವನ್ನು ದೊರಕಿಸಬೇಕೆಂದು ಹೇಳುತ್ತೇನೆ. ಹಾಗೂ ಇವರಿಗೆ ದೀರ್ಘಾವಧಿ ಸಾಲವನ್ನು ಒದಗಿಸಿಕೊಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ,

೩–೩೦ ಪಿ. ಎಂ,

†ಶ್ರೀ ಹನುಮಂತರಾಯಪ್ಪ (ಬೆಳ್ಳಾವಿ)·—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿರುವ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಜನತಾ ಸರ್ಕಾರ ಹೊಸದಾಗಿ ಬಂದಾಗ ಮಾನ್ಯ ಮುಖ್ಯಮಂತ್ರಿಯವರು ಘೋಷಣೆ ಮಾಡಿದರು. ರಾಜ್ಯದ ಜನತೆ ನಿರಾಯಾಸವಾಗಿ ಬಂದು ಕಛೇರಿಗಳಲ್ಲಿ ನಮ್ಮನ್ನು ನೋಡಬಹುದೆಂದು ತಮ್ಮ ಅಹವಾಲುಗಳನ್ನು ನಿವೇದಿಸಿಕೊಳ್ಳಬಹುದೆಂದೂ, ಅದೇ ರೀತಿ ರಾಜ್ಯದ ಜನತೆ ತಮ್ಮ ತಮ್ಮ ಕುಂದು ಕೊರತೆಗಳನ್ನು ಬಗೆಹರಿಸಿಕೊಳ್ಳಲು ಅರ್ಜಿಗಳನ್ನು ಸಲ್ಲಿಸುತ್ತಾ ಬಂದಿದ್ದರು

ಇದಂ ಸುಮಾರು ಹತ್ತು ದಿವಸಗಳ ನಂತರ ಮಂಜೂರಾಯಿತು. ಸುಮಾರು ಮೂವತ್ತು ವರ್ಷಗಳ ಅನುಭವ ಇರತಕ್ಕ ಮುಖ್ಯಮಂತ್ರಿಗಳು ಅರ್ಜಿಗಳ ವಿಲೇವಾರಿ ಮಾಡುವುದಕ್ಕೆ ಹೇಗೆ ಪ್ರಯತ್ನ ಮಾಡುತ್ತಾರೆಂದು ನಮಗೆ ಆಶ್ಚರ್ಯವಾಯಿತು. ಅವರು ಬೇಕಾದಷ್ಟು ಖಾತೆಗಳನ್ನು ಇಟ್ಟುಕೊಂಡಿರುವಾಗ ಇಂಥ ಸಣ್ಣ ವಿಷಯಗಳನ್ನು ಹೇಗೆ ಮಾಡುತ್ತಾರೆಂದು ನಮಗೆ ಅನ್ನಿಸಿತು. ಅನಂತರ ಅದಕ್ಕೆ ಪ್ರತ್ಯೇಕವಾದ ಮಂತ್ರಿಯನ್ನೇ ನೇಮಕ ಮಾಡಿದರೂ ಜನರ ಸಮಸ್ಯೆಗಳನ್ನು ಅವರ ಕುಂದುಕೊರತೆಗಳನ್ನು ಬಗೆ ಹರಿಸುವುದಕ್ಕೆ ಸಾಧ್ಯವಾಗಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಗೋಲಿಬಾರ್‌ಗೆ ಸಂಬಂಧಪಟ್ಟಂತೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಜನತಾ ಸರ್ಕಾರ ಅಧಿಕಾರಕ್ಕೆ ಬಂದಾಗ ಇನ್ನು ಮೇಲಾದರೂ ಜನತೆಯ ಮೇಲೆ ಗೋಲಿಬಾರ್ ಮಾಡುವುದು ತಪ್ಪುತ್ತದೆಂದು ನಾವು ಭಾವಿಸಿದ್ದೆವು. ಇವರು ಅಧಿಕಾರಕ್ಕೆ ಬಂದಮೇಲೆ ಮಾರ್ಚಿವರೆಗೆ ಐದು ಕಡೆ ಗೋಲಿಬಾರ್ ಮಾಡಿದ್ದಾರೆ. ಇದನ್ನು ಏತಕ್ಕೋಸ್ಕರವಾಯಿತು ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಯಾವ ಸರ್ಕಾರ ಬಂದರೂ ಇದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಇವತ್ತು ಪೋಲಿಸಿನವರು ಜನಗಳನ್ನು ಸಾಯಿಸಬೇಕೆಂದು ಸಾಯಿಸುತ್ತಿಲ್ಲ. ಅನಿವಾರ್ಯ ಸಂದರ್ಭಗಳಲ್ಲಿ ಜನರ ಹಿತರಕ್ಷಣೆ ಮಾಡಬೇಕಾದಂಥ ಸಂದರ್ಭಗಳಲ್ಲಿ ಗುಂಡು ಹಾರಿಸಬೇಕಾಗುತ್ತದೆ. ಇವತ್ತು ಪಾವಗಡದಲ್ಲಿ ಶಿಶುಹತ್ಯೆ ನಡೆಯುತ್ತಿದೆ. ಅಲ್ಲಿ ೭-೮ ಮಕ್ಕಳು ಸಾವನ್ನಪ್ಪಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೇ ಒಂದು ಸಾರಿ ಪಾವಗಡಕ್ಕೆ ಭೇಟಿ ಕೊಟ್ಟು ಅಲ್ಲಿನ ಜನರಿಗೆ ಧೈರ್ಯ ತುಂಬಿ ಬಂದಿದ್ದರೆ ಚೆನ್ನಾಗಿತ್ತೆಂದು ನನಗನ್ನಿಸುತ್ತದೆ. ಇವತ್ತು ಅಲ್ಲಿ ನಡೆಯುತ್ತಿರುವಂಥ ಕೃತ್ಯ ಮಾನವರದೇ ಅಥವಾ ಪ್ರಾಣಿಗಳದೇ ಎಂಬುದನ್ನು ಇನ್ನೂ ಕೂಡ ಕಂಡು ಹಿಡಿಯುವುದಕ್ಕಾಗಿಲ್ಲವೆಂದರೆ ತಲೆ ತಗ್ಗಿಸಬೇಕಾಗಿದೆ. ಇವತ್ತು ಚಂದ್ರಲೋಕಕ್ಕೆ ಹೋಗತಕ್ಕಂಥ ಕಾಲದಲ್ಲಿ ಇಂಥ ಸಣ್ಣ ವಿಷಯದಲ್ಲಿ ಸತ್ಯ ಹೊರಗೆಳೆಯಲು ಸಾಧ್ಯವಾಗಿಲ್ಲ ಎಂದರೆ ಪೋಲಿಸಿನವರ ಕರ್ತವ್ಯದ ಬಗ್ಗೆ ಪ್ರಶ್ನೆ ಮಾಡಬೇಕಾಗುತ್ತದೆ. ಅಲ್ಲಿನ ಭೌಗೋಳಿಕ ವಾತಾವರಣವನ್ನು ನೋಡಿದರೆ ಯಾವ ಗಿಡಮರಗಳು ಇಲ್ಲ. ಬರೀ ಗುಡ್ಡಗಳು ಮಾತ್ರ ಇವೆ. ಮನುಷ್ಯರ ಹತ್ತಿರ ತೋಳಗಳು ಬರುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಬೇಕಾದಷ್ಟು ಜನ ಪೋಲಿಸಿನವರು ಅರಣ್ಯ ಇಲಾಖೆಯವರು ಇದ್ದರೂ ಕೂಡ ಇದರ ನಿಗೂಢವನ್ನು ಕಂಡು ಹಿಡಿಯುವುದಕ್ಕೆ ಏತಕ್ಕೆ ಆಗಲಿಲ್ಲವೆಂದು ನಾನು ಸರ್ಕಾರಕ್ಕೆ ಕೇಳುತ್ತೇನೆ. ಇವತ್ತು ಮಕ್ಕಳನ್ನು ಕಳೆದುಕೊಂಡವರೆಲ್ಲ ಬಹಳ ಬಡವರಾಗಿದ್ದು ಮಾನಸಿಕವಾಗಿ ಬಹಳ ವ್ಯಥೆಯನ್ನು ಪಡುತ್ತಿದ್ದಾರೆ. ಅಲ್ಲಿ ಬರಗಾಲ ಇರುವುದರಿಂದ ಸಾಕಷ್ಟು ಕೂಲಿ ಸಿಗುತ್ತಿಲ್ಲ. ಜನಗಳಿಗೆ ಊಟದ ವ್ಯವಸ್ಥೆಯಿಲ್ಲ. ಪರಿಹಾರ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ರಾಜ್ಯದಲ್ಲಿ ಅಸ್ಪೃಶ್ಯತೆ ಕಾನೂನು ಇದೆ. ಇದನ್ನು ಬೇರೆ ಜಾತಿಗಳವರು ಉಪಯೋಗಿಸಿಕೊಳ್ಳುತ್ತಿದ್ದಾರೆ. ಸಮಾಜದಲ್ಲಿ ಉತ್ತಮವಾದ ವ್ಯಕ್ತಿಗಳಿದ್ದರೂ, ವೈಯಕ್ತಿಕ ಕಾರಣಕ್ಕಾಗಿ ಯಾವುದೋ ಒಂದು ಕಾರಣಕ್ಕಾಗಿ ಅವರ ಮೇಲೆ ದ್ವೇಷವನ್ನು ತೀರಿಸಿಕೊಳ್ಳುವುದಕ್ಕಾಗಿ ಪೋಲಿಸಿನವರು ಅವರನ್ನು ದಸ್ತಗಿರಿ ಮಾಡಿ ಕೇಸುಗಳನ್ನು ಹಾಕತಕ್ಕಂಥ ಸನ್ನಿವೇಶ ಇದೆ. ಈ ಕಾನೂನನ್ನು ಸ್ವಲ್ಪ ಸಡಿಲಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಪೋಲಿಸ್ ದೌರ್ಜನ್ಯ ನಡೆದಂಥ ಸಂದರ್ಭಗಳಲ್ಲಿ ಸಂಬಂಧಪಟ್ಟ ವಿಷಯವನ್ನು ಸಿ. ಓ. ಡಿ. ಗೆ ರೆಫರ್ ಮಾಡುವುದು ವಾಡಿಕೆಯಾಗಿದೆ. ಸಿ. ಓ. ಡಿ. ನಲ್ಲಿರತಕ್ಕವರು ಪೋಲಿಸಿನವರು ಆಗಿರುವುದರಿಂದ ಇದು ಬರೀ ಕಣ್ಣೊರೆಸುವ ಕೆಲಸ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ರೀತಿ ಮಾಡುವ ಬದಲು ನ್ಯಾಯವಾದ ವಿಚಾರಣೆ ಮಾಡಿಸಿ, ತಪ್ಪಿತಸ್ಥರಿಗೆ ಉಗ್ರ ಶಿಕ್ಷೆ ಕೊಡುವಂತೆ ಮಾಡಿದರೆ ಮುಂದೆ ಇಂಥ ಅನಾಹುತಗಳನ್ನು ತಪ್ಪಿಸುವುದಕ್ಕೆ ಸಾಧ್ಯ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ವರ್ಗಾವಣೆಯಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ನಮ್ಮ ಸರ್ಕಾರ ಅಧಿಕಾರದಲ್ಲಿ ಇದ್ದಾಗ ಪ್ರೀಮೆಚೂರ್ ಕೇಸುಗಳನ್ನೆಲ್ಲಾ ಮುಖ್ಯಮಂತ್ರಿಗಳು ಇಟ್ಟುಕೊಂಡಿದ್ದರು. ಎರಡು ವರ್ಷಕ್ಕಿಂತ ಕಡಿಮೆ ಇರತಕ್ಕ ಯಾವ ನೌಕರರನ್ನು ಬೇರೆ ಕಡೆ ವರ್ಗ ಮಾಡುತ್ತಿರಲಿಲ್ಲ. ಇತ್ತೀಚೆಗೆ ಎರಡು ತಿಂಗಳು ಆಗಿದ್ದರೂ ಕೂಡ ವರ್ಗ ಮಾಡಿಕೊಡಿ ಎಂದು ಮಂತ್ರಿಗಳ ಹತ್ತಿರ, ನಮ್ಮ ಹತ್ತಿರ ನೌಕರರು ಬರುತ್ತಿರುತ್ತಾರೆ. ಆದುದರಿಂದ ಮುಖ್ಯಮಂತ್ರಿಗಳೇ ಅದನ್ನು ಇಟ್ಟುಕೊಂಡಿದ್ದರೆ—ಈ

ಒಂದು ತೊಂದರೆಯನ್ನು ತಪ್ಪಿಸಬಹುದಾಗಿತ್ತು ಎಂದು ಹೇಳುತ್ತೇನೆ. ಕೊನೆಯ ಪಕ್ಷ ಎರಡು ವರ್ಷವಾದರೂ ಖಡ್ಡಾಯವಾಗಿ ಒಂದು ಜಾಗದಲ್ಲಿ ಕೆಲಸ ಮಾಡುವಂತೆ ಮಾಡಬೇಕೆಂದು ಹೇಳುತ್ತೇನೆ. ಆಹಾರ ಶೇಖರಣೆ ಬಗ್ಗೆ ಹೇಳುವುದಾದರೆ ಇವತ್ತು ಶಿವಮೊಗ್ಗ ಜಿಲ್ಲೆಯಿಂದ ಕೇರಳ ಮತ್ತು ತಮಿಳುನಾಡಿಗೆ ಬೇಕಾದಷ್ಟು ಅಕ್ಕಿ ಹೋಗಿದೆ. ಇತ್ತೀಚೆಗೆ ತಾವು ಆಹಾರ ಸಮಿತಿ ಮಾಡಿದ್ದೀರಿ. ಭತ್ತ ಬಂದ ಕಾಲದಲ್ಲಿ ಶೇಖರಣೆ ಸಾಕಷ್ಟು ಮಾಡಿಕೊಳ್ಳಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ನಾರಾಯಣರಾವ್ (ಗಾಂಧಿನಗರ).—ಸನ್ಮಾನ್ಯ ಸಭಾಧ್ಯಕ್ಷರೆ, ಈಗ ನಾನು ೨೩ ಮತ್ತು ೨೪ ಬೇಡಿಕೆಗಳನ್ನು ಸಮರ್ಥಿಸುತ್ತಾ ಕೆಲವು ಮಾತುಗಳನ್ನು ಆಡಲು ಇಚ್ಛಿಸುತ್ತೇನೆ. ಈ ಬೇಡಿಕೆಗಳ ಮೇಲಿನ ಚರ್ಚೆ ಸುಮಾರು ೩೦ ದಿವಸಗಳಿಗಿಂತಲೂ ಹೆಚ್ಚಿಗೆ ನಡೆದಿದೆ. ಈ ರೀತಿ ನಡೆಯುತ್ತಿರುವ ಚರ್ಚೆಯಲ್ಲಿ ಕಾಂಗ್ರೆಸ್ (ಐ) ಪಕ್ಷದ ಸದಸ್ಯರು ಹೆಚ್ಚಿಗೆ ಮಾತನಾಡುತ್ತಾ ನಮ್ಮ ಸರ್ಕಾರ ಹಾಗೆ ಮಾಡಿದೆ, ಹೀಗೆ ಮಾಡಿದೆ ಎಂದು ಹೇಳಿದ್ದನ್ನು ಕೇಳಿ ನನಗೆ ಬೇಜಾರಾಗಿದೆ. ಇದನ್ನೆಲ್ಲಾ ಅವರೇ ಮಾಡಿರುವುದು. ಅವರು ಮಾಡಿರತಕ್ಕ ತಪ್ಪುಗಳನ್ನು ಅವರೇ ಹೇಳಿಕೊಳ್ಳುತ್ತಿದ್ದಾರೆ. ಈ ಸೆಲ್ಫ್ ಅಬ್ಯೂಸ್ ಎಂದು ಏನಿದೆ ಅದು ಬಹಳ ಕೆಟ್ಟದ್ದು, ಅದು ವ್ಯಕ್ತಿಗೂ ಮತ್ತು ಪಕ್ಷಕ್ಕೂ ಬಹಳ ಕೆಟ್ಟದ್ದು. ಅದನ್ನು ನಿಲ್ಲಿಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ವಿರೋಧ ಪಕ್ಷದನಾಯಕರು ಈ ತರಹ ತಪ್ಪನ್ನು ತಾವೇ ಬೈದುಕೊಳ್ಳುವ ಜಾಡಿನಲ್ಲಿ ಹೋಗುವುದಿಲ್ಲ, ಬೇರೆ ರೀತಿ ಮಾತನಾಡುತ್ತಾರೆಂದು ನನ್ನ ಎಕ್ಸ್‌ಪೆಕ್ಟೇಷನ್ ಇತ್ತು. ಆ ಒಂದು ಎಕ್ಸ್‌ಪೆಕ್ಟೇಷನ್‌ನಿಂದ ಬಹಳ ನಿರಾಶೆ ಉಂಟುಮಾಡಿತು. ವಿರೋಧ ಪಕ್ಷದ ನಾಯಕರ ಭಾಷಣ ಆ ರೀತಿ ಆಗಲಿಲ್ಲ. ಅವರು ಮಾತನಾಡುವಾಗ ಪಕ್ಷಾಂತರದ ಬಗ್ಗೆ ಬಹಳಷ್ಟು ಮಾತನಾಡಿದರು ಪಕ್ಷಾಂತರ ಪಿಡುಗಿನಿಂದ ಬಹಳ ತೊಂದರೆ ಉಂಟು ಮಾಡಿದ್ದಾರೆಂದು ಆಪಾದನೆ ಮಾಡಿದ್ದಾರೆ. ಮಾರಲ್ ಅಂಡ್ ಎಥಿಕಲ್ ವ್ಯಾಲ್ಯೂಸ್ ಏನಿದೆ ಅದು ಇಲ್ಲ ಎಂದು ಹೇಳಿ, ಪುನಃ ತಾವು ಏನು ಮುಂಚೆ ಮಾಡಿದ್ದರು ಅದನ್ನು ತಪ್ಪು ಎಂದು ಹೇಳಿಕೊಂಡು ಹೋಗಿದ್ದಾರೆ. ಅವರು ಎಲೆಕ್ಷನ್‌ಗೆ ಮುಂಚೆ ಏನು ಅಲಿಗೇಷನ್ ಮಾಡಿದ್ದಾರೆ ಅದರ ಬಗ್ಗೆ ಕೂಲಂಕಷವಾಗಿ ನೋಡಬೇಕಾಗುತ್ತದೆ. ಇವೊತ್ತು ಪಕ್ಷಾಂತರದ ಬಗ್ಗೆ ಇಷ್ಟು ಜೋರಾಗಿ ಏತಕ್ಕೆ ಮಾತನಾಡುತ್ತಿದ್ದಾರೆ ಇದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ನನಗೆ ತಿಳಿದ ಹಾಗೆ ೬ ತಿಂಗಳಿಗೆ ಮೊದಲೇ ಈ ಪಕ್ಷಾಂತರದ ಕೂಗು ಎಬ್ಬಿಸಿ, ನಮ್ಮನ್ನು ಪಕ್ಷಾಂತರ ಮಾಡಿಸಲಿಕ್ಕೆ ಪ್ರಯತ್ನ ನಡೆಸಿ ಅದರಲ್ಲಿ ವಿಫಲರಾಗಿದ್ದಾರೆ. ಈಗ ಅವರ ಪಕ್ಷದಿಂದಲೇ ನಮ್ಮ ಪಕ್ಷಕ್ಕೆ ಪಕ್ಷಾಂತರ ಮಾಡಿಸುತ್ತಿದ್ದವೆಂಬ ಕೂಗನ್ನು ಹೆಬ್ಬಿಸುತ್ತಿದ್ದಾರೆ. ಒಂದು ಡೆಮಾಕ್ರಸಿಯಲ್ಲಿ ಗೌವರ್ನ್‌ಮೆಂಟ್ ಬೈ ದಿ ಪೀಪಲ್ ಅಂಡ್ ಫಾರ್ ದಿ ಪೀಪಲ್ ಎಂದು ಇದೆ. ಅದು ಯಾವುದೇ ಒಂದು ಸರ್ಕಾರ ಆಗಲಿ, ಗವರ್ನ್‌ಮೆಂಟ್ ಬೈ ದಿ ಡಿಫೆಕ್ಟರ್ಸ್ ಅಂಡ್ ಫಾರ್ ದಿ ಡಿಫೆಕ್ಟರ್ ಎಂದು ಅವರಿಗೆ ಹೇಳಿದರೆ ಸರಿಹೋಗುತ್ತದೆ ಎಂದು ಅಂದುಕೊಂಡಿದ್ದೇನೆ. ಈಗ ಒಂದು ವಿಚಾರ ನನಗೆ ತಿಳಿದು ಬಂದಿದೆ ಅದು ಎಷ್ಟು ನಿಜವೋ, ಎಷ್ಟು ಸುಳ್ಳೋ ಗೊತ್ತಿಲ್ಲ. ಕಾಂಗ್ರೆಸ್ (ಐ) ಪಕ್ಷದವರು ಡೆಲ್ಲಿಯಲ್ಲಿ ಕ್ಯಾಂಪ್ ಮಾಡುತ್ತಿದ್ದಾರೆ, ಅಲ್ಲಿ ಆಕ್ಟೀವ್ ವರ್ಕರ್ಸ್‌ಗೆ ಆರ್ಟ್ ಆಫ್ ಡಿಫೆಕ್ಷನ್ ಏನಿದೆ ಅದನ್ನು ಹೇಳಿಕೊಡುತ್ತಿದ್ದಾರೆ, ಹರಿಯಾಣದ ದೊಡ್ಡ ಮುಖಂಡರುಗಳು ಬಂದಿದ್ದಾರೆ, ಲೆಕ್ಚರ್ ಕೊಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ಅದು ಏನು ಹೇಳುತ್ತಿದ್ದಾರೋ ನನಗೆ ಗೊತ್ತಿಲ್ಲ. ಈ ತರಹ ಇದ್ದರೆ ಇದು ಬಹಳ ವಿಷಾದಕರವಾದ ಸಂಗತಿ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಕಾಂಗ್ರೆಸ್ (ಐ) ಪಕ್ಷದವರು ಈ ಒಂದು ಕೂಗನ್ನು ಏತಕ್ಕೆ ಹಬ್ಬಿಸಿದ್ದಾರೆ. ಎಂದರೆ ಈ ಡಿಫೆಕ್ಷನ್ ಏನಿದೆ ಇದು ಅವರಿಗೆ ಅದು ಒಂದುವೇ ಆಫ್ ಲೈಫ್ ಆಗಿದೆ. ಅವರೇ ಮಾಡಿ, ಜನತಾ ಪಕ್ಷದ ಮೇಲೆ ಹೇಳುವುದು ತಪ್ಪು. ಅವರು ಆ ರೀತಿ ಹೇಳುವುದಕ್ಕೆ ಮುಂಚೆ ತಮ್ಮ ಕಾನ್‌ಷಿಯಸ್‌ನ್ನು ತಾವೇ ನೋಡಿಕೊಳ್ಳಬೇಕು. ಅವರು ಈ ತರಹ ಸೆಲ್ಫ್ ಕ್ರಿಟಿಸಿಸಮ್, ಸೆಲ್ಫ್ ಅಬ್ಯೂಸ್ ಮಾಡುವುದರಿಂದ ಬೇರೆ ರಾಜ್ಯಗಳಲ್ಲಾಗಲ್ಲಿ ಅಥವಾ ನಮ್ಮ ರಾಜ್ಯದಲ್ಲಿ ಆಗಲಿ ಏನೊಂದು ಭಾವನೆ ಬರುತ್ತದೆ, ಇವರು ಏನು ಆಟ್‌ಮಾಸ್‌ಫಿಯರ್ ಕ್ರಿಯೇಟ್ ಮಾಡುತ್ತಿದ್ದಾರೆ ಅಂದರೆ ಅದರ ಬಗ್ಗೆ ಅಧ್ಯಕ್ಷರ ಅಪ್ಪಣೆಯನ್ನು ಪಡೆದು ಮಹಾರಾಷ್ಟ್ರ ಟೈಮ್ಸ್, ಪತ್ರಿಕೆಯ ಎಡಿಟೋರಿಯಲ್ ಕಾಲಮ್‌ನಲ್ಲಿ ಬರೆದಿರತಕ್ಕದ್ದನ್ನು ಈ ಸಭೆಯ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ಇದು ಮರಾಠಿ ಪತ್ರಿಕೆ, ಟೈಮ್ಸ್ ಆಫ್ ಇಂಡಿಯಾ ಗ್ರೂಪ್ ಆಫ್ ಪೇಪರ್, ಇದು ಒಂದು ಪ್ರಿಸ್ಟೀಜಿಯಸ್ ಪೇಪರ್, ಇದು ಕೇವಲ ೧೦–೨೦ ಪೈಸೆ ಪೇಪರ್ ಅಲ್ಲ,

ಈ ಒಂದು ಪೇಪರ್‌ನಲ್ಲಿ ಏನು ಬಂದಿದೆ ಎಂದು ನೋಡಿದರೆ ಅದನ್ನು ನಾವೆಲ್ಲಾ ತಿಳಿದುಕೊಳ್ಳಬೇಕಾದ ವಿಷಯವಾಗಿದೆಂದು ಹೇಳುತ್ತೇನೆ. ಒಂದು ತರಹ ಅನ್ ಪ್ರಿನಿಸಿಪಲ್ಡ್ ಕ್ರಿಟಿಸಿಸಮ್ ಮಾಡಿದರೆ, ಅದರಿಂದ ಯಾವ ತರಹ ಭಾವನೆ ಜನಗಳ ಮೇಲೆ ಆಗುತ್ತದೆ ಮತ್ತು ಏನು ರಿಯಾಕ್ಷನ್ ನಮ್ಮ ಈ ಒಂದು ಸದನದಲ್ಲಿ ಆಗಲಿ, ಅಥವಾ ಸದಸ್ಯರ ಮೇಲೆ ಆಗಲೀ ಏನು ಅಭಿಪ್ರಾಯ ಬೇರೆಯುವರಲ್ಲಿ ಇದೆ ಎಂದು ಹೇಳುವುದಕ್ಕೆ ಇದು ಸಹಾಯಕವಾಗುತ್ತದೆ. ಇದನ್ನು ಸ್ವಲ್ಪ ಓದುತ್ತೇನೆ.

MR. SPEAKER.— It is not the contention of the House to read papers. Please give the gist.

SRI M.S. NARAYANA RAO.— In this Session itself many papers and editorials have been read. They have been allowed to read,

MR. SPEAKER.— I said, it is not the convention.

SRI M.S. NARAYANA RAO.— "KARNATAKA'S GOBBELS"

> "Sri Veerappa Moily who is leader of opposition and leader of Congress-I Party is trying to become Gobbels. Since he has got stiff opposition in his own party, his calculations are perhaps that by hurling allegations on the Janata Party, he can better his impression in Delhi. For this reason he has discovered that Chief Minister Hegde is engineering defections to increase Janata Party's strength, so that he need not have to depend on the Communist and BJP support. If Moily had stated only this much it could have been understand. able. But he has gone further to declare that once Janatha Party gets majority, Mr. Hegde will dissolve the Assembly and take elections. Mr Hegde need not then depend upon help of other parties after getting majority for Janata Party in these elections. Today it is doubtful that the Government could be run for five years, in view of this dependence. This dependence will not remain after Mr. Hegde gets majority."

ಶ್ರೀ ಎಂ. ವೀರಪ್ಪ ಮೊಯ್ಲಿ — ಅಧ್ಯಕ್ಷರೇ, ಇವರು ಯಾವ ಥಿಸಿಸ್ ಓದುತ್ತಿದ್ದಾರೆ.

ಅಧ್ಯಕ್ಷರೇ.— ಪತ್ರಿಕೆಯ ಎಡಿಟೋರಿಯಲ್ ಓದುತ್ತಿದ್ದಾರೆ.

ಶ್ರೀ ಎಂ.ಎಸ್ ನಾರಾಯಣ ರಾವ್.— ಅಧ್ಯಕ್ಷರೇ, ನಾನು ಓದುವಾಗ ಇವರು ಏತಕ್ಕೆ ಅಡ್ಡ ಬರುತ್ತಿದ್ದಾರೆ ಎಂದು ನನಗೆ ಅರ್ಥವಾಗುತ್ತಿಲ್ಲ. ಮುಂದಕ್ಕೆ ಅದು ಈ ರೀತಿಯಾಗಿದೆ.—

> "Admission of Defeat' Shri Moily has stretched his imagination too much. Supposing that after defections Janatha Party gets majority – what for Hegde will do the unwise act of calling elections after dissolution ? One who can increase his strength by way of defections can also rule for five years. Why should anyone go after uncertain mirage when he has what he wants. Yet

Mr. Moily has asserted his view which is likely to embarass himself. By making this prediction he is not aware of the admission he is making that his party will not win if elections are held. He is as if declaring that he has become shock-proof at the defeat of his party (in the recent past) and he has no capacity to make his party win once again. But why should Mr. Hegde be afraid of such a demoralised party and seek dissolution of the Assembly and go for election. But why will Mr. Hegde take elections by being afraid of the party which is in such turmoil ? It will be a surprise if Mr. Moily doesn't lose his post after his making clear of the rise of Janata Party in Karnataka and gloomy prospects of his party in time to come.

The insinuations made by Shri Moily on Janata Party are like the Devil quoting the scripture. He says that Janata Party has not kept up the promises given to its allies. In this context he has cited an example of Kranthiranga. Whether the Congress Party had kept up the promise given to its alloy when it managed to overthrow the DMK Government in pondicherry ? Congress I divorsed the DMK when it was found convenient to be-friend the ADMK. Besides there was split in Kranthiranga itself and its one part merged with Janata Party. Bangarappa raised big clamour. But not many from Kranthiranga followed him. Now he is thinking to enter Indira Congress. There his, "Reception' is certain. In these circumstancess the accusation of betrayal of friendly parties become? pointless. It is the B.J.P. and Communists who are to complain in this matter. That these parties are not complaining, whose attorney of power does Moily hold Moily has reminded of the anti-defection bill which Janata Party had proposed and which that party has forgotten on coming to power. Janata Party leaders are very hasty in making known of their over ethical mindednesss. So criticism is bound to take place. But Moily should investigate as to whether Indira Congress opins to legally resist defections. He wouldn't get the reply. Because every party has taken the attitude of talking one and doing other, in this matter. In case Moily's Party is inclined to have anti-defection law, he should submit an un-official bill. He would do well

> to think of its consequences around the country, One more criticism that Mr. Moily has levelled partains to corruption and police atrocities. Bangarappa himself has made allegations of corruption but he had to retrast. Moily too has been making allegations in general without referring to any example. The same story is repeated about Police atrocities. It is not as if the police has suddenly changed in Karnataka. How could the Police accustomed to the Gundu Rao regime change so soon ? But Moily ought to have given the list of areas where Police atrocities are going on. He has not done that and he wouldn't do it also, Because he has to secure his chair by resorting to Gobbels type of propaganda. But this propaganda will not have the desired effect here Because in Germany there was ban on countering the falsehood of Gobbels. Here (in the country) the other side of a thing can come out through many media other than the Governmental machinery for publicity. This is Moily's misfortune and our fortune,"

Why I read this editorial is that we are creating an impression in other States by our criticism which is not so responsive if I may say so. Therefore, I request......

ಶ್ರೀ ಎಂ. ವೀರಪ್ಪಮೊಯ್ಲಿ.— ತಾವು ಒಂದು ನಿಮಿಷ ಅವಕಾಶವನ್ನು ಕೊಟ್ಟರೆ ಒಂದು ಮಾತನ್ನು ಹೇಳುತ್ತೇನೆ. ಈ ರಾಜ್ಯದಲ್ಲಿ ಹೊಸ ವಾತಾವರಣ ಬಂದಿದೆ. ಏಕೆಂದರೆ, ವಿರೋಧಪಕ್ಷದ ನಾಯಕರ ಅಭಿಪ್ರಾಯ ಏನಾಗಿದೆ ಎಂದರೆ ಅವರು ಮುಖ್ಯ ಮಂತ್ರಿಗಳ ಮನೆಯಲ್ಲೇ ಕೂತಿರಬೇಕು, ಫೇವರ್ ತೆಗೆದುಕೊಳ್ಳಬೇಕೆಂದು ಒಂದು ಸಂಪ್ರದಾಯ ಇದೆ. ಆದರೆ ಇನ್ನುಮುಂದೆ ಇಂಥ ಸಂಪ್ರದಾಯ ನಡೆಯುವುದಿಲ್ಲ. The Opposition will have its own status and not to seek favours from the Government. ಈ ಒಂದು ಹೊಸ ಸಂಪ್ರದಾಯ ಬಂದಿದೆ. ಇದಕ್ಕೆ ಗಾಬರಿಯಾಗಿ ಮಾನ್ಯ ಸದಸ್ಯರು ಹೇಳಿರಬಹುದು. I must compliment you for having read English perfectly. We must compliment him.

ಶ್ರೀ ಆರ್. ನಾರಾಯಣರಾವ್.— ಪ್ರತಿಪಕ್ಷದ ನಾಯಕರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ. ಏಕೆಂದರೆ ಅವರು ಕಳೆದ ಸುಮಾರು ೯ ತಿಂಗಳಿಂದ ಅವರ ಸದಸ್ಯರನ್ನೆಲ್ಲಾ ಹಿಡಿತದಲ್ಲಿ ಇಟ್ಟುಕೊಂಡು ಬಂದಿದ್ದಾರೆ. ಆದರೆ ಇನ್ನುಮುಂದೆ ಹೀಗೆ ಹಿಡಿದುಕೊಂಡಿರುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಅನಿಸುತ್ತದೆ.

ಶ್ರೀ ಎಂ. ವೀರಪ್ಪಮೊಯ್ಲಿ.— ತಾವು ಭದ್ರವಾದ ಕಡೆ ಇದ್ದರೆ ಸಾಕು. ನಮಗೆ ಅದೇ ಸಂತೋಷ. ನಮ್ಮ ಕಡೆ ಏನು ಮಾಡಿಕೊಳ್ಳಬೇಕೋ ಅದನ್ನು ನಾವು ಮಾಡಿಕೊಳ್ಳುತ್ತೇವೆ.

ಶ್ರೀ ಆರ್. ನಾರಾಯಣರಾವ್.— ಕಳೆದ ೯ ತಿಂಗಳಿಂದ ಬಹಳ ಕಷ್ಟಪಟ್ಟು ಸದಸ್ಯರನ್ನು ಹಿಡಿದುಕೊಂಡಿದ್ದೀರಿ. ನಾನು ಈಗಾಗಲೇ ಹೇಳಿದಂತೆ ಡಿಫೆಕ್ಷನ್ ಎಂಬುದು ಕಾಂಗ್ರೆಸ್‌ನವರಿಗೆ ಒಂದು ಜೀವನವಾಗಿದೆ. ಆದರೆ ಜನತಾ ಪಕ್ಷದವರು ಡಿಫೆಕ್ಷನ್ ಮಾಡಿಸುವ ಪ್ರಮೇಯವೇ ಬರುವುದಿಲ್ಲ. ಕಾಂಗ್ರೆಸ್ (ಐ) ನವರು ಯಾವಾಗಲೂ ಅಧಿಕಾರ ಎಲ್ಲಿ ಸಿಕ್ಕುತ್ತದೆ ಆ ಕಡೆ ಹೋಗಿ ಸೇರಿಕೊಳ್ಳತಕ್ಕ ಚಾಣಕ್ಯತನವನ್ನು ಇಟ್ಟುಕೊಂಡಿದ್ದಾರೆ. ತಾವಾಗಿಯೇ ಹೋಗತಕ್ಕದ್ದು ಅವರಿಗೆ ಒಂದು

ಕಸುಬಾಗಿದೆ. ಈಗ ಅವರು ಹೆದರಿಕೆಯಿಂದ ಇದ್ದಾರೆ. ಇನ್ನು ಮುಂದಾದರೂ ಕಾಂಗ್ರೆಸ್ (ಐ) ನವರು ಜನತಾ ಪಕ್ಷದ ಮೇಲೆ ಆರೋಪವನ್ನು ಮಾಡುವುದನ್ನು ಬಿಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮಾನ್ಯ ವಿರೋಧಪಕ್ಷದ ನಾಯಕರು ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ವಿಚಾರದಲ್ಲಿ ಮಾತನಾಡುತ್ತಾ ಪ್ಲಾನಿಂಗ್ ಡಿಪಾರ್ಟ್‌ಮೆಂಟನ್ನು ಬದಲಾವಣೆ ಮಾಡುತ್ತಿರುವುದರಿಂದ ನಮ್ಮ ರಾಜ್ಯದ ಅಭಿವೃದ್ಧಿ ಕುಂಠಿತವಾಗುತ್ತಿದೆ ಎಂದು ಆರೋಪವನ್ನು ಮಾಡಿದರು. ಹಿಂದೆ ಇವರ ಕಾಲದಲ್ಲಿ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನಲ್ಲಿದ್ದ ಅಧಿಕಾರಿಗಳು ದಕ್ಷರು ಇದ್ದರೆಂದು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಮ್ಮ ರಾಜ್ಯದ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನಲ್ಲಿ ಅಥವಾ ಬೇರೆ ಯಾವುದೇ ಇಲಾಖೆಯಲ್ಲಾಗಲಿ ಎಲ್ಲರೂ ದಕ್ಷರು ಹಾಗೂ ಒಳ್ಳೆಯವರು ಇಲ್ಲದಿದ್ದರೂ ಕೆಲವರಾದರೂ ಇದ್ದಾರೆ.

ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮ ರಾಜ್ಯದಲ್ಲಿ ಪವರ್ ಷಾರ್ಟೇಜ್ ಏತಕ್ಕೆ ಬಂತು? ಬಾಟಲ್ ನೆಕ್ ಫುಡ್‌ಗ್ರೈನ್ಸ್ ಷಾರ್ಟೇಜ್ ಏತಕ್ಕೆ ಬಂತು? ನಮ್ಮ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನಲ್ಲಿ ಒಳ್ಳೆಯ ಅಧಿಕಾರಿಗಳಿದ್ದರೆ, ಈ ರೀತಿಯ ಬಾಟಲ್‌ನೆಕ್ ಷಾರ್ಟೇಜ್ ಬರುವುದಕ್ಕೆ ಕಾರಣವಾದರೂ ಏನು ? ಹಿಂದಿನ ಸರ್ಕಾರದ ಮಟ್ಟದಲ್ಲಿದ್ದ ಅಧಿಕಾರಿಗಳು ಮಂತ್ರಿಗಳಿಗೆ ಸರಿಯಾಗಿ ಗೈಡ್‌ಲೈನ್ಸ್ ಕೊಡದೇ ಹೋಗಿದ್ದರಿಂದ ನಮ್ಮ ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತವಾಗುತ್ತಿತ್ತೆಂದು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ.

ಇನ್ನು ವಿರೋಧಪಕ್ಷದ ನಾಯಕರಾದ ಮಾನ್ಯ ವೀರಪ್ಪ ಮೊಯ್ಲಿಯವರು ಮಾತನಾಡುತ್ತಾ, ನಮ್ಮ ರಾಜ್ಯದ ಕೈಗಾರಿಕೆಗಳಿಗೆ, ನೀರಾವರಿಗೆ, ಇನ್ನೂ ಅನೇಕ ಬಾಬುಗಳಿಗೆ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರು ಬಹಳ ಕಡಿಮೆ ಹಣವನ್ನು ಕೊಟ್ಟಿದ್ದಾರೆಂದು ಹೇಳಿದರು. ನಾನಾದರೂ ಅವರಿಗೆ ಹೇಳುತ್ತೇನೆ. ಕೇವಲ ಹಣವನ್ನು ಕೊಡುವುದರಿಂದಲೇ ನಮ್ಮ ರಾಜ್ಯ ಮುಂದುವರಿಯುವಂತಿದ್ದರೆ ಇಷ್ಟು ಹೊತ್ತಿಗೆ ಬಹಳವಾಗಿ ಮುಂದುವರಿಯುತ್ತಾ ಇತ್ತು. ಕೇವಲ ಹಣವನ್ನು ಕೊಡುವುದರಿಂದ ಏನೂ ಸಾಧನೆಯಾಗುವುದಿಲ್ಲ ಆದರೆ ಹಣವನ್ನು ಖರ್ಚುಮಾಡಿದ ಮೇಲೆ ಏನು ಉಪಯೋಗ ವಾಯಿತು ಎಂಬುವನ್ನು ನೋಡಬೇಕು ಈ ವಿಚಾರದಲ್ಲಿ ನಾವು ಹೇಳುವುದನ್ನು ಅವರು ಒಪ್ಪಿಕೊಳ್ಳದೇ ಹೋಗಬಹುದು. ಆದರೆ ಅವರ ನಾಯಕಿಯವರೇ ಏನು ಹೇಳಿದ್ದಾರೆ ಎಂಬುದನ್ನು ನಾನು ಹೇಳಬಯಸುತ್ತೇನೆ. ಅದು ವೈಟಲ್ ಇಂಪಾರ್ಟೆನ್ಸ್ ಆಫ್ ೨೦ ಪಾಯಿಂಟ್ ಪ್ರೋಗ್ರಾಂ ಎಂಬುದು ಶ್ರೀಮತಿ ಇಂದಿರಾಗಾಂಧಿಯವರ ಭಾಷಣ. ಇದನ್ನು ಶ್ರೀಮತಿ ಇಂದಿರಾಗಾಂಧಿಯವರು ೧೯೮೧ನೇ ಇಸವಿ ಏಪ್ರಿಲ್ ೪ನೇ ತಾರೀಖು ಮಾಡಿದ್ದಾರೆ. ಅವರು ತಮ್ಮ ಭಾಷಣವನ್ನು ಮುಕ್ತಾಯ ಮಾಡುವ ಸಂದರ್ಭದಲ್ಲಿ ಈ ರೀತಿಯಾಗಿ ಹೇಳಿದ್ದಾರೆ.

> "One small point, which I should have made earlier, is that stress should not be laid on merely reaching the financial targets. I find that people suddenly rush about in the months of January, February and March to say that this much money should be spent. That is not the way of implementing a programme. What we must be interested in are the results achieved on the ground. It doesn't matter if some of the money is not spent. It does matter that what has been spent is spent to good purpose and has had a visible effect on the lives of the people in those areas."

ಅದು ಜನರ ಜೀವನದ ಮೇಲೆ ಯಾವುದೇ ಪರಿಣಾಮವನ್ನೂ ಉಂಟುಮಾಡಿಲ್ಲ. ಇವತ್ತೂ ಅವರಿಗೆ ಅದೇ ಕಷ್ಟ ಇದೆಯೆಂದು ಹೇಳಬಯಸುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಾಗ ಒಳ್ಳೆಯ ಇಲಾಖೆಯನ್ನು ಕೊಟ್ಟಿದ್ದೇವೆ, ಆದರೆ ನೀವು ಅದನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎಂದು ಹೇಳಿದರು. ಆದರೆ ಅವರು ಹೇಳಿದ್ದು ಸರಿಯಲ್ಲ. ನಾನಾದರೂ ಹೇಳುತ್ತೇನೆ ಅವರು ಕೊಟ್ಟಿರುವುದು

ನಿರುಪಯುಕ್ತ ಆಡಳಿತಯಂತ್ರ. ಅವರು ಅನುಸರಿಸುತ್ತಿದ್ದ ಪಾಲಿಸಿಗಳು ಯಾವುದೂ ಸರಿಯಾಗಿರಲಿಲ್ಲ. ಈಗ ನಾವು ಅದನ್ನೆಲ್ಲಾ ಸರಿಪಡಿಸಿ ಮುಂದಕ್ಕೆ ಹೋಗಬೇಕಾಗಿರುವುದರಿಂದ ಬಹಳಷ್ಟು ಕಾಲ ಹಿಡಿಯುತ್ತದೆ. ಇವತ್ತು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ವಿಚಾರದಲ್ಲಿ ನೀವು ಏನು ಮಾಡಿದಿರಿ ಎಂದು ತಾವು ಕೇಳುವುದಾದರೆ ನನ್ನ ವೈಯುಕ್ತಿಕವಾದ ಅಭಿಪ್ರಾಯದಲ್ಲಿ ಹೇಳುವುದಾದರೆ ಎರಡು ವಿಚಾರದಲ್ಲಿ ಬಹಳಷ್ಟು ಪ್ರಾಮುಖ್ಯತೆಯನ್ನು ಕೊಡುತ್ತಿದ್ದೇವೆ. ಅದು ಯಾವುದೆಂದರೆ ಎಕ್ಸಿಕ್ಯೂಷನ್ ಆಫ್ ಅಡ್ಮಿನಿಸ್ಟ್ರೇಷನ್ ಮತ್ತು ಎಕ್ಸಿಕ್ಯುಷನ್ ಆಫ್ ಪ್ರಾಜೆಕ್ಟ್ಸ್ ಇವು. ಮತ್ತೊಂದು ವಿಕೇಂದ್ರೀಕರಣ ಮಾಡುವ ಸಲುವಾಗಿಯೂ ಕೂಡ ನಾವು ಪ್ರಾಮುಖ್ಯತೆಯನ್ನು ಕೊಡುತ್ತಿದ್ದೇವೆ. ಹಿಂದೆ ಯಾವ ರೀತಿ ಆಡಳಿತ ನಡೆಯುತ್ತಿತ್ತು, ಈಗ ಯಾವರೀತಿ ನಡೆಯುತ್ತಿದೆ ಎಂಬುದನ್ನು ನೋಡಬೇಕಾಗಿದೆ.

4-00 P. M.

ಶ್ರೀ ಎಂ. ಎಸ್. ನಾರಾಯಣರಾವ್. —ಇಲ್ಲಿ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರು ಕೊಟ್ಟಿರತಕ್ಕಂಥ ರಿಪೋರ್ಟ್‌ನಲ್ಲಿ ಪೇಜ್ ನಂಬರ್ ೨೪ರಲ್ಲಿ ಕೊಟ್ಟಿರತಕ್ಕಂಥದ್ದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

The Planning Department Annual Report 1982–83 says :

At page 24 it is said :

"Under the two-tier planning procedure (decentralised planning) introduced from 1978-79, a lumpsum allocation was indicated to the districts every year for plan formulation at the district level. The District planning committee distributes this amount amongst different district sectors. The concerned Heads of Departments at the district level formulate the programmes against the outlay communicated to them by the District Planning Committee. The District Development Councils used to approve the plan and forward the same to the Government. These proposals in the from of draft district plans where scrutinised by the State Heads of Departments and finalished plan as approved by the state Hhads of Departments was communicated to various districts. ಇದು ಒಂದು ಡಿಫೆಕ್ಟೀವ್ ಪ್ಲಾನಿಂಗ್ ಆಗಿದೆ. ಸರಿಯಾಗಿ ಪ್ಲಾನಿಂಗ್ ಮೊದಲಿನಿಂದಲೂ ಮಾಡಿಕೊಂಡು ಹೋಗಿದ್ದರೆ ಸರಿ ಹೋಗುತ್ತಿತ್ತು.

Again at page 25 it is said :

"For 1983-84 plan, instead of lumpsum allocation to the districts, minor head-wise outlays under each sector for different Districts were tentatively worked out and communicated to Districts. Depending upon the local needs, the District Development Councils are given free hand to select any scheme or have a new scheme best suited to them subject to the ceiling of outlay under each minor head".

ನಮ್ಮ ಸರ್ಕಾರದವರು ಏನು ಮಾಡಿದ್ದಾರೆಂದರೆ ಡಿಸ್ಟ್ರಿಕ್ ಡೆವಲಪ್‌ಮೆಂಟ್ ಕೌನ್ಸಿಲ್‌ಗೆ ಪೂರ್ತಿಯಾದ ಪವರ್ಸ್‌ನ್ನು ಅವರಿಗೆ ಕೊಟ್ಟಿದ್ದಾರೆ. ಕೆಲವೊಂದು ಸ್ಕೀಮ್‌ಗಳನ್ನು ಯೋಜನೆಗಳನ್ನು ಅಳವಡಿಸಿಕೊಟ್ಟಿದ್ದಾರೆ. ಆದರೆ ನಮ್ಮ ಸರ್ಕಾರದಲ್ಲಿ ಪ್ಲಾನಿಂಗ್‌ನಲ್ಲಿ ವಿಕೇಂದ್ರೀಕರಣ ಏನು ಮಾಡುತ್ತಾ ಇದ್ದಾರೆ. ಅದನ್ನು ಮಾಡುವಾಗ ಯೋಜನಾ ಇಲಾಖೆ ಏನು ಇದೆ ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಅದನ್ನು ಬಲಪಡಿಸುವಂಥ ಏರ್ಪಾಡು ಮಾಡಿದ್ದಾರೆ ಪ್ರತಿಯೊಂದು ಡಿಸ್ಟ್ರಿಕ್ಟ್‌ಗೂ ಒಂದು ಡಿಸ್ಟ್ರಿಕ್ ಪ್ಲಾನಿಂಗ್ ಆಫೀಸರನ್ನು ಹಾಕಿ ಅವರು ಡೆವಲಪ್‌ಮೆಂಟ್ ಕೌನ್ಸಿಲ್ ಜೊತೆಗೆ ಕುಳಿತುಕೊಂಡು ಅಲ್ಲಿಯ ಯೋಜನೆ ಏನು ಇದೆ ಅದನ್ನು ತಯಾರುಮಾಡಿ, ಅದನ್ನು ಯೋಜನಾ ಇಲಾಖೆಯವರು ನೋಡಿ ಅಪ್ರೂವ್ ಮಾಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅದೇರೀತಿಯಲ್ಲಿ ಪ್ಲಾನಿಂಗ್ ಯಶಸ್ವಿಯಾಗಿ ನಡೆಯಬೇಕಾದರೆ ರೀಸೋರ್ಸಸ್ ಇರಬೇಕು. ರಿಸೋರ್ಸಸ್ ಮಾಡಬೇಕಾದರೆ ಈವತ್ತು ಏನು ಮಾಡಬೇಕು ಎಂಬುದರ ಬಗ್ಗೆ ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ನಮಗೆ ಎಲ್ಲಿಂದ ರಿಸೋರ್ಸಸ್ ಬರುತ್ತದೆಯೋ ಅದೆಲ್ಲ ಕೇಂದ್ರ ಸರ್ಕಾರದ ವ್ಯವಸ್ಥೆಯಲ್ಲಿದೆ. ನಮ್ಮ ಕೈಯಲ್ಲಿ ಇಲ್ಲವೆಂದು ಹೇಳುತ್ತಿದ್ದಾರೆ. ಆದ್ದರಿಂದ ಈವತ್ತು ಮಾನ್ಯ ಮುಖ್ಯಮಂತ್ರಿಗಳು ಹಿಸ್ಟಾರಿಕ್‌ಸ್ಟ್ರಗಲ್ ಮಾಡಿ ಸೆಂಟ್ರಲ್ ಮತ್ತು ಸ್ಟೇಟ್ಸ್ ರಿಲೇಷನ್ ಷಿಪ್‌ನ್ನು ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಅವರ ಪ್ರಯತ್ನ ಏನು ಇದೆ ಅದು ಫಲಕಾರಿಯಾಗದೇ ಹೋಗಬಹುದೆಂದು ತಮ್ಮ ಗಮನಕ್ಕೆ ತರಬಯಸುತ್ತೇನೆ. ಏತಕ್ಕೆಂದರೆ ಫೈನಾನ್ಸ್ ಕಮಿಷನ್ ಪ್ರೊಸೀಡಿಂಗ್ಸ್ ಏನು ಇದೆ ಅದನ್ನು ಓದಿ ನೋಡಿದರೆ ತಿಳಿಯುತ್ತದೆ. ಮಾನ್ಯ ಪ್ರಧಾನ್ಯ ಮಂತ್ರಿಯವರು ರಾಜ್ಯದ ಮುಖ್ಯಮಂತ್ರಿಗಳ ಸಭೆಯನ್ನು ಉದ್ದೇಶಿಸಿ ಮಾತನಾಡುವಾಗ ಒಂದು ವಿಚಾರವನ್ನು ಹೇಳಿದ್ದಾರೆ. ಅದನ್ನು ಮಾತ್ರ ಇಲ್ಲಿ ಈ ಸದನದ ಗಮನಕ್ಕೆ ತರಬಯಸುತ್ತೇನೆ. ಇಪ್ಪತ್ತು ಅಂಶದ ಕಾರ್ಯಕ್ರಮದ ಬಗ್ಗೆ ಮಾತನಾಡುತ್ತಾ ಮತ್ತು ನಮ್ಮ ದೇಶದಲ್ಲಿ ಸೆಂಟ್ರಲ್ ಮತ್ತು ಸ್ಟೇಟ್ ರಿಲೇಷನ್‌ಶಿಪ್‌ಬಗ್ಗೆ ಸಹ ಮಾತನಾಡುತ್ತಾ ಅವರು ಈರೀತಿ ಹೇಳಿರುತ್ತಾರೆ.

Vital Importance of 20 point Programme ;

"All this may prompt some speakers to refer to the devolution of finances between States and Centre. A sizeable part of the development programme is in the State sector, specially those programmes which touch the people directly. States which have special problems naturally turn to the Centre. A relationship of mutual dependence is the normal one between the Centre and the States. It cannot be otherwise, Whenever I have talked of a strong Centre, I have always qualified that statement saying that a strong Centre can exist only when the States themselves are strong, because we are dependent on the States. It is true that States do not have sufficient funds but I am sure that whatever you say, all of you are fully aware that the Centre also does not have sufficient funds. If you are able to meet our Ministers separately all of them will tell you their grievances and their complaints with the Planning Commission, with the Finance Minister, and with the Prime Minister because she is unable to force these two agencies to produce money out of nothing. The plain fact which has to be borne in mind is that the nation as a whole lacks adequate resources for the enormous task it faces. The need

is to enlarge the over all resource base. This is much more important than the proportion and the principle of sharing. Who spends is less relevant than that money is available for spending and that the nation finds more resources for development programmes. The Centre does not spend on it self but on helping the Staths and on those programmes which should reach out to all the people."

ಎಂಬುದಾಗಿ ಹೇಳಿರುವುದರಿಂದ ನಾವು ತಿಳಿದುಕೊಂಡಿರತಕ್ಕಂಥ ರೀತಿಯಲ್ಲಿ ಸೆಂಟ್ರಲ್ ಗೌವರ್ನ್ಮೆಂಟ್‌ನಿಂದ ನಮಗೆ ಹೆಚ್ಚಿನ ಸಹಾಯ ಬರುತ್ತದೆ ಎಂಬುವ ಸಾಧ್ಯತೆ ಇಲ್ಲ. ಆದ್ದರಿಂದ ನಮ್ಮ ರಾಜ್ಯ ಸರ್ಕಾರ ಈ ರಿಸೋರ್ಸಸ್ಸನ್ನು ಮೊಬಲೈಸ್ ಮಾಡುವುದಕ್ಕೆ ಏನಾದರೂ ಕ್ರಮ ಹಾಕಿಕೊಳ್ಳಬೇಕೆಂದು ಹೇಳಲು ಇಚ್ಛೆಪಡುತ್ತೇನೆ. ಈ ವಿಚಾರದಲ್ಲಿ ಒಂದು ವಿಷಯವನ್ನು ಸರ್ಕಾರದ ಗಮನಕ್ಕೆ ತರ ಬಯಸುವುದೇನೆಂದರೆ ಸ್ಪೆಸಿಫಿಕ್ ಆಗಿ ರಿಸೋರ್ಸಸ್‌ನ್ನು ಮೊಬಲೈಸ್ ಮಾಡಲಿಕ್ಕೆ ಒಂದು ಕಮಿಷನ್ ಅಪಾಯಿಂಟ್ ಮಾಡಿ ಒಂದು ಹೊಸರೀತಿಯಾಗಿ ರೆಸೋರ್ಸಸ್‌ನ್ನು ಮೊಬಲೈಸ್ ಮಾಡಬೇಕಾಗುತ್ತದೆ ಸರ್ಕಾರವನ್ನು ನಾನು ಕೇಳಿಕೊಳ್ಳುವುದೇನೆಂದರೆ ಕಮಿಷನ್ ಮಾಡುವಾಗ ಕನ್‌ವರ್ಷನಲ್ ರಿಸೋರ್ಸಸ್ ಏನು ಇದೆ ಟ್ಯಾಕ್ಸ್, ಸೇಲ್ಸ್‌ಟ್ಯಾಕ್ಸ್, ಪ್ರೊಫೇಷನಲ್ ಟ್ಯಾಕ್ಸ್ ಅದನ್ನು ಬಿಟ್ಟು ಬೇರೆ ರಾಜ್ಯಗಳು ಯಾವರೀತಿಯಲ್ಲಿ ರಿಸೋರ್ಸಸ್ ಮೊಬಲೈಸ್ ಮಾಡಿದ್ದಾರೆ ಆ ರೀತಿಯಲ್ಲಿ ನಮ್ಮ ರಾಜ್ಯ ಸರ್ಕಾರ ಯೋಚನೆ ಮಾಡಬೇಂದು ಹೇಳುತ್ತೇನೆ. ಈ ಎರಡು ಸಲಹೆಗಳನ್ನು ಕೊಡುವಾಗ ಮೊದಲನೆಯದಾಗಿ ನಾನು ಹೇಳುವುದು ಟ್ಯಾಕ್ಸ್ ಕಲೆಕ್ಷನ್ ವಿಚಾರ. ಇಲ್ಲಿ ಸ್ವಲ್ಪಮಟ್ಟಿನ ಬಿಗಿಯನ್ನು ಮಾಡಿದರೆ ಮುಕ್ಕಾಲುಭಾಗ ರಿಸೋರ್ಸಸ್ಸನ್ನು ಮೊಬಲೈಸ್ ಮಾಡಬಹುದು. ಪ್ರಾಪರ್ ಅಸ್ಸೆಸ್‌ಮೆಂಟ್ ಮಾಡಿದರೆ ೨೫ ಪರ್ಸೆಂಟ್ ಟ್ಯಾಕ್ಸ್ ಕಲೆಕ್ಟ್ ಮಾಡಬಹುದು. ಅದೇರೀತಿಯಲ್ಲಿ ಕೆಲವು ಕಡೆ ಅನ್‌ನೆಸ್ಸಸರಿ ಎಕ್ಸ್‌ಪೆಂಡೀಚರ್ ಏನು ಇದೆ ಅದನ್ನು ತಪ್ಪಿಸಿದರೆ ಇನ್ನೂ ೧೦ ಪರ್ಸೆಂಟ್ ರಿಸೋರ್ಸಸ್ ಇನ್‌ಕ್ರೀಸ್ ಮಾಡಬಹುದು. ಈ ಎರಡು ವಿಷಯಗಳ ಬಗೆಯೂ ನಮ್ಮ ಸರ್ಕಾರದ ದವರು ಯೋಚನೆ ಮಾಡಬೇಕು. ಇನ್ನು ಬೇರೆ ರೀತಿಯಲ್ಲಿ ರಿಸೋರ್ಸಸ್ ಮೊಬಲೈಸ್ ಮಾಡ ಬೇಕೆಂದರೆ ರಾಜ್ಯ ಸರ್ಕಾರದ ರಸ್ತೆ ಸಾರಿಗೆ ಇಲಾಖೆ ಇದೆ ಅದನ್ನು ಪೂರ್ಣವಾಗಿ ನಾಷನಲೈಸ್ ಮಾಡುವುದಕ್ಕೆ ನಮ್ಮ ಸರ್ಕಾರದವರು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ, ಇದರಿಂದ ರಿಸೋರ್ಸಸ್ ಜಾಸ್ತಿ ಬರುತ್ತದೆ. ಮತ್ತೊಂದು ವಿಚಾರವೇನೆಂದರೆ ಹೋಲ್‌ಸೇಲ್ಸ್ ಡೀಲರ್ಸ್‌ನ್ನು ನ್ಯಾಷನಲೈಸ್ ಮಾಡಿದರೆ ರಿಸೋರ್ಸ್‌ಸ್‌ನ್ನು ಮೊಬಲೈಸ್ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ತಿಳಿದುಕೊಂಡಿರುತ್ತೇನೆ.

ಕೊನೆಯದಾಗಿ ನನ್ನ ಭಾಷಣವನ್ನು ಮುಗಿಸುವುದಕ್ಕೆ ಮುಂಚಿತವಾಗಿ ಎರಡು ವಿಚಾರಗಳನ್ನು ಹೇಳಬಯಸುತ್ತೇನೆ. ಅದೇನೆಂದರೆ ವೃದ್ಧಾಪ್ಯ ವೇತನವನ್ನು ಮನಿಯಾರ್ಡರ್ ಮುಖಾಂತರವಾಗಿ ಕಳುಹಿಸುತ್ತಿರುವುದರಿಂದ ಜನರಿಗೆ ಬಹಳ ತೊಂದರೆಯಾಗುತ್ತದೆ. ಅದನ್ನು ಷೆಡ್ಯೂಲ್ ಬ್ಯಾಂಕ್‌ಗಳ ಮುಖಾಂತರ ವಿತರಣೆಯ ಕಾರ್ಯವನ್ನು ಮಾಡಬೇಕೆಂದು ಹೇಳುತ್ತಾ, ಇನ್ನು ಪ್ರೊಫೇಷನಲ್ ಟ್ಯಾಕ್ಸ್ ಏನು ಇದೆ ಅದನ್ನು ಸುಮಾರು ೧೨೦೦ ರೂಪಾಯಿಗಳವರೆಗೆ ಕನ್‌ಸೆಷನ್ ಕೊಟ್ಟಿರುತ್ತೀರಿ. ಅದೇರೀತಿಯಲ್ಲಿ ಬೇರೆ ಪ್ರೊಫೇಷನಲ್ಲಿಗೆ ಅಂದರೆ ಅಡ್ವೊಕೇಟ್ಸ್ ಮತ್ತು ಡಾಕ್ಟರ್‌ಗಳಿಗೂ ಕನ್‌ಸೆಷನ್ ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಜೆ. ಡಿ. ಸೋಮಪ್ಪ (ಸಕಲೇಶಪುರ).— ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಸುಮಾರು ೧೬ ಬೇಡಿಕೆಗಳನ್ನು ಈ ಸದನದ ಒಪ್ಪಿಗೆಗೆ ಮಂಡಿಸಿದ್ದಾರೆ. ಇಲ್ಲಿ ತಮಗೆಲ್ಲರಿಗೂ ಗೊತ್ತಿರುವಂತೆ ಕಳೆದ ಜನವರಿ ತಿಂಗಳಲ್ಲಿ ಒಂದು ಬದಲಾವಣೆಯಾಯಿತು. ಇದು ಆಗಿ ೮ ತಿಂಗಳು ೧೧ ದಿವಸಗಳಾಯಿತು. ಆದರೆ ಕೆಲವರು ೯ ತಿಂಗಳಾಯಿತು ಎಂದು ಹೇಳಿದರು. ಈ ತಿಂಗಳ ೨೭ನೇ ತಾರೀಖು ಡೆಲಿವರಿ ಆಗುತ್ತದೆಂದು ಮಾನ್ಯ ಸೂರ್ಯನಾರಾಯಣರಾವ್ ಅವರು ಹೇಳಿದರು. ನಾನು ಈಗ ಈ ಎಲ್ಲ ವಿಷಯಗಳ ಕಡೆ ಹೋಗುವುದಿಲ್ಲ. ಮಾನ್ಯ ರಾಮಕೃಷ್ಣ ಹೆಗಡೆಯವರು ಈಗ ಮುಖ್ಯಮಂತ್ರಿಗಳಾಗಿದ್ದಾರೆ ಬಹಳ ಸಂತೋಷ. ಅವರು ನಮ್ಮವರೇ ಆಗಿದ್ದಾರೆ. ನಮ್ಮ

ಜಿಲ್ಲೆಯವರೇ ಮುಖ್ಯಮಂತ್ರಿಗಳಾಗುತ್ತಾರೆಂದು ನಾವು ತಿಳಿದುಕೊಂಡಿದ್ದೆವು, ಆದರೆ ದುರ್ದೈವ, ನಮ್ಮ ಜಿಲ್ಲೆಯವರು ಆಗಲಿಲ್ಲ. ಈಗ ಮುಖ್ಯಮಂತ್ರಿಗಳಾಗಿರುವವರೂ ಸಹ ನಮ್ಮವರೇ ಆಗಿರುವುದು ನಮಗೆ ಬಹಳ ಸಂತೋಷ. ಅದು ಏನೇ ಇರಲಿ, ಈಗಿನ ಮುಖ್ಯಮಂತ್ರಿಗಳು ಒಂದು ಸಂಕಷ್ಟದಲ್ಲಿ ಸಿಕ್ಕಿಕೊಂಡಿದ್ದಾರೆ. ಆದರೆ ಒಂದು ಸಲ ಅಧಿಕಾರಕ್ಕೆ ಬಂದ ಮೇಲೆ ಬಿಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು.— ಇದು ಯಾವ ಬೇಡಿಕೆಗೆ ಸಂಬಂಧಪಟ್ಟಿದ್ದು ?

ಶ್ರೀ ಜೆ. ಡಿ. ಸೋಮಪ್ಪ.— ಇದು ಜಿ. ಎ. ಡಿ. ಗೆ ಸೇರಿದ್ದು.

ಶ್ರೀ ರಾಮಕೃಷ್ಣ ಹೆಗಡೆ.— ಇದು ಅಧಿಕಾರದ ಬೇಡಿಕೆ.

ಶ್ರೀ ಜೆ. ಡಿ. ಸೋಮಪ್ಪ.— ಒಂದು ಸಲ ಅಧಿಕಾರಕ್ಕೆ ಬಂದ ಮೇಲೆ ಬಿಡುವುದಕ್ಕಾಗುವುದಿಲ್ಲ. ಇದು ತಮಗೂ ಗೊತ್ತಿದೆ, ನಮಗೂ ಗೊತ್ತಿದೆ, ಆದ್ದರಿಂದ ಇವರು ಅಧಿಕಾರದಲ್ಲಿ ಮುಂದುವರಿಯಲಿ, ಬಹಳ ಸಂತೋಷ. ಆದರೆ ಚುನಾವಣೆ ಸಮಯದಲ್ಲಿ ಇವರು ಚುನಾವಣಾ ಪ್ರಣಾಳಿಕೆಯನ್ನು ಹೊರಡಿಸಿದರು. ಆ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಚುನಾವಣೆಗೆ ನಿಂತಿರಲಿಲ್ಲ. ಯಾವುದೇ ಸರ್ಕಾರವಾಗಲಿ ಜನರ ಹಿತಕ್ಕಾಗಿ ಕೆಲಸ ಮಾಡಬೇಕಾಗುತ್ತದೆ. ನಾವು ಒಂದು ಪಕ್ಷದಿಂದ ಗೆದ್ದು ಬಂದಿರಬಹುದು, ಇವರು ಒಂದು ಪಕ್ಷದಿಂದ ಗೆದ್ದು ಬಂದಿರಬಹುದು. ಆದರೆ ಚುನಾವಣೆಯ ಸಮಯದಲ್ಲಿ ಜನತೆಯ ಮುಂದೆ ಅಧಿಕಾರಕ್ಕೆ ಬಂದಿರುವವರು ಏನು ಕೆಲವು ವಾಗ್ದಾನಗಳನ್ನು ಕೊಟ್ಟಿರುತ್ತಾರೋ ಅದನ್ನು ಈಡೇರಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಒಂದು ವೇಳೆ ಕೊಟ್ಟ ವಾಗ್ದಾನಗಳನ್ನು ಈಡೇರಿಸದೇ ಹೋದರೆ ಈ ಸರ್ಕಾರದ ಬಗ್ಗೆ ನಾವು ಏನು ಹೇಳಬೇಕು ? ವಚನಭ್ರಷ್ಟ ಸರ್ಕಾರವೆಂದು ಹೇಳಬೇಕಾಗುತ್ತದೆ. ಈ ಮಾತನ್ನು ನಾನು ಹೇಳುತ್ತಿಲ್ಲ, ಜನರು ಹೇಳುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ ಇವರು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಉತ್ಪಾದಕ ಉದ್ಯೋಗ ಮತ್ತು ಮಹಿಳೆಯರ ಮುನ್ನಡೆ ಬಗ್ಗೆ ಹೇಳಿದ್ದಾರೆ. ಮಹಿಳೆಯರ ಮುನ್ನಡೆ ಬಗ್ಗೆ ಇವರು ಹೇಳಿರುವುದೇನೆಂದರೆ, ಸಮಾಜದಲ್ಲಿರುವ ಎಲ್ಲ ಹಿಂದುಳಿದ ವರ್ಗದ ಮಹಿಳೆಯರ ಮತ್ತು ದೀನದಲಿತರ ಮುನ್ನಡೆಗೋಸ್ಕರವಾಗಿ ವಿಶೇಷ ಕಾರ್ಯಕ್ರಮಗಳಾಗಬೇಕು, ಅದರಲ್ಲಿಯೂ ಹಳ್ಳಿಗಳಲ್ಲಿರುವ ಸ್ತ್ರೀಯರು, ಪಟ್ಟಣದಲ್ಲಿರುವ ಬಡ ಹಾಗೂ ಮಧ್ಯಮ ವರ್ಗದ ಮಹಿಳೆಯರ ಮೇಲ್ಮೆಗಾಗಿ ಅನೇಕ ಕಾರ್ಯಕ್ರಮಗಳನ್ನು ಕೈಕೊಳ್ಳಲಾಗುವುದು. ಮಹಿಳೆಯರ ಬಿಡುವಿನ ವೇಳೆಯಲ್ಲಿ ಉದ್ಯೋಗ ಒದಗಿಸುವುದು ಮತ್ತು ಅವರ ಆರೋಗ್ಯ ರಕ್ಷಣೆ ಹಾಗೂ ಶಿಶುಗಳ ಯೋಗಕ್ಷೇಮಕ್ಕೆ ತಕ್ಕ ವ್ಯವಸ್ಥೆಯ ಕ್ರಮಗಳಿಗೆ ಆದ್ಯತೆ ನೀಡಲಾಗುವುದು, ಸಾಮಾಜಿಕ ಅನಿಷ್ಟಗಳಾದ ವರದಕ್ಷಿಣೆ ಮತ್ತು ಅಪ್ರಾಪ್ತ ವಯಸ್ಕರ ವಿವಾಹ ಪದ್ಧತಿಯನ್ನು ತಡೆಗಟ್ಟುವುದು ಮುಂತಾದ ವಿಚಾರಗಳನ್ನು ಹೇಳಿದ್ದಾರೆ. ಇವರು ಅಧಿಕಾರಕ್ಕೆ ಬಂದ ಮೇಲೆ ಈ ಚುನಾವಣಾ ಪ್ರಣಾಳಿಕೆ ಪ್ರಕಾರ ಎಷ್ಟು ವರದಕ್ಷಿಣೆ ಇಲ್ಲದೆ ಜನರಿಗೆ ಮದುವೆ ಮಾಡಿಸಿದ್ದಾರೆ ? ಈ ಚುನಾವಣಾ ಪ್ರಣಾಳಿಕೆಯ ಪುಸ್ತಕವನ್ನು ಕೆಲವರು ಹಿಡಿದುಕೊಂಡು ನನ್ನ ಹತ್ತಿರ ಬಂದು ಮದುವೆ ಮಾಡಿಸಿ ಎಂದು ಹೇಳುತ್ತಾರೆ. ಆಗ ನಾನು ಈ ಸರ್ಕಾರದಲ್ಲಿರುವ ಎಷ್ಟೋ ಜನ ಮಂತ್ರಿಗಳಿಗೆ ಮದುವೆ ಆಗಿಲ್ಲ, ಎಂ. ಎಲ್. ಎ. ಗಳಿಗೇ ಮದುವೆಯಾಗಿಲ್ಲ, ನಿಮಗೆ ಹೇಗೆ ಮದುವೆ ಮಾಡಿಸುವುದಕ್ಕಾಗುತ್ತದೆಂದು ನಾನು ಅವರಿಗೆ ಹೇಳಿದೆ. ಈಗ ನಮ್ಮ ರಾಜ್ಯದಲ್ಲಿ ಶೇಕಡಾ ೫೦ ರಷ್ಟು ಹೆಂಗಸರಿದ್ದಾರೆ. ಕೇಂದ್ರದಲ್ಲಿ ನಮ್ಮನ್ನು ಆಳುತ್ತಿರುವವರು ಹೆಣ್ಣುಮಗಳು. ಈ ಸದನದಲ್ಲಿ ಈಗ ಮಹಿಳೆಯರ ಸಂಖ್ಯೆ ಕಡಿಮೆಯಾಗಿದೆ ಇಬ್ಬರು ಮಾತ್ರ ಇದ್ದಾರೆ. ಈ ರೀತಿ ಇರುವಾಗ ನಿಮ್ಮ ಚುನಾವಣಾ ಪ್ರಣಾಳಿಕೆ ಪ್ರಕಾರ ಹೆಂಗಸರಿಗೆ ಏನು ಪ್ರಾತಿನಿಧ್ಯ ಕೊಟ್ಟಿದ್ದೀರಿ?

ಶ್ರೀ ಎಚ್. ಎ. ನಾರಾಯಣಗೌಡ.— ಈಗ ಪುರಸಭಾ ಚುನಾವಣೆಗಳಲ್ಲಿ ಮತ್ತು ಕಾರ್ಪೊರೇಷನ್ ಚುನಾವಣೆಗಳಲ್ಲಿ ಮಹಿಳೆಯರು ಶೇಕಡಾ ೨೦ ಸ್ಥಾನಗಳಲ್ಲಿ ಗೆದ್ದು ಬರಲು ಅವಕಾಶ ಮಾಡಿಕೊಟ್ಟಿದ್ದೇವೆ

ಶ್ರೀ ಜೆ. ಡಿ. ಸೋಮಪ್ಪ.— ಇಲ್ಲಿ ಹೆಂಗಸರ ಬಗ್ಗೆ ಮಾತನಾಡುವಂತಹ ನೈತಿಕ ಹಕ್ಕು ನಿಮಗೇನಾದರೂ ಬರಬೇಕಾದರೆ ಮೊದಲು ನಿಮ್ಮಲ್ಲಿ ಯಾರಾದರು ಹತ್ತು ಜನ ರಾಜಿನಾಮೆ ಕೊಟ್ಟು ನಿಮ್ಮ ಮನೆ ಹೆಂಗಸರನ್ನು ಚುನಾವಣೆಯಲ್ಲಿ ನಿಲ್ಲಿಸಿ ಆರಿಸಬೇಕೆಂದು ಹೇಳುತ್ತೇನೆ. ಆಮೇಲೆ ಇವರು ಅಧಿಕಾರಕ್ಕೆ ಬಂದ ಹೊಸದರಲ್ಲಿ ಜನತೆಯ ಕೈಗೇ ಅಧಿಕಾರ ಕೊಡುತ್ತೇವೆಂದು ಹೇಳಿದರು. ಆದರೆ ಇವೊತ್ತು ಇವರು ಅಧಿಕಾರವನ್ನೆಲ್ಲಾ ಐ. ಪಿ. ಎಸ್. ಮತ್ತು ಐ. ಎ. ಎಸ್. ಅಧಿಕಾರಿಗಳ ಕೈಯಲ್ಲಿ ಕೊಟ್ಟು ಅವರ ಕೈಗೊಂಬೆಗಳಾಗಿ ಕುಳಿತಿದ್ದಾರೆ. ಮುಖ್ಯಮಂತ್ರಿಗಳೇನೋ ದಕ್ಷರಾಗಿದ್ದಾರೆ. ಆದರೆ ಉಳಿದ ಮಂತ್ರಿಗಳು ಯಾರೂ ಸಹ ಯಾವುದೇ ಒಂದು ತೀರ್ಮಾನವನ್ನು ತೆಗೆದುಕೊಳ್ಳುವ ಮಟ್ಟದಲ್ಲಿ ಇಲ್ಲ. ಕಳೆದ ೯

ತಿಂಗಳುಗಳಲ್ಲಿ ಈ ರಾಜ್ಯದಲ್ಲಿ ಏನೇನಾಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಅದನ್ನೆಲ್ಲಾ ಈಗ ಬಿಡಿಸಿ ಹೇಳುವುದಕ್ಕೆ ಹೋಗುವುದಿಲ್ಲ. ಇವರು ಅಧಿಕಾರಕ್ಕೆ ಬಂದ ಹೊಸದರಲ್ಲಿ ತಮ್ಮ ರಕ್ಷಣೆಗೆ ಪೋಲೀಸರು ಬೇಕಾಗಿಲ್ಲವೆಂದು ಹೇಳಿದ್ದರು. ಆ ಸಮಯದಲ್ಲಿ ಇವರಿಗೆ ಪೋಲೀಸರನ್ನು ಕಂಡರೆ ವಾಂತಿ ಆದಂತೆ ಆಗುತ್ತಿತ್ತು. ಆದರೆ ಇವೊತ್ತು ಇವರು ಪೋಲೀಸರ ಸಹಾಯವಿಲ್ಲದೆ ಇವರು ಎಲ್ಲಿಗೂ ಹೋಗುವುದಕ್ಕಾಗುತ್ತಿಲ್ಲ. ಆದರೆ ಪೋಲೀಸರ ಸಹಾಯವಿಲ್ಲದೆ ನಾವು ಎಲ್ಲಿಗೆ ಬೇಕಾದರೂ ಹೋಗುತ್ತೇವೆ. ಸ್ವಾತಂತ್ರ್ಯ ಹೋರಾಟಗಾರರು ಪದವೀಧರರು ವಂಚಿಸ್ಕರ ಮಾಡುತ್ತಿರುವ ಜಾಗಕ್ಕೆ ಧೈರ್ಯವಾಗಿ ಹೋಗುತ್ತೇವೆ. ಆದರೆ ಇವರು ಪೋಲೀಸರ ಸಹಾಯವಿಲ್ಲದೆ ಹೋಗುತ್ತಾರೆಯೋ ? ಮೊದಲು ಪೋಲೀಸರ ಬಗ್ಗೆ ಇವರು ಈ ರೀತಿ ಹೇಳಿದ್ದರಿಂದ ಅವರಲ್ಲಿ ಡೀಮಾರಲೈಜ್ ಆಯಿತು. ಅವರು ತಮ್ಮ ಕರ್ತವ್ಯವನ್ನು ನಿರ್ವಹಿಸುವುದರಲ್ಲಿ ನಿಸ್ಸಹಾಯಕರಾದರು. ಇದಕ್ಕೆ ಇನ್ನೊಂದು ಉದಾಹರಣೆ ಕೊಡಬೇಕೆಂದರೆ, ಈ ಹಿಂದೆ ಮಲ್ಲೇಶ್ವರಂ ಸರ್ಕಲ್‌ನಲ್ಲಿ ಆಟೋ ಡ್ರೈವರ್ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ನಡುವೆ ಗಲಾಟೆಯಾದಾಗ ಈ ಸರ್ಕಾರದವರು ಸರ್ಕಲ್ ಇನ್ಸ್‌ಪೆಕ್ಟರನ್ನು ಸಸ್ಪೆಂಡ್ ಮಾಡಿದರು. ಇದರ ಬಗ್ಗೆ ವಿವರವಾಗಿ ಈಗ ಹೇಳಲು ಸಮಯವಿಲ್ಲ. ಯಾರೋ ಮಾಡಿದ ತಪ್ಪಿಗೆ ಸರ್ಕಲ್ ಇನ್ಸ್‌ಪೆಕ್ಟರನ್ನು ಸಸ್ಪೆಂಡ್ ಮಾಡಿದ್ದರಿಂದ ಅವರಲ್ಲಿ ಡೀಮಾರಲೈಜ್ ಆಯಿತು. ಒಟ್ಟಿನಲ್ಲಿ ಇವೊತ್ತು ಪೋಲೀಸ್ ಖಾತೆ ಕುಸಿದು ಬಿದ್ದಿದೆ ಎಂದು ನಾನು ಹೇಳುತ್ತೇನೆ. ಮಂತ್ರಿಗಳ ಮನೆ ಮದುವೆ ಸಂದರ್ಭದಲ್ಲಿ ಪೋಲೀಸರ ಸೇವೆಯನ್ನು ಪಡೆದುಕೊಂಡಿದ್ದಾರೆ. ಆದರೆ ಈ ಹಿಂದೆ ಇವರೇ ಪೋಲೀಸರನ್ನು ಬೇರೆ ಕೆಲಸಕ್ಕೆ ಉಪಯೋಗಿಸಿಕೊಂಡಿದ್ದು ಸರಿಯಲ್ಲದೆಂದು ಹೇಳಿದ್ದರು. ಈ ಬಗ್ಗೆ ವಿವರವಾಗಿ ಶ್ರೀ ಬಂಗಾರಪ್ಪನವರು ಹೇಳಿದ್ದಾರೆ ಈ ಹಿಂದಿನ ಸರ್ಕಾರದವರು ೫ ವರ್ಷಕ್ಕೆ ಒಂದು ಸಲ ಬರುವಂತಹ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ ಪೋಲೀಸರನ್ನು ಉಪಯೋಗಿಸಿಕೊಂಡರೆಂದು ಈಗಿನ ಸರ್ಕಾರದವರು ಶ್ರೀ ಕಾರ್ತಿಕೇಯನ್ ಅವರನ್ನು ರಜಾದ ಮೇಲೆ ಕಳುಹಿಸಿದರು. ಮೊನ್ನೆ ಶ್ರೀ ಕೋದಂಡ ರಾಮಯ್ಯನವರು ೩೦೦ ಜನರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಇವರು ತಿಳಿಸಿದಾಗ, ಅವರು ಕಾನೂನು ಪ್ರಕಾರ ೩೦೦ ಜನರನ್ನು ಕೆಲಸಕ್ಕೆ ತೆಗೆದುಕೊಳ್ಳಲು ಆಗುವುದಿಲ್ಲವೆಂದು ಹೇಳಿದರೆಂಬ ಕಾರಣದಿಂದ ರಜಾದ ಮೇಲೆ ಕಳುಹಿಸಿದರು. ಇನ್ನು ಯಾರು ಯಾರಿಗೆ ರಜಾ ಕೊಟ್ಟು ಕಳುಹಿಸಿ ಕೊಡುತ್ತಾರೋ ಗೊತ್ತಿಲ್ಲ. ಈ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ. ಇವೊತ್ತು ಸುಮಾರು ೨೧೫ ಕೋಟಿ ರೂಪಾಯಿಗಳಷ್ಟು ಕೊರತೆ ಇರುವಂತಹ ಬಜೆಟನ್ನು ನಮ್ಮ ಮುಂದೆ ಮಂಡನೆ ಮಾಡಿದ್ದಾರೆ. ಇವೊತ್ತು ಕಮರ್ಷಿಯಲ್ ಟ್ಯಾಕ್ಸ್ ಯಾವ ರೀತಿ ಸೋರಿ ಹೋಗುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಈ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವವರು ಮನೆಗಳನ್ನು ಕಟ್ಟಿಸುತ್ತಿದ್ದಾರೆ. ಇವನ್ನು ನೋಡಿದಾಗ ನಾನು ಇನ್ನು ನಾಲ್ಕು ವರುಷಗಳ ಕಾಲ ಎಂ.ಎಲ್.ಎ. ಆಗಿರುವುದಕ್ಕಿಂತ ಎ.ಸಿ.ಟಿ.ಒ. ಕೆಲಸ ಸಿಕ್ಕಿದರೆ ಆರಾಮವಾಗಿರಬಹುದು ಎಂದು ಅನ್ನಿಸುತ್ತದೆ. ನಾವು ಇಲ್ಲಿ ಬಂದು ಮಾತನಾಡುವುದು, ನೀವು ಜಾಗ್ರತೆ ಮುಗಿಸಿ ಎಂದು ಗಂಟೆ ಹೊಡೆಯುವುದು ಇದೆಲ್ಲಾ ತಪ್ಪುತ್ತದೆ. ಇವರು ಅಧಿಕಾರಕ್ಕೆ ಬಂದಾಗ ಭ್ರಷ್ಟಾಚಾರವನ್ನು ನಿರ್ಮೂಲ ಮಾಡುತ್ತೇವೆಂದು ಹೇಳಿದ್ದರು. ಆದರೆ ಕಾಪಿ ಗಿಡಕ್ಕೆ ಗೊಬ್ಬರ ಹಾಕಿದರೆ ಜಾಗ್ರತೆ ಯಾವ ರೀತಿ ಬೆಳೆಯುತ್ತದೋ ಆ ರೀತಿ ಈ ಭ್ರಷ್ಟಾಚಾರವೆಂಬುದು ಬೆಳೆಯುತ್ತಿದೆ. ಇವೊತ್ತು ಆಹಾರಧಾನ್ಯಗಳ ಬೆಲೆ ಗಗನಕ್ಕೇರುತ್ತಿದೆ. ಇದು ಎಲ್ಲರಿಗೂ ಗೊತ್ತಿದೆ. ಹೊರ ರಾಜ್ಯಗಳಿಗೆ ಅಕ್ಕಿ ಸಾಗಿಸಲು ಅನುಮತಿ ಕೊಟ್ಟಿದ್ದರಿಂದ ನಮ್ಮ ರಾಜ್ಯಕ್ಕೆ ಬರಬೇಕಾದ ಸೇಲ್ಸ್ ಟ್ಯಾಕ್ಸ್ ಎಲ್ಲಾ ಹೊರಟು ಹೋಯಿತು. ಇದರಿಂದ ಅಕ್ಕಿ ಬೆಲೆ ಕೂಡ ಜಾಸ್ತಿಯಾಯಿತು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

೨ ಲಕ್ಷ ಮನೆಗಳನ್ನು ಕಟ್ಟುತ್ತೇವೆಂದು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೀರಿ. ಹಣ ಎಲ್ಲಿ ಇಟ್ಟಿದ್ದೀರಿ? ಪ್ರತಿಯೊಬ್ಬರಿಗೂ ಕೆಲಸ ಕೊಡುತ್ತೇವೆಂದು ಹೇಳಿದ್ದೀರಿ. ಒಂದು ಪಕ್ಷ ಕೆಲಸ ಕೊಡದಿದ್ದರೆ ಎರಡು ರೂಪಾಯಿ ದಿನಗೂಲಿ ಕೊಡುತ್ತೇವೆಂದು ಹೇಳಿದ್ದೀರಿ ಅದಕ್ಕಾಗಿ ಹಣವನ್ನು ಎಲ್ಲಿ ಇಟ್ಟಿದ್ದೀರಿ? ಈಗ ಮಾಡಿರತಕ್ಕ ರಿಲೀಫ್ ವರ್ಕ್ಸ್ ಏನಿದೆ ಅದಕ್ಕೆ ಇನ್ನೂ ಹಣವನ್ನು ಕೊಟ್ಟಿಲ್ಲ. ಇದನ್ನು ಅನೇಕ ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿದ್ದಾರೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಬೇಗ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಜೆ. ಡಿ. ಸೋಮಪ್ಪ.—ಮಾನ್ಯ ಅಧ್ಯಕ್ಷರು ರೈತರ ಬಗ್ಗೆ ತಾವು ಅನುಕಂಪವುಳ್ಳವರು, ರೈತರಿಂದಲೇ ತಾವೆಲ್ಲಾ ಅಧಿಕಾರಕ್ಕೆ ಬಂದಿದ್ದೀರಿ. ತಮಗೆ ಗೊತ್ತಿದೆ ನವಲಗುಂದ ಮತ್ತು ನರಗುಂದದಿಂದ ತಾವು ರೈತರ ಜಾಥಾವನ್ನು ಕರೆದುಕೊಂಡು ಬಂದವರು. ನಾನು ಹೆಚ್ಚಿಗೆ ಹೇಳುವುದಕ್ಕೆ

ಹೋಗುವುದಿಲ್ಲ. ತಾವು ರೈತರಿಗೆ ರಿಯಾಯಿತಿಯನ್ನು ಕೊಟ್ಟಿದ್ದೇವೆಂದು ಹೇಳುತ್ತೀರಿ. ಯಾವ್ಯಾವ ಸಾಲಗಳ ಬಗ್ಗೆ ರಿಯಾಯಿತಿ ಕೊಟ್ಟಿದ್ದೀರಿ? ಯಾರಿಗೆ ರಿಯಾಯಿತಿ ಕೊಟ್ಟಿದ್ದೀರಿ? ಏಪ್ರಿಲ್ ತಿಂಗಳಲ್ಲಿ ಆರ್ಡರ್ ಇಶ್ಯು ಮಾಡಿದಿರಿ, ಜೂನ್ ೩೦ಕ್ಕೆ ಕ್ಲೋಸ್ ಮಾಡಿದಿರಿ. ತಾವು ಅನುಕೂಲ ಮಾಡಿರತಕ್ಕದ್ದು ಶ್ರೀಮಂತ ರೈತರಿಗೆ ಮಾತ್ರ ಬಡ ರೈತರಿಗೆ ಅನುಕೂಲ ಮಾಡಿಲ್ಲವೆಂದು ನಾನು ಗಂಟಾಘೋಷವಾಗಿ ಹೇಳುತ್ತೇನೆ. ಈ ಸರ್ಕಾರ ಶ್ರೀಮಂತ ರೈತರ ಜೊತೆ ಸೇರಿಕೊಂಡು ಬಡವರನ್ನು ಹತ್ತಿಕ್ಕುವುದಕ್ಕೆ ಪ್ರಯತ್ನ ಮಾಡುತ್ತಿದೆ. ಮಾನ್ಯ ಮುಖ್ಯ ಮಂತ್ರಿಗಳು ಅರ್ಥಮಂತ್ರಿಗಳೂ ಆಗಿದ್ದಾರೆ ಸಾಲ ಮರು ಪಾವತಿ ಮಾಡಲಿಕ್ಕೆ ಮುಂದಿನ ಜನವರಿ ತಿಂಗಳವರೆಗೆ ಕಾಲಾವಕಾಶವನ್ನು ಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನೀವು ಎಲ್ಲರಿಗೂ ಉದ್ಯೋಗ ಕೊಡುತ್ತೇವೆಂದು ಹೇಳಿದ್ದೀರಿ, ಎಲ್ಲರಿಗೂ ಉದ್ಯೋಗ ಕೊಡಿ, ಆದರೆ ಸ್ಟೈಫೆಂಡರಿ ಗ್ರಾಜುಯೇಟ್ಸ್‌ಗಳಿಗೆ ಮೊದಲು ಉದ್ಯೋಗ ಕೊಡುವ ವ್ಯವಸ್ಥೆ ಮಾಡಿ. ಸ್ಟೈಫೆಂಡರಿ ಗ್ರಾಜುಯೇಟ್ಸ್‌ಗಳು ನಮ್ಮ ಮನೆಯ ಹತ್ತಿರ ಬಂದಿದ್ದರು, ನೀವು ಅವರಿಗೆ ಉದ್ಯೋಗ ಕೊಡುತ್ತೇವೆಂದು ಮಾತು ಕೊಟ್ಟಿದ್ದೀರಿ. ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೀರಿ. ಸ್ಟೈಫೆಂಡರಿ ಗ್ರಾಜುಯೇಟ್ಸ್‌ಗಳು ನಿನ್ನೆಯಿಂದ ಮುಷ್ಕರ ಮಾಡುತ್ತಿದ್ದಾರೆ ಮಾನ್ಯ ಮುಖ್ಯ ಮಂತ್ರಿಗಳು ಹೋಗಿ ಅವರನ್ನು ಭೇಟಿ ಮಾಡಿದ್ದಾರೆ. ನಾನು ಕೂಡ ಹೋಗಿ ನೋಡಿದ್ದೇನೆ, ಸ್ಟೈಫೆಂಡರಿ ಗ್ರಾಜುಯೇಟ್ಸ್‌ಗಳಿಗೆ ಕೆಲಸ ಕೊಡುವುದರ ಜೊತೆಗೆ ಅವರಿಗೆ ಕೊಡತಕ್ಕ ಕೆಲಸ ಖಾಯಂ ಆಗಬೇಕು. ನೀವು ಇಂತಹ ಕೆಲಸಗಳನ್ನು ಮಾಡುವುದಾದರೆ ನಾವೆಲ್ಲರೂ ಕೂಡ ಸರ್ಕಾರಕ್ಕೆ ಬೆಂಬಲ ಕೊಡುತ್ತೇವೆ.

ಮಾನ್ಯ ರಾಂದೇವ್‌ರವರು ಮಾತನಾಡುವಾಗ ಹೇಳಿದರು, ಮುಖ್ಯ ಮಂತ್ರಿಗಳು ಮಾತನಾಡು ವುದನ್ನು ಕಾಂಗ್ರೇಸ್ (ಐ)ನವರು ಟ್ಯಾಪ್ ಮಾಡುತ್ತಾರೆಂದು ಹೇಳಿದರು. ಅದು ಹೇಗೆ ಸಾಧ್ಯ? ಹೋಮ್ ಡಿಪಾರ್ಟ್‌ಮೆಂಟ್ ಅವರ ಕೈಯಲ್ಲಿ ಇದೆ. ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಕೇಂದ್ರ ಸರ್ಕಾರ ಆದೇಶ ಕೊಟ್ಟಿದೆಯೆ? ಈ ವಿಚಾರ ಮಾನ್ಯ ರಾಂದೇವ್ ಅವರಿಗೆ ಹೇಗೆ ಗೊತ್ತಾಯಿತು? ಪತ್ರಿಕೆಗಳಿಗೆ ಇಂತಹ ಹೇಳಿಕೆಗಳನ್ನು ಕೊಟ್ಟು ಕಾಂಗ್ರೇಸ್(ಐ)ನವರ ಮೇಲೆ ಗೂಬೆ ಕೂರಿಸುವುದಕ್ಕೆ ಈ ರೀತಿ ಮಾಡುತ್ತಿದ್ದಾರೆಂದು ಗೊತ್ತಾಗುತ್ತದೆ. ಇದರ ಬಗ್ಗೆ ಮುಖ್ಯ ಮಂತ್ರಿಗಳು ಉತ್ತರ ಹೇಳಬೇಕು.

ಇನ್ನು ಪಕ್ಷಾಂತರ ಪಿಡುಗು ಪಕ್ಷಾಂತರ ಮಸೂದೆಯೆಂದು ತಂದರು. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಪಕ್ಷಾಂತರ ಮಸೂದೆಯನ್ನು ಬಹಳ ಧೈರ್ಯಮಾಡಿ ತಂದಿರಿ, ಆದರೆ ಪಕ್ಷಾಂತರ ಮಾಡು ವುದಕ್ಕೆ ಬಾಗಿಲು ತೆಗೆದಿದ್ದೇವೆಂದು ಬನ್ನಿ ಎಂದು ಕರೆಯುತ್ತಿದ್ದೀರಿ. ನಿಮ್ಮ ಪಕ್ಷದ ಅಧ್ಯಕ್ಷರು ಹೇಳಿದ್ದಾರೆ ಆ ಕಡೆಯಿಂದ ೧೫ಜನ ಬರುತ್ತಾರೆ ಈ ಕಡೆಯಿಂದ ೨೦ ಜನ ಬರುತ್ತಾರೆಂದು, ಎಲ್ಲಿ ಬಂದಿದ್ದಾರೆ? ಪಕ್ಷಾಂತರ ಪಿಡಗನ್ನು ತಪ್ಪಿಸಲ್ಲಿಕ್ಕೆ ಪಕ್ಷಾಂತರ ಮಸೂದೆಯನ್ನು ತಂದು ಸಭೆಯ ಮುಂದೆ ಇಟ್ಟುಕೊಂಡು ಪಕ್ಷಾಂತರ ಮಾಡಬೇಡಿಯೆಂದು ಹೇಳುವುದಕ್ಕೆ ನಿಮಗೆ ಅಧಿಕಾರ ಇದೆಯೆ? ಇಂತಹ ಹುಚ್ಚು ಸ್ಟೇಟ್ ಮೆಂಟ್‌ಗಳನ್ನು ಕೊಟ್ಟು ಪಕ್ಷಾಂತರ ಮಾಡಿಸುವುದಕ್ಕೆ ಪ್ರಯತ್ನ ಮಾಡಬೇಡಿ. ನಾವು ನಿಮ್ಮಗಿಂತಲೂ ಸಂಖ್ಯಾಬಲದಲ್ಲಿ ಜಾಸ್ತಿಯಿದ್ದೇವೆ ಎನ್ನುವುದನ್ನು ನೀವು ಮರೆಯಬಾರದು.

ಇನ್ನೊಂದು ಮಾತು ಕೇಳಬೇಕಾಗಿದೆ ಅದೇನೆಂದರೆ ಕರ್ನಾಟಕ ಜನತಾಪಕ್ಷ ಮತ್ತು ಕರ್ನಾಟಕ ಕ್ರಾಂತಿರಂಗ ವಿಲೀನವಾಯಿತು ಎಂದು ಹೇಳಿದರು. ಯಾವಾಗ ವಿಲೀನವಾಯಿತು? ವಿಲೀನ ಆಗು ವುದಕ್ಕೆ, ಕಾಫಿಗೆ ಹಾಲು ಹಾಕಿದರೆ ಅದು ವಿಲೀನವಾಗುತ್ತದೆ, ಜನತಾ ಮತ್ತು ಕ್ರಾಂತಿರಂಗ ಯಾವಾಗ ವಿಲೀನಗೊಂಡವು? ಕರ್ನಾಟಕ ಕ್ರಾಂತಿರಂಗದವರು ವಿಲೀನವಾಗಿಲ್ಲವೆಂದು ಹೇಳುತ್ತಿದ್ದಾರೆ. ಇದನ್ನು ಸರಿಯಾಗಿ ಹೇಳಿಬಿಟ್ಟರೆ ಇನ್ನು ಮುಂದೆ ಈ ವಿಷಯ ಚರ್ಚೆಗೆ ಬರುವುದಿಲ್ಲ

ಶ್ರೀ ಎಚ್. ಎಲ್. ತಿಮ್ಮೇಗೌಡ.—ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ. ನನ್ನ ಕ್ರಿಯಾಲೋಪವೇನೆಂದರೆ, ಕ್ರಾಂತಿರಂಗ ಜನತಾಪಕ್ಷದೊಳಗೆ ವಿಲೀನವಾದ ಮೇಲೆ ಮಾನ್ಯ ಸದಸ್ಯರಾದ ಸೋಮಪ್ಪನವರಿಗೆ ಅದರಲ್ಲಿರತಕ್ಕ ಸಂಬಂಧವೇನು? ಆ ವಿಚಾರವನ್ನು ಇಲ್ಲಿ ಏತಕ್ಕೆ ಮಾತನಾಡಬೇಕು? ಆ ರೀತಿ ಮಾತನಾಡುವುದು ಸರಿಯೆ?

ಶ್ರೀ ಜೆ. ಡಿ. ಸೋಮಪ್ಪ.—ಮಾನ್ಯ ಸದಸ್ಯರಾದ ತಿಮ್ಮೇಗೌಡರಿಗೆ ಗೊತ್ತಿಲ್ಲವೆಂದು ಕಾಣುತ್ತದೆ, ಇಲ್ಲಿರತಕ್ಕ ಡಿಮ್ಯಾಂಡ್‌ಗಳ ಬಗ್ಗೆ ಮಾತನಾಡುವಾಗ ಈ ವಿಚಾರವನ್ನು ಮಾತನಾಡಬಹುದು, ನಾನು ರಾಜಕೀಯವಾಗಿ ಮಾತನಾಡುತ್ತಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ರಾತ್ರಿಯೆಲ್ಲಾ ಕ್ರಾಂತಿರಂಗ ಮತ್ತು ಕಾಂಗ್ರೆಸ್ (ಐ) ಕೂಡಿ ಭಾರಿ ಕೆಲಸ ನಡೆಸುತ್ತಿದ್ದಾರೆ.

ಶ್ರೀ ಜೆ.ಡಿ.ಸೋಮಪ್ಪ.—ತಮ್ಮ ಹತ್ತಿರ ಸಿ. ಐ. ಡಿ. ಇದೆ, ಅದು ತಮಗೆ ಗೊತ್ತಿರಬಹುದು. ನಮಗೇನೂ ಗೊತ್ತಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಜನತಾ ಪಕ್ಷದವರು ಕಾಂಗ್ರೆಸ್ (ಐ) ಮತ್ತು ಕ್ರಾಂತಿರಂಗ ಏನೇನು ಮಾಡುತ್ತಿವೆ ಎಂಬುದನ್ನು ರಾತ್ರಿಯಲ್ಲಾ ನೋಡುತ್ತಿರಬಹುದು. ಅದಕ್ಕೆ ಅವರು ಹೆದರಿ ಬಿಟ್ಟಿದ್ದಾರೆ. ನಾವು ಮಾಡತಕ್ಕ ರಾತ್ರಿ ಕೆಲಸವನ್ನು ಅವರು ನೋಡಿರಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ನಿಮ್ಮ ಮುಖಕ್ಕೆ ಕನ್ನಡಿ ಹಿಡಿದುಕೊಳ್ಳಿ ನೀವು ಏನು ಮಾಡುತ್ತೀರಿ ಎನ್ನುವುದು ಗೊತ್ತಾಗುತ್ತದೆ.

ಶ್ರೀ ಜೆ. ಡಿ ಸೋಮಪ್ಪ.—ಬಡವರ ಮೇಲೆ ಹರಿಜನಗಿರಿಜನರ ಮೇಲೆ ಮತ್ತು ಹಿಂದುಳಿದವರ ಮೇಲೆ ಅನುಕಂಪವಿದೆ ಎಂದು ಹೇಳಿಕೊಳ್ಳುತ್ತೀರಿ. ಆದರೆ ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಬಡವರ ಮೇಲೆ ದೌರ್ಜನ್ಯ ಜಾಸ್ತಿಯಾಗಿದೆಯೆಂದು ಹೇಳಿದರೆ ಅದು ಉತ್ಪ್ರೇಕ್ಷೆಯಾಗಲಾರದೆಂದು ನಾನು ತಿಳಿದುಕೊಂಡಿದ್ದೇನೆ. ನಡೆಯುತ್ತಿರುವ ದೌರ್ಜನ್ಯವನ್ನು ತಡೆಗಟ್ಟುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಸದಸ್ಯರು ಮಾತನಾಡುವಾಗ ನಮ್ಮ ಸರ್ಕಾರ ಬಂದ ಮೇಲೆ ಹರಿಜನರ ಮೇಲೆ ದೌರ್ಜನ್ಯ ಜಾಸ್ತಿಯಾಗಿದೆಯೆಂದು ಹೇಳಿದರು. ನಾನು ಬಾಳುಪೇಟೆಗೆ ಭೇಟಿ ಕೊಟ್ಟಿದ್ದಾಗ ಹರಿಜನರೇ ಹೇಳಿದರು, ನಮ್ಮ ಶಾಸಕರು ಇದುವರೆಗೆ ಇಲ್ಲಿಗೆ ಬಂದೇ ಇಲ್ಲಾ ಈಗ ನಮ್ಮ ಜೊತೆಯಲ್ಲಿ ಬಂದಿದ್ದಾರೆಂದು ಹೇಳಿದರು.

ಶ್ರೀ ಜೆ. ಡಿ. ಸೋಮಪ್ಪ.—ನಾನು ಅದಕ್ಕೆ ಉತ್ತರ ಹೇಳುತ್ತೇನೆ, ಮುಂದೆ ಏನಾಯಿತು ಎಂಬುದನ್ನು ಹೇಳಿ.

ಶ್ರೀ ಪಿ. ಜಿ. ಆರ್ ಸಿಂಧ್ಯ.—ಮಾನ್ಯ ಸದಸ್ಯರು ಅವರ ಕ್ಷೇತ್ರದಲ್ಲೇ ನನ್ನ ರಕ್ಷಣೆ ತೆಗೆದು ಕೊಂಡು ಬಂದಿದ್ದಾರೆ.

ಶ್ರೀ ಜೆ. ಡಿ. ಸೋಮಪ್ಪ.—ಮಾನ್ಯ ಮಂತ್ರಿಗಳು ಹೇಳುತ್ತಿರುವುದು ಸತ್ಯಕ್ಕೆ ದೂರವಾದುದು. ನಮ್ಮ ಜೊತೆಯಲ್ಲಿ ಇದುವರೆಗೆ ನಾನು ಬಂದೇ ಇಲ್ಲ ನಾನು ಅಲ್ಲಿಗೆ ಹೋಗಿದ್ದಾಗ ತಾವು ಇರಲಿಲ್ಲ ನಾನು ಬಹಳ ಸಾರಿ ಅಲ್ಲಿಗೆ ಭೇಟಿ ಕೊಟ್ಟಿದ್ದೇನೆ. ನಾನು ನನ್ನ ಕ್ಷೇತ್ರವನ್ನು ಸರಿಯಾಗಿ ನೋಡಿ ಕೊಳ್ಳದಿದ್ದರೆ ಎರಡನೇ ಸಾರಿ ಹೇಗೆ ಚುನಾವಣೆಯಲ್ಲಿ ಗೆದ್ದುಬರುವುದಕ್ಕೆ ಸಾಧ್ಯವಾಗುತ್ತದೆ.

ಇನ್ನು ಕನ್ನಡಕ್ಕೆ ಅಗ್ರಪಟ್ಟವೆಂದು ಹೇಳುತ್ತೀರಿ, ಇದು ಹೇಗಾಗಿದೆಯೆಂದು ಹೇಳಿದರೆ ದೀಪ ದಡಿಯೇ ಕತ್ತಲು ಆ ತರಹ ಆಗಿದೆ. ವಿಧಾನಸೌಧದಲ್ಲಿ ಕನ್ನಡದ ಬಗ್ಗೆ ಒಂದು ಮೀಟಿಂಗ್ ಕರೆದಿದ್ದಾರೆ. ಪತ್ರಿಕೆಯಲ್ಲಿ ಬಂದಿರುವುದನ್ನು ಹೇಳುತ್ತೇನೆ ಅದು ಈ ರೀತಿ ಇದೆ.

Permit to meet the minister during prescribed hours .—

Name	—	Chidanandamurthy
Purpose of meeting	—	—
Date	—	16—9—1983
Time	—	11—05 A. M

ಆಡಳಿತಭಾಷೆಯಾಗಿ ಕನ್ನಡವನ್ನು ಜಾರಿಗೆ ತರುವುದರಲ್ಲಿ ಈ ತಿಂಗಳು ೧೬ನೇ ತಾರೀಖು ನಡೆದ ಕಾವಲು ಸಮಿತಿಯ ಸಭೆಗೆ ಹಾಜರಾಗಲು ಹೋದಂತಹ ಇಬ್ಬರು ಸದಸ್ಯರಿಗೆ ವಿಧಾನಸೌಧದಗೇಟಿನಲ್ಲಿ ಕೊಟ್ಟಂತಹ ಪತ್ರ ಇದು. ಇವರು ಕರ್ನಾಟಕದಲ್ಲಿ ಕನ್ನಡಕ್ಕೆ ಪಟ್ಟ ಕಟ್ಟುತ್ತೇವೆಂದು ಹೇಳುತ್ತಾರೆ.

ಅಧ್ಯಕ್ಷರು.—ಮಾನ್ಯಸದಸ್ಯರು ತಮ್ಮ ಭಾಷಣವನ್ನು ಬೇಗ ಮುಗಿಸಬೇಕು.

ಶ್ರೀ ಜೆ. ಡಿ. ಸೋಮಪ್ಪ.—ಇನ್ನೊಂದು ವಿಚಾರವನ್ನು ಹೇಳಿ ಭಾಷಣವನ್ನು ಮುಗಿಸುತ್ತೇನೆ. ಮಂತ್ರಿಮಂಡಲದ ಸದಸ್ಯರಲ್ಲಿ ಅನೇಕ ತರವಾದ ಭಿನ್ನಾಭಿಪ್ರಾಯಗಳಿವೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಮನೆಗಳನ್ನು ಹೊಡೆದದ್ದು ಸರಿಯೆಂದು ಮಾನ್ಯ ಚಂದ್ರಶೇಖರ್‌ರವರು ಹೇಳಿದರು. ಮಾನ್ಯ ರಘುಪತಿಯವರು ಅಯ್ಯೋ ಪಾಪ ಈ ರೀತಿ ಮಾಡಬಾರದಾಗಿತ್ತು, ನಾನು ಮಾನ್ಯ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಮಾತನಾಡುತ್ತೇನೆಂದು ಹೇಳಿದರು. ಈಗ ಹೇಳುತ್ತಾರೆ, ನಾನು ಪಾಪ ಎಂದು ಹೇಳಿಲ್ಲವೆಂದು ಹೇಳುತ್ತಿದ್ದಾರೆ. ಮಾನ್ಯ ರಘುಪತಿಯವರು ಕ್ರಾಂತಿರಂಗದಿಂದ ಬಂದರು, ಮಾನ್ಯ ಚಂದ್ರಶೇಖರ್‌ರವರು ಒರಿಜಿನಲ್ ಜನತಾಪಕ್ಷದವರು. ಒಂದೇ ಮಂತ್ರಿಮಂಡಲದಲ್ಲಿ ಎರಡು ತರಹ ಅಭಿಪ್ರಾಯಗಳು ಇರಬಾರದೆಂದು ಹೇಳಿ, ನಾನು ಮಾತನಾಡಲು ಕಾಲಾವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

೪-೩೦ ಪಿ.ಎಂ.

† ಶ್ರೀ ಬಿ. ರಾಮಚಂದ್ರರಾವ್ (ಉಲ್ಲಾಳ).—ಸನ್ಮಾನ್ಯ ಅಧ್ಯಕ್ಷರೇ ಸುಮಾರು ೫-೬ ಖಾತೆಗಳನ್ನು ಇಟ್ಟುಕೊಂಡಿರತಕ್ಕಂಥದ್ದು ಮಾನ್ಯ ಮುಖ್ಯಮಂತ್ರಿಗಳಿಗೆ ಉಚಿತ. ಆದರೆ ಸುಮಾರು ೧೬ ಇಲಾಖೆಗಳನ್ನು ಮಾನ್ಯ ಮುಖ್ಯಮಂತ್ರಿಗಳು ಇಟ್ಟುಕೊಂಡಿರುವುದರಿಂದ ಅವರು ಸಮರ್ಪಕವಾಗಿ ಕಾರ್ಯನಿರ್ವಹಣೆ ಮಾಡಲು ಸಾಧ್ಯವಾಗುವುದಿಲ್ಲವೆಂದು ನಾನು ಮೊಟ್ಟಮೊದಲನೆಯದಾಗಿ ಒಂದು ಸೂಚನೆಯನ್ನು ಕೊಡುತ್ತೇನೆ, ಆದರೆ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ನಾನು ಸ್ವಾಗತ ಮಾಡುತ್ತಾ ಕೆಲವಾರು ಸಲಹೆಗಳನ್ನು ಕೊಡಬಯಸುತ್ತೇನೆ. ಆದರೆ ನಾನು ಕೆಲವೇ ಬೇಡಿಕೆಗಳ ಮೇಲೆ ಸಮರ್ಪಕವಾಗಿ ಮಾತನಾಡಬಯಸುತ್ತೇನೆ. ಅದರಲ್ಲಿಯೋ ಕೂಡ ಮಾನ್ಯ ಮುಖ್ಯಮಂತ್ರಿಗಳು ಹಣಕಾಸಿನ ಇಲಾಖೆಯನ್ನು ಇಟ್ಟುಕೊಂಡಿದ್ದಾರೆ. ಮತ್ತು ಜನರಲ್ ಅಡ್ಮಿನಿಸ್ಟ್ರೇಷನ್ ಕೂಡ ಅವರೇ ಇಟ್ಟುಕೊಂಡಿದ್ದಾರೆ. ಅದರ ಜೊತೆಗೆ ಮುಖ್ಯಮಂತ್ರಿಗಳ ಕರ್ತವ್ಯವನ್ನು ಕೂಡ ನಿರ್ವಹಣೆ ನಿರ್ವಹಣೆ ಮಾಡಬೇಕಾಗುತ್ತದೆ. ಆದ್ದರಿಂದ ಇದು ಬಹಳ ಜವಾಬ್ದಾರಿಯುತವಾದಂಥ ಕೆಲಸ ಮತ್ತು ಕಷ್ಟದ ಕೆಲಸ ಕೂಡ ಆಗಿರುವುದರಿಂದ ಇನ್ನೆರಡು ಖಾತೆಗಳನ್ನು ಬೇರೆ ಮಂತ್ರಿಗಳಿಗೆ ವಹಿಸಿಕೊಟ್ಟು ತಾವು ಹೊರೆಯನ್ನು ಕಡಿಮೆ ಮಾಡಿಕೊಂಡರೆ ಒಳ್ಳೆಯದೆಂದು ನನ್ನ ಭಾವನೆ. ಮತ್ತು ಇನ್ನೂ ಎರಡು ಮೂರು ಜನ ಕ್ಯಾಬಿನೇಟ್ ಮಂತ್ರಿಗಳನ್ನು ತಮ್ಮ ಸಚಿವ ಸಂಪುಟಕ್ಕೆ ಸೇರಿಸಿಕೊಂಡರೆ ಕೆಲಸಕಾರ್ಯಗಳನ್ನು ಸುಲಭವಾಗಿ ಮಾಡಬಹುದೆಂದು ನನ್ನ ಅಭಿಪ್ರಾಯ. ಇನ್ನು ನಾನು ಮೂಲಭೂತವಾಗಿ ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಮಾತನಾಡುವುದಾದರೆ ತಮ್ಮ ವರದಿಯಲ್ಲಿ ಒಂದು ಮಾತನ್ನು ಹೇಳಿದ್ದೀರಿ. ಆದರೆ ಅದರ ಬಗ್ಗೆ ನಾನು ಒಂದು ಸಲಹೆಯನ್ನು ಕೊಡುವುದೇನೆಂದರೆ ಈ ಜನರಲ್ ಅಡ್ಮಿನಿಸ್ಟ್ರೇಷನ್ ತೆಗೆದುಕೊಂಡರೆ ಯಾರಿಗೆ ಯಾವ ವೇಳೆಯಲ್ಲಿ ಬಡ್ತಿಯನ್ನು ಕೊಡಬೇಕೋ ಆ ವೇಳೆಗೆ ಸರಿಯಾಗಿ ಬಡ್ತಿ ದೊರೆಯುವಂತೆ ಅಧಿಕಾರಿಗಳು ಗಮನ ಕೊಟ್ಟು ಸೂಕ್ತವಾದಂಥ ಕೆಲಸ ಕಾರ್ಯಗಳನ್ನು ಮಾಡಬೇಕಾಗುತ್ತದೆ. ಆದರೆ ಸುಮಾರು ೨೦-೨೫ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೂ ಕೂಡ ಅವರಿಗೆ ಇದುವರೆಗೂ ಬಡ್ತಿಯನ್ನು ಕೊಟ್ಟಿಲ್ಲ. ಆ ಬಗ್ಗೆ ಸರ್ಕಾರ ಕೂಡಲೇ ಸೂಕ್ತವಾದಂಥ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಅದೇ ರೀತಿಯಲ್ಲಿ ನಾನಾ ಇಲಾಖೆಗಳಲ್ಲಿ ಕೂಡ ಬಡ್ತಿ ಇಲ್ಲದೆ ಸುಮಾರು ೧೦-೧೫ ವರ್ಷಗಳಿಂದ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ. ಅವರಿಗೆ ಬಡ್ತಿಯನ್ನು ಕೊಡುವಂಥ ವ್ಯವಸ್ಥೆಯನ್ನು ತಾವು ಮಾಡಬೇಕು. ಮತ್ತೆ ಯಾರ್ಯಾರೋ ಬೇರೆ ಬೇರೆ ಇಲಾಖೆಗಳಿಂದ ಎರವಲು ಬಂದು ಸೇವೆ ಮಾಡುತ್ತಿರುತ್ತಾರೆ. ಆದರೆ ಅಂಥವರನ್ನು ಬಡ್ತಿಯ ಪಟ್ಟಿಯಿಂದ ಸಂಪೂರ್ಣವಾಗಿ ಕೈಬಿಟ್ಟಿರತಕ್ಕಂಥ ಪ್ರಸಂಗಗಳು ಕೂಡ ಇವೆ. ಆದ್ದರಿಂದ ತಾವು ಆ ಬಗ್ಗೆ ಹೆಚ್ಚಿನ ಕೊಡಬೇಕಾದ್ದು ಅತ್ಯಗತ್ಯ. ಆ ಒಂದು ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡುತ್ತಾರೆಂದು ನಾನು ನಂಬಿರುತ್ತೇನೆ.

ಇನ್ನು ಪ್ಲಾನಿಂಗ್ ಕಮಿಷನ್ ಬಗ್ಗೆ ನಾನು ಕೆಲವಾರು ವಿಷಯಗಳನ್ನು ಪ್ರಸ್ತಾಪ ಮಾಡುವುದರೆ ಸ್ಟೇಟ್ ಮತ್ತು ಸೆಂಟ್ರಲ್ ರಿಲೇಷನ್ ಬಗ್ಗೆ ನಮ್ಮ ರಾಜ್ಯ ಸರ್ಕಾರದವರು ಒಂದು ವಿಚಾರ ಸಂಕಿರಣವನ್ನು ಮಾಡಿದರು. ಆದರೆ ಆ ರೀತಿಯ ಒಂದು ವಿಚಾರ ಸಂಕಿರಣ ನಡೆಯುವುದು ಒಳ್ಳೆಯದೆಂದು ನನಗೂ ಕೂಡ ಅನಿಸುತ್ತದೆ. ಕಾರಣವೇನೆಂದರೆ ರಾಜ್ಯ ಸರ್ಕಾರಕ್ಕೆ ಇರುವಂಥ ಕುಂದುಕೊರತೆಗಳನ್ನು ಕೇಂದ್ರ ಸರ್ಕಾರದೊಡನೆ ವಿಚಾರ ವಿನಿಮಯ ಮಾಡಿದಾಗ ಅದಕ್ಕೆ ತಕ್ಕ ಪ್ರತಿಫಲ ಕೇಂದ್ರ

ಸರ್ಕಾರದಿಂದ ದೊರೆಯಬಹುದು. ಆದರೆ ಸುಮಾರು ೩೫ ವರ್ಷಗಳಿಂದ ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಒಂದೇ ಒಂದು ಪಕ್ಷದ ಸರ್ಕಾರ ಅಧಿಕಾರದಲ್ಲಿದ್ದರೂ ಕೂಡ ನಮಗೆ ಕೇಂದ್ರ ಸರ್ಕಾರದಿಂದ ಯಾವುದೇ ರೀತಿಯ ಪ್ರತಿಫಲ ದೊರೆಯಲಿಲ್ಲ. ಮತ್ತು ಇಂಥ ಒಂದು ವಿಚಾರ ಸಂಕೀರಣವನ್ನು ಯಾರೂ ಕೂಡ ಮಾಡಿಲ್ಲ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ.

(ಉಪ ಸಭಾಪತಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ರಾಜ್ಯವನ್ನು ಪ್ರಗತಿಪಥದಲ್ಲಿ ತೆಗೆದುಕೊಂಡು ಹೋಗಬೇಕಾದರೆ ಕೇಂದ್ರ ಸರ್ಕಾರವನ್ನು ರಾಜ್ಯ ಸರ್ಕಾರ ಅವಲಂಬಿಸಿರಬೇಕಾಗುತ್ತದೆ. ಆದ್ದರಿಂದ ಆಗಾಗ ಇಂಥ ವಿಚಾರ ಸಂಕೀರಣಗಳನ್ನು ನಡೆಸುವುದು ಒಳ್ಳೆಯದು. ಆದರೆ ಈ ಸಾಲಿನ ಬಜೆಟ್‌ನಲ್ಲಿ ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯ ಸರ್ಕಾರಕ್ಕೆ ಸುಮಾರು ೩೫ ಕೋಟಿ ರೂಪಾಯಿಗಳು ಕೊಡಬೇಕೆಂದು ರಾಜ್ಯ ಸರ್ಕಾರ ಮನವಿ ಮಾಡಿದೆ. ಆದರೆ ಆ ಹಣ ಬರಬೇಕಾದರೆ ಇಂಥ ವಿಚಾರ ಸಂಕೀರಣ ಅಗತ್ಯ. ಪ್ಲಾನಿಂಗ್ ಕಮೀಷನ್‌ರವರು ಬರೀ ಯೋಜನೆಗಳನ್ನು ಮಾಡುತ್ತಾ ಹೋದರೆ ಏನೂ ಪ್ರಯೋಜನವಾಗುವುದಿಲ್ಲ. ಅವರು ಮಾಡಿದಂಥ ಯೋಜನೆಗಳನ್ನು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಹಣ ವಿನಿಯೋಗ ಮಾಡಿ ಪೂರ್ತಿ ಮಾಡಿದರೆ ಆಗ ಅವರು ತಮ್ಮ ಜವಾಬ್ದಾರಿಯನ್ನು ನಿರ್ವಹಣೆ ಮಾಡಿದಂತೆ ಆಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಲ್ಲಿ ಆಡಳಿತ ನಡೆಸತಕ್ಕಂಥವರಲ್ಲಿ ಯಾವುದೇ ರೀತಿಯ ಭಿನ್ನಾಭಿಪ್ರಾಯಗಳು ಇರಬಾರದು. ಮತ್ತು ವಿರೋಧಪಕ್ಷದವರು ಕೂಡ ಪಕ್ಷಪಾತವನ್ನು ಬಿಟ್ಟು ರಾಜ್ಯದ ಪ್ರಗತಿಪರವಾದಂಥ ಯೋಜನೆಗಳಿಗೆ ಪ್ರೋತ್ಸಾಹ ಕೊಡಬೇಕು. ಮತ್ತು ೮ನೇ ಹಣಕಾಸಿನ ಯೋಜನೆಯಲ್ಲಿ ನಮ್ಮ ರಾಜ್ಯಕ್ಕೆ ಸಲ್ಲಬೇಕಾದಂಥ ಸಿಂಹಪಾಲನ್ನು ನಾವು ದೊರಕಿಸಿಕೊಳ್ಳುವುದಕ್ಕೆ ಸರ್ವ ಪ್ರಯತ್ನ ಮಾಡಬೇಕೆಂದು ನಾನು ಸೂಚನೆ ಕೊಡುತ್ತೇನೆ.

ಇನ್ನು ರಾಜ್ಯದ ಓವರ್ ಡ್ರಾಫ್ಟ್ ಬಗ್ಗೆ ಹೇಳುವುದಾದರೆ ಎಲ್ಲಾ ರಾಜ್ಯಗಳಲ್ಲಿ ಕೂಡ ಓವರ್ ಡ್ರಾಫ್ಟ್ ಆಗುತ್ತದೆ. ಅದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವಂಥ ಅವಶ್ಯಕತೆ ಇಲ್ಲ. ಅವರ ಕಾಲದಲ್ಲಿಯೂ ಕೂಡ ಓವರ್ ಡ್ರಾಫ್ ಆಗಿದೆ. ಕೇಂದ್ರ ಸರ್ಕಾರದಲ್ಲಿ ಓವರ್ ಡ್ರಾಫ್ಟ್ ಇಲ್ಲವೇ ? ಆದ್ದರಿಂದ ನಾನು ಹೇಳುವುದೇನೆಂದರೆ ಮುಖ್ಯವಾಗಿ ಪ್ಲಾನಿಂಗ್ ಕಮಿಷನ್‌ನವರ ಜೊತೆ ನಾವು ಚರ್ಚೆ ಮಾಡಬೇಕು. ಆ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಹಣಕಾಸಿನ ವರದಿಯಲ್ಲಿ ಸ್ಪಷ್ಟವಾಗಿ ಕೊಟ್ಟಿದ್ದಾರೆ. ಅವರು ಏನು ಹೇಳಿದ್ದಾರೆಂದು ನಾವು ನೋಡಿದರೆ ಕೇಂದ್ರ ಸರ್ಕಾರದಿಂದ ಕೊಟ್ಟಂತಹ ಹಣವನ್ನು ಅವರು ಕಾಲಕ್ಕೆ ಸರಿಯಾಗಿ ವಸೂಲು ಮಾಡಿಕೊಳ್ಳುತ್ತಾರೆಂದು. ಮತ್ತೆ ನಮ್ಮ ರಾಜ್ಯ ಸರ್ಕಾರದವರು ಸೇಲ್ಸ್ ಟ್ಯಾಕ್ಸನ್ನು ವಸೂಲು ಮಾಡಿಕೊಳ್ಳುವುದರಲ್ಲಿ ಸ್ವಲ್ಪ ನಷ್ಟವಿದ್ದ ಹಾಗೆ ಕಾಣುತ್ತದೆ. ತಾವು ಸುಮಾರು ೫-೬ ವರ್ಷಗಳ ಲೆಕ್ಕವನ್ನು ತೆಗೆದು ನೋಡಿದರೆ ಆಗ ತಮಗೆ ಗೊತ್ತಾಗುತ್ತದೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಿಗೆ ಸಲಹೆ ಮಾಡುವುದೇನೆಂದರೆ ಈ ಸೇಲ್ಸ್ ಟ್ಯಾಕ್ಸ್ ಎಲ್ಲಿ ಸೋರಿಹೋಗುತ್ತಿದೆಯೋ ಅಲ್ಲಿ ಸರಿಯಾದಂಥ ಕ್ರಮವನ್ನು ತೆಗೆದುಕೊಂಡು ಸೋರಿ ಹೋಗುತ್ತಿರುವ ಹಣವನ್ನು ಕಡ್ಡಾಯವಾಗಿ ಸರ್ಕಾರ ವಸೂಲು ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಫಿಶರೀಸ್ ಬಗ್ಗೆ ಹೇಳುವುದಾದರೆ ಮಾರ್ಚ್ ೧೯೮೨ ಕ್ಕೆ ಅಂದಾಜು ಸಮಿತಿಯವರು ನೀಡಿದ ವರದಿಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಇದು ಬಹಳ ಮುಖ್ಯವಾದುದರಿಂದ ಕೆಲವು ಅಂಶವನ್ನು ಓದಲು ಬಯಸುತ್ತೇನೆ. ೨೯ನೇ ಪುಟದಲ್ಲಿ ಹೀಗೆ ಹೇಳಲಾಗಿದೆ.

"Further the Committiee was not satisfied at the upkeep of the roads in Dakshina Kannadai Dstrict and Committee recommends that some of the approach-roads constructted by the Department of Fisheries, to facilitate transport of fish from the landing centres to the market places, be transferred to the Public Works Department so that sufficient budget can be provided and proper maintenance is taken care thereof".

ಅಂದರೆ, ನೂರಾರು ಸ್ಥಳಗಳಲ್ಲಿ ಸಮುದ್ರದಿಂದ ಮೀನುಗಳನ್ನು ಹಿಡಿದುಕೊಂಡು ಬರುತ್ತಾರೆ. ಹಿಡಿದ ಮೀನನ್ನು ಅವರು ಬೇಗ ಮಾರ್ಕೆಟ್ಟಿಗೆ ಸಾಗಿಸಬೇಕು. ಇಲ್ಲದಿದ್ದರೆ ತಡವಾದರೆ ಮೀನು ಕೊಳೆಯುತ್ತದೆ. ಆದ್ದರಿಂದ ಬೇಗನೆ ಮೀನನ್ನು ಸಾಗಿಸಬೇಕಾದರೆ ಸರಿಯಾದ ರಸ್ತೆ ಸೌಕರ್ಯ ಇರಬೇಕು. ಇದನ್ನು ಮೀನುಗಾರಿಕೆ ಇಲಾಖೆಯವರು ಗಮನಕ್ಕೆ ತೆಗೆದುಕೊಂಡು ಈ ಅನುಕೂಲತೆ ಮಾಡುವ ಹಾಗೆ ಪ್ರಯತ್ನಿಸಬೇಕು. ಏಕೆಂದರೆ ಮೀನುಗಾರಿಕೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಪ್ರಥಮ ಸ್ಥಾನದಲ್ಲಿದೆ.

ಇನ್ನು, ಗೃಹಖಾತೆಯ ಬಗ್ಗೆ ಒಂದು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಗೃಹ ಖಾತೆಯಲ್ಲಿ ಪೋಲೀಸ್ ಸ್ಟೇಷನ್‌ಗಳನ್ನು ಬಹಳವಾಗಿ ಮಾಡಿದ್ದಾರೆ. ಈ ಪೋಲೀಸ್ ಸ್ಟೇಷನ್‌ಗಳು ಸಬ್ ಇನ್‌ಸ್ಪೆಕ್ಟರ್ ಛಾರ್ಜ್‌ನಲ್ಲಿ ಇರುತ್ತವೆ. ಇದು ಬರೀ ಶಾಸಕರ ಅನುಭವ ಅಲ್ಲ, ಎಲ್ಲಾ ಜನರ ಅನುಭವ ಕೂಡ. ಏನೆಂದರೆ ಈ ಸಬ್ ಇನ್‌ಸ್ಪೆಕರ್‌ರವರ ಮೇಲೆ ಹತೋಟಿ ಪೋಲೀಸ್ ಸೂಪರಿಂಟೆಂಡೆಂಟ್ ರವರಿಗೆ ಇಲ್ಲ, ಡಿ. ಐ. ಜಿ. ಗೂ ಇಲ್ಲ. ಸರ್ಕಲ್ ಇನ್‌ಸ್ಪೆಕ್ಟರ್ ಅವರಿಗೂ ಇಲ್ಲ. ಇವರಿಗೆ ಬಹಳ ಅಧಿಕಾರ ಇದೆ. ಪೋಲೀಸ್ ಆ್ಯಕ್ಟ್‌ನಲ್ಲಿ ಏನು ಬೇಕಾದರೂ ಮಾಡಬಹುದು. ಆದ್ದರಿಂದ ಎಸ್. ಪಿ. ಲೆವಲ್‌ನಲ್ಲಿ, ಡಿ. ಎಸ್. ಪಿ. ಲೆವಲ್ ಪ್ರೈಯರ್ ಲೆವಲ್‌ನಲ್ಲಿ ಡಿ. ಐ. ಜಿ. ಲೆವಲ್‌ನಲ್ಲಿ ನೋಡಿದರೆ ಸಾಲದು. ನನಗನ್ನಿಸುತ್ತದೆ ಸಬ್‌ಇನ್‌ಸ್ಪೆಕ್ಟರ್ ಲೆವಲ್‌ನಲ್ಲಿ ಅವರಿಗೆ ಕೊಡುವ ತರಬೇತಿಯಲ್ಲೇ ಏನಾದರೂ ತಪ್ಪು ಇರಬೇಕೆಂದು. ಮಾನಸಿಕವಾಗಿ ಅವರನ್ನು ಪರೀಕ್ಷೆ ಮಾಡಿಸಿದರೆ ನಿಮಗೆ ಗೊತ್ತಾಗಬಹುದು. ಸಬ್ ಇನ್‌ಸ್ಪೆಕ್ಟರ್ ಆಗುವುದಕ್ಕೆ ಮುಂಚೆ ಅವರು ಹೀಗೆ ಇದ್ದರೋ, ಅಥವಾ ಸಬ್ ಇನ್‌ಸ್ಪೆಕ್ಟರ್ ಆದಮೇಲೆ ಹೀಗೆ ಆದರೋ ಎಂದು ಗೊತ್ತಾಗುತ್ತದೆ. ಪೋಲೀಸ್ ಸ್ಟೇಷನ್‌ಗಳು ಹೆಚ್ಚೆಚ್ಚು ಆಗಬೇಕೆಂದು ಹೇಳುತ್ತೇವೆ. ಅಲ್ಲಿ ಸಬ್ ಇನ್‌ಸ್ಪೆಕ್ಟರುಗಳಿಗೆ ಇಪ್ಪತ್ತನಾಲ್ಕು ಗಂಟೆ ಜವಾಬ್ದಾರಿ ಇದೆ. ನಾನು ಹೇಳುವುದೇನೆಂದರೆ ಸಬ್ ಇನ್‌ಸ್ಪೆಕ್ಟರುಗಳ ಸಂಖ್ಯೆಯನ್ನು ಬೇಕಾದಷ್ಟು ಮಾಡಿ, ಅವರ ಸಂಬಳವನ್ನು ಬೇಕಾದರೆ ಜಾಸ್ತಿ ಮಾಡಿ ಆದರೆ ಇಷ್ಟೆಲ್ಲಾ ಅಧಿಕಾರವನ್ನು ಅವರಿಗೆ ಕೊಟ್ಟಿರುವಾಗ ಅವರು ಮಾತ್ರ ಥರ್ಡ್ ಡಿಗ್ರಿ ಮೆಥಡ್‌ನ್ನೇ ಮುಂದುವರೆಸಿದರೆ ಹೇಗೆ ? ಇದನ್ನು ಆಚರಿಸುವುದಿಲ್ಲವೆಂದು ಸಬ್ ಇನ್‌ಸ್ಪೆಕರ್ ಲೆವಲ್ ನಲ್ಲಿಯೇ ತೀರ್ಮಾನ ಮಾಡಿದರೆ ಒಳ್ಳೆಯದು. ಬೇಕಾದರೆ ಆಧುನಿಕ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬಹುದು. ಆದರೆ ಇಲ್ಲಿ ಟ್ರೈನಿಂಗ್‌ನಲ್ಲಿ ತಪ್ಪು ಇದೆಯೋ ಅಥವಾ ನೇಮಕ ಮಾಡುವಾಗಲೇ ತಪ್ಪು ಇದೆಯೋ ಎಂದು ಮೊದಲು ನೋಡಬೇಕು. ಇದನ್ನು ಮೊದಲು ಗಮನಿಬೇಕೆಂದು ಹೇಳಬಯಸುತ್ತೇನೆ.

ಇನ್ನು ಸೆನ್ಸಸ್‌ನಲ್ಲಿ ಕೇಂದ್ರದ ೧೯೮೧ರ ಸೆನ್ಸಸ್ ಕೆಲಸ ಮುಗಿಯುತ್ತಿರುವಾಗ ೧೮೦೦೦ ಮಂದಿ ಇವತ್ತು ಕೆಲಸ ಕಳೆದುಕೊಳ್ಳುವ ಪರಿಸ್ಥಿತಿ ಬರುತ್ತದೆ. ಮಧ್ಯ ಪ್ರದೇಶ, ಪಶ್ಚಿಮ ಬಂಗಾಳ, ಗೋವಾದಲ್ಲಿ ಈ ಸೆಂಟ್ರಲ್ ಸೆನ್ಸಸ್ ಕೆಲಸ ಮುಗಿದ ಕೂಡಲೇ, ಬೇರೆ ಬೇರೆ ಕೆಲಸ ತೆಗೆದುಕೊಂಡಿದ್ದಾರೆ. ಸ್ಟೇಟ್ ಸೆನ್ಸಸ್ ತೆಗೆದುಕೊಳ್ಳಬಹುದು, ಚಿಲ್ಡ್ರನ್ ಸೆನ್ಸಸ್, ಓಟರ್ ಲಿಸ್ಟ್ ಸೆನ್ಸಸ್, ಅಗ್ರಿಕಲ್ಚರ್ ಸೆನ್ಸಸ್ ಕೆಲಸ ತೆಗೆದುಕೊಳ್ಳಬಹುದು. ಆದ್ದರಿಂದ ಈಗಿರುವ ಕೆಲಸಗಾರರನ್ನು ಖಾಯಂ ಆಗಿ ಪರಿಗಣಿಸುವುದಕ್ಕೆ ಈ ಸರ್ಕಾರ ಆಲೋಚನೆ ಮಾಡಬೇಕೆಂದು ಹೇಳಬಯಸುತ್ತೇನೆ. ಇನ್ನೊಂದು ವಿಷಯವೆಂದರೆ. ಮೋಟಾರ್ ವೆಹಿಕಲ್ ಟ್ಯಾಕ್ಸ್ ವಿಷಯದಲ್ಲಿ ಬೆಂಗಳೂರು ಸಿಟಿಯಲ್ಲಿ ಬಸ್ಸುಗಳನ್ನು ಸರ್ಕಾರವೇ ನಡೆಸುತ್ತಿದೆ. ಧಾರವಾಡದಲ್ಲಿ ಕಾರ್ಪೊರೇಷನ್ ಇದೆ. ಆದರೆ ಮಂಗಳೂರಿನಲ್ಲಿ ಕಾರ್ಪೊರೇಷನ್ ಇಲ್ಲ. ಸಿಟಿ ಬಸ್ಸುಗಳನ್ನು ಖಾಸಗಿಯವರೇ ಓಡಿಸುತ್ತಿದ್ದಾರೆ. ಆದ್ದರಿಂದ ಅಲ್ಲಿ ಸರ್ಕಾರವೇ ರಾಷ್ಟ್ರೀಕರಣ ಮಾಡಿ ಬಸ್ಸುಗಳನ್ನು ಓಡಿಸಬೇಕು ಅಥವಾ ಸಿಟಿ ಬಸ್ಸುಗಳ ಮೇಲೆ ಹಾಕುವ ಟ್ಯಾಕ್ಸನ್ನು ಕಡಿಮೆ ಮಾಡಬೇಕು. ಅಲ್ಲಿ ಹೆಚ್ಚು ಬಸ್ಸುಗಳು ಸಿಂಗಲ್ ಒಪರೇಶನ್‌ಮೇಲೆ ನಡೆಯುತ್ತವೆ. ಒಂದೇ ಕುಟುಂಬದ ಎಲ್ಲಾ ಸದಸ್ಯರೂ ಬಸ್ಸುಗಳನ್ನು ಖಾಸಗಿಯಾಗಿ ಓಡಿಸುತ್ತಿದ್ದಾರೆ. ಆದ್ದರಿಂದ ಪ್ರಯಾಣಿಕರಿಗೆ ಯಾವ ರೀತಿಯ ಅನುಕೂಲತೆಯೂ ಇಲ್ಲ. ಹೀಗಿರುವಾಗ ಬೇರೆ ಕಡೆ ಇರುವ ಹಾಗೆ ಕಾರ್ಪೊರೇಷನ್ ಮಾಡಿ ಬಸ್ಸುಗಳನ್ನು ರಾಷ್ಟ್ರೀಕರಣ ಮಾಡಿ ನಡೆಸಬೇಕು ಅಥವಾ ಟ್ಯಾಕ್ಸ್ ಕಡಿಮೆಯಾದರೂ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಕೊನೆಯದಾಗಿ ಟೀಚರ್ಸ್ ಪೆನಶನ್ ಬಗ್ಗೆ ಹೇಳಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿರತಕ್ಕ ಉಪಾಧ್ಯಾಯರುಗಳು ಮೊದಲು ಮದ್ರಾಸ್ ರಾಜ್ಯದಲ್ಲಿ ಇದ್ದಂಥವರು ನಾವು. ಅಲ್ಲಿ ಕಾಲುಭಾಗ

ದಷ್ಟು ಮಾತ್ರ ಪೆನ್‌ಶನ್ ಕೊಡುತ್ತಿರುವುದು ನಿಜಕ್ಕೂ ಆಶ್ಚರ್ಯಕರ. ಕೆಲವು ರಾಜ್ಯಗಳಲ್ಲಿ ರಿಟೈರ್ ಆಗುವಾಗ ಯಾವ ಸಂಬಳ ಇದೆಯೋ, ಅದನ್ನೇ ಪೆನ್‌ಶನ್ ಆಗಿ ಕೊಡುತ್ತಾರೆ. ನಮ್ಮ ರಾಜ್ಯದಲ್ಲಿ ಅರ್ಧಭಾಗವಾದರೂ ಕೊಡಬೇಕು. ಅದು ಬಿಟ್ಟು ಕಾಲುವಾಸಿ ಕೊಡುತ್ತಿರುವುದು ಬಹಳ ಅನ್ಯಾಯ. ಪೆನ್‌ಶನ್ ನೀತಿಯನ್ನು ಸ್ವಲ್ಪ ಪುನರ್ ವಿಮರ್ಶೆ ಮಾಡಿ ಅರ್ಧಭಾಗ ಪೆನ್‌ಶನ್ ಆದರೂ ಸಿಗುವ ಹಾಗೆ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ. ಕೊನೆಯದಾಗಿ ಹೇಳಬೇಕೆಂದರೆ, ಈ ಸರ್ಕಾರ ಬಂದ ಮೇಲೆ ಹಿಂದಿನ ಸರ್ಕಾರದ ಹಾಗೆ ಇಲ್ಲ. ಹಿಂದಿನ ಸರ್ಕಾರದಲ್ಲಿ ಏನು ಮಾಡುತ್ತಿದ್ದರು ಎಂದರೆ ಮುಖ್ಯ ಮಂತ್ರಿಗಳ ಹತ್ತಿರ ಯಾರಾದರೂ ಹೋಗಿ ಹೂಮಾಲೆ ಹಾಕಿ, ಗದೆ ಕೊಟ್ಟ ಕೂಡಲೇ, ಒಂದು ಮನವಿಯನ್ನು ಕೊಟ್ಟರೆ 'ಆಯಿತು' ಎಂದು ಹೇಳುತ್ತಿದ್ದರು. ನನಗೆ ತುಂಬಾ ಸಂತೋಷವಾಗುತ್ತದೆ ಏನೆಂದರೆ ಈ ಮುಖ್ಯಮಂತ್ರಿಗಳು ಹಾಗೆ ಮಾಡಿದ ಕೂಡಲೇ 'ಆಯಿತು' ಎಂದು ಹೇಳುವುದಿಲ್ಲ' 'ಆಲೋಚನೆ ಮಾಡುತ್ತೇನೆ' ಇದರ ಬಗ್ಗೆ ಯೋಚನೆ ಮಾಡಿ ಅಭಿಪ್ರಾಯವನ್ನು ಕೊಡುತ್ತೇನೆ. ಎಂದು ಹೇಳುತ್ತಾರೆ...

ಶ್ರೀ ಎಂ. ಮಹದೇವ್ —ಹಿಂದಿನ ಮುಖ್ಯಮಂತ್ರಿಗಳು ಮೂರು ದಿನಕ್ಕೊಮ್ಮೆ ಸಾರ್ವಜನಿಕರಿಗೆ ದರ್ಶನ ಕೊಡುತ್ತಿದ್ದರು.

ಶ್ರೀ ಪಿ. ರಾಮಚಂದ್ರರಾವ್.—ಇಲ್ಲಿ ದರ್ಶನ ಮುಖ್ಯ ಅಲ್ಲ ಯಾವುದಕ್ಕೂ ಕ್ಯಾಬಿನೇಟ್‌ನಲ್ಲಿ ತೀರ್ಮಾನ ಆಗಬೇಕು. ಯಾವುದನ್ನೂ ಕೂಡಲೇ ಭರವಸೆ ಕೊಡುವುದಕ್ಕಿಂತ ಕ್ಯಾಬಿನೇಟ್‌ನಲ್ಲಿ ಚರ್ಚೆ ಮಾಡಿ ನಿರ್ಣಯ ತೆಗೆದುಕೊಳ್ಳುವುದು ಒಳ್ಳೆಯದು. ಕಡೆಯದಾಗಿ ಕರ್ನಾಟಕ ರಾಜ್ಯದ ಸುದೈವ ಈ ಸಲ ಜನತೆ ಮೂವತ್ತೈದು ವರ್ಷಗಳ ಅನುಭವದ ಆಧಾರದ ಮೇಲೆ ಅಬ್ಸಲ್ಯೂಟ್ ಮೆಜಾರಿಟಿ ಇರುವ ಸರ್ಕಾರ ಬೇಡ, ಪ್ರಿಕೇರಿಯಸ್ ಮೆಜಾರಿಟಿ ಇರುವ ಸರ್ಕಾರ ಬೇಕು ಎಂದು ತೀರ್ಮಾನ ಮಾಡಿದ್ದಾರೆ. ಇನ್ನು ಆಂಟಿ ಡಿಫೆಕ್ಷನ್ ಬಿಲ್ ಬರಲಿದೆ. ಅದು ಬಂದಮೇಲೆ ಯಾರಾದರೂ ಪಕ್ಷಾಂತರ ಮಾಡಿದರೆ ಅವರು ತಮ್ಮ ಸ್ಥಾನವನ್ನು ಕಳೆದುಕೊಳ್ಳುತ್ತಾರೆ. ಈ ಮಸೂದೆ ಬರಬೇಕು. ನನಗೊಂದು ಸಂತೋಷ ಎಂದರೆ ಯಾರೋ ಹೇಳಿದರು. ಬಹುಶಃ ವಿರೋಧಪಕ್ಷದ ನಾಯಕರು ಇರಬೇಕೆಂದು ಕಾಣುತ್ತದೆ ಮುಖ್ಯಮಂತ್ರಿಗಳು ಬಹಳ ತಿರುಗಾಡುತ್ತಿದ್ದಾರೆ ಎಂದು. ಉದಾಹರಣೆಗೆ ನಮ್ಮ ಜಿಲ್ಲೆಯನ್ನೇ ತೆಗೆದುಕೊಂಡರ ಅದು ದೂರದ ಜಿಲೆ . ಹಿಂದೆ ಪ್ರತಿ ವಾರಕ್ಕೊಮ್ಮೆ ಮುಖ್ಯಮಂತ್ರಿಗಳು ಬರುವುದು ಇತ್ತು. ಮೂರು ತಿಂಗಳಿಗೊಮ್ಮೆ, ನಾಲ್ಕು ತಿಂಗಳಿಗೊಮ್ಮೆ ಮಂತ್ರಿಗಳು ಬಂದರೆ ಸರಿ. ಐದು ದಿವಸಕ್ಕೊಮ್ಮೆ ಅಲ್ಲ. ಇಲ್ಲಿ ತಮ್ಮ ಧೋರಣೆಗಳನ್ನು ಕಾರ್ಯ ರೂಪಕ್ಕೆ ತರುವ ಬಗ್ಗೆ ಕೆಲಸ ನಡೆಯಬೇಕಾಗಿದೆ ನಿಯಂತ್ರಣ ಮಾಡುವುದಕ್ಕೋಸ್ಕರ ಮಂತ್ರಿಗಳು ಅಲ್ಲಿ ಹೋಗಿ ಮಾಡಬೇಕಾದುದಿಲ್ಲ. ಇಲ್ಲಿಂದಲೇ ನಡೆಯುವ ಹಾಗೆ ಮಾಡಿ. ಒಳ್ಳೆಯ ಆಡಳಿತ ಬಂದೇ ಬರುತ್ತದೆ. ಇಲ್ಲದಿದ್ದರೆ ನಿನ್ನೆ ಹೇಳಿದಂತೆ ಆಗುತ್ತದೆ. ಆದ್ದರಿಂದ ಈ ಬಗ್ಗೆ ಸರ್ಕಾರವನ್ನು ನಡೆಸುವಾಗ ಕೂಡ ಸಾರ್ವಜನಿಕರಿಗೆ ದರ್ಶನ ಕೊಡಬೇಕು. ಸಾರ್ವಜನಿಕರಿಗೆ ದರ್ಶನ ಕೊಡುವ ಲೆಕ್ಕದಲ್ಲಿ ಶಾಸಕರಿಗೆ ಮಂತ್ರಿಗಳು ದರ್ಶನ ಕೊಡದೇ ಇರಬಾರದು. ದಿವಸಕ್ಕೆ ಒಂದು ಗಂಟೆಯಾದರೂ ಮಂತ್ರಿಗಳು ಶಾಸಕರಿಗೆ ದರ್ಶನ ಕೊಡಬೇಕು. ಒಂದೇ ಸಾರಿ ಸಾರ್ವಜನಿಕರಿಗೂ ಹಾಗೂ ಶಾಸಕರಿಗೂ ದರ್ಶನ ಕೊಟ್ಟರೆ, ಕೆಲವೊಂದು ಪ್ರಮುಖವಾದ ಪ್ರಶ್ನೆಗಳ ಬಗ್ಗೆ ಅವರಿಗೆ ರೆಪ್ರಸೆಂಟ್ ಮಾಡಬೇಕಾಗಿರುತ್ತದೆ. ಆಗ ಅದಕ್ಕೆ ಬೇಕಾದ ಸಮಯ ಸಿಕ್ಕುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಏನು ಈ ೧೬ ಬೇಡಿಕೆಗಳನ್ನು ಸದನದಲ್ಲಿ ಮಂಡಿಸಿದ್ದಾರೆ, ಅವುಗಳಿಗೆ ಅವರ ಮಿತ್ರಪಕ್ಷವಾಗಿ ನಮ್ಮ ಬೆಂಬಲವನ್ನು ಕೊಡುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಮಲ್ಲಿಕಾರ್ಜುನ್ ಎಂ ಖರ್ಗೆ (ಗುರುಮಿಟ್ಕೆಲ್).—ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಮಾನ್ಯ ಮಂತ್ರಿಗಳು ಮಂಡಿಸಿರತಕ್ಕಂತಹ ೧೬ ಬೇಡಿಕೆಗಳಿಗೆ ವಿರೋಧವನ್ನು ವ್ಯಕ್ತಮಾಡುತ್ತಾ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಮತ್ತೆ ಏನು ಈ ೯ ತಿಂಗಳಲ್ಲಿ ನಾವು ಭಾರಿ ಸಾಧನೆ ಮಾಡಿದ್ದೇವೆ ಎನ್ನತಕ್ಕಂತಹದ್ದನ್ನು ಹೇಳಿದ್ದಾರೆ ಅದರ ಬಗ್ಗೆ ಕೂಡ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ತಮಗೆ ಗೊತ್ತಿದ್ದ ಹಾಗೆ ಯಾವುದೇ ಒಂದು ಪಕ್ಷ ಆಡಳಿತದಲ್ಲಿ ಬರಬೇಕಾದರೆ ಚುನಾವಣೆಯಲ್ಲಿ ಗೆದ್ದ ಮೇಲೆ, ಅಥವಾ ಗೆಲ್ಲುವುದಕ್ಕಿಂತ ಮುಂಚೆ ಒಂದು ವಿಶಿಷ್ಟವಾದ ಗುರಿ ಅಥವಾ ಧ್ಯೇಯ-ಧೋರಣೆಯನ್ನು ಇಟ್ಟು ಚುನಾವಣೆಯಲ್ಲಿ ಅವರು ನಿಲ್ಲುತ್ತಾರೆ. ಆ ಪಕ್ಷದ ವತಿಯಿಂದಲೇ ಅವರ ಪಕ್ಷದ

ಚುನಾವಣಾ ಪ್ರಣಾಳಿಕೆ, ಅಥವಾ ಮ್ಯಾನಿಫೆಸ್ಟೋವನ್ನು ಜನರ ಎದುರು ಇಟ್ಟು. ಆ ಮ್ಯಾನಿಫೆಸ್ಟೋ ಪ್ರಕಾರ ನಾವು ಕೆಲಸ ಮಾಡುತ್ತೇವೆ ನಮಗೆ ನಿಮ್ಮ ಮತ ಕೊಡಿ ಅಂತ ಹೇಳಿ ಜನತೆಯ ಮುಂದೆ ಹೋಗ ತಕ್ಕಂತಹದ್ದು ಸಹಜ. ನಂತರ ಅವರ ಸರ್ಕಾರ ರಚನೆಯಾದ ಮೇಲೆ ಮಂತ್ರಿಗಳು ಮುಖ್ಯಮಂತ್ರಿಗಳು ಆದ ಮೇಲೆ ಖಂಡಿತವಾಗಿ ಅವರು ಕೊಟ್ಟಂತಹ ವಚನವನ್ನು ಜಾರಿಗೆ ತರುತ್ತಾರೆ ಆ ರೀತಿ ನಡೆಸುತ್ತಾರೆ ಎನ್ನತಕ್ಕಂತಹದ್ದನ್ನು ನಾನು ಅರ್ಥಮಾಡಿಕೊಂಡಿದ್ದೆ. ಏಕೆಂದರೆ ಈ ಅಧಿಕಾರವನ್ನು ನೀವು ಉಪ ಯೋಗಿಸಿಕೊಂಡು ಕೇವಲ ಟ್ರಾನ್ಸ್‌ಫರ್ಸ್, ಕೆಲವು ಪೋಸ್ಟಿಂಗ್ಸ್‌ನ್ನು ಮಾಡುವುದಾದರೆ, ಯಥಾ ಪ್ರಕಾರ ಅದೇ ಕಾರ್ಯವನ್ನು ನಡೆಸುವುದಾದರೆ, ಅದು ಅಚೀವ್‌ಮೆಂಟ್ ಅಲ್ಲ. ಏನು ಅಚೀವ್‌ಮೆಂಟ್ ಅಂದರೆ, ಈ ಒಂದು ಅಧಿಕಾರದಿಂದ, ಈ ಒಂದು ಆಡಳಿತದಿಂದ ಒಂದು ಸಮಗ್ರವಾದ ಬದಲಾವಣೆ ಮಾಡಬೇಕು. ಅಂದರೆ ಸಾಮಾಜಿಕವಾಗಿ ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಬದಲಾವಣೆ ತರಬೇಕು ಎನ್ನತಕ್ಕಂತಹ ಮನೋಭಾವನೆ ಆ ಒಂದು ಪಕ್ಷಕ್ಕಾಗಲಿ. ಆ ಒಂದು ಸರ್ಕಾರಕ್ಕಾಗಲಿ ಇರಬೇಕು. ಆದರೆ ಇವತ್ತು ಏನು ಕಾಣುತ್ತಿದ್ದೇವೆ ಅಂದರೆ ಇದು ಯಾವುದೂ, ಸಾಮಾಜಿಕವಾಗಿ ಯಾಗಲಿ, ಆರ್ಥಿಕವಾಗಿಯಾಗಲಿ, ಮತ್ತು ಶೈಕ್ಷಣಿಕವಾಗಿಯಾಗಲೀ ಇವರು ಯಾರೂ ಆ ಕಡೆ ಗಮನ ಹರಿಸಿಲ್ಲ. ಅವರು ಕೊಟ್ಟಂತಹ ಏನು ವಚನ ಇದೆ, ಅದನ್ನು ಕೂಡ ಪರಿಪಾಲನೆ ಮಾಡಿಲ್ಲ. ಈ ೯ ತಿಂಗಳಲ್ಲಿ ಏನು ಆಗುತ್ತಿದೆ ಅಂದರೆ ಯಥಾಪ್ರಕಾರ ಹಿಂದಿನಿಂದ ಏನು ನಡೆದುಕೊಂಡು ಬಂದಿತ್ತೋ ಅದೇ ಪ್ರಕಾರವಾಗಿ ಕೆಲವರಿಗೆ ಟ್ರಾನ್ಸ್‌ಫರ್ಸ್ ಮಾಡಿದ್ದಾರೆ ಮತ್ತು ತಮಗೆ ಬೇಕಾದ ಕೆಲಸವನ್ನು ಮಾಡಿದ್ದಾರೆಯೇ ಹೊರತಾಗಿ ಸಮಗ್ರವಾಗಿ ಏನು ಬದಲಾವಣೆಯಾಗಿಲ್ಲ, ಏನು ಬದಲಾವಣೆ ಮಾಡಿದ್ದೀರಿ ? ಬದಲಾವಣೆಯನ್ನು ತರಬೇಕಾಗಿದ್ದರೆ ಅದಕ್ಕೆ ಬೇಕಾದಂತಹ ಯೋಜನೆಗಳನ್ನು ಹಾಕಿಕೊಳ್ಳಬೇಕು. ನಂತರ ಅದಕ್ಕೆ ಅಲೋಕೆಷನ್ ಕೂಡ ಪ್ಲಾನ್ ಸ್ಕೀಂಗಳಲ್ಲಾಗಲಿ, ಅಥವಾ ನಾನ್ ಪ್ಲಾನ್ ಸ್ಕೀಂಗಳಲ್ಲಾಗಲಿ ಯಾವ ಯಾವ ಯೋಜನೆಗಳನ್ನು ತೆಗೆದುಕೊಂಡು ಈ ಒಂದು ಕರ್ನಾಟಕ ರಾಜ್ಯಗಳಲ್ಲಿರತಕ್ಕಂತಹ ಶೇಕಡ ೫೦ ರಷ್ಟು ಬಡತನದ ರೇಖೆಗಿಂತ ಕೆಳಗಡೆ ಇರತಕ್ಕಂತಹ ಜನ ಏನು ಇದ್ದಾರೆ ಅವರನ್ನು ಆ ಬಡತನದ ರೇಖೆಗಿಂತ ಮೇಲಕ್ಕೆ ಎತ್ತುವಂತಹ ಯಾವ ಯೋಜನೆಗಳನ್ನು ತಾವು ಹಾಕಿಕೊಂಡಿದ್ದೀರಿ ? ಇದನ್ನು ನಾವ್ಯಾರಾದರೂ ಕೇಳುವುದಕ್ಕೆ ಹೋದರೆ, ನಿಮ್ಮ ಪಕ್ಷದವರು ಹೇಳುತ್ತಾರೆ, ಹಿಂದೆ ನೀವು ಏನು ಮಾಡಿದ್ದೀರಿ ? ಕೇಂದ್ರ ಸರ್ಕಾರ ಏನು ಮಾಡಿದೆ ? ಎಂದು ಈ ಮಾತನ್ನು ಹೇಳುತ್ತಾರೆ. ಅದರ ಬಗ್ಗೆ ಪುನಃ ಹೇಳುವುದಕ್ಕೆ ಹೋಗುವುದಿಲ್ಲ. ಏನು ಮಾಡಿದ್ದೇವೆಂಬುದರ ಬಗ್ಗೆ ಅಂಕಿ ಅಂಶ ಗಳನ್ನು ತೆಗೆದುಕೊಂಡು ನೋಡಿ ಎಂದು ಮಾತ್ರ ಹೇಳುತ್ತೇನೆ. ಆದರೆ ನೀವು ಕಳೆದ ೯ ತಿಂಗಳಿಂದ ಏನೂ ಮಾಡಿಲ್ಲವೆಂಬುದು ನೀವು ಕೊಟ್ಟಂತಹ ಅಂಕಿಅಂಶಗಳಿಂದಲೇ ತಿಳಿಯುತ್ತದೆ. ಅದಕ್ಕೆ ತಮ್ಮ ಮುಖಾಂತರ ಇವರನ್ನು ಕೇಳುತ್ತೇನೆ. ಇವತ್ತು ಒಂದು ಸಾಮಾಜಿಕ ಪರಿವರ್ತನೆಯನ್ನು ಸಮಾಜದಲ್ಲಿ ತರಬೇಕಾಗಿದ್ದರೆ, ಆರ್ಥಿಕ ಪರಿವರ್ತನೆಯನ್ನು ತರಬೇಕಾಗಿದ್ದರೆ ಕೆಲವು ಯೋಜನೆಗಳನ್ನು ತಾವು ಹಾಕಿ ಕೊಳ್ಳಬೇಕಾಗುತ್ತದೆ. ಈ ಯೋಜನೆಗಳನ್ನು ಹಾಕಿಕೊಳ್ಳುವಾಗ ಅನೇಕ ಜನರ ನಿಷ್ಠೂರವನ್ನೂ ಕಟ್ಟಿ ಕೊಳ್ಳಬೇಕಾಗುತ್ತದೆ. ಈ ಕಡೆಯಲ್ಲಿರತಕ್ಕಂತಹ ಜನರು ಅದಕ್ಕೆ ವಿರೋಧ ಮಾಡಬಹುದು. ಅಥವಾ ನಿಮ್ಮಲ್ಲಿರತಕ್ಕಂತಹ ಜನರೇ ಅದಕ್ಕೆ ವಿರೋಧ ಮಾಡಬಹುದು. ಅಥವಾ ಬೇರೆ ಪಕ್ಷದವರು ಅಂದರೆ ನಿಮ್ಮ ಮಂತ್ರಿಮಂಡಲಕ್ಕೆ ಸಹಾಯ ಮಾಡತಕ್ಕಂತಹ ಬೇರೆ ಪಕ್ಷದ ಸದಸ್ಯರೂ ಕೂಡ ಕೆಲವು ಸಮಯ ದಲ್ಲಿ ಅದಕ್ಕೆ ವಿರೋಧ ಮಾಡಬಹುದು. ಅವರು ವಿರೋಧ ಮಾಡುತ್ತಾರೆಂದಾಕ್ಷಣ ನೀವು ನಿಮ್ಮ ಗುರಿ ಯನ್ನು ಬಿಟ್ಟರೆ ಏನನ್ನೂ ಸಾಧನೆ ಮಾಡುವುದಕ್ಕೆ ಆಗುವುದಿಲ್ಲ. ಕೇವಲ ಮಂತ್ರಿಗಳಾಗಿ ರಾಜ್ಯವನ್ನು ನಡೆಸಿಕೊಂಡು ಹೋಗುವುದು. ಅಷ್ಟು ಮಾತ್ರ ಸಾಧ್ಯವೇ ಹೊರತು ಆಮೂಲಾಗ್ರವಾಗಿ ಬದಲಾವಣೆ ಯನ್ನು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ತರುವುದಕ್ಕಾಗುವುದಿಲ್ಲ. ೯ ತಿಂಗಳಿಂದ ಏನು ಮಾಡಿದ್ದೀರಿ? ಅದನ್ನು ಕೇಳಿದರೆ ನಾವು ಮಂತ್ರಿಗಳಾಗಿದ್ದಾಗ ಹಿಂದೆ ಒಂದು ಕಾರು ಇತ್ತು, ಮುಂದೆ ಕಾರು ಇತ್ತು. ಅಂತ ಇವರು ಹೇಳುತ್ತಾರೆ. ಅದು ನಮಗೆ ಬೇಕಾಗಿಲ್ಲ. ಬಡ ಜನರಿಗೆ, ಕೂಲಿ ಕಾರರಿಗೆ ಏನು ಸಹಾಯ ಮಾಡಿದ್ದೀರಿ ? ಅದು ಮಹತ್ವವಾದುದು. ಇವತ್ತು ನಾನು ನೋಡುತ್ತಿ ದ್ದೇನೆ. ಸಮಾಜ ಕಲ್ಯಾಣ ಇಲಾಖೆಗೆ ಕೊಟ್ಟಿರುವ ತಮ್ಮ ಅಲೋಕೇಷನ್ ನೋಡಿದರೆ ಖಂಡಿತವಾಗಿ ಒಂದು ಕೋಟಿ, ೨ ಕೋಟಿ ಕಡಿಮೆಯಾಗಿದೆ. ಆಮೇಲೆ ಅನೇಕ ಹಾಸ್ಟಲ್‌ಗಳಿಗೆ, ಸಮಾಜಕಲ್ಯಾಣ ಇಲಾಖೆಯ ವತಿಯಿಂದ ನಡೆಸುವಂತಹವುಗಳಾಗಲಿ, ಅಥವಾ ಹಿಂದುಳಿದ ವರ್ಗಗಳ ಇಲಾಖೆಯವರು ನಡೆಸತಕ್ಕಂತಹ ಹಾಸ್ಟಲ್‌ಗಳಾಗಲಿ, ಇಂತಹ ಯೋಜನೆಗಳನ್ನು ತೆಗೆದುಕೊಳ್ಳಬೇಕಾದರೆ

ಹೆಚ್ಚಿನ ಹಣವನ್ನು ನಾನ್‌ಪ್ಲಾನ್ ಯೋಜನೆಯಲ್ಲೇ ಖರ್ಚು ಮಾಡಬೇಕಾಗುತ್ತದೆ. ಆವಾಗ ಸಾಮಾನ್ಯವಾಗಿ ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ಜಾಸ್ತಿಯಾಗುತ್ತದೆ. ಪ್ಲಾನ್ ಸ್ಕೀಂನಲ್ಲಿಯಾದರೂ ಆ ಯೋಜನೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಪ್ಲಾನ್ ಸ್ಕೀಂನಲ್ಲಿ ಕೊಳ್ಳುವುದಕ್ಕೆ ನಿಮ್ಮಲ್ಲಿ ಹಣವಿಲ್ಲ. ಅದಕ್ಕೆ ಹೇಗೆ ಮಾಡುವುದು ಅಂತ ಕೇಳಿದರೆ ಈ ಜನರ ಕಲ್ಯಾಣವಾಗುವ ಹಾಗೆ, ಇದಕ್ಕೆ ಪರಿಹಾರವನ್ನು ಕಂಡು ಹಿಡಿಯಬೇಕು. ಇವತ್ತಿನ ದಿವಸ ಹೇಳಬೇಕಾದರೆ, ೧೯೬೯ ಆದಮೇಲೆ ಏನು ಕಾಂಗ್ರೆಸ್ ಇಬ್ಭಾಗವಾಯಿತು. ಆಗ ಕರ್ನಾಟಕ ರಾಜ್ಯದಲ್ಲೇ ಒಂದು ವೈಚಾರಿಕಾ ಕ್ರಾಂತಿ ಉಂಟಾಯಿತು. ಜನರಿಗೆ ಧೈರ್ಯ ಕೊಟ್ಟು ಅನೇಕ ಬಡ ಜನ ಹಳ್ಳಿಯಲ್ಲಿರತಕ್ಕಂತಹವರಿಗೆ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಈ ಸರ್ಕಾರ ಸಹಾಯ ಮಾಡುತ್ತಿದೆ ಎನ್ನತಕ್ಕಂತಹ ಭಾವನೆಯನ್ನು ೧೯೬೯ರಲ್ಲಿ ಉಂಟಾದುದರಿಂದ, ೧೯೭೨ರಲ್ಲಿ ಹೊಸ ಸರ್ಕಾರ ಇಲ್ಲಿ ಸ್ಥಾಪನೆಯಾಯಿತು. ೧೯೭೨ರಲ್ಲಿ ಹೊಸ ಸರ್ಕಾರ ಸ್ಥಾಪನೆಯಾದಮೇಲೆ ತಮಗೆ ಗೊತ್ತಿದ್ದಹಾಗೆ ಮತ್ತು ಅನೇಕ ಮಾನ್ಯ ಸದಸ್ಯರಿಗೆ ಗೊತ್ತಿದ್ದಹಾಗೆ ಕಲ್ಯಾಣ ಕಾರ್ಯಕ್ರಮಗಳ ಯೋಜನೆಗಳನ್ನು ಕಾಂಗ್ರೆಸ್ ಸರ್ಕಾರ ತೆಗೆದುಕೊಂಡು ಬಂತು. ಆವಾಗಿನಿಂದ ಸ್ವಲ್ಪ ಮಟ್ಟಿಗೆ ಈಗ ಹಳ್ಳಿಗಳಲ್ಲಿ ಉಸಿರಾಡತಕ್ಕಂತಹ ವ್ಯವಸ್ಥೆಯಾಗಿದೆ. ಅದು ಆದ ಮೇಲೆ ೨೦ ಅಂಶಗಳ ಕಾರ್ಯಕ್ರಮ ಕೂಡ ಬಂತು. ಆ ೨೦ ಅಂಶದ ಕಾರ್ಯಕ್ರಮದಲ್ಲಿ ಇವತ್ತು ಲ್ಯಾಂಡ್ ರಿಫಾರ್ಮ್ಸ್ ಆಗಲಿ, ಡೆಟ್ ರಿಲೀಫ್ ಆಕ್ಟ್ ಆಗಲಿ, ಲ್ಯಾಂಡ್ ಗ್ರ್ಯಾಂಟ್ ಆಗಲಿ ಮತ್ತು ಇನ್ನೂ ಅನೇಕ ಯೋಜನೆಗಳಿವೆ. ವೃದ್ಧಾಪ್ಯ ವೇತನ, ಇವೆಲ್ಲವನ್ನೂ ಸೇರಿ ಏನೂ ಗತಿ ಇಲ್ಲದ ನಿರ್ಗತಿಕರಿಗೆ ಸಹಾಯ ಮಾಡಬೇಕು ಎನ್ನತಕ್ಕಂತಹ ಭಾವನೆಯಿಂದ ಸರ್ಕಾರ ಅನೇಕ ಯೋಜನೆಗಳನ್ನು ಹಾಕಿಕೊಂಡು ಕೆಲಸ ಮಾಡಿಕೊಂಡು ಬಂತು.

ಒಬ್ಬ ಮಾನ್ಯ ಸದಸ್ಯರು.— ಈವಾಗ ಆ ಕೆಲಸಗಳೆಲ್ಲಾ ನಿಂತು ಹೋಗಿವೆ ಎಂಬುದು ನಿಮ್ಮ ಅಭಿಪ್ರಾಯವೇ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ಅದನ್ನು ನಿಮ್ಮ ಮನಸ್ಸಿಗೆ ನೀವೇ ಪ್ರಶ್ನೆ ಹಾಕಿಕೊಳ್ಳಿ. ನಮ್ಮ ಬಡವರ ಪರಿಸ್ಥಿತಿ ಏನಾಗಿದೆ ಅಂದರೆ, ಅವರ ಪ್ರಶ್ನೆ ಬಂದಾಗ ನಾನು ಮೊದಲೆ ಹೇಳಿದ ಹಾಗೆ ಅದಕ್ಕೆ ಈ ಕಡೆಯವರು ವಿರೋಧ ಮಾಡಬಹುದು. ಅಥವಾ ತಮ್ಮ ಕಡೆಯವರೂ ವಿರೋಧ ಮಾಡಬಹುದು. ವೆಸ್ಟೆಡ್ ಇಂಟ್ರೆಸ್ಟೆಡ್ ಕ್ಲಾಸ್ ಏನು ಇದ್ದಾರೆ ಅವರು ಎಲ್ಲ ಕಡೆ ಇದ್ದಾರೆ.

ಸ. ಪಿ. ಎಂ.

ಆದರೆ ಈವೊತ್ತು ಏನಾಗಿದೆ ಎಂದರೆ ದುರ್ದೈವದಿಂದ ಜನರಿಗೆ ಯಾವ ಸಹಾಯವೂ ಸರಿಯಾಗಿ ದೊರೆಯುತ್ತಾ ಇಲ್ಲ. ತಾವು ಅಧಿಕಾರಕ್ಕೆ ಬರುವಾಗ ಜನರಿಗೆ ಸಹಾಯ ಮಾಡುತ್ತೇವೆ, ಕಾರ್ಮಿಕರಿಗೆ ಸಹಾಯ ಮಾಡುತ್ತೇವೆ, ರೈತರಿಗೆ ಸಹಾಯ ಮಾಡುತ್ತೇವೆ, ಯಾರಿಗಾದರೂ ಕೂಡ ಕೂಲಿ ಸಿಗದೇ ಹೋದರೆ ಅವರಿಗೆ ಎರಡು ರೂಪಾಯಿ ಕೊಡುತ್ತೇವೆಂದು ಹೇಳುತ್ತಾ ಬಂದಿದ್ದೀರಿ. ತಾವು ಈಗ ಮಾಡುತ್ತಾ ಇರತಕ್ಕಂಥಾ ಕೆಲಸ ನೋಡಿದರೆ ನಿಮ್ಮಲ್ಲಿರುವ ವೆಸ್ಟೆಡ್ ಇಂಟರೆಸ್ಟ್ ನಮಗಿಂತಲೂ ಜಾಸ್ತಿಯಾಗಿದ್ದಾರೆ. ನಿಮ್ಮಲ್ಲಿ ಬಹಳ ಪವರ್‌ಫುಲ್ ಆಗಿರುವ ಜನ ಇದ್ದಾರೆ. ಇದರಿಂದ ಈವೊತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಒಂದು ಇಕ್ಕಟ್ಟಿನಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ. ಆದುದರಿಂದ ಅವರು ಯಾರಿಗೂ ಸಹ ಸಹಾಯ ಮಾಡುವುದಕ್ಕಾಗುತ್ತಿಲ್ಲ ಎಂದು ನಮ್ಮ ಮನಸ್ಸಿಗೆ ನಾವೇ ಪ್ರಶ್ನೆ ಹಾಕಿಕೊಳ್ಳಬೇಕಾಗಿದೆ. ನಾನು ಇದನ್ನು ಪ್ರೋಗ್ರೆಸಿವ್ ಅಂತ ಹೇಳುವುದಿಲ್ಲ. ಪ್ರೋಗ್ರೆಸೀವ್ ಅಂತ ಹೇಳಿದರೆ ಅದರ ಬಗ್ಗೆ ಅನೇಕ ಕಮ್ಯೂನಿಸ್ಟರೂ ಕೂಡ ಮಾತನಾಡಿದ್ದಾರೆ. ಅವರು ಮಾತನಾಡುವಾಗ ಕ್ಯಾಸ್ಟ್ ಮತ್ತು ಕ್ಲಾಸ್ ಸ್ಟ್ರಗಲ್ ಬಗ್ಗೆ ಹೇಳಿದರು. ಇದು ದುರ್ದೈವ. ಒಂದು ಕಡೆ ಜಾತಿ ಎಂದು ಬಂದ ತಕ್ಷಣ ಕ್ಲಾಸ್ ಮರೆಯುತ್ತಾರೆ. ಆದುದರಿಂದ ಈ ಕ್ಲಾಸ್ ಅನ್ನುವುದು ಏನು ಇದೆ ಅದು ಹೋಗಬೇಕು ಅನ್ನುವ ಯೋಚನೆಯೇ ಇಲ್ಲ. ನೀವು ಎಷ್ಟೇ ಪ್ರಯತ್ನ ಪಟ್ಟರೂ ಕೂಡ ಈ ಕ್ಲಾಸ್ ಎನ್ನುವುದನ್ನು ನಿರ್ಮೂಲ ಮಾಡುವುದಕ್ಕಾಗುವುದಿಲ್ಲ. ಇದನ್ನು ನಿರ್ಮೂಲ ಮಾಡುವುದಕ್ಕೆ ನಿಮ್ಮಲ್ಲಿತರತಕ್ಕಂಥಾ ಪವರ್‌ಫುಲ್ ಲಾಬಿ ಏನು ಇದೆ ಅವರು ಇದನ್ನು ಮುಂದುವರೆಸುವುದಕ್ಕೆ ಬಿಡುವುದಿಲ್ಲ. ನಮ್ಮ ಸರ್ಕಾರ ಇದ್ದಾಗ ಅನೇಕ ಹಳ್ಳಿಗಳಲ್ಲಿ ೨೦ ಅಂಶದ ಕಾರ್ಯಕ್ರಮಗಳು ಚೆನ್ನಾಗಿ ನಡೆದಿದೆ. ಬಡವರಿಗೆ ಮನೆಗಳನ್ನು ಕಟ್ಟಿಕೊಡುವ, ಒಂದು ಯೋಜನೆ ಬಗ್ಗೆ ಆಗಲಿ, ಭೂಮಿಯನ್ನು ಹಂಚುವ

ಒಂದು ಕೆಲಸವಾಗಲಿ, ಓಲ್ಡ್ ಏಜ್ ಪೆನ್‌ಷನ್ ಬಗ್ಗೆಯಾಗಲಿ ಇನ್ನು ಇತರೇ ಕೆಲವು ಯೋಜನೆಗಳು ಬಡವರ ಬಗ್ಗೆ ನಾವು ಏನೇನು ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದೆವು ಅವನ್ನೆಲ್ಲಾ ಮಾಡಿದ್ದೇವೆ. ನಾವು ಈ ಬಗ್ಗೆ ಏನೇನು ಒಳ್ಳೊಳ್ಳೆಯ ಕಾರ್ಯಕ್ರಮಗಳನ್ನು ಬಡವರ ಬಗ್ಗೆ ಹಾಕಿಕೊಂಡು ಮಾಡಿರುತ್ತೇವೋ ಅದರ ಬಗ್ಗೆ ಡೆಟ್ ರಿಲೀಫ್ ಬಗ್ಗೆ ಆಗಲಿ ಇನ್ನು ಇತರೇ ಕೆಲಸಗಳ ಬಗ್ಗೆಯಾಗಲಿ ಮಾನ್ಯ ಮಂತ್ರಿಗಳು ಒಂದು ಚೂರೂ ಮಾತನಾಡಲಿಲ್ಲಾ. ಕರ್ನಾಟಕ ಡೆಟ್ ರಿಲೀಫ್ ಬಗ್ಗೆ ಮತ್ತು ಬಡವರಿಗೆ ಭೂಮಿಯನ್ನು ಹಂಚುವ ಬಗ್ಗೆ ಎಷ್ಟು ಸಹಾಯ ಮಾಡಿದ್ದೇವೆ ಎಂದು ಹೇಳಿದರೆ ಸಾಲದು, ಆ ಬಗ್ಗೆ ಮಾನ್ಯ ಮಂತ್ರಿಗಳು ಒಂದು ಶಬ್ದವನ್ನೂ ಕೂಡ ಮಾತನಾಡಿಲ್ಲ. ಹೋಗಲಿ. ಈಗ ನಿಮ್ಮ ಸರ್ಕಾರ ಬಂದಮೇಲೆ ಲ್ಯಾಂಡ್ ಗ್ರಾಂಟ್‌ಪ್ರಕಾರ ಎಷ್ಟು ಜಮೀನನ್ನು ಬಡವರಿಗೆ ಕೊಟ್ಟಿದ್ದೀರಾ ಅದನ್ನು ಹೇಳುತ್ತೀರಾ ? ಇಲ್ಲಿರುವ ಅಂಕಿಸಂಖ್ಯೆ ನೋಡಿದರೆ ಹಿಂದಿನ ಒಂದು ಅಂಕಿಅಂಶಗಳನ್ನೆ ಕೊಟ್ಟಿದ್ದೀರಾ. ಭೂಸುಧಾರಣೆ ಬಗ್ಗೆ ಹೇಳಬೇಕಾದರೆ ಇದನ್ನು ಮರ್ಡರ್ ಮಾಡಿದ್ದೀರಿ. ತೀರ್ಥಹಳ್ಳಿಯಲ್ಲಿ ಗೇಣಿದಾರರನ್ನು ಹೇಗೆ ಮರ್ಡರ್ ಮಾಡಿದ್ದೀರಿ ಎನ್ನುವುದನ್ನು ಮಾನ್ಯ ಸದಸ್ಯರು ಈಗಾಗಲೇ ಹೇಳಿದ್ದಾರೆ. ಹೀಗೆ ಕ್ಯಾಸ್ಟ್ ಮತ್ತು ಕ್ಲಾಸ್ ಸ್ಟ್ರಗಲ್ ಬಂದಾಗ ಆವಾಗ ಕ್ಲಾಸ್ ಮರೆಯುತ್ತಾರೆ. ನಾನು ಇದರ ಬಗ್ಗೆ ಈ ರೀತಿಯಾಗಿ ಅಭಿಪ್ರಾಯ ಪಡುತ್ತೇನೆ.

ಶ್ರೀ ಕೆ. ಬಿ. ಮಲ್ಲಪ್ಪ.—ಮಾನ್ಯ ಖರ್ಗೆಯವರು ಮಾತನಾಡುವಾಗ ನಾನು ಕೇಳಿದೆ. ಅವರು ಕ್ಯಾಸ್ಟ್ ವಿಚಾರ ಬಂದಾಗ ಕ್ಲಾಸ್‌ಅನ್ನು ಮರೆಯುತ್ತಾರೆ ಅನ್ನುವ ಅಭಿಪ್ರಾಯ ಪಡುತ್ತಾರೆ. ಈ ಬಗ್ಗೆ ನಾನು ಹೇಳುವುದೇನೆಂದರೆ ಈ ಕ್ಲಾಸ್‌ನಲ್ಲೇ ತಾವು ಎರಡು ವರ್ಗ ಮಾಡಿದ್ದೀರಿ. ಬಡವರು ಮತ್ತು ದೊಡ್ಡವರು ಅಂತ ಮಾಡಿದ್ದೀರಿ. ಏನೂ ಇಲ್ಲದೇ ಇದ್ದವರು ಬಡವರು ಅಂತಲೂ, ಇದ್ದವರು ದೊಡ್ಡವರೂ ಅಂತಲೂ ಹೀಗೆಂದು ನಾನು ಅಭಿಪ್ರಾಯಪಡುತ್ತೇನೆ. ಈ ಕ್ಲಾಸ್ ಅನ್ನುವ ಘರ್ಷಣೆ ಬಂದಾಗ ಈಗ ರಿಸರ್ವೇಷನ್ ಅಂತ ಏನು ಇದೆ ಅದನ್ನು ಎಲ್ಲಾ ಕ್ಲಾಸ್‌ಗೂ ಅನ್ವಯಿಸುವ ಹಾಗೆ ಏತಕ್ಕೆ ಮಾಡಬಾರದು ? ನಾನು ಹೇಳಬೇಕಾದರೆ ಎಲ್ಲ ಕೋಮಿನಲ್ಲೂ ಕೂಡ ಬಡವರು ಇದ್ದಾರೆ ಎಂದು ತಿಳಿದುಕೊಂಡಾಗ ಅವರಿಗೂ ಸಹ ಅನುಕೂಲವಾಗುವಂತೆ ಈ ಒಂದು ರಿಸರ್ವೇಷನ್ ಅನ್ನು ತೆಗೆದು ಹಾಕುವುದಕ್ಕೆ ಮನಸ್ಸು ಮಾಡುತ್ತೀರಾ ? ಅದಕ್ಕೆ ತಾವು ಸಹಾಯ ಮಾಡುತ್ತೀರಾ ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ತಾವು ಹೇಳಿದ ಹಾಗೆ ಈ ದೇಶದಲ್ಲಿ ಸಾಮಾಜಿಕ ಸಮಾನತೆ ಇರಬೇಕು ಅನ್ನುವುದನ್ನು ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ನೀವು ಯಾವತ್ತು ಇದನ್ನು ಒಪ್ಪಿಕೊಳ್ಳುತ್ತೀರೋ ಅದೇ ದಿವಸವೇ ಈ ರಿಸರ್ವೇಷನ್ ತೆಗೆದುಹಾಕಿ ಬೇಕಾಗಿಲ್ಲ ನಾನೂ ಸಹ ಒಪ್ಪಿಕೊಳ್ಳುತ್ತೇನೆ. ಆದರೆ ಈವೊತ್ತಿನ ದಿವಸ ಏನಾಗಿದೆ ಎಂದರೆ ನಿಮ್ಮ ಮನೆಗೆ ನಾವು ಬಂದರೆ ಕುಡಿಯಲು ನೀರೇ ಕೊಡುವುದಿಲ್ಲ ಗುಡಿಗೆ ಹೋದರೆ ದರ್ಶನ ಸಿಕ್ಕುವುದಿಲ್ಲ. ದೂರ ಇಡುತ್ತೀರಿ ಅದೇ ಮಲ್ಲಪ್ಪನವರು ಬಂದರೆ ಅವರಿಗೆ ಸಲಾಂ ಹೊಡೆಯುತ್ತಾರೆ. ನಮಸ್ಕಾರ ಮಾಡುತ್ತಾರೆ, ಮನೆಗೆ ಕರೆದುಕೊಂಡು ಹೋಗಿ ನೀರು ಕೊಡುತ್ತಾರೆ. ಆದುದರಿಂದ ನಾನು ಹೇಳುವುದೇನೆಂದರೆ ಈ ಸಾಮಾಜಿಕ ಸಮಾನತೆ ಎಲ್ಲಿಯವರೆಗೆ ಈ ದೇಶದಲ್ಲಿ ಬರುವುದಿಲ್ಲವೋ ಅದು ಆರ್ಥಿಕವಾಗಿಯಾಗಲಿ, ಯಾವುದೇ ಆಗಲಿ ಅದು ಬರುವವರೆಗೆ ಈ ಒಂದು ರಿಸರ್ವೇಷನ್ ಇರಲಿ ಎಂದು ಅವಕಾಶ ಮಾಡಿಕೊಂಡಿರುವುದೇ ವಿನಾಃ ಈ ರಿಸರ್ವೇಷನ್ ಖಾಯಂ ಆಗಿ ಇರಬೇಕು ಎನ್ನುವುದನ್ನು ನಾನು ಸಹ ಒಪ್ಪುವುದಿಲ್ಲ. ನಮಗೆ ಬೇಕಾಗಿಯೂ ಇಲ್ಲ. ಈ ಜನಾಂಗ ಯಾವಾಗ ಮುಂದುವರೆದ ಜನಾಂಗದ ರೀತಿ ಒಂದು ಸಮಾನತೆಗೆ ಬರುತ್ತದೋ ಅಲ್ಲಿಯವರೆಗೆ ನಾವು ಕಾಯಬೇಕಾಗುತ್ತದೆ. ನಾನು ಸಹ ಹೇಳುತ್ತೇನೆ ದೇಶದಲ್ಲಿ ಎಲ್ಲರಲ್ಲೂ ಸಹ ಒಂದು ಸಾಮಾಜಿಕ ಸಮಾನತೆ ಬರಬೇಕೆಂದು ತೀರ್ಮಾನ ಮಾಡಿಕೊಂಡಿರುವುದು ತಮಗೆ ಗೊತ್ತೇ ಇದೆ. ಶ್ರೀಮಾನ್ ಧರ್ಮಸಿಂಗ್‌ರವರು ಹೇಳಿದ ಹಾಗೆ ಇದರಲ್ಲಿ ಈ ಒಂದು ಹುಳವನ್ನು ಅಂದರೆ ನಾವು ಏನು ಒಂದು ಸಂಕುಚಿತ ಭಾವನೆಯನ್ನು ಇಟ್ಟುಕೊಂಡಿದ್ದೇವೋ ಅದನ್ನು ತೆಗೆದುಹಾಕಬೇಕು ಅಂತ ಎಲ್ಲರಲ್ಲೂ ಭಾವನೆ ಬರುವುದಾದರೆ ಆವಾಗ ಮಾತ್ರ ಇದನ್ನು ಹೋಗಲಾಡಿಸುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಕೆ. ಬಿ. ಮಲ್ಲಪ್ಪ.—ನಾವು ಅಧಿಕಾರಕ್ಕೆ ಬಂದು ೯ ತಿಂಗಳಾಯಿತು, ಅಷ್ಟೆ. ೩೩ ವರ್ಷದಿಂದ ಏನು ನಡೆಯುತ್ತಾ ಇತ್ತು, ಅದನ್ನು ಜನ ಮೆಚ್ಚುತ್ತಾರೋ ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಾನೇನೂ ಅದಕ್ಕೆ ಟೈಂ ಹೇಳಿಲ್ಲ. ೯ ತಿಂಗಳಲ್ಲಿ ಅನ್ನುವ ಕಾಲ ಹೇಳಿಲ್ಲ. ನೀವೂ ಸಹ ಇಲ್ಲೂ ಇದ್ದೀರಿ, ಈಗ ಅಲ್ಲಿ ಇದ್ದೀರಿ. ಎಷ್ಟೋ ಜನ ಹಾಗೆಯೇ ಈ ಕಡೆಯವರು ಅಲ್ಲಿ

ಇದ್ದಾರೆ, ಆ ಕಡೆಯುವರು ಇಲ್ಲಿ ಇದ್ದಾರೆ. ಅದು ಮುಖ್ಯವಲ್ಲ. ಈವೊತ್ತು ಏನಾಗಿದೆ ಎಂದರೆ ನಿಜವಾಗಲೂ ಹೇಳಬೇಕಾದರೆ ತಮ್ಮ ತಮ್ಮ ಕ್ಷೇತ್ರದಲ್ಲಿ ಹೋದಾಗ ಯಾರ್ಯಾರು ನಿಷ್ಪಕ್ಷಪಾತವಾಗಿ ಕೆಲಸ ಮಾಡಿದ್ದಾರೆ ಅನ್ನುವುದನ್ನು ಯಾರೇ ಹೋಗಿ ಕೇಳಲಿ ಅಲ್ಲಿ ಜನರು ಏನು ಹೇಳುತ್ತಾರೆ ಎನ್ನುವುದರಿಂದ ಗೊತ್ತಾಗುತ್ತದೆ. ಈವೊತ್ತು ಒಂದು ಕೇಸು ಸುಪ್ರೀಂ ಕೋರ್ಟಿಗೆ ಹೋಗಬೇಕಾಗಿದ್ದುದು ಹೋಗಲಿಲ್ಲ. ಆ ವಿಷಯು ತಮಗೆ ಗೊತ್ತೇ ಇದೆ. ನಾನೇನೂ ಬೇರೆ ಹೇಳಬೇಕಾಗಿಲ್ಲ. ಈವೊತ್ತು ಈ ಒಂದು ದಿಶೆಯಲ್ಲಿ ಯಾವರೀತಿ ಬಿಲ್ಡ್ ಆಫ್ ಆಗುತ್ತಾ ಇದೆ ಅನ್ನುವುದೂ ಸಹ ತಮಗೆ ಗೊತ್ತೇ ಇದೆ. ಈವೊತ್ತು ಅನೇಕ ಕಡೆಗಳಲ್ಲಿ ಗೇಣಿದಾರರಿಗೆ, ದುರ್ಬಲವರ್ಗದವರಿಗೆ ಒಂದು ಸಂರಕ್ಷಣೆ ಇಲ್ಲ. ಗೇಣಿದಾರರ ಬಗ್ಗೆ ಎಷ್ಟು ಅರ್ಜಿಗಳು ಬಂದಿವೆ ? ಎಷ್ಟು ಅರ್ಜಿಗಳ ಮೇಲೆ ತಕ್ಕ ಕಾರ್ಯಕ್ರಮ ಕೈಗೊಂಡಿದ್ದೀರಿ ಅವೆಲ್ಲದರ ಬಗ್ಗೆ ಹೇಳುವುದಾದರೆ ನನಗೆ ತಿಳಿದವಟ್ಟಿಗೆ ಅದರ ವಿಚಾರದಲ್ಲಿ ಯಾವ ಕಾರ್ಯಕ್ರಮವನ್ನೂ ಕೂಡ ತೆಗೆದುಕೊಂಡಿಲ್ಲ. ಆ ಬಗ್ಗೆ ಏನು ಒಂದು ಕೆಲಸವನ್ನೂ ಮಾಡುತ್ತಾ ಇಲ್ಲ ಎಂದು ಹೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಇಂತಹ ಅಪಾದನೆಗಳನ್ನು ಮಾಡುವಾಗ ಯಾವುದಾದರೂ ಕೂಡ ಕಾಂಕ್ರೀಟ್ ಆಗಿ ಒಂದು ನಿದರ್ಶನ ಹೇಳಿ ಮಾತನಾಡಿದರೆ ಅದಕ್ಕೆ ಉತ್ತರ ಕೊಡುವುದಕ್ಕೂ ಸಹ ಸಾಧ್ಯವಾಗುತ್ತದೆ, ಎಲ್ಲಿ ಯಾವ ಗೇಣಿದಾರರಿಗೆ ಅನಾನುಕೂಲವಾಗಿದೆ. ಯಾರು ಶಾಮೀಲಾಗಿದ್ದಾರೆ ಅದರ ಪೂರ್ಣ ವಿವರಣೆಯನ್ನು ಈ ಸಭೆಯಲ್ಲಿ ಹೇಳಿದರೆ ನಾವೂ ಸಹ ಅದಕ್ಕೆ ಪೂರ್ಣ ಉತ್ತರ ಕೊಡಬಹುದು. ಹಾಗಿಲ್ಲದೆ ಸುಮ್ಮನೆ ಹೀಗೆ ಮಾತನಾಡಿಕೊಂಡು ಹೋದರೆ ಅದನ್ನು ನಾವು ಜನರಲ್ ರೀಮಾರ್ಕ್ಸ್ ಅಂತ ಹೇಳಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ತಮಗೆ ಒಂದು ಉದಾಹರಣೆ ಹೇಳಬೇಕಾದರೆ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಅಗ್ರಿಕಲ್ಚರ್‌ನಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಜೋಯಿಸ್ ಎನ್ನುವವರು ಗೇಣಿದಾರರ ಪರವಾಗಿ ಕೆಲಸ ಮಾಡುತ್ತಿದ್ದ ಎಂದು, ಅವರಿಗೆ ಸಪೋರ್ಟ ಮಾಡತ್ತಿದ್ದ ಎಂದು ಆತನನ್ನು ತುಕ್ಕಡಿ, ತುಕ್ಕಡಿ ಮಾಡಿದರು. ಈ ಬಗ್ಗೆ ನಾನು ಒಂದು ಕಾಲಿಂಗ್ ಅಟೆನ್ಷನ್ ಕೂಡ ಕೊಟ್ಟಿದ್ದೆ. ಅದಕ್ಕೆ ಉತ್ತರವೂ ಸಹ ಬಂದಿದೆ. ಹಾಗೆಯೇ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಒಂದು ಮರ್ಡರ್ ಆಯಿತು, ಆ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ತಮಗೆ ಇನ್ನೂ ಬೇಕು ಅನ್ನುವುದಾದರೆ ಇವೆಲ್ಲದರ ಒಂದು ಲಿಸ್ಟನ್ನು ಮಾಡಿಕೊಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ತಾವು, ಅವರನ್ನು ಗೇಣಿದಾರರ ಪರವಾಗಿ ಸಪೋರ್ಟ ಮಾಡಿದ್ದ ಅಂತ ಹೇಳಿದಿರಲ್ಲ ಅದನ್ನು ತಾವೇನೂ ಹೇಳಬೇಕಾಗಿಲ್ಲ. ನಾನು ಕೇಳುವುದು ಇಷ್ಟೆ, ಅವರೇನಾದರೂ ಗೇಣಿದಾರರ ಪರವಾಗಿ ವಕಾಲತ್ತು ವಹಿಸಿದ್ದರೊ ? ಅಥವಾ ಟ್ರಿಬ್ಯುನಲ್‌ನಲ್ಲಿ ಅವಾರ್ಡ ಕೊಡಿಸುವುದಕ್ಕೇನಾದರೂ ಹೊರಟಿದ್ದರೋ ? ಇಂಥಾದ್ದರ ಬಗ್ಗೆ ಏನಾದರೂ ಘರ್ಷಣೆ ನಡೆದಿದ್ದರೆ ತಿಳಿಸಿ ಉತ್ತರ ಹೇಳುತ್ತೇನೆ. ಯಾವುದಾದರೂ ಕೂಡ ಇಂಥಾ ಕಡೆ ಹೀಗೆ ಆಗಿದೆ, ಹಾಗಾಗಿದೆ ಎಂದು ಹೇಳುವುದನ್ನು ಬಿಟ್ಟು ಇಂಥಾ ಗೇಣಿದಾರರಿಗೆ ಇಂಥಿಂಥ ತೊಂದರೆಯಾಗಿದೆ ಎಂದು ಅವರ ಹೆಸರು, ವಿವರಗಳನ್ನು ಕೊಟ್ಟರೆ, ಅದರಲ್ಲಿ ನಿರ್ದಿಷ್ಟವಾದ ನಿದರ್ಶನಗಳನ್ನು ತೋರಿಸಿದರೆ, ಇಂಥಾ ಗೇಣಿದಾರರಿಗೆ ಇಂತಿಂಥಾ ಅನಾನುಕೂಲವಾಗಿದೆ, ಇಂಥಾ ಕಡೆಯಲ್ಲಿ ಇಂಥಾ ತೊಂದರೆಯಾಗಿದೆ ಅಂತ ಹೇಳಿದರೆ ಅದಕ್ಕೆ ಉತ್ತರ ಕೊಡಬಹುದು. ಇಲ್ಲದೇ ಹೋದರೆ ಅದನ್ನು ಜನರಲ್ ರೀಮಾರ್ಕ್ಸ್ ಅಂತ ತಿಳಿದುಕೊಳ್ಳಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅಧ್ಯಕ್ಷರೇ, ಈಗ ಒಂದು ತಿಂಗಳ ಹಿಂದೆ ಒಬ್ಬ ಗೇಣಿದಾರನ ಮೇಲೆ ಏನು ತೊಂದರೆ ಕೊಟ್ಟರು ಅದರ ಬಗ್ಗೆ ಈ ಸದನದ ಸಮಿತಿ ವಿಚಾರಣೆ ಮಾಡಿ ಒಂದು ರಿಪೋರ್ಟ್ ಕೂಡ ಕೊಟ್ಟಿದ್ದಾರೆ. ಇದನ್ನು ಯಾರು ಇನ್‌ವೆಸ್ಟಿಗೇಷನ್ ಮಾಡಿದರು ಅವರು ಆತನ ಹೆಸರು ವಿವರಗಳನ್ನೆಲ್ಲಾ ನಮೂದು ಮಾಡಿದ್ದಾರೆ. ತಮಗೆ ನಾನು ಅವರ ಹೆಸರನ್ನು ಹೇಳಬೇಕಾದರೆ ಒಬ್ಬರು ಶಾಮರಾವ್ ಬಾಳ್ವೆ ಅಂತ. ಅವರ ಬಗ್ಗೆ ಇನ್‌ವೆಸ್ಟಿಗೇಷನ್ ನಡೆದಿದ್ದರೂ ಸಹ ಆತನನ್ನು ಸೆಕ್ಷನ್ ೧೦೭ರ ಪ್ರಕಾರ ರಿಲೀಸ್ ಮಾಡಿದ್ದಾರೆ. ಇದರ ಬಗ್ಗೆ ರಿಪೋರ್ಟ ಇದ್ದರೂ ಸಹ ತಾವು ಇದುವರೆಗೂ ಕೂಡ ಏನೂ ಆಕ್ಷನ್ ತೆಗೆದುಕೊಂಡಿಲ್ಲ. ಅಲ್ಲದೆ ಅಲ್ಲಿರತಕ್ಕಂಥಾ ಸಬ್ ಇನ್‌ಸ್ಪೆಕ್ಟರ ಮೇಲಾಗಲಿ ಇನ್‌ಸ್ಪೆಕ್ಟರ್ ಮೇಲಾಗಲಿ ಇನ್ನೂ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲಾ ಎಂದು ಹೇಳುತ್ತೇನೆ. ಏಕೆ ತೆಗೆದು ಕೊಂಡಿಲ್ಲ ? ತಮ್ಮ ರಿಪೋರ್ಟನ್ನು ಕೊಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳುತ್ತೇವೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ತಾವು ಕೆಲವು ವಿಷಯಗಳಲ್ಲಿ ಹೊರಗಡೆ ಇದ್ದಾಗ ಒಪ್ಪಿಕೊಳ್ಳುತ್ತೀರಿ, ಒಳಗಡೆ ಇದ್ದಾಗ ಒಪ್ಪಿಕೊಳ್ಳುವುದಿಲ್ಲ. ಅನೇಕ ಕಡೆಗಳಲ್ಲಿ ಅನ್ಯಾಯ ನಡೆದಿದೆ, ನಡೆಯುತ್ತಿದೆ ಎಂದು ನಾವು ಹೇಳುತ್ತಿದ್ದೇವೆ. ತಾವು ೨೦ ಅಂಶದ ಕಾರ್ಯಕ್ರಮಗಳನ್ನು ಕೈಬಿಟ್ಟಿದ್ದೀರಿ. ಅದನ್ನು ಸರಿಯಾದ ರೀತಿಯಲ್ಲಿ ಇಂಪ್ಲಿಮೆಂಟ್ ಮಾಡುತ್ತಿಲ್ಲ. ತಾಲ್ಲೂಕು ಲೆವೆಲ್‌ನಲ್ಲಿ ಜಿಲ್ಲಾ ಲೆವೆಲ್‌ನಲ್ಲಿ ಇದರ ಸಭೆಗಳೂ ಸಹ ನಡೆದಿಲ್ಲ. ಈ ಇಪ್ಪತ್ತು ಅಂಶದ ಕಾರ್ಯಕ್ರಮವನ್ನು ನಮ್ಮ ಪ್ರಧಾನ ಮಂತ್ರಿಗಳಿಂದ ಜಾರಿಮಾಡಲ್ಪಟ್ಟಿದ್ದು ಎಂದು ಅದನ್ನು ನಿಲ್ಲಿಸಿದರೆ ಅದು ತಪ್ಪಾಗುತ್ತದೆ. ಏಕೆಂದರೆ, ಇದರಲ್ಲಿ ವಿಶೇಷವಾಗಿ ಎಕನಾಮಿಕ್ ಪ್ರೋಗ್ರಾಂಸ್ ಇದು ಬಡವರಿಗೆ ಹೆಚ್ಚಿನ ರೀತಿಯಲ್ಲಿ ಅನುಕೂಲವಾಗುತ್ತಿತ್ತು. ನೀವು ಇದಕ್ಕೆ ಯಾವ ಹೆಸರನ್ನಾದರೂ ಇಟ್ಟುಕೊಳ್ಳಿ ಇದನ್ನು ಮನಸ್ಸಿಟ್ಟು ಕೆಲಸ ಮಾಡಬೇಕು. ಕೆಲಸ ಮಾಡದೇ ಹೋದರೆ ಖಂಡಿತವಾಗಿಯೂ ಬಡ ಜನರಿಗೆ ತೊಂದರೆಯಾಗುತ್ತದೆ. ಇನ್ನೊಂದು ನಾನು ಇಲ್ಲಿ ಪ್ರಸ್ತಾಪಮಾಡಬೇಕಾಗಿದೆ. ವಿದ್ಯಾ ಇಲಾಖೆಯ ಬೇಡಿಕೆಗಳು ಬಂದಾಗ ಇದನ್ನು ಹೇಳಿದ್ದೆ. ಈಗಲೂ ಪ್ರಸ್ತಾಪಮಾಡಬೇಕಾಗಿದೆ. ಮಾನ್ಯ ದೇವೇಗೌಡರು ತಮ್ಮ ಖಾತೆಗೆ ಹೆಚ್ಚಿನ ದುಡ್ಡನ್ನು ತೆಗೆದುಕೊಂಡಿದ್ದಾರೆ ಆದರೆ ಬಡವರಿಗೆ ಇರತಕ್ಕ ಒಂದು ಆಸೆ ಎಂದರೆ ಶಿಕ್ಷಣ. ಇಲಾಖೆಗೆ ತಾವು ಹೆಚ್ಚಿನ ಹಣವನ್ನು ಕೊಟ್ಟಿಲ್ಲ. ಹರಿಜನರು ಶಿಕ್ಷಣವನ್ನು ಪಡೆದರೆ ಸಮಾಜದಲ್ಲಿ ಅವರು ಮುಂದೆ ಬಂದಂತೆ ಆಗುತ್ತದೆ. ತಾವು ಅವರಿಗೆ ಮನೆಗಳನ್ನು ಕೊಡಬಹುದು, ಸರಿಯಾದ ಜಾಗವನ್ನು ಕೊಡಬಹುದು, ಭೂಮಿ ಕೊಡಬಹುದು, ಅನೇಕ ರೀತಿಯಿಂದಲೂ ಅವರಿಗೆ ಸಹಾಯವನ್ನು ಮಾಡಬಹುದು, ಆದರೆ ಅವರಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡದಿದ್ದರೆ ಇವೆಲ್ಲಾ ಕೊಟ್ಟೂ ಸಹ ಏನು ಪ್ರಯೋಜನ ಎಂದು ನಾನು ಕೇಳಬೇಕಾಗಿದೆ ? ಈ ಮಕ್ಕಳಿಗೆ ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡುವುದಕ್ಕೋಸ್ಕರ ಮಿಡ್ ಡೇ ಮೀಲ್ಸ್ ಸ್ಕೀಂಅನ್ನು ದೇಶದಲ್ಲಿ ಜಾರಿಗೆ ತಂದಿದ್ದಾರೆ. ಇದನ್ನು ಸರ್ಕಾರದವರ ನಿಲ್ಲಿಸುವುದಾದರೆ ಖಂಡಿತವಾಗಿಯೂ ಈ ಮಕ್ಕಳು ಮುಂದೆ ಬರುವುದಕ್ಕೆ ಸಾಧ್ಯವಿಲ್ಲ. ಸಮಾಜದಲ್ಲಿ ಶೈಕ್ಷಣಿಕ ಅಸಮಾನತೆ ಇದೆ ಅದನ್ನು ಕೂಡಾ ತೆಗೆದುಹಾಕುವುದಕ್ಕೆ ಸಾಧ್ಯವಾಗುವುದಿಲ್ಲ, ಇರುವಂಥ ವ್ಯತ್ಯಾಸವನ್ನೂ ಸಹ ತಾವು ಕಡಿಮೆ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ತಾವು ಶಿಕ್ಷಣ ಇಲಾಖೆಯ ಅಲಾಟ್‌ಮೆಂಟ್‌ನಲ್ಲಿ ಹೆಚ್ಚಿನ ಹಣವನ್ನು ಮಿಡ್ ಡೇ ಸ್ಕೀಂಗೆ ಕೊಡಬೇಕು ಎಂದು ನಾನು ಹೇಳುತ್ತೇನೆ. ಇದೊಂದೇ ಅವರಿಗೆ ಒಳ್ಳೆಯ ಜನತೆಯನ್ನಾಗಿ ಮಾಡುವುದಕ್ಕೆ ಅಸ್ತ್ರ ಎಂದು ನಾನು ಭಾವಿಸಿದ್ದೇನೆ.

ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್ ಕೂಡ ನಮ್ಮ ಮಾನ್ಯ ಮುಖ್ಯ ಮಂತ್ರಿಗಳಿಗೆ ಬರುತ್ತದೆ. ತಾವು ಅನೇಕ ಜಿಲ್ಲೆಗಳಲ್ಲಿ ಟೂರ್ ಮಾಡಿರ ಬಹುದು. ಅನೇಕ ಜಿಲ್ಲಾಧಿಕಾರಿಗಳ ಕಛೇರಿಗಳು, ತಾಲ್ಲೂಕು ಆಫೀಸ್‌ಗಳು ಮತ್ತು ಅಸಿಸ್ಟೆಂಟ್ ಕಮಿಷನರ್ ಅವರ ಆಫೀಸ್‌ಗಳು ಸರಿಯಾದ ಕಟ್ಟಡ ಇಲ್ಲದೆ ಮಳೆ ಬಂದಾಗ ಅವು ಸೋರುತ್ತಿವೆ. ಅದಕ್ಕೆ ನಾವು ಅಧಿಕಾರದಲ್ಲಿದ್ದಾಗ ಐದು ಜಿಲ್ಲಾಧಿಕಾರಿಗಳ ಕಛೇರಿಗಳನ್ನು ಸೇರಿಸಿ ಒಂದು ಆಫೀಸ್‌ಕಾಂಪ್ಲೆಕ್ಸ್ ಮಾಡಬೇಕು ಎಂದು ಹೇಳಿ ಬಡ್ಜೆಟ್ಟಿನಲ್ಲಿಯೂ ಕೂಡ ಪ್ರಾವಿಷನ್ ಮಾಡಿದ್ದೇವೆ. ಆದರೆ ತಾವು ಇನ್ನೂ ಆ ಕೆಲಸಗಳನ್ನು ಪ್ರಾರಂಭಮಾಡಿಲ್ಲ. ಗುಲ್ಬರ್ಗದಲ್ಲಿ, ತುಮಕೂರಿನಲ್ಲಿ, ಮಂಗಳೂರಿನಲ್ಲಿ ಮತ್ತು ಬೆಂಗಳೂರಿನಲ್ಲಿ. ಬೆಂಗಳೂರಿನಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯ ಬಗ್ಗೆ ಪತ್ರಿಕೆಯಲ್ಲಿ ಬಂದಿದ್ದನ್ನು ನಾವು ಓದಿದ್ದೇವೆ ಆ ಕಟ್ಟಡ ಅಪಾಯದ ಸ್ಥಿತಿಯಲ್ಲಿದೆ ಅಲ್ಲಿಯ ನೌಕರರು ತಾವು ಕೂತು ಕೆಲಸ ಮಾಡುವುದಿಲ್ಲವೆಂದು ಬಾಯ್ಕಾಟ್ ಮಾಡಿ ಹೊರಗಡೆ ಬಂದಿದ್ದುದು ಪತ್ರಿಕೆಯಲ್ಲಿ ಬಂದಿದೆ ಅಲ್ಲಿ ಈ ಕಾರಣದಿಂದಲೇ ನಾವು ಈ ಐದು ಜಿಲ್ಲಾಧಿಕಾರಿಗಳ ಕಟ್ಟಡಗಳನ್ನು ಕಟ್ಟುವುದಕ್ಕೆ ಪ್ರಾವಿಷನ್ ಮಾಡಿ ಹಣವನ್ನು ಇಟ್ಟಿದ್ದೆವು ಆದರೆ ಇನ್ನೂ ಕೂಡ ಮೂರು ನಾಲ್ಕು ಕಡೆಗಳಲ್ಲಿ ಕೆಲಸಗಳು ಪ್ರಾರಂಭವಾಗಿಲ್ಲ. ಯಾವಾಗ ಈ ಕೆಲಸಗಳನ್ನು ಪ್ರಾರಂಭ ಮಾಡುತ್ತೀರಿ ?

ಆಮೇಲೆ ಜಿಲ್ಲೆಯ ಸಂಪೂರ್ಣ ಅಧಿಕಾರವನ್ನು ನಡೆಸತಕ್ಕವರು ಜಿಲ್ಲಾಧಿಕಾರಿಗಳು ಅವರ ಕೈ ಕೆಳಗೆ ಅಸಿಸ್ಟೆಂಟ್ ಕಮಿಷನರ್ ಅವರು ಮತ್ತು ತಹಸೀಲ್ದಾರರು ಇರುತ್ತಾರೆ. ಜಿಲ್ಲಾಧಿಕಾರಿಗಳು ಯಾವುದೇ ಕೆಲಸವನ್ನು ರಿವ್ಯೂ ಮಾಡಬೇಕಾದರೆ ಅವರಿಗೆ ಇರುವಂಥ ಫರ್ನಿಚರ್ಸ್ ಇಲ್ಲದೇ ಹೋದರೆ ಅವರು ಕುಳಿತು ಕೆಲಸ ಮಾಡುವುದಾದರೂ ಹೇಗೆ ? ನಾವು ಈ ಕೆಲಸಗಳನ್ನು ಪ್ರಾರಂಭ ಮಾಡಬೇಕು ಎಂದು ಹೇಳಿದ್ದರೂ ಸಹ ತಾವು ಪ್ರಾರಂಭಮಾಡಿಲ್ಲ.

ಆಮೇಲೆ, ವಿಲೇಜ್ ಎಲೆಕ್ಟ್ರಿಫಿಕೇಷನ್ ಗೋಸ್ಕರ ಕೆ.ಇ.ಬಿ. ಯವರಿಗೆ ಪೋಲ್ಸ್ ಬೇಕಾಗುತ್ತದೆ ಅದಕ್ಕೆ ಒಂದು ಸಣ್ಣ ಪೋಲ್ಸ್ ಫ್ಯಾಕ್ಟರಿಯನ್ನು ಸಹ ನಾವು ಸ್ಯಾಂಕ್ಷನ್ ಮಾಡಿದ್ದೇವೆ. ಸ್ಯಾಂಕ್ಷನ್ ಮಾಡಿದ್ದರೂ ಒಬ್ಬ ಮಂತ್ರಿಗಳಿಗೆ ಸಂಬಂಧಪಟ್ಟವರು ಕೇಳಿಕೊಂಡಿಲ್ಲ ಎನ್ನತಕ್ಕ ದೃಷ್ಟಿಯಿಂದ ಅವನಿಗೆ ನಾನಾ ರೀತಿಯ ಕಿರುಕುಳ ಕೊಟ್ಟು ಫ್ಯಾಕ್ಟರಿಯನ್ನೇ ಕಿತ್ತು ಹಾಕಿಸಿದರು. ನಂತರ ತಮಗೆ ಬೇಕಾದ ಕೆಲವು ಜನರನ್ನು ಕರೆಯಿಸಿ ಒಂದು ಫರ್ಮ್ ರಿಜಿಸ್ಟರ್ ಮಾಡಿಸಿ ಕೆ.ಇ.ಬಿ. ಗೆ ಅಪ್ಲಿಕೇಷನ್ ಹಾಕಿಸಿ ಇಂಥ ವರಿಗೆ ಆರ್ಡರ್ ಕೊಡಬೇಕು ಎಂದು ಒಬ್ಬ ಮಂತ್ರಿಗಳು ಕೆ.ಇ.ಬಿ. ಯವರಿಗೆ ಪೋನ್ ಮಾಡಿದ್ದಾರೆ. ಈ ರೀತಿಯಾದಂಥ ಡಿಸ್ಕ್ರಿಮಿನೇಷನ್ ನಾವು ಯಾರಿಗೂ ಮಾಡಲಿಲ್ಲ.

ಒಬ್ಬ ಮಾನ್ಯ ಸದಸ್ಯರು .—ಆ ಮಂತ್ರಿಗಳ ಹೆಸರನ್ನು ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ .—ಮಾನ್ಯ ವಿಶ್ವನಾಥರೆಡ್ಡಿ ಮುದ್ನಾಳ್ ಅವರು ರೂರಲ್ ಎಲೆಕ್ಟ್ರಿಫಿಕೇಷನ್ ಸ್ಕೀಂನಲ್ಲಿ ಕೆ.ಇ.ಬಿ. ಯವರಿಗೆ ಆರ್.ಸಿ.ಸಿ.ಪೋಲ್ಸ್ ಮಾಡಿ ಕೊಡುವುದಕ್ಕೆ ಈ ಒಂದು ಫ್ಯಾಕ್ಟರಿಯನ್ನು ಹಾಕಿದ್ದರು. ಇವರು ಬಂದು ಮಂತ್ರಿಗಳನ್ನು ಕೇಳಿಕೊಂಡಿಲ್ಲ, ಮತ್ತು ಇವರು ವೀರ ಶೈವ ವಿಶ್ವಕಲ್ಯಾಣಕ್ಕೆ, ವೀರಶೈವ ಸಮಾಜಕ್ಕೆ ಚಂದ ಕೊಡಲಿಲ್ಲ ಎಂದು ಈ ಫ್ಯಾಕ್ಟರಿಯನ್ನು ಕಿತ್ತು ಹಾಕಿಸಿದರು. ನಮ್ಮ ರಾಜ್ಯದಲ್ಲಿ ಯಾರು ಬಂದು ಫ್ಯಾಕ್ಟರಿ ಹಾಕುತ್ತಾರೆ ಎಂದು ಎ.ಸಿ.ಯವರನ್ನು ಕರೆಯಿಸಿ ನೋ ಅಬ್ಜೆಕ್ಷನ್ ನಾನ್ ಅಗ್ರಿಕಲ್ಚರಲ್ ಲ್ಯಾಂಡ್ ಇದು ಯಾವುದು ಎಂದು ನೋಡಿ ತೆಗೆದು ಹಾಕಿ ಎಂದು ಹೇಳಿದ್ದಾರೆ. ಅವರು ಈಗಾಗಲೇ ೨–೩ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿಕೊಂಡಿ ದ್ದಾರೆ. ತಾವು ಸದನದ ಒಂದು ಕಮಿಟಿಯನ್ನು ಅಲ್ಲಿ ಕಳುಹಿಸಿ ನೋಡಿ. ನಾನು ಇಲ್ಲಿ ಕುಳಿತಿರುತ್ತೇನೆ. ವೈರ್‌ಲೆಸ್ ಮೆಸೇಜ್ ತರಿಸಿ ನೋಡಿ. ಅಲ್ಲಿ ಅವರು ಹಾಕಿದಂಥ ಕಂಬ, ಗಿಂಬ ಅಲ್ಲೇ ಇನ್ನೂ ಇವೆ. ಆ ಫರ್ಮ್ ಹೆಸರು ನಟರಾಜ್ ಫರ್ಮ್. ಹಿಂದುಳಿದ ಭಾಗಕ್ಕೆ ಸಹಾಯ ಮಾಡತಕ್ಕವರು ಇಲ್ಲಿಗೆ ಬಂದು ಮಾಡಿದ್ದು ಏನು ?

ಶ್ರೀ ಎಚ್. ಡಿ. ದೇವೇಗೌಡ .—ಯಾವ ಕಾರಣದಿಂದ ಇನ್ನೂ ಆ ಕೆಲಸ ವೇಗದಲ್ಲಿ ಹೋಗಿಲ್ಲ ಎನ್ನತಕ್ಕದ್ದರ ಬಗ್ಗೆ ವಿವರಣೆಯನ್ನು ನಾಳೆ ದಿವಸ ಕೊಡುತ್ತೇವೆ. ತಾವು ಶ್ರೀಮಾನ್ ವಿಶ್ವನಾಥರೆಡ್ಡಿ ಯವರ ಮೇಲೆ ರಾಜಕೀಯ ಮಾಡುವುದಕ್ಕೆ ಹೋದರೆ ಹೇಗೆ ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ—ನಾವು ಅಧಿಕಾರದಲ್ಲಿದ್ದಾಗ ಅವರಿಗಾಗಲೀ ಅವರ ಸಪೋರ್ಟ ರ್ಸ್‌ಗಾಗಲೀ ನನ್ನಿಂದ ತೊಂದರೆಯಾಗಿದ್ದರೆ ಅವರು ಹೇಳಲಿ ಜನತಾ ಪ್ರೆಸಿಡೆಂಟ್‌ರವರು ಒಂದು ಕೇಸನಲ್ಲಿ ಸಿಕ್ಕಿಹಾಕಿಕೊಂಡಿದ್ದರು ಅದನ್ನೂ ಸಹ ನಾವು ವಿತ್‌ಡ್ರಾ ಮಾಡಿದ್ದೇವೆ' ನಮ್ಮ ಕಾಲಕ್ಕೆ ಇಂಥ ಕೆಳ ಮಟ್ಟದ ಪಾಲಿಟಿಕ್ಸ್ ಮಾಡುವುದಕ್ಕೆ ಹೋಗಲಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಸದಸ್ಯರು ಸ್ಪೆಷಲ್ ಇಂಟರೆಸ್ಟ್ ತೆಗೆದುಕೊಂಡು ಕೇಸು ಗಳನ್ನು ವಿತ್‌ಡ್ರಾ ಮಾಡಿಸಿದ್ದಾರೆ. ಅವರ ಮೇಲೆ ಕೇಸ್ ಇರುವುದು ಸರಿಯಿಲ್ಲವೆಂದು ಕೇಸನ್ನು ವಿತ್‌ಡ್ರಾ ಮಾಡಿಸಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವರು ಹೆಬಿಚ್ಯುಯಲ್ ಅಫೆಂಡರ್ಸ್. ಹೋದ ವರ್ಷವೂ ಒಂದು ಸಾರಿ ಇದೇ ತರಹ ಆಯಿತು. ಅದನ್ನೂ ಸಹ ನಾವು ವಿತ್‌ಡ್ರಾ ಮಾಡಿಸಿದ್ದೇವೆ. ಇನ್ನೊಂದು ಸಾರಿಯೂ ಕೇಸ್ ಆಯಿತು ನಾವು ಪೋಲೀಸರಿಗೆ ಹೇಳಿ ರಾಜಕೀಯ ಪಕ್ಷದವರ ಮೇಲೆ ನಾವುರಾಜಕೀಯ ಮಾಡಬಾರದು ಎಂದು ವಿತ್‌ಡ್ರಾ ಮಾಡಿಸಿದ್ದೇವೆ. ಈ ಫ್ಯಾಕ್ಟರಿಯಿಂದ ಆರ್.ಸಿ.ಸಿ. ಪೋಲ್ಸ್ ತಯಾ ರಾಗಿ ಷಹಪುರ ಷೋರಾಪುರ ಯಾದಗೀರ್‌ಗಳಿಗೆ ಲಾಭವಾಗುತ್ತಿತ್ತು ಇದು ಈ ಮೂರು ತಾಲ್ಲೂಕುಗಳಿಗೂ ಬೇಕಾದಂಥ ಯೂನಿಟ್ ತಾವು ಬೇಕಾದರೆ ಇದರ ಬಗ್ಗೆ ಕೆ.ಇ.ಬಿ. ಚೇರ್ಮನ್ ಅವರನ್ನು ಕೇಳಿರಿ ? ತಾವು ಏನು ಹೇಳುತ್ತೀರಿ ಅದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ. ಇಂಥ ಕೆಳಮಟ್ಟದ ರಾಜಕೀಯ ಮಾಡಿ ಅಧಿಕಾರ ವನ್ನು ಮಿಸ್‌ಯೂಸ್ ಮಾಡಬೇಡಿ. ಇದು ಯಾವ ನ್ಯಾಯ ಎಂದು ನಾನು ತಮ್ಮನ್ನು ಕೇಳಬೇಕಾಗಿದೆ? ಹಿಂದುಳಿದ ಭಾಗದಲ್ಲಿ ಇನ್ನೊಂದು ಫ್ಯಾಕ್ಟರಿ ಬರಬೇಕು ಎಂದು ಮಾಡಿದಾಗ ಬಂದಂಥ ಸಣ್ಣ ಫ್ಯಾಕ್ಟರಿ ಯಿಂದ ಅಲ್ಲಿಯ ೧೦೦–೨೦೦ ಜನರಿಗೆ ಕೆಲಸ ದೊರೆಯುತ್ತಿತ್ತು. ಕೇಂದ್ರ ಸರ್ಕಾರದ ರೈಲ್ವೆಯವರು ಸ್ಲೀಪರ್ಸ್‌ಗಳನ್ನು ತಯಾರು ಮಾಡುವುದಕ್ಕೆ ಆರ್ಡರ್ ಕೊಟ್ಟಿದ್ದಾರೆ. ಇಲ್ಲಿಯ ಒಂದು ಪರಿಸ್ಥಿತಿಯನ್ನು

ನೋಡಿ ಅವರು ಕಿತ್ತುಕೊಂಡು ಮಂತ್ರಾಲಯಕ್ಕೆ ಹೋದರು. ಈ ಕಿರಿಕಿರಿ ಏಕೆ ಎಂದು ಹೊರಟು ಹೋದರು. ವೀರಶೈವ ಸಮ್ಮೇಳನಕ್ಕೆ ಚಂದ ಕೊಡಲಿಲ್ಲ ಎಂದು ಮಾನ್ಯ ಮಂತ್ರಿಗಳು ಕಿರುಕುಳ ಕೊಟ್ಟರೆ ಇದ್ದಂಥ ಫ್ಯಾಕ್ಟರಿ ಷಹಪುರಕ್ಕೆ ಹೋಯಿತು, ಇದೂ ಕೂಡ ಜನರಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಬರುತ್ತದೆ. ಅವರ ಅಡ್ಮಿನಿಸ್ಟ್ರೇಷನನ್ನು ನೋಡಿ ಎಂದು ನಾನು ಮಾನ್ಯ ಮುಖ್ಯ ಮಂತ್ರಿಯವರಿಗೆ ಕೇಳುತ್ತೇನೆ. ಆ ಭಾಗದಲ್ಲಿ ಚೆನ್ನಾಗಿ ಆಡಳಿತ ನಡೆದಿದೆ. ಇಲ್ಲ ಎಂದಲ್ಲ ಅವರು ಹೇಳಿದನ್ನು ಹೇಳಿಬಿಡುತ್ತೇನೆ. ಈಗ ತಾವು ಎಲ್ಲೋ ಟೂರ್ ಹೋಗುತ್ತೀರಿ ನಾವೂ ಹೋಗುತ್ತೇವೆ. ನಮಗಿಂತ ಹೆಚ್ಚಿನ ಅನುಭವ ನಿಮಗಿದೆ ಆದರೂ ಒಂದು ಇಂಟರೆಸ್ಟಿಂಗ್ ಥಿಂಗ್ ಹೇಳುತ್ತೇನೆ. ಒಬ್ಬರು ಮಂತ್ರಿಗಳು ಅಂದರೆ ಶ್ರೀಮಾನ್ ವಿಶ್ವನಾಥರೆಡ್ಡಿ ಮುದ್ನಾಳ್‌ರವರು ಸುರಪುರ ಗೆಸ್ಟ್‌ಹೌಸಿಗೆ ಹೋದರು. ೨೪ ಮಾವಿನ ಹಣ್ಣುಗಳನ್ನು ತಾಳಿಕೋಟೆಯಲ್ಲಿ ಪರ್ಚೇಸ್ ಮಾಡಿದ್ದರಂತೆ ಪರ್ಚೇಸ್ ಮಾಡಿಕೊಂಡು ಸುರಪುರಕ್ಕೆ ಬಂದರು. ಆ ೨೪ ಮಾವಿನಹಣ್ಣುಗಳನ್ನು ಫ್ರೀಜ್‌ನಲ್ಲಿ ಇಡಲಿಕ್ಕೆ ಹೇಳಿದರು, ಇಟ್ಟಮೇಲೆ ಇವರು ಜನರ ಜೊತೆಯಲ್ಲಿ ಮಾತನಾಡುತ್ತಾ ಇದ್ದರು. ಅಷ್ಟರಲ್ಲಿ ಯಾರೋ ಜವಾನರು ಎಲ್ಲಾ ಸೇರಿ ಮೂರು, ನಾಲ್ಕು ಜನ ಎರಡೆರಡು ಮಾವಿನಹಣ್ಣುಗಳನ್ನು ತಿಂದರು.

ಶ್ರೀ ಪಿ. ರಾಮದೇವ್ .—ಇದು ಯಾವ ಅಡ್ಮಿನಿಸ್ಟ್ರೇಷನ್ ರಿಪೋರ್ಟ್ ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ .—ಇವರ ಕಾನ್‌ಸಿಕ್ವೆನ್ಸ್ ಏನು ? What consequences they faced ಎಂದರೆ, ಮಾನ್ಯ ಅಧ್ಯಕ್ಷರೆ, ಏನಾಯಿತು ಅಂದರೆ, ನಂತರ ಆ ೨೪ ಮಾವಿನ ಹಣ್ಣುಗಳನ್ನು ತೆಗೆದುಕೊಂಡು ಬನ್ನಿ ಎಂದು ತರಿಸಿದರು ಆ ೨೪ ಹಣ್ಣುಗಳಲ್ಲಿ ೬ ಹಣ್ಣುಗಳು ಕಡಿಮೆ ಇತ್ತು. ಈ ಮಾವಿನ ಹಣ್ಣುಗಳನ್ನು ತಿಂದವರು ಯಾರು ಎಂದು ಎಲ್ಲರನ್ನೂ ಕೇಳಿದರು. ಅಲ್ಲಿರತಕ್ಕ ಸ್ವೀಪರ್, ಹಾರ್ಟಿಕಲ್ಚರ್ ವರ್ಕರ್, ಕುಕ್—ಎಲ್ಲರನ್ನೂ ಕರೆದು ನಮ್ಮ ಸರ್ಕಾರ ಜನತಾ ಸರ್ಕಾರ ಹೊಸದಾಗಿ ಬಂದಿದೆ, ನೀವು ಹಿಂದೆ ಕಾಂಗ್ರೆಸ್ ಸರ್ಕಾರದಲ್ಲಿ ಮಾಡಿದಹಾಗೆ ಮಾಡಿದರೆ ಮತ್ತು ಹಣ್ಣನ್ನು ತಿಂದಿದ್ದಕ್ಕೆ ನಿಮಗೆಲ್ಲಾ ಶಿಕ್ಷೆ ಕೊಡಬೇಕಾಗುತ್ತದೆ—ಎಂದು ಹೇಳಿದರು ನನ್ನದು ಮಂತ್ರಿಯದೇ ೬ ಹಣ್ಣುಗಳನ್ನು ತಿಂದರೆ ನೀವು ಬೇರೆ ಜನರದ್ದು ಎಷ್ಟು ತಿನ್ನುತ್ತೀರಿ ಎಂದು ಹೇಳಿ ಆ ೬ ಜನರನ್ನು ಸಸ್ಪೆಂಡ್ ಮಾಡಿದರು ೬ ಮಾವಿನ ಹಣ್ಣುಗಳನ್ನು ತಿಂದಿದ್ದಕ್ಕೆ ೬ ಜನರಿಗೆ ಸಸ್ಪೆಂಡ್. ಆಮೇಲೆ ಸೂಪರಿಂಟೆಂಡಿಂಗ್ ಇಂಜಿನಿಯರ್‌ಗೆ ಇವರನ್ನು ಸಸ್ಪೆಂಡ್ ಮಾಡಿ ಅಂದಾಗ, ಅವರು ಇಲ್ಲ ಮಾಡುವುದಕ್ಕೆ ಆಗುವುದಿಲ್ಲ ಕಾರಣಗಳು ಬೇಕು ಶೋಕಾಸ್ ನೋಟೀಸ್ ಕೊಡಬಹುದು, ಏನಾದರೂ ಕಾರಣಗಳನ್ನು ತೋರಿಸಿ ಮಾಡಬೇಕಾಗುತ್ತದೆ. ಹಾಗೆ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿದಾಗ, ಇವರು ನಾನು ಮಂತ್ರಿ ಇದ್ದೇನೆ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಿದ್ದೀರಿ ಇದೇನು ಸಮಾಚಾರ ಎಂದು ಕೇಳಿದರು. ಅದಕ್ಕೆ ಅವರು ಹಾಗೆ ಮಾಡುವುದಕ್ಕೆ ಬರುವುದಿಲ್ಲ, ತಾವು ಅವಕಾಶಕೊಟ್ಟರೆ ಟ್ರಾನ್ಸ್‌ಫರ್ ಮಾಡೋಣ ಎಂದು ಹೇಳಿದರಂತೆ. ಇವರು ಇಲ್ಲ ಇವತ್ತು ಸಾಯಂಕಾಲದೊಳಗೆ ಆರ್ಡರ್ ಆಗಲೇಬೇಕು ಎಂದು ಹೇಳಿದರು, ಮುಂದೆ ಏನಾಯಿತೋ—ಟ್ರಾನ್ಸ್‌ಫರ್ ಮಾಡಿದರು. ಟ್ರಾನ್ಸ್‌ಫರ್ ಮಾಡಿದಮೇಲೆ ಅದರಲ್ಲಿ ಒಬ್ಬರು ಶಹಾಪುರದವರು ಮಾನ್ಯ ಬಾಪೂಗೌಡರ ಶಿಷ್ಯರು ಇದ್ದರು. ಅವರು ತಮ್ಮ ಪ್ರಭಾವ ಬೀರಿ ಅಲ್ಲೇ ಉಳಿದರು.

ಶ್ರೀ ಬಾಪೂಗೌಡ ದರ್ಶನಪುರ್.—ಯಾದ್ಗೀರ್ ಮತ್ತು ಶಹಾಪುರದ ರಾಜಕಾರಣ ಇಲ್ಲಿ ತರಬೇಡಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಆಮೇಲೆ ಏನಾಯಿತು ಅಂದರೆ ಇವರು ಪ್ರಭಾವ ಬೀರಿ ಕ್ಯಾನ್ಸಲ್ ಮಾಡಿದ ಮೇಲೆ ಅವನು ಅಲ್ಲೇ ಸೊಲ್ಲಾಪುರದಲ್ಲೇ ಉಳಿದ. ನಾನು ಮತ್ತು ಶ್ರೀಮಾನ್ ಧರ್ಮಸಿಂಗ್ ಅವರು ಮುನಿಸಿಪಲ್ ಎಲೆಕ್ಷನ್ ಟೈಮಿನಲ್ಲಿ ಅಲ್ಲಿಗೆ ಹೋದಾಗ ಅವರನ್ನು ಕರೆದು ಯಾಕಪ್ಪಾ ಹೀಗೆ ಮಾಡಿದೆ, ಮಂತ್ರಿ ಹಣ್ಣು ತಿನ್ನುವುದಕ್ಕೆ ಬುದ್ಧಿ ಗಿದ್ಧಿ ಇದೆಯೋ, ಎಷ್ಟೋ ಜನ ಬರುತ್ತಾರೆ, ಅವರಿಗೆ ಯಾರಿಗಾದರೂ ಸಲಾಂ ಹೊಡೆದರೆ ೮ ಆಣೆ, ಒಂದು ರೂಪಾಯಿ ಕೊಡುತ್ತಾರೆ, ಈ ಕೆಲಸ ಏತಕ್ಕೆ ಮಾಡುವುದಕ್ಕೆ ಹೋದೆ ಎಂದು ಕೇಳಿದಾಗ, ಅವನು ಹೇಳಿದ, ಏನ್ ಸಾರ್ ನನಗೆ ೩೦ ವರ್ಷ ಸರ್ವೀಸ್ ಆಯಿತು, ಇಂತಹ ಯಾವ ಕೆಲಸ ಮಾಡಲಿಲ್ಲ, ಅನೇಕ ಜನ ಇಲ್ಲಿ ಬರುತ್ತಾರೆ, ಹೋಗುತ್ತಾರೆ, ಬಂಗಾರ ಇಡುತ್ತಾರೆ, ಬೆಳ್ಳಿ ಇಡುತ್ತಾರೆ, ವಾಚ್ ಇಟ್ಟು ಸ್ನಾನಕ್ಕೆ ಹೋಗುತ್ತಾರೆ, ನಾನಾಗಲೀ, ನನ್ನ ಮಕ್ಕಳಾಗಲಿ ಮುಟ್ಟಿಲ್ಲ, ಆದರೆ ದುರ್ದೈವ ಹೀಗೆ ಬಂದಿದೆ ಎಂದು ಹೇಳಿದ. ಅಂದರೆ ಇವತ್ತು ನೀವು ಒಂದು ಕಡೆ......

ಶ್ರೀ ಪಿ. ರಾಮದೇವ್.—ಹಾಗಾದರೆ ಮಾವಿನ ಹಣ್ಣನ್ನು ತಿಂದವರು ಯಾರು ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಯಾರೂ ಸಿಕ್ಕಲಿಲ್ಲ, ಅವನು ಎರಡು ಹಣ್ಣನ್ನು ಗನ್ ಮ್ಯಾನ್ ತಿಂದ ಎಂದು ಹೇಳಿಬಿಟ್ಟ, 6 ಹಣ್ಣುಗಳನ್ನು ಗನ್‌ಮ್ಯಾನ್, ಡ್ರೈವರ್ ತಿಂದರು ನಾನು ತಿಂದಿಲ್ಲ ಎಂದು ಹೇಳಿಬಿಟ್ಟ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಬಾಟ್ಲಿನಾದರೂ ಕುಡಿದರೆ ಮೆಡಿಕಲ್ ಸರ್ಟಿಫಿಕೇಟ್ ಕೊಡಿಸಬಹುದಾಗಿತ್ತು. ಮಾವಿನ ಹಣ್ಣಿಗೆ ಏನು ಮಾಡುವುದು ?

ಶ್ರೀ ರಾಮಕೃಷ್ಣ ಹೆಗಡೆ.—ಸ್ಟೂಲ್ಸ್ ಎಕ್ಸಾಮಿನೇಷನ್ ಮಾಡಿಸಬೇಕು.

ಒಬ್ಬ ಮಾನ್ಯ ಸದಸ್ಯರು.—ಹಿಂದೆ ಬಾಟ್ಲಿಗಳು ಸಿಕ್ಕುತ್ತಾ ಇತ್ತು, ಈಗ ಬರೀ ಮಾವಿನ ಹಣ್ಣು ಗಳು ಸಿಕ್ಕುತ್ತಿವೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಶಾಸ್ತ್ರ ಹೇಳುವುದು, ಬದನೇಕಾಯಿ ತಿನ್ನುವುದು ನಮಗೂ ಗೊತ್ತಿದೆ. ಇಲ್ಲಿ ಫ್ಯಾಕ್ಟರಿ ಶಿಫ್ಟ್ ಮಾಡಿಸಿದರಲ್ಲಿ ಇವರಿಗೆ ಏನು ಶಿಕ್ಷೆ ಕೊಡಬೇಕು. ಆಮೇಲೆ ಇನ್ನೊಂದು ಕತೆ ಹೇಳುತ್ತೇನೆ ಸ್ವಾಮಿ.

ಉಪಾಧ್ಯಕ್ಷರು.—ಕತೆಗಳು ಜಾಸ್ತಿಯಾಯಿತು,

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಒಂದು ಸಲ ಇವರ ಮಗ ಹೆಲ್ಮೆಟ್ ಇಲ್ಲದೇ ಹೋಗುತ್ತಿದ್ದ ಎಂದು ಒಬ್ಬ ಸಬ್ ಇನ್ಸ್‌ಪೆಕ್ಟರ್ ಅವನನ್ನು ಹಿಡಿದರು. ಹಿಡಿದ ತಕ್ಷಣ, ನನ್ನ ಮಗನನ್ನು ಹಿಡಿದಿದ್ದಾರೆ ಎಂದು ಮಾರನೆಯ ದಿವಸ ಡಿ.ಜಿ.ಗೆ ಹೇಳಿದ್ದರಿಂದ ಆ ಸಬ್ ಇನ್ಸ್‌ಪೆಕ್ಟರ್ ಟ್ರಾನ್ಸ್‌ಫರ್ ಆದ. ಆಮೇಲೆ ಪ್ರತಿಯೊಬ್ಬ ಅಧಿಕಾರಿಗಳನ್ನೂ ಕೇಳಿದರು. ನೀವು ಯಾರ ಕಾಲದಿಂದ ಇದ್ದೀರಿ, ಯಾರಿಂದ ಬಂದಿರಿ, ಯಾರ ಇನ್‌ಫ್ಲುಯನ್ಸ್‌ನಿಂದ ಬಂದಿರಿ ಎಂದು ಕೇಳಿದರು. ಹೀಗೆ ನೀವು ಆಡಳಿತ ನಡೆಸಿ, ಇವತ್ತು ಇಂಪಾರ್ಷಿಯಲ್ ಆಗಿರಬೇಕು, ಎಲ್ಲರನ್ನೂ ಸರಿಸಮಾನವಾದ ರೀತಿಯಿಂದ ನೋಡುತ್ತೇವೆ, ಎಂದು ಹೇಳಿದಿರಲ್ಲಾ ಅಂತಹ ನೈತಿಕ ಹಕ್ಕು ನಿಮಗೆ ಇದೆಯೋ ?

ಶ್ರೀ ಪಿ. ರಾಮಚಂದ್ರರಾವ್.—ಎಫ್. ಎಂ. ಖಾನ್‌ಗೋಸ್ಕರ ನೀವು ಏನೆಲ್ಲಾ ಮಾಡಿದಿರಿ ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇನ್ನು ಯಾವ ಭಾಷೆ ಉಪಯೋಗ ಮಾಡಬೇಕೋ ಗೊತ್ತಿಲ್ಲ. ನಾನು ಒಂದು ಕಳ್ಳತನ ಮಾಡಿದರೆ ತಾವು ಎರಡು ಡಾಕಾ ಹೊಡೆಯುತ್ತೇವೆ ಎಂದು ಹೇಳುವುದರಲ್ಲಿ ಏನು ಅರ್ಥವಿದೆ ಸ್ವಾಮಿ ? ನೀವೂ ಮಾಡಬೇಕು ಎಂದು ಏನಿದೆ ? ನನ್ನ ಮಟ್ಟಿಗೆ ಹೇಳುವುದಾದರೆ, ನನ್ನ ಭಾಗದಮಟ್ಟಿಗೆ ಹೇಳುವುದಾದರೆ, ನನ್ನ ಕ್ಷೇತ್ರದ ಮಟ್ಟಿಗೆ ಹೇಳುವುದಾದರೆ, We never acted like that.

MR. DEPUTY SPEAKER.—I will call the next Member. Please conclude. You have taken 45 minutes time.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಆದರೆ ಇವತ್ತು ನೀವು ಕೆಳಗೆ ಇಳಿದು ರಾಜಕಾರಣ ಮಾಡುತ್ತಿದ್ದೀರಿ. ಇನ್ನೊಂದು ವಿಶೇಷ ಏನೆಂದರೆ, ಗುರ್‌ಮಿಟ್ಕಲ್ ಪೋಲೀಸ್ ಸ್ಟೇಷನ್‌ನನ್ನು ಶಿಫ್ಟ್ ಮಾಡಿ ಬೇರೆ ಒಂದು ಹೌಸಿಂಗ್ ಬೋರ್ಡ್ ಮನೆಯಲ್ಲಿ ಆಫೀಸ್ ಮಾಡಿದ್ದಾರೆ. ನಾನು ಇದರ ಬಗ್ಗೆ ಪತ್ರ ಬರೆದಿದ್ದೇನೆ. ಮತ್ತು ಸಂಬಂಧಪಟ್ಟವರಿಗೆ ಫೋನ್ ಮಾಡಿ ಕೂಡ ಹೇಳಿದ್ದೇನೆ. ಆದರೆ ಇಲ್ಲಿಯವರೆಗೆ ಬಡ್ಜೆಟ್ ಪ್ರಾವಿಜನ್ ಕಾಣಿಲ್ಲ. ಇದರ ಬಗ್ಗೆ ನೀವು ಅಲ್ಲೂ ಕೂಡ ಕನ್‌ಸ್ಟ್ರಕ್ಷನ್ ತೆಗೆದು ಕೊಳ್ಳದೇ ಹೋದರೆ ಖಂಡಿತವಾಗಿ ಆ ಕಟ್ಟಡ ಬಿದ್ದರೆ ಸಬ್ ಇನ್ಸ್‌ಪೆಕ್ಟರ್ ಸತ್ತುಹೋಗುತ್ತಾನೆ, ನಾಲ್ಕೈದು ಕಾನ್‌ಸ್ಟೇಬಲ್ಸ್ ಸತ್ತುಹೋಗುತ್ತಾರೆ. ಅದಕ್ಕೆ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಗುರ್‌ಮಿಟ್ಕಲ್ ಪೋಲೀಸ್ ಸ್ಟೇಷನ್ನಿನ ಕಟ್ಟಡವನ್ನು ಕೂಡ ಅವರು ಕಟ್ಟಿಸಿಕೊಡಬೇಕು ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಕೊನೆಯದಾಗಿ ಏನೆಂದರೆ, Facilities to scheduled castes scheduled tribes and other backward classes. ನಿಮ್ಮ Department of Cabinet affairs, Department of Personnel and Administrative Reforms ನಲ್ಲಿ ಹೇಳಿದ್ದಾರೆ.

ಇದೇನೆಂದರೆ, ಷೆಡ್ಯೂಲ್ಡ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್ಸ್ ಜನರಿಗೆ ಪ್ರಮೋಷನ್ ಕೊಡುವಾಗ ಅನೇಕ ಹುದ್ದೆಗಳಲ್ಲಿ ಅವರಿಗೆ ಅವಕಾಶ ಇಲ್ಲ, ೧೮ ಪರ್ಸೆಂಟ್ ಫಿಲ್ ಅಪ್ ಆಗಿಲ್ಲ. ಇದಕ್ಕೆ ಒಂದು ಹೈ ಪವರ್ ಕಮಿಟಿ ಮಾಡಿತ್ತು. ಇವತ್ತೂ ಕೂಡ ಅದು ಜೀವಂತವಾಗಿ ಇರಬಹುದು ಎಂದು ಭಾವಿಸಿದ್ದೇನೆ. ಅದರಲ್ಲಿರುವ ಅನೇಕ ಸದಸ್ಯರೂ ಕೂಡ ಈ ಸದನದಲ್ಲಿದ್ದರು. ಅವರು ಮೂರು ತಿಂಗಳಿಗೊಮ್ಮೆ ಮೀಟಿಂಗ್ ಕರೆದು ಇದನ್ನು ರಿವ್ಯೂ ಮಾಡಬೇಕು ಎಂದು ಇತ್ತು. ಆದರೆ ಈಗ ಯಾವ ಸ್ಥಿತಿಯಲ್ಲಿದೆಯೋ ಗೊತ್ತಿಲ್ಲ. ಈ ಸದನದಲ್ಲಿ ಪಿ.ಡಬ್ಲ್ಯೂ.ಡಿ. ಬೇಡಿಕೆ ಇದ್ದಾಗ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸನ್ನು ಅಮೆಂಡ್‌ಮೆಂಟ್ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ತಾವು ಹೇಳಿದ್ದೀರಿ. ಅದಕ್ಕೆ ಎಷ್ಟು ದಿವಸ ಬೇಕು ಸ್ವಾಮಿ ? ನಿಮ್ಮ ಖಾತೆಯಲ್ಲಿರತಕ್ಕ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ಗೆ ಅಮೆಂಡ್‌ಮೆಂಟ್ ಮಾಡುವುದು ಒಂದೇ ಅಲ್ಲ, ಎಲ್ಲಾ ಡಿಪಾರ್ಟ್‌ಮೆಂಟ್‌ಗಳಲ್ಲಿ ಪ್ರಮೋಷನ್ ಸರಿಯಾಗಿ ಸಿಗುತ್ತಿದೆಯೋ ಇಲ್ಲವೋ, ವೇಕೆನ್ಸೀಸ್ ಫಿಲ್ ಅಪ್ ಆಗುತ್ತದೋ ಇಲ್ಲವೋ ಎನ್ನುವುದನ್ನು ನೋಡುವುದಕ್ಕೆ ಹೈ ಪವರ್ ಕಮಿಟಿಯು ಚೀಫ್ ಮಿನಿಸ್ಟರ್‌ರವರ ಅಧ್ಯಕ್ಷತೆಯಲ್ಲಿ ಇತ್ತು. ಅವರು ಎಲ್ಲಾ ಡಿಪಾರ್ಟ್‌ಮೆಂಟ್‌ಗೂ ಇನ್‌ಸ್ಟ್ರಕ್ಷನ್ಸ್ ಕೊಟ್ಟಿದ್ದಾರು, ಈಗಲೂ ಕೂಡ ಕೊಟ್ಟಿರಬಹುದು.

೫–೩೦ ಪಿ.ಎಂ.

ಆದರೆ ಇಲ್ಲಿಯವರೆಗೂ ಅದು ಆಗಿಲ್ಲ. ಕೇಡರ್ ಅಂಡ್ ರೆಕ್ರೂಟ್‌ಮೆಂಟನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಎಷ್ಟು ದಿವಸ ಬೇಕು ? ಏತಕ್ಕೆ ಮಾಡಲಿಲ್ಲ. ತಾವು ಹೇಳಬಹುದು ಹಿಂದೆ ನಾವು ಮಾಡಲಿಲ್ಲವೆಂದು ಆದರೆ ನೀವು ಜನತೆಯಿಂದ ಆರಿಸಿ ಬಂದು ಮಾಡುತ್ತೇವೆಂದು ಹೇಳಿದ್ದಿರಲ್ಲಾ ನೀವು ಏತಕ್ಕೆ ಇಲ್ಲಿಯವರೆಗೆ ಮಾಡಲಿಲ್ಲ ? ಆದುದರಿಂದ ಇದರ ಬಗ್ಗೆ ಕೂಲಂಕುಷವಾಗಿ ವಿಚಾರ ಮಾಡಿ ಇದರ ಬಗ್ಗೆ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಸಿವಿಲ್ ಎನ್‌ಫೋರ್ಸ್‌ಮೆಂಟ್ ಸೆಲ್ ಎಂದು ಇದೆ. ಸಾವಿರಾರು ವರ್ಷಗಳಿಂದ ಶೆಡ್ಯೂಲ್ ಕ್ಯಾಸ್ಟ್‌ನವರ ಪರಿಸ್ಥಿತಿ ಹಾಗೆಯೇ ಇದೆ, ಯಾವ ಕಾಲವೇ ಬಂದರೂ ಅಷ್ಟೇ. ರಾಮನ ಕಾಲ ಇರಲಿ, ಕೃಷ್ಣನ ಕಾಲ ಇರಲಿ, ಎಲ್ಲಾ ಕಾಲವೂ ಬಂದು ಹೋಯಿತು, ಎಲ್ಲಾ ಕಾಲದಲ್ಲೂ ನಮ್ಮ ಜನ ಅದೇ ಪರಿಸ್ಥಿತಿಯಲ್ಲಿದ್ದಾರೆ. ಸಿವಿಲ್ ಎನ್‌ಫೋರ್ಸ್‌ಮೆಂಟ್ ಸೆಲ್‌ನವರು ಏನು ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ ಎನ್ನುವ ಬಗ್ಗೆ ವರದಿಯಲ್ಲಿ ಕೊಟ್ಟಿದ್ದೀರಿ ಅದರ ಪ್ರಕಾರವಾಗಿ ೧೯೮೨ರಲ್ಲಿ ೬೭೪ ಕೇಸ್‌ಗಳು ರಿಪೋರ್ಟ್ ಆಗಿದ್ದರೆ ಮಾರ್ಚ್ ೧೯೮೩ ರವರೆಗೆ ೧೨೪, ಆಮೇಲೆ ೧೯೮೨ರಲ್ಲಿ ಚಾರ್ಜ್‌ಷೀಟ್ ಹಾಕಿರತಕ್ಕದ್ದು ೩೪೪ ಕನ್‌ವಿಕ್ಟೆಡ್ 'ನಿಲ್' ಎಂದು ಹೇಳಿದ್ದೀರಿ. ಅದೇ ರೀತಿಯಾಗಿ ೧೯೮೩ರ ಮಾರ್ಚ್‌ವರೆಗೆ ೨೪ ಚಾರ್ಜ್‌ಶೀಟ್ ಹಾಕಿದ್ದೇವೆ, 'ಕನ್‌ವಿಕ್ಟೆಡ್ ನಿಲ್' ಎಂದು ಹೇಳಿದ್ದೀರಿ. ಈ ರೀತಿಯಾಗಿ ಎನ್‌ಫೋರ್ಸ್‌ಮೆಂಟ್ ಸೆಲ್ ಕೆಲಸ ಮಾಡಿದರೆ ಆ ಜನರಿಗೆ ಹೇಗೆ ರಕ್ಷಣೆ ಸಿಗುತ್ತದೆ ? ಈ ರೀತಿಯಾದರೆ ಖಂಡಿತವಾಗಿಯೂ ಬಡವರ ಸಂರಕ್ಷಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇನ್ನು ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ೮ನೇ ಫಿನಾನ್ಸ್ ಕಮಿಷನ್ ಮುಂದೆ ಲ್ಯಾಂಡ್ ರಿಫಾರಂಸ್ ಬಗ್ಗೆ ಈ ರೀತಿಯಾಗಿ ಹೇಳಿದ್ದಾರೆ :

> "Karnataka is a pioneer State in the implementation of Land Reforms. I am, in fact, proud to say that barring Kerala and West Bengal in no other State have the land reforms measures been implemented with such sincerety as in Karnataka. Our land reforms measures are more progressive than even than even those of Kerala and West Bengal. At the same time, we have been equitable in our approach and we feel that the landlords whose lands have been taken over for conferring rights to tenants have to be paid due compensation."

ಎಂದೆಲ್ಲಾ ಅಲ್ಲಿ ವಾದ ಮಾಡಿದ್ದಾರೆ. ಆದರೆ ಇವತ್ತು ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಹಿಂದಿನಷ್ಟು ಸಹ ಕೆಲಸ ನಡೆಯುತ್ತಿಲ್ಲ ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಆದುದರಿಂದ ಇನ್ನು ಮುಂದಾದರೂ ಲ್ಯಾಂಡ್ ರಿಫಾರಂಸ್‌ನ್ನು ಜಾರಿಗೆ ತರುವ ಬಗ್ಗೆ ಶೀಘ್ರವಾಗಿ ಕಾರ್ಯಗತ ಮಾಡಿ ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕ ಡಿಮ್ಯಾಂಡ್‌ನ್ನು ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಅಪ್ಪಣ ಹೆಗಡೆ (ಬೈಂದೂರು).—ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ಸಮರ್ಥಿಸುತ್ತಾ ಕೆಲವು ವಿಷಯಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಮುಖ್ಯವಾಗಿ ನಮ್ಮದು ಕರಾವಳಿ ಜಿಲ್ಲೆಯಾಗಿದ್ದು ಇವರು ಸಹ ಮೀನುಗಾರರ ಬಗ್ಗೆ ಬೇಡಿಕೆಯನ್ನು ಮಂಡಿಸಿರುವುದರಿಂದ ನಾಲ್ಕು ಮಾತುಗಳನ್ನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ೧೯೮೨-೮೩ರ ವರದಿಯಲ್ಲಿ ೩೫೦ ಪರ್ಸೀನ್ ಬೋಟ್‌ಗಳನ್ನು ೧೫೦೦ ಸಿಗಡಿ ಟ್ರಾಲರ್ಸ್ ಬೀಸಿ ಬಲೆ ದೋಣಿಗಳನ್ನು ಸರ್ಕಾರದ ನೆರವಿನಿಂದ ಒದಗಿಸಲಾಗಿದೆಯೆಂದು ಅಂಕಿಅಂಶಗಳನ್ನು ಕೊಟ್ಟಿದ್ದೀರಿ. ಆದರೆ ಇದರಲ್ಲಿ ನ್ಯಾಯವಾಗಿ, ನಿಜವಾಗಿ ಯಾವ ಮೀನುಗಾರರಿಗೆ ಏನು ಸೌಲಭ್ಯ, ಸೌಲತ್ತುಗಳು ಸಿಕ್ಕಬೇಕಾಗಿತ್ತೋ ಆ ಸೌಲತ್ತುಗಳು ಸಿಕ್ಕುತ್ತಿಲ್ಲ ಎನ್ನುವುದು ಅಲ್ಲಿರತಕ್ಕ ಎಲ್ಲಾ ಜನರಿಗೂ ಗೊತ್ತಿದೆ. ಇದಕ್ಕೆ ಕಾರಣವೇನೇ ಇರಲಿ ಇನ್ನು ಮುಂದಾದರೂ ಸರ್ಕಾರ ನೆರವನ್ನು ಒದಗಿಸುವಾಗ ನ್ಯಾಯವಾಗಿ ಮೀನುಗಾರರಿಗೇ ಈ ಸೌಲಭ್ಯ ದೊರಕುವಂತೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ಸಾಮಾನ್ಯವಾಗಿ ಪರ್ಸೀನ್ ಬೋಟ್‌ಗಳವರು ಮತ್ತು ಸಿಗಡಿ ಟ್ರಾಲ್ಲರ್ಸ್‌ರವರು ಯಾವುದೇ ರಿಸ್ಟ್ರಿಕ್ಷನ್ ಇಲ್ಲದೇ ಅವರು ಎಲ್ಲಿ ಬೇಕಾದರೂ ಮೀನನ್ನು ಮಾರಿಕೊಳ್ಳಬಹುದಾಗಿದೆ. ಆದರೆ ಬೀಸಿಬಲೆ ದೋಣಿಯವರು ಮಾತ್ರ ಬಡವರು, ಅವರು ಮಾತ್ರ ಫೆಡರೇಷನ್ನಿನಲ್ಲಿಯೇ ಮಾರಬೇಕು ಎನ್ನತಕ್ಕ ನಿಯಮವನ್ನು ಹೊರಿಸತಕ್ಕದ್ದು ಸರಿಯಲ್ಲ. ಇದರಿಂದ ಸಣ್ಣ ಮೀನುಗಾರರು ಶೋಷಣೆಗೆ ಒಳಗಾಗುವಂಥಾದ್ದು ಸರಿಯಾದುದಲ್ಲ. ಆದುದರಿಂದ ಇದನ್ನು ಸರಿಪಡಿಸಿ ಅವರು ಎಲ್ಲಿ ಬೇಕಾದರೂ ಮಾರಿಕೊಳ್ಳಬಹುದು ಎನ್ನುವ ರೀತಿಯಲ್ಲಿ ಮಾಡಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ. ಇನ್ನು ನಾಲ್ಕು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಒಳನಾಡಿನ ಮೀನುಗಾರಿಕೆ ಮಾಡುವುದಕ್ಕೆ ಅವಕಾಶವಿದೆಯೆಂದು ಹೇಳಿದ್ದೀರಿ ನಿಮ್ಮ ಇಲಾಖೆಯ ಮುಖಾಂತರವಾಗಿ ಇದನ್ನು ಮಾಡಲಿಕ್ಕೆ ಆಗದಿದ್ದರೆ ಖಾಸಗಿಯವರಿಗಾದರೂ ಗುತ್ತಿಗೆಗೆ ನೀಡುವುದರ ಮೂಲಕ ಹೆಚ್ಚಿನ ಮೀನಿನ ಸಾಗಾಣಿಕೆ ಅಭಿವೃದ್ಧಿಯನ್ನು ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಇನ್ನು ಆಳವಾದ ಸಮುದ್ರದಲ್ಲಿ ಮೀನಿನ ಕ್ಷಾಮ ತಲೆದೋರಿರುವುದರಿಂದ ವೈಜ್ಞಾನಿಕವಾಗಿ ಸಲಕರಣೆಗಳನ್ನು ಯಂತ್ರಗಳನ್ನು ಕೊಟ್ಟು ಅವರು ಆಳವಾದ ಸಮುದ್ರದಲ್ಲಿ ಮೀನುಗಳನ್ನು ಹಿಡಿಯುವುದಕ್ಕೆ ಪ್ರೋತ್ಸಾಹ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಹಿನ್ನೀರಿನಲ್ಲಿ ಸಿಗಡಿ ಮೀನನ್ನು ಬೆಳೆಸುವುದಕ್ಕೆ ಖಾಸಗಿಯವರಿಗಾಗಲಿ ಇಲ್ಲವೇ ಇಲಾಖೆಯವರೇ ಆಗಲಿ ಬೆಳೆಸುವುದಕ್ಕೆ ಹೆಚ್ಚಿನ ಅವಕಾಶವನ್ನು ಕಲ್ಪಿಸಿ ಕೊಟ್ಟರೆ ಒಳ್ಳೆಯದು. ಏತಕ್ಕೆಂದರೆ ಅದಕ್ಕೆ ಒಳ್ಳೆಯ ವಿದೇಶೀ ವಿನಿಮಯ ಇರುವುದರಿಂದ ಇದಕ್ಕೆ ಹೆಚ್ಚಿನ ಗಮನವನ್ನು ನೀಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಇನ್ನು ಮೀನುಗಾರರಿಗೆ ಸಾಗರ ದೀಪ ಯೋಜನೆ ಬಹಳ ಒಳ್ಳೆಯ ಯೋಜನೆಯಾಗಿದೆ, ಅದನ್ನು ಶೀಘ್ರವಾಗಿ ಒದಗಿಸಬೇಕೆಂದು ಹೇಳುತ್ತೇನೆ. ಏತಕ್ಕೆಂದರೆ ಅವರಿಗೆ ಹೆಚ್ಚಿನ ವಿದ್ಯಾಭ್ಯಾಸ ಇಲ್ಲದೇ ಇರುವುದರಿಂದ ಹೆಚ್ಚಿನ ತಿಳುವಳಿಕೆ ಇರುವುದಿಲ್ಲ, ಆದುದರಿಂದ ಅಂಥವರಿಗೆ ಕಡ್ಡಾಯ ವಿಮೆ ಯೋಜನೆ ಮತ್ತು ಅಪಘಾತ ವಿಮೆ ಯೋಜನೆ ಇವೆಲ್ಲವುಗಳನ್ನೂ ಕಡ್ಡಾಯವಾಗಿ ಜಾರಿಗೆ ತರುವುದಕ್ಕೆ ನಿಮ್ಮ ಇಲಾಖೆಯವರು ಹೆಚ್ಚಿನ ರೀತಿಯಲ್ಲಿ ಶ್ರಮ ವಹಿಸಬೇಕೆಂದು ಹೇಳಬಯಸುತ್ತೇನೆ. ಇನ್ನು ಮೀನಿನ ಕ್ಷಾಮ ಬಂದಾಗ ಬಡ್ಡಿ ರಹಿತ ಸಾಲವನ್ನು ಒದಗಿಸಬೇಕು ಎಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ. ಇನ್ನು ಮೀನುಗಾರಿಕೆಯನ್ನು ಅಭಿವೃದ್ಧಿಗೊಳಿಸುವ ದೃಷ್ಟಿಯಿಂದ ಮೀನನ್ನು ಕ್ಷಿಪ್ರವಾಗಿ ಮಾರುಕಟ್ಟೆಗೆ ಒಯ್ಯಬೇಕಾದಂಥ ಸಂದರ್ಭವಿರುವುದರಿಂದ ಅವರಿಗೆ ವಿಶೇಷವಾದ ಸೌಕರ್ಯವನ್ನು ಕಲ್ಪಿಸಿ ಕೊಡಬೇಕು ಈಗಾಗಲೇ ಕುಂದಾಪುರ, ಕೋಡಿ, ಹೊನ್ನಾರಕಟ್ಟ, ಸಸಿಹಿತ್ಲು ಇವುಗಳಲ್ಲಿ ಒಂದು ಜಟ್ಟಿ ನಿರ್ಮಾಣ ಮಾಡುವ ಯೋಜನೆ ಸರ್ಕಾರದ ಮುಂದೆ ಇದೆ ಆ ಯೋಜನೆಯನ್ನು ಶೀಘ್ರವಾಗಿ ಕೈಗೊಳ್ಳತಕ್ಕದರ ಬಗ್ಗೆ ಭರವಸೆಯನ್ನು ಸರ್ಕಾರದವರು ನೀಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಅದೂ ಅಲ್ಲದೆ ಗಂಗೊಳ್ಳಿ ಬಂದರಿನಲ್ಲಿ ಈಗಾಗಲೇ ಸಾಂದ್ರತೆ ಹೆಚ್ಚಾಗಿ ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸುವುದು ಕಠಿಣವಾಗಿದೆ. ಆ ಬಂದರನ್ನು ಇನ್ನಷ್ಟು ವಿಸ್ತರಿಸುವುದರ ಮೂಲಕ ಅಲ್ಲಿ ಹೆಚ್ಚಿನ ಅನುಕೂಲತೆ ಕಲ್ಪಿಸಿಕೊಡಬೇಕು. ಅದೇ ರೀತಿಯಲ್ಲಿ ಮಲ್ಪೆ ಬಂದರಿನ ಪ್ರಥಮ ಹಂತದ ಕೆಲಸ ಮುಗಿಯುತ್ತಾ ಬಂದಿದೆ. ಆದರೆ ಮೀನುಗಾರಿಕೆಗೆ ಆ ಬಂದರು ಸಾಕಾಗದೆ ಇರುವುದರಿಂದ ಶೀಘ್ರವಾಗಿ ಆ ಕಾರ್ಯ ಕ್ರಮವನ್ನು ಅನುಷ್ಠಾನಗೊಳಿಸಬೇಕೆಂದು ಸರ್ಕಾರವನ್ನು ವಿನಂತಿಸಿ ಕೊಳ್ಳುತ್ತೇನೆ. ಮಂಗಳೂರು ಮೀನುಗಾರಿಕಾ ಬಂದರಿನ ಕೆಲಸಕ್ಕೆ ಅಂದಾಜು ಪಟ್ಟಿ ತಯಾರಾಗಿದ್ದರೂ ಅಭಿವೃದ್ಧಿ ಕಾರ್ಯಕ್ರಮವನ್ನು ಇನ್ನಷ್ಟು ಶೀಘ್ರಗೊಳಿಸಬೇಕು. ಈಗಾಗಲೇ ಅನೇಕ ಹಿರಿಯ ಸದಸ್ಯರು ಹೇಳಿದ ಹಾಗೆ, ಹಿಂದಿನ ಸರ್ಕಾರದವರು ಮೈಸೂರಿನ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಮೀನುಗಾರಿಕಾ ರಸ್ತೆಗಳ ಅಭಿವೃದ್ಧಿಗಾಗಿ ೫೦ ಲಕ್ಷ ರೂಪಾಯಿಗಳನ್ನು ಮಂಜೂರ್ಮಾಡಿದ್ದಾರೆ. ಆ ಹಣವನ್ನು ಶೀಘ್ರವಾಗಿ ಕೊಟ್ಟು ದುಸ್ಥಿತಿಯಲ್ಲಿರುವಂಥ ರಸ್ತೆಗಳನ್ನು ಶೀಘ್ರವಾಗಿ ಸರಿಪಡಿಸಿ ಟಾರ್ ಹಾಕಿಸಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಜೊತೆಗೆ ನದಿ ಮಣ್ಣನ್ನು (ಹೊಳೆತ್ತುವ) ಕಾರ್ಯಕ್ರಮವನ್ನು ಜಾಗ್ರತೆ ವ್ಯವಸ್ಥಿತವಾಗಿ ನಡೆಯುವಂತೆ ಅನುಕೂಲತೆ ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ. ನನ್ನ ಕ್ಷೇತ್ರವಾದ ಬೈಂದೂರಿನಲ್ಲಿ ಒಂದು ಮಂಜುಗಡ್ಡೆ ಕಾರ್ಖಾನೆಯನ್ನು ಸ್ಥಾಪಿಸುವ ಕಾರ್ಯಕ್ರಮವನ್ನು ಕಳೆದ ೧೦ ವರ್ಷಗಳ ಹಿಂದೆ ಕೈಗೆತ್ತಿಕೊಂಡರು ಆದರೆ ಅದು ಇವತ್ತಿಗೂ ನೆನೆಗುದಿಯಲ್ಲಿದೆ. ಆ ಒಂದು ಕಾರ್ಖಾನೆಯನ್ನು ಶೀಘ್ರ ಸ್ಥಾಪಿಸುವುದರ ಜೊತೆಗೆ ಅದರ ಪ್ರಯೋಜನವನ್ನು ಮೀನುಗಾರರಿಗೆ ಹಾಗೂ ಸಾರ್ವಜನಿಕರಿಗೆ ಕಲ್ಪಿಸಿ ಕೊಡಬೇಕೆಂದು ಹೇಳುತ್ತೇನೆ. ಮುಖ್ಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳಲ್ಲಿ ಪೋಲೀಸ್ ಇಲಾಖೆಯು ಇದೇ ಪೋಲಿಸಿನವರು ದಕ್ಷರಾಗಿ ಕೆಲಸ ಮಾಡಲು ಅವರಿಗೆ ತಾಂತ್ರಿಕ ಸೌಕರ್ಯಗಳನ್ನು ಒದಗಿಸುವುದು ಮತ್ತು ಪ್ರತಿ ಆರಕ್ಷಕ ಠಾಣೆಗೆ ಒಂದು ವೈರೆಲೆಸ್ ಫೋನಿನ ವ್ಯವಸ್ಥೆ ಮಾಡಿಕೊಡಬೇಕು. ನವೀನ ರೀತಿಯಲ್ಲಿ ಕಳ್ಳತನಗಳು ಹೆಚ್ಚುತ್ತಿರುವುದರಿಂದ ಅವುಗಳನ್ನು ವೈಜ್ಞಾನಿಕವಾದ ರೀತಿಯಲ್ಲಿ ಕಂಡು ಹಿಡಿಯಲು ಪ್ರಯತ್ನ ಮಾಡಬೇಕಾಗುತ್ತದೆ. ಆದ್ದರಿಂದ, ಪೋಲೀಸರಿಗೆ ಬೇಕಾದ ನವೀನ ಮಾದರಿಯ ವೈಜ್ಞಾನಿಕ ವ್ಯವಸ್ಥೆಯನ್ನು ಮಾಡಿಕೊಟ್ಟು ಸಾರ್ವಜನಿಕರಿಗೂ ಮತ್ತು ಪೋಲೀಸರಿಗೂ ಇರತಕ್ಕ ಅಂತರವನ್ನು ಕಡಿಮೆ ಮಾಡಿದರೆ ಅಪರಾಧಗಳ ಸಂಖ್ಯೆ ತನ್ನಷ್ಟಕ್ಕೆ ತಾನೇ ಇಳಿಯುತ್ತವೆ. ಆದ್ದರಿಂದ, ಅಪರ ಶೀಘ್ರವಾದ ಶೋಧನೆಗೆ ನೆರವಾಗುವಂತೆ ಎಲ್ಲ ಅನುಕೂಲತೆಗಳನ್ನು ಕಲ್ಪಿಸಿ ಕೊಡುವುದರ ಜೊತೆಗೆ ಸಬ್ ಜೈಲ್ ಮತ್ತು ಸೆಂಟ್ರಲ್ ಜೈಲಿನಲ್ಲಿ ಸುಧಾರಣೆ ಮಾಡಿ ಅವರಿಗೆ ಬೇಕಾದ ಅನುಕೂಲತೆ ಗಳನ್ನು ಕಲ್ಪಿಸಿ ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಸಿಕೊಳ್ಳುತ್ತೇನೆ. ಪೋಲೀಸರಿಗೆ ಸಿಗತಕ್ಕ ಸಂಬಳ ಮತ್ತು ಸೇವಾ ಸೌಲಭ್ಯಗಳನ್ನು ಹೆಚ್ಚಿಸುವುದರ ಜೊತೆಗೆ ಅವರಿಗೆ ಒಳ್ಳೆಯ ವಸತಿ ಗೃಹಗಳನ್ನು ಒದಗಿಸಿಕೊಡಬೇಕು. ಸರ್ಕಾರಕ್ಕೆ ಬರತಕ್ಕ ತೆರಿಗೆಯನ್ನು ಸಕಾಲದಲ್ಲಿ ಸಂಗ್ರಹಿಸತಕ್ಕ ವ್ಯವಸ್ಥೆಯನ್ನು ಒಳ್ಳೆಯ ರೀತಿಯಿಂದ ಮಾಡಬೇಕು. ಸರ್ಕಾರೀ ನೌಕರರಿಗೆ ಸಿಗತಕ್ಕ ಪೆನ್‌ಷನ್, ಸಾಲ-ಸೌಲಭ್ಯ ಮುಂತಾದವುಗಳು ವಿಳಂಬವಿಲ್ಲದೆ ನೇರವಾಗಿ ಅವರಿಗೆ ಸಿಗುವಂತಾಗಬೇಕು. ಅವರಿಗೆ ಕೊಡಬೇಕಾದ ಎಲ್ಲ ಸವಲತ್ತುಗಳನ್ನು ಕೊಟ್ಟು ಅವರಿಂದ ಪ್ರಾಮಾಣಿಕ ಸೇವೆಯನ್ನು ಪಡೆದು ಕೊಳ್ಳಬೇಕು. ಸ್ಥಳೀಯ ಸಂಸ್ಥೆಗಳ ವಶದಲ್ಲಿದ್ದಂತಹ ಶಾಲೆ ಮತ್ತು ಆಸ್ಪತ್ರೆಗಳನ್ನು ಸರ್ಕಾರವೇ ವಹಿಸಿಕೊಂಡಿದ್ದು ಅಲ್ಲಿ ನಿವೃತ್ತರಾಗಿರತಕ್ಕ ನೌಕರರಿಗೆ ಕೊಡಬೇಕಾದ ಪಿಂಚಣಿ ಸೌಲಭ್ಯವನ್ನು ಇದುವರೆಗೆ ಕೊಟ್ಟಿಲ್ಲ. ಸರ್ಕಾರ ಇದನ್ನು ಗಮನಕ್ಕೆ ತೆಗೆದುಕೊಂಡು ಅವರಿಗೆ ನ್ಯಾಯವಾಗಿ ಸಲ್ಲತಕ್ಕ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ತಮ್ಮ ಮೂಲಕ ವಿನಂತಿಸಿಕೊಂಡು ನನ್ನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟು ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ.ಪಿ. ಕರ್ಕಿ (ಕುಮಟ).—ಸನ್ಮಾನ್ಯ ಉಪಾಧ್ಯಕ್ಷರೆ, ಸ್ಟೈಫೆಂಡರಿ ಪದವೀಧರರು ನಮ್ಮ ರಾಜಧಾನಿಗೆ ಬಂದು ೨೦ ರಿಂದ ಸತ್ಯಾಗ್ರಹ ಆರಂಭಿಸಿದ್ದಾರೆ. ಈ ಸತ್ಯಾಗ್ರಹಕ್ಕೆ ಕಾರಣವನ್ನು ತಮಗೆ ಹೇಳಬೇಕಾದ ಅವಶ್ಯಕತೆ ಇಲ್ಲ. ಅವರು ಕಳೆದ ೭ ವರ್ಷಗಳಿಂದ ನಿಶ್ಚಿತವಾದ ಪಗಾರದಲ್ಲಿ ದಿನಕ್ಕೆ ೮ ತಾಸುಗಳ ಕಾಲ ಯಾವ ಸರ್ಕಾರಿ ನೌಕರರಿಗೂ ಕಡಿಮೆ ಇಲ್ಲದಂತೆ ದುಡಿಯುತ್ತಿದ್ದಾರೆ. ಅವರಿಗೆ ಕೊಡತಕ್ಕ ಸಂಬಳ ಕಡಿಮೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಹೈಕೋರ್ಟ್‌ನಲ್ಲಿ ಕೇಸ್ ತೀರ್ಮಾನವಾದ ಕೂಡಲೇ ನಿರ್ಣಯ ಕೈಗೊಂಡು ಅವರನ್ನೆಲ್ಲ ಅಬ್ಸಾರ್ಬ್ ಮಾಡುತ್ತೇವೆಂಬ ಮಾತು ಸರ್ಕಾರದ ಕಡೆಯಿಂದ ಬಂತು. ಆದರೆ ಹೈಕೋರ್ಟ್ ತೀರ್ಮಾನವಾಗಿ ೪ ತಿಂಗಳಾದರೂ ಈ ಬಗ್ಗೆ

ಯಾವುದೇ ತೀರ್ಮಾನ ತೆಗೆದುಕೊಳ್ಳದೆ ಹುದ್ದೆಗಳನ್ನು ಭರ್ತಿ ಮಾಡುವಾಗ ಶೇಕಡ ೫೦ ರಷ್ಟು ಸ್ಥಾನಗಳನ್ನು ಅವರಿಗೆ ಮೀಸಲಾಗಿಡುತ್ತೇವೆಂಬ ಆಸೆ ತೋರಿಸಿ ದಿನ ಕಳೆಯತಕ್ಕ ವಾತಾವರಣ ಕಲ್ಪನೆಯಾಗಿದೆ. ನಿನ್ನೆ ತಾನೇ ಮುಖ್ಯ ಮಂತ್ರಿಗಳು ಅವರನ್ನು ಉದ್ದೇಶಿಸಿ ಭಾಷಣ ಮಾಡಿದ್ದನ್ನು ನೋಡಿದೆ. ಅವರು ತಮ್ಮ ಭಾಷಣದಲ್ಲಿ. ಹಣಕಾಸಿನ ತೊಂದರೆಯಿಂದ ಇದುವರೆಗೆ ಅಬ್ಸಾರ್ಬ್ ಮಾಡಲಿಲ್ಲ ಶೀಘ್ರದಲ್ಲಿ ಮಾಡುತ್ತೇವೆಂದು ಹೇಳಿದ್ದಾರೆ. ಜನತಾ ಸರ್ಕಾರ ಅಧಿಕಾರಕ್ಕೆ ಬಂದು ೯ ತಿಂಗಳಾಯಿತು ೯ ತಿಂಗಳು ಎಂದರೆ ಸಣ್ಣ ಅವಕಾಶವೇನಲ್ಲ. ಈ ಅವಕಾಶದಲ್ಲಿ ತಾವು ಕೊಟ್ಟಂತಹ ವಚನಗಳನ್ನು ಪೂರೈಸುವುದಕ್ಕೆ ಸಾಧ್ಯವಾಗಬೇಕಾಗಿತ್ತು. ಆದರೆ ಹಣಕಾಸಿನ ತೊಂದರೆ ಇದ್ದಲ್ಲಿ ಅವರಿಗೆ ೨೦೦ರಿಂದ ೪೦೦ ರೂಪಾಯಿಗಳನ್ನಾದರೂ ಕೊಡಬೇಕು. ಆ ರೀತಿ ಮುಖ್ಯ ಮಂತ್ರಿಗಳು ಮಾಡಬೇಕೆಂದು ತಮ್ಮ ಮೂಲಕ ಮುಖ್ಯ ಮಂತ್ರಿಗಳಲ್ಲಿ ಒತ್ತಾಯಿಸುತ್ತೇನೆ.

ಇನ್ನು ಮೀನುಗಾರಿಕೆಯ ಬಗ್ಗೆ ಹೇಳುವುದಾದರೆ, ಮೀನುಗಾರರ ಒಳಿತಿನ ಸಲುವಾಗಿ ಅನೇಕ ವಿಷಯಗಳನ್ನು ನಮ್ಮ ನಾಯಕರು ಈಗಾಗಲೇ ಮಾತನಾಡಿದ್ದಾರೆ. ಅವರು ಹೇಳದೇ ಬಿಟ್ಟಿರತಕ್ಕ ಒಂದೆರಡು ವಿಷಯಗಳನ್ನು ಮಾತ್ರ ನಾನು ಹೇಳಬಯಸುತ್ತೇನೆ. ಕಳೆದ ಹಲವಾರು ವರ್ಷಗಳಿಂದ ಮೀನಿನ ಉತ್ಪಾದನೆ ಕಡಿಮೆಯಾಗುತ್ತಿದೆ. ಈ ಉತ್ಪಾದನೆ ಕಡಿಮೆಯಾಗುತ್ತಿದೆ ಅಂದಾಗ ಯಾವುದಾದರೂ ವೈಜ್ಞಾನಿಕ ಕಾರಣ ಕಂಡುಹಿಡಿಯುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿಲ್ಲ. ಆದರೆ ಅಧಿಕಾರಿಗಳು ಹಾಗೂ ಮೀನನ್ನು ಹಿಡಿಯತಕ್ಕ ಮೀನುಗಾರರು ಏನು ಹೇಳುತ್ತಾರೆಂದರೆ ಎಲ್ಲ ಯಾಂತ್ರಿಕ ದೋಣಿಗಳು ಇನ್‌ಡಿಸ್‌ಕ್ರಿಮಿನೇಟ್ ಫಿಷಿಂಗ್ ಮಾಡುವುದರಿಂದ ಸಣ್ಣ ಮರಿಗಳು ನಾಶವಾಗಿ ಮುಂದಿನ ವರ್ಷಗಳಲ್ಲಿ ಮೀನಿನ ಕ್ಷಾಮ ಬರುತ್ತದೆಂದು ಹೇಳುತ್ತಿದ್ದಾರೆ. ಸರ್ಕಾರ ಈ ದಿಸೆಯಲ್ಲಿ ಯೋಚನೆ ಮಾಡದೆ ಹೋದರೆ ಅತ್ಯಂತ ಗಂಭೀರವಾದ ಪರಿಸ್ಥಿತಿಯನ್ನು ಮೀನುಗಾರರು ಹಾಗೂ ಸರ್ಕಾರ ಎದುರಿಸತಕ್ಕ ಸಮಯ ದೂರವಿಲ್ಲವೆಂದು ಹೇಳಬಯಸುತ್ತೇನೆ. ಸರ್ಕಾರ ಹೊಸ ತಳಿಗಳನ್ನು ಸೃಷ್ಟಿ ಮಾಡಿ ಅವುಗಳನ್ನು ಸಮುದ್ರದಲ್ಲಿ ಹಾಕಿ ಬೆಳೆಸಲಿಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇನ್ನು ಯಾಂತ್ರಿಕ ದೋಣಿಗಳನ್ನು ಕೊಡಬೇಕಾದರೆ ಸರ್ಕಾರ ಮಾಡುವ ಯೋಜನೆ ಮೀನುಗಾರರ ಅವಶ್ಯಕತೆಗೆ ಅನುಗುಣವಾಗಿಲ್ಲ. ಸಮಗೆ ಒಂದು ವಿಷಯ ಡಿ.ಆರ್.ಡಿ.ಎಸ್. ಮೀಟಿಂಗಿನಲ್ಲಿ ಬಂತು. ಮೀನುಗಾರರು ಏನು ವಸ್ತು ಬೇಕೆಂದು ಕೇಳುತ್ತಾರೋ ಅದಕ್ಕೆ ಬದಲಾಗಿ ಬೇರೆಯದನ್ನು ತೆಗೆದುಕೊಳ್ಳಿ ಎಂದು ಹೇಳುತ್ತಾರೆಂಬ ವಿಚಾರ ಪ್ರಸ್ತಾಪಕ್ಕೆ ಬಂತು. ಆದರಿಂದ ಅವರಿಗೆ ಪ್ರಯೋಜನವಾಗುವುದಿಲ್ಲ. ಅವರಿಗೆ ಬೇಡವಾದುದನ್ನು ತೆಗೆದುಕೊಂಡು ನಷ್ಟವಾದರೆ ಆ ನಷ್ಟವನ್ನು ತುಂಬುವುದಕ್ಕೆ ಅವರಿಗೆ ಸಾಧ್ಯವಾಗುವುದಿಲ್ಲ. ಆದ್ದರಿಂದ, ಮೀನುಗಾರರಿಗೆ ಏನು ಬೇಕೋ ಅದನ್ನು ಅರಿತುಕೊಂಡು ಯೋಜನೆಗಳನ್ನು ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಯಾಂತ್ರಿಕ ದೋಣಿಗಳ ವಿತರಣೆಯಲ್ಲಿ ಇಲ್ಲಿಯತನಕ ಆಗಿರತಕ್ಕ ಅನ್ಯಾಯಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಯಾರು ಟ್ರೆಡಿಷನಲ್ ಮೀನುಗಾರರಲ್ಲವೋ ಅಂತಹ ಅನೇಕರಿಗೆ ಸರ್ಕಾರದ ಸಹಾಯದಿಂದ ಯಾಂತ್ರಿಕ ದೋಣಿಗಳು ಕೊಡಲ್ಪಟ್ಟಿವೆ. ಇನ್ನು ಮುಂದಾದರೂ ಇದನ್ನು ನಿಲ್ಲಿಸಿ ಸರಿಯಾದ ಟ್ರೆಡಿಷನಲ್ ಮೀನುಗಾರರಿಗೆ ಮಾತ್ರ ಇದರ ಹೆಚ್ಚಿನ ಅನುಕೂಲನೆಯನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ. ಅಂದಾಗ ಮಾತ್ರ ಟ್ರೆಡಿಷನಲ್ ಮೀನುಗಾರರಿಗೆ ಅದರ ಸಂಪೂರ್ಣ ಪ್ರಯೋಜನ ದೊರೆಯುತ್ತದೆಂದು ಹೇಳಬಯಸುತ್ತೇನೆ.

ಯಾರಿಗೆ ಸರ್ಕಾರದವರು ನಿಶ್ಚಿತವಾಗಿ ಲಾಂಚ್‌ಗಳನ್ನು ಸ್ಯಾಂಕ್ಷನ್ ಮಾಡುತ್ತಾರೋ ಅಂಥವರು ಬ್ಯಾಂಕ್‌ನವರಿಗೆ ಕಮಿಷನ್ ಕೊಡದೇ ಹೋದರೆ ಸಾಲವನ್ನು ಮಂಜೂರು ಮಾಡುವುದಿಲ್ಲ. ಯಾರು ಯಾರು ಕಮಿಷನ್ ಕೊಡುತ್ತಾರೋ ಅಂಥವರಿಗೆ ಲಾಂಚ್‌ಗಳನ್ನು ಕೊಳ್ಳುವುದಕ್ಕೆ ಶೀಘ್ರವಾಗಿ ಸಾಲವನ್ನು ಕೊಡುತ್ತಾರೆ. ಇದಕ್ಕೆ ಸರ್ಕಾರದವರು ಏನಾದರೂ ಜವಾಬ್ದಾರಿಯನ್ನು ತೆಗೆದುಕೊಂಡು ಯಾರಿಗೆ ಸಾಲದ ಅವಶ್ಯಕತೆ ಇದೆಯೋ ಅಂಥವರಿಗೆ ಸಾಲವನ್ನು ಮಂಜೂರು ಮಾಡತಕ್ಕ ಕ್ರಮವನ್ನು ಶೀಘ್ರವಾಗಿ ತೆಗೆದುಕೊಂಡು ಲಾಂಚ್‌ಗಳನ್ನು ತೆಗೆದುಕೊಳ್ಳತಕ್ಕ ಅವಕಾಶ ಮಾಡಿ ಕೊಡಬೇಕು ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಈಗ ಮೀನುಗಾರರಿಗೆ ಇರತಕ್ಕ ಯೋಜನೆಗಳ ವೈಖರಿಯನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಏರಿಯಾ ಡೆವಲಪ್‌ಮೆಂಟ್ ಸ್ಕೀಂನಲ್ಲಿ ಏನು ಮಾಡುತ್ತಾರೆಂದರೆ

ಬ್ರಾಕಿಷ್ ವಾಟರ್‌ನಲ್ಲಿ ಮೀನು ಹಿಡಿಯುವುದನ್ನು ಮಾಡುತ್ತಿದ್ದಾರೆ. ಉತ್ತರ ಕನ್ನಡ ಭಾಗದಲ್ಲಿ ಕನಕಗಿರಿ ಕಡೆಯಲ್ಲಿ ಎರಡು ಲಕ್ಷ ರೂಪಾಯಿಗಳ ಯೋಜನೆಯನ್ನು ಪ್ರಾರೈಸಿದ್ದಾರೆ. ಇಲ್ಲಿ ಇನ್ನು ೬ ಲಕ್ಷ ರು. ಪಾಯಿಗಳ ಯೋಜನೆಯನ್ನೂ ಕೂಡ ಇಟ್ಟಿದ್ದಾರೆ. ಈ ಭಾಗದಲ್ಲಿ ಮೀನು ಸಿಕ್ಕುತ್ತದೆಯೋ ಇಲ್ಲವೋ ಎಂದು ವಿಚಾರ ಮಾಡದೆ ಈ ಒಂದು ಪ್ರಾಜೆಕ್ಟನ್ನು ಆರಂಭ ಮಾಡಿದ್ದಾರೆ. ನಾವು ಮೀನುಗಾರರ ಪರವಾಗಿ ಎಷ್ಟೇ ಹೇಳಿದರೂ ಸಹ ಕೆ.ಎಸ್.ಎಫ್.ಸಿ. ಯಿಂದ ಹಣ ಸರಿಯಾಗಿ ವಿತರಣೆಯಾಗುತ್ತಿಲ್ಲ. ನಾನು ಎಂ.ಎಲ್.ಎ. ಆಗುವವರೆಗೂ ಸಹ ವಿಧಾನಸೌಧಕ್ಕೆ ಬಂದಿರಲಿಲ್ಲ. ನನಗನ್ನಿಸುತ್ತದೆ ಇದು ಕೆಲವರು ಹೇಳಿದಂತೆ ಇದು ನಿಧಾನಸೌಧವಾಗಿದೆ. ಈ ರೀತಿಯಾಗಿ ಅನ್ವರ್ಥವಾಗಿ ಹೆಸರನ್ನು ಇಟ್ಟಿರಬಹುದು ಎಂದು ಕಾಣುತ್ತದೆ. ಇಲ್ಲಿ ಆಡಳಿತದ ವ್ಯವಸ್ಥೆಯು ಬಹಳ ನಿಧಾನವಾಗಿದೆ. ಕೇಸ್ ವರ್ಕರ್‌ನಿಂದ ಅಂಡರ್ ಸೆಕ್ರಟರಿ, ಡೆಪ್ಯೂಟಿ ಸೆಕ್ರೆಟರಿ, ಅಡಿಷನಲ್ ಸೆಕ್ರೆಟರಿ ಸೆಕ್ರೆಟರಿ ಎಂದು ನಾಲ್ಕೈದು ಸ್ಟೇಜುಗಳನ್ನು ದಾಟಿಕೊಂಡು ಅಂತಿಮವಾಗಿ ಸಂಬಂಧಪಟ್ಟ ಮಂತ್ರಿಗಳ ಕೈಗೆ ಸೇರಬೇಕು. ಕೆಲಸ ಸಣ್ಣದಾದರೂ ಫೈಲ್ ಮಾತ್ರ ದೊಡ್ಡದಾಗಿ ಬೆಳೆದು ಯಾವ ವಿಷಯದಲ್ಲಿ ಯಾರಿಗೆ ನಿರ್ಣಯವನ್ನು ತೆಗೆದುಕೊಳ್ಳುವಂಥ ಅಧಿಕಾರ ಇಲ್ಲವೋ ಅವರ ಕಡೆಯಿಂದ ಇದು ಪ್ರೊಸೆಸ್ ಆಗಿ ಹೋಗಿ ವರ್ಷಾನುಗಟ್ಟಲೆ ತಡವಾಗಿರತಕ್ಕದ್ದು ನಮ್ಮ ಗಮನಕ್ಕೆ ಬಂದಿದೆ. ಈ ಮಧ್ಯದಲ್ಲಿ ಯಾರೋ ಒಬ್ಬರು ಅಪ್ಲಿಕೇಷನ್ ಹಾಕಿದರೆ ಮತ್ತೆ ಅದು ಯಾರು ಪ್ರಾರಂಭ ಮಾಡಿರುತ್ತಾರೋ ಅವರ ಕೈಗೇ ಸೇರುತ್ತದೆ ಸಿ.ಇ. ಅವರು ಕಾಮಗಾರಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಒಂದು ರೆಕಮೆಂಡೇಷನ್ ಕೊಟ್ಟರೆ, ಅದು ಅಂಡರ್ ಸೆಕ್ರೆಟರಿಯವರಿಗೆ ಬಂತು, ಅಲ್ಲಿಂದ ಡೆಪ್ಯೂಟಿ ಸೆಕ್ರಟರಿಗೆ ಹೋಯಿತು, ಅವರು ಸಿ.ಇ. ಅವರು ಬರೆದಂಥ ಲೆಟರ್ ಎಲ್ಲಿ, ಅದು ಅತ್ಯಗತ್ಯವಾಗಿ ಬೇಕು ಅದು ಫೈಲ್‌ನಲ್ಲಿ ಸಿಕ್ಕದೆ ಹೋದುದರಿಂದ ಇದನ್ನು ವಾಪಸ್ ಕಳುಹಿಸುತ್ತಿದ್ದೇನೆಂದು ಬರೆದರು. ಇವರಿಗೂ ಇದಕ್ಕೂ ಸಂಬಂಧವೇ ಇಲ್ಲ, ಆದರೂ ಫೈಲನ್ನು ಅವರು ವಾಪಸ್ ಹಾಕಿದರು. ಇದು ಮತ್ತೆ ಚೀಫ್ ಇಂಜನಿಯರ್‌ಗೆ ಹೋಯಿತು. ಇದನ್ನು ನೋಡತಕ್ಕದ್ದು ಮತ್ತು ಇದರ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳತಕ್ಕ ಅಧಿಕಾರ ಸ್ಪೆಷಲ್ ಸೆಕ್ರಟರಿಯವರಿಗೆ ಇರತಕ್ಕದ್ದು; ಇದಕ್ಕೆ ಡೆಪ್ಯೂಟಿ ಸೆಕ್ರಟರಿಯವರು ಏನೂ ಮಾಡುವ ಅಗತ್ಯ ಇಲ್ಲ. ಡೆಪ್ಯೂಟಿ ಸೆಕ್ರಟರಿಯವರು ಏಕೆ ನೋಟ್ ಈ ರೀತಿಯಾಗಿ ಹಾಕಿದರೋ ಗೊತ್ತಾಗಲಿಲ್ಲ.

ಇನ್ನೊಂದು ವಿಷಯವನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಗವರ್ನಮೆಂಟ್ ಐ.ಟಿ.ಐ. ಕುಮಟ, ಇಲ್ಲಿ ಸಾಕಷ್ಟು ಸಿಬ್ಬಂದಿ ಇದೆ. ಅವರುಗಳು ಏನೂ ಕೆಲಸ ಮಾಡದೆ ಇರುವುದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುತ್ತಿದೆ. ಇದಕ್ಕೆ ಬೇಕಾದಂಥ ಕಚೇರಿಯನ್ನು ಸ್ಯಾಂಕ್ಷನ್ ಮಾಡಿ ಎಂದು ಸಂಬಂಧಪಟ್ಟ ಡೈರೆಕ್ಟರ್ ಅವರಿಗೆ ನಾನು ಒಂದು ಪತ್ರವನ್ನು ಬರೆದೆ. ಅವರು ರೆಕಮೆಂಡೇಷನ್ ಕೂಡ ಮಾಡಿದರು. ಅಲ್ಲಿಂದ ಎಜುಕೇಷನ್ ಡಿಪಾರ್ಟ್‌ಮೆಂಟ್‌ಗೆ ಬಂತು. ಎಜುಕೇಷನ್ ಡಿಪಾರ್ಟ್‌ಮೆಂಟ್‌ನವರು ಪ್ಲಾನಿಂಗ್‌ಗೆ ಕಳುಹಿಸಿದ್ದಾರೆ. ಇವರಿಗೂ ಪ್ಲಾನಿಂಗ್ ಇಲಾಖೆಗೂ ಏನು ಸಂಬಂಧವೋ ಗೊತ್ತಿಲ್ಲ. ಈ ರೀತಿಯಾಗಿ ಏನೂ ಸಂಬಂಧಪಡದವರಿಗೆ ಫೈಲುಗಳನ್ನು ಕಳುಹಿಸಿ ಅನಾವಶ್ಯಕವಾದ ಕೆಲಸಗಳನ್ನು ಮಾಡುತ್ತಿದ್ದಾರೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಸಾಕಷ್ಟು ಸಮಯವನ್ನು ತೆಗೆದು ಕೊಂಡಿದ್ದೀರಿ, ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಎಂ. ಪಿ. ಕರ್ಕಿ.—ನಾನು ಇನ್ನು ಕೇವಲ ಕೆಲವು ಪಾಯಿಂಟ್‌ಗಳನ್ನು ಮಾತ್ರ ಹೇಳುತ್ತೇನೆ. ಇದಕ್ಕೂ ತಾವು ಅವಕಾಶ ಕೊಡದಿದ್ದರೆ ನಾನು ಕುಳಿತುಕೊಳ್ಳುತ್ತೇನೆ. ಆದ್ದರಿಂದ ಸೆಕ್ರೆಟರಿಯೇಟ್‌ನಲ್ಲಿ ಇಂಥ ಒಂದು ಸಮಸ್ಯೆ ಇದೆ, ಇದನ್ನು ಬಿಡಿಸಬೇಕು ಎನ್ನುವಂಥ ಮನಸ್ಸು ಇದ್ದ ಹಾಗೆ ಅಲ್ಲಿ ಕೆಲಸ ಮಾಡತಕ್ಕವರಿಗೆ ಕಾಣಲಿಲ್ಲ. ಕೆಲವು ಜನ ಒಳ್ಳೆಯ ಅಧಿಕಾರಿಗಳು ಇದ್ದಾರೆ. ಜನತೆಯ ಆಗುಹೋಗುಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ಕೆಲಸ ಮಾಡುವವರಿದ್ದಾರೆ ಆದರೆ ಕೆಲವೊಂದು ಇಲಾಖೆಯಲ್ಲಿ ಯಾರು ತೀರ್ಮಾನವನ್ನು ತೆಗೆದುಕೊಳ್ಳಬೇಕೋ ಅವರಿಗೆ ಫೈಲ್‌ಗಳು ಹೋಗದೆ ಮಧ್ಯದಲ್ಲಿ ಯಾರೋ ಒಂದು ಅಭಿಪ್ರಾಯವನ್ನು ಕೊಟ್ಟು ಸಮಸ್ಯೆಗಳನ್ನು ಬಹಳ ಜಟಿಲವಾಗಿ ಮಾಡಿ ಕೆಲಸಗಳು ಆಗದಂತೆ ಮಾಡುತ್ತಾರೆ. ಇದಕ್ಕೆ ನಾನು ಅನೇಕ ಉದಾಹರಣೆಗಳನ್ನು ಕೊಡಬಹುದು. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ೩-೪-೫-೬ ಟಯರ್ ಸಿಸ್ಟಂ ಏನು ಇದೆ ಅದು ಹೋಗಬೇಕೆಂದು ಹೇಳುತ್ತೇನೆ. ಯಾರು ಡಿಸಿಷನ್ ತೆಗೆದುಕೊಳ್ಳುತ್ತಾರೋ ಅವರಿಗೆ ಒಬ್ಬ ಸಹಾಯಕನಿಂದ ಫೈಲ್ ಹೋದರೂ ಸಾಕು

ಕೆಲಸವಾಗ ಬೇಕು. ಇಲ್ಲದೇ ಹೋದರೆ ಜನರಿಗೆ ಬಹಳ ತೊಂದರೆಯಾಗುತ್ತದೆ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯ ಮಟ್ಟದ ಆಡಳಿತ ಬಹಳ ದೊಡ್ಡದಾಗಿ ಬೆಳೆದಿದೆ. ಈ ಇಲಾಖೆಗಳು ಯಾವುವು ಎಲ್ಲೆಲ್ಲಿ ಇವೆ ಎನ್ನುವುದನ್ನು ತಿಳಿದುಕೊಳ್ಳುವುದು ಕೂಡ ಬಹಳ ತೊಂದರೆಯಾಗುತ್ತದೆ. ಸಾಮಾನ್ಯವಾಗಿ ಹಳ್ಳಿಯಿಂದ ಬಂದಂಥ ಜನ, ತಾಲ್ಲೂಕು ಲೆವಲ್‌ನಿಂದ ಬಂದಂಥ ಜನರಿಗೆ ಈ ಇಲಾಖೆಗಳನ್ನು ಹುಡುಕುವುದು ಬಹಳ ಕಷ್ಟವಾಗುತ್ತದೆ. ಆದ್ದರಿಂದ ಸರ್ಕಾರದವರು ಯಾವ ಯಾವ ಇಲಾಖೆ ಎಲ್ಲೆಲ್ಲಿದೆ ಎನ್ನುವುದಕ್ಕೆ ಒಂದು ಬೋರ್ಡ್ ಹಾಕುವುದರ ಮೂಲಕ ತಿಳಿಸಬೇಕು ಮತ್ತು ಅದು ಎಲ್ಲರಿಗೂ ತಿಳಿಯುವಂತೆ ಇರಬೇಕು ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಇನ್ನು ಜಿಲ್ಲೆಯ ಆಡಳಿತದ ವಿಷಯದಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಜಿಲ್ಲಾಧಿಕಾರಿಗಳು ಎಲ್ಲವನ್ನೂ ಮಾಡಬೇಕು ಅವರು ಎಲ್ಲವನ್ನೂ ತಿಳಿದ ಸರ್ವಜ್ಞರು ಇದ್ದ ಹಾಗೆ. ಎಲ್ಲಾ ಮೀಟಿಂಗ್‌ಗಳಿಗೆ ಹೋಗಬೇಕು ಪ್ರತಿದಿವಸ ೨-೩ ಮೀಟಿಂಗ್ ಇದ್ದೇ ಇರುತ್ತವೆ. ಕೆಲವೊಂದು ಸಾರಿ ಅವರು ಇಡೀ ದಿವಸವನ್ನು ಮೀಟಿಂಗ್‌ನಲ್ಲಿ ಕಳೆಯಬೇಕಾಗುತ್ತದೆ. ಡೆವಲಪ್‌ಮೆಂಟಲ್ ಆಕ್ಟಿವಿಟೀಸ್ ಬಗ್ಗೆ ಏನನ್ನೂ ಅವರು ಮಾಡುವುದಕ್ಕಾಗುವುದಿಲ್ಲ. ಆದಕ್ಕಾಗಿ ಜಿಲ್ಲಾಧಿಕಾರಿಗಳಿಗೆ ಏನೇನು ಕೆಲಸಗಳು ಇವೆ ಅವುಗಳನ್ನು ನಿಗಧಿ ಮಾಡಿ ಸರಿಯಾದ ಕಾರ್ಯಭಾರವನ್ನು ಅವರಿಗೆ ಕೊಡಬೇಕು ಎಂದು ನಾನು ಈ ಸಮಯದಲ್ಲಿ ಸಲಹೆ ಮಾಡುತ್ತೇನೆ.

ಜಿಲ್ಲೆಯ ಮಟ್ಟದಲ್ಲಿ ಸರ್ಕಾರದವರು ಯಾವ ಯಾವ ಯೋಜನೆಗಳಿಗೆ ಹಣವನ್ನು ಒದಗಿಸುತ್ತೀರೋ ಅದರ ಒಂದು ಸೂಚನೆಯನ್ನು ಆಯಾ ಕ್ಷೇತ್ರದ ಶಾಸಕರಿಗೂ ಕೊಟ್ಟರೆ ಶಾಸಕರು ಯಾವ ರೀತಿಯಾಗಿ ಈ ಯೋಜನೆಗಳನ್ನು ವಿಲೇವಾರಿ ಮಾಡಬೇಕು ಎನ್ನುವುದನ್ನು ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಈ ರೀತಿಯ ಒಂದು ಅವಕಾಶವನ್ನು ತಾವು ಮಾಡುವುದಾದರೆ ಸರ್ಕಾರದವರು ಕೊಟ್ಟ ಹಣ ಸದ್ವಿನಿಯೋಗವಾಗುವುದಕ್ಕೆ ಅವಕಾಶವಾಗುತ್ತದೆ. ಈ ದಿಸೆಯಲ್ಲಿ ಸರ್ಕಾರದವರು ಜಿಲ್ಲಾಧಿಕಾರಿಗಳಿಗೆ ಒಂದು ಸುತ್ತೋಲೆಯನ್ನು ಹೊರಡಿಸಬೇಕು. ಯಾರು ಯಾರು ಶಾಸಕರು ಇಲ್ಲಿರುತ್ತಾರೋ ಅವರೊಡನೆ ಜಿಲ್ಲೆಯಲ್ಲಿ ಆಗತಕ್ಕ ಕೆಲಸಗಳ ಬಗ್ಗೆ ಸಮಾಲೋಚನೆ ಮಾಡಿ ಜನರಿಗೆ ಕಲ್ಯಾಣವಾಗತಕ್ಕ ಕೆಲಸಗಳನ್ನು ಮಾಡಬೇಕು ಎಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಮತ್ತು ವರ್ಷದ ಕೊನೆಯಲ್ಲಿ ಖರ್ಚು ಮಾಡುವ ಹಣ ಯಾವ ರೀತಿಯಲ್ಲಿ ಎಷ್ಟು ಜನರಿಗೆ ಉಪಯೋಗವಾಗುತ್ತದೆ ಎನ್ನುವುದನ್ನು ನಿಗದಿಮಾಡುವಂಥ ಒಂದು ಕಾರ್ಯಕ್ರಮವನ್ನೂ ಕೂಡ ತಾವು ಹಾಕಿಕೊಳ್ಳಬೇಕು ಎಂದು ನಾನು ಹೇಳಬಯಸುತ್ತೇನೆ.

೬-೦೦ ಪಿ.ಎಂ.

ಉಪಾಧ್ಯಕ್ಷರು.— ತಾವು ಪೂರ್ಣ ಮಾಡಿ. ಇಲ್ಲದಿದ್ದರೆ ಮುಂದೆ ಬೇರೆಯವರ ಹೆಸರನ್ನು ಕರೆಯಬೇಕಾಗುತ್ತದೆ.

ಶ್ರೀ ಎಂ.ಪಿ. ಕರ್ಕಿ.— ನಾನು ಹೇಳುತ್ತಿದ್ದೇನೆ.

ಉಪಾಧ್ಯಕ್ಷರು.— ತಾವು ಭಾಷಣ ಪೂರ್ಣ ಮಾಡದೆ ಮುಂದುವರಿಸಿದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಂ.ಪಿ.ಕರ್ಕಿ.— ತಾವು ರೆಕಾರ್ಡ್‌ಗೆ ಹೋಗುವುದು ಬೇಡ ಎಂದರೆ ಏನು ಮಾಡುವುದು ? ಲಂಚ ಭ್ರಷ್ಟಾಚಾರ ಆಪಾದನೆ ಬಗ್ಗೆ ನಿರ್ಧಿಷ್ಟವಾದ ಆಪಾದನೆಯನ್ನು ಮಾಡುತ್ತಿದ್ದೇನೆ. ಉದಾಹರಣೆಗೆ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿರುವ ಎಂಜಿನಿಯರ್ ರೊಬ್ಬರ ಮೇಲೆ ಭ್ರಷ್ಟಾಚಾರದ ಆಪಾದನೆಯನ್ನು ಮಾಡಿ ಆ ಬಗ್ಗೆ ಬರೆದು ಕೊಟ್ಟಿದ್ದೇನೆ.

ಉಪಾಧ್ಯಕ್ಷರು.— ತಾವು ಭಾಷಣವನ್ನು ಮುಕ್ತಾಯ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ.— ನಮ್ಮ ಪಕ್ಷದ ೫ ನಿಮಿಷವನ್ನು ಅವರು ಉಪಯೋಗ ಮಾಡಿಕೊಳ್ಳಲಿ.

ಶ್ರೀ ಎಂ.ಟಿ. ಕರ್ಕಿ.— ಹೀಗೆ ವೆಂಕಟ ಆರ್ಟ್ ಗ್ಯಾಲರಿಯ ಬಗ್ಗೆ ನಿರ್ದಿಷ್ಟವಾದ ಆಪಾದನೆ ಮಾಡಿದ ೪ ತಿಂಗಳು ಆಯಿತು. ಅದು ಏನಾಯಿತು ಎಂಬುದನ್ನು ತಿಳಿಸಬೇಕೆಂದು ನಾನು ಹೇಳುತ್ತೇನೆ. ಈ ಬಗ್ಗೆ ಕಾಗದ ಬರೆದರೂ ಉತ್ತರ ಬಂದಿಲ್ಲ. ಈ ಒಂದು ಆಡಳಿತ ವೈಖರಿಯನ್ನು ಸುಧಾರಿಸದೇ ಹೋದರೆ ಏನು ಪ್ರಯೋಜನ ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳು ಏನು ಬೇಡಿಕೆಗಳನ್ನು ಇಟ್ಟಿದ್ದಾರೆ ಅದನ್ನು ಪುರಸ್ಕರಿಸುತ್ತಾ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಲಕ್ಷ್ಮೀನರಸಿಂಹಯ್ಯ (ತುಮಕೂರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಸುಮಾರು ೧೬ ಖಾತೆಗಳ ಬಗ್ಗೆ ಏನು ಬೇಡಿಕೆಗಳನ್ನು ಇಟ್ಟಿದ್ದಾರೆ ಅವುಗಳನ್ನು ನಾನು ಅನುಮೋದಿಸುತ್ತಾ ಕೇವಲ ಒಂದೆರಡು ಖಾತೆಗಳ ಬಗ್ಗೆ ಎರಡು ಮಾತುಗಳನ್ನಾಡುವುದಕ್ಕೆ ಬಯಸುತ್ತೇನೆ. ಆಟೋಮೊಬೈಲ್ ವಾಹನಗಳ ಮೇಲಿನ ತೆರಿಗೆ ಏನಿದೆ ಅದನ್ನು ಪಕ್ಕದ ರಾಜ್ಯಗಳಿಗೆ ಹೋಲಿಸಿ ನೋಡಿದಾಗ ನಮ್ಮ ರಾಜ್ಯದಲ್ಲಿ ಜಾಸ್ತಿ ತೆರಿಗೆ ಇರುವುದರಿಂದ ನಮ್ಮ ರಾಜ್ಯದ ಜನ ಅಕ್ಕಪಕ್ಕದ ರಾಜ್ಯಗಳಿಗೆ ಹೋಗಿ ತರತಕ್ಕ ರೂಢಿಯನ್ನು ಮಾಡಿಕೊಂಡಿದ್ದಾರೆ. ಆದುದರಿಂದ ನಮ್ಮ ರಾಜ್ಯಕ್ಕೆ ಬರತಕ್ಕ ತೆರಿಗೆ ಬೇರೆ ರಾಜ್ಯಗಳಿಗೆ ಹೋಗುತ್ತಿದೆ. ಆದುದರಿಂದ ಅಕ್ಕಪಕ್ಕದ ರಾಜ್ಯಗಳಾದ ತಮಿಳುನಾಡು, ಪಾಂಡಿಚೆರಿ ಮತ್ತು ಗೋವಾಗಳಲ್ಲಿ ಏನು ತೆರಿಗೆ ಇದೆ ಅದಕ್ಕೆ ಸರಿಸಮನಾದ ತೆರಿಗೆಯನ್ನು ನಮ್ಮಲ್ಲಿ ತರುವ ವ್ಯವಸ್ಥೆಯಾಗಬೇಕು. ಸುಮಾರು ಆರೇಳು ಸಾವಿರ ರೂ.ಗಳ ಡಿಫರೆನ್ಸ್ ಇರುವುದರಿಂದ ಎಲ್ಲರೂ ಹೊರ ರಾಜ್ಯಗಳಿಗೆ ಹೋಗಿ ಅಲ್ಲಿ ವಾಹನಗಳಿಗೆ ತೆರಿಗೆಯನ್ನು ಕಟ್ಟಿ ಪರವಾನಿಗೆಯನ್ನು ತರುವ ರೂಢಿ ಮಾಡಿಕೊಂಡಿದ್ದಾರೆ ಒಂದೆ ಓಟ್ ಆನ್ ಅಕೌಂಟ್ ಪಡೆದುಕೊಳ್ಳುವ ಸಮಯದಲ್ಲಿ ತೆರಿಗೆಯನ್ನು ೧೫ ಪರ್ಸೆಂಟ್‌ನಿಂದ ೧೨ ಪರ್ಸೆಂಟ್‌ಗೆ ಇಳಿಸಿದ್ದರೂ ಸಹಾ ವ್ಯತ್ಯಾಸ ಇನ್ನೂ ಬಹಳ ಇದೆ. ಆದ್ದರಿಂದ ಬೇರೆ ರಾಜ್ಯದ ಪರ್ಸೆಂಟೇಜ್ ಏನಿದೆ ಆ ಲೆವೆಲ್‌ಗೆ ನಮ್ಮದನ್ನು ಇಳಿಸಿ ತನ್ಮೂಲಕ ನಮ್ಮ ರಾಜ್ಯದವರು ನಮ್ಮ ರಾಜ್ಯದಲ್ಲೇ ವಾಹನಗಳ ತೆರಿಗೆಯನ್ನು ಕಟ್ಟುವುದಕ್ಕೆ ಅನುವು ಮಾಡಿಕೊಡಬೇಕೆಂದು ಹೇಳುತ್ತೇನೆ. ಇನ್ನು, ಕರ ಕದಿಯುವುದರ ಬಗ್ಗೆ ಹೇಳುವುದಾದರೆ ನಾವು ಯಾವುದೇ ಅಂಗಡಿಗೆ ಹೋಗಿ ಸಾಮಾನು ಪಡೆದುಕೊಂಡಾಗ ಅವರೇ ಹೇಳುತ್ತಾರೆ, ತಮಗೆ ಬಿಲ್ ಬೇಕಾದರೆ ಟ್ಯಾಕ್ಸ್ ಬೀಳುತ್ತದೆ, ಬಿಲ್ ಬೇಡ ಎಂದರೆ ಕಡಿಮೆ ಬೆಲೆಗೆ ಕೊಡಬಹುದೆಂದು ನಮಗೇ ಹೇಳುತ್ತಾರೆ. ಹೀಗೆ ಅವರು ಬಿಲ್ ಹಾಕದಿರುವುದರಿಂದ ೧೫ ಅಥವಾ ೧೦ ಪರ್ಸೆಂಟ್ ತೆರಿಗೆ ಸರ್ಕಾರಕ್ಕೆ ಬರುವುದು ಹೋಗಿದೆ. ಇದನ್ನೆಲ್ಲಾ ಬಿಗಿಗೊಳಿಸಿದರೆ ನಮ್ಮ ರಾಜ್ಯಕ್ಕೆ ಈಗ ಎಷ್ಟು ಆದಾಯ ಬರುತ್ತಿದೆ ಅದಕ್ಕಿಂತಾ ಎರಡರಷ್ಟು ಮೂರಷ್ಟು ಆದಾಯ ಬರುತ್ತದೆಂದು ನಾನು ಹೇಳುತ್ತೇನೆ. ಈ ರೀತಿ ಮೋಸ ಮಾಡುತ್ತಿರುವುದನ್ನು ತಪ್ಪಿಸಬೇಕಾಗಿದೆ. ಇನ್ನು ಹೊಸದಾಗಿ ಆಟಗಳ ಮೇಲೆ ಮನರಂಜನಾ ತೆರಿಗೆ ಹಾಕಿದ್ದೀರಿ. ಆ ಒಂದು ಬಾಬಿನಿಂದ ಸರ್ಕಾರಕ್ಕೆ ಹೆಚ್ಚು ಲಾಭ ಬರುತ್ತಿಲ್ಲವಾದ್ದರಿಂದ ಅದನ್ನು ರದ್ದುಪಡಿಸಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ಇನ್ನು ಟ್ಯಾಕ್ಸ್ ಕದಿಯುವ ಜನರಿಗೂ ಸರ್ಕಾರಕ್ಕೂ ನಡುವೆ ಸಂಬಂಧ ಇದೆ ಎಂದು ಜನ ಹೇಳುತ್ತಿದ್ದಾರೆ. ಈ ಬಗ್ಗೆ ಮಾರಾಟ ತೆರಿಗೆಯಲ್ಲಿ ಇರುವ ನಮ್ಮ ಸ್ನೇಹಿತರು ಒಬ್ಬರು ಹೇಳುತ್ತಿದ್ದರು. ಅವರು ಯಾರು ಯಾರಿಗೋ ಇಷ್ಟಿಷ್ಟು ಕೊಡಬೇಕಾಗಿರುವುದರಿಂದ, ನಾವು ಆ ರೀತಿ ಮಾಡುತ್ತಿದ್ದೇವೆಂದು, ಇದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ ಎಂದು ಹೇಳುತ್ತಿದ್ದರು. ಆ ಒಂದು ಪದ್ಧತಿ ಈ ಸರ್ಕಾರದಲ್ಲಿ ಹೋಗಬೇಕು. ಅವರಿಗೆಲ್ಲಾ ಎಚ್ಚರಿಕೆ ಕೊಡಬೇಕೆಂದು ನಾನು ಈ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತು ರಸ್ತೆಯಲ್ಲಿ ಓಡಾಡುವ ವಾಹನಗಳಿಗೆ ಯಾವ ರೀತಿ ಫಿಟ್‌ನೆಸ್ ಕೊಡುತ್ತಾರೋ ಗೊತ್ತಿಲ್ಲ. ನಮ್ಮ ಏರಿಯಾದಲ್ಲಿ ಮೊನ್ನೆ ಒಂದು ಲಾರಿ ಅಡ್ಡಾದಿಡ್ಡಿ ರಸ್ತೆಯಲ್ಲಿ ಹೋಗುತ್ತಿತ್ತು, ಆ ರೀತಿ ಓಡಾಡಿದರೆ ಅಪಘಾತ ಆಗದೇ ಇರುತ್ತದೆಯೇ ? ಮತ್ತು ಆ ಲಾರಿಗೆ ಫಿಟ್‌ನೆಸ್ ಸರ್ಟಿಫಿಕೇಟ್ ಸಹಾ ಕೊಡಲಾಗಿತ್ತು. ಇಂತಹ ವಿಷಯಗಳ ಬಗ್ಗೆ ಗಮನ ಕೊಟ್ಟು ಸರಿಮಾಡಬೇಕೆಂದು ನನ್ನ ಸಲಹೆ, ಇನ್ನು, ಪೋಲೀಸ್ ಇಲಾಖೆಯ ಬಗ್ಗೆ ಹೇಳಬೇಕೆಂದರೆ ತೆರಿಗೆ ಇಲಾಖೆಯಲ್ಲಿ ಇರುವಂತೆ ಇಲ್ಲೂ ಕೂಡ ಪೋಲೀಸರಿಗೂ ರಾಜಕಾರಣಿಗಳಿಗೂ ಒಳ್ಳೆಯ ಸಂಬಂಧ ಇದೆ ಎನಿಸುತ್ತದೆ. ಇವರು ಹೇಳಿದಹಾಗೆ ಅವರು ಕೇಳಿದ ಮೇಲೆ ಅವರು ಹೇಳಿದ್ದನ್ನು ಇವರು ಕೇಳಬೇಕಾಗುತ್ತದೆ. ಬೇಕಾದಷ್ಟು ಕ್ಲಬ್‌ಗಳು ನಡೆಯುತ್ತಿವೆ, ಕಳ್ಳ ಸಾಗಾಣಿಕೆಗಳು ನಡೆಯುತ್ತಿವೆ. ಆದರೂ ತಮಗೆ ಗೊತ್ತಿಲ್ಲದ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ಇದನ್ನು ತಮ್ಮ ಗಮನಕ್ಕೆ ತಂದರೂ ಕೂಡಾ ಏನೂ ಪ್ರಯೋಜನವಾಗುತ್ತಿಲ್ಲ. ಇಂತಹ ಪರಿಸ್ಥಿತಿ ಇರುವಾಗ ನೀವು ಅಧಿಕಾರಿಗಳ ಗಮನಕ್ಕೆ ಒಂದು ವಿಷಯ ತರಬೇಕು. ನಿಮಗೆ ಹಿಂದಿನ ಸರ್ಕಾರದೊಡನೆ ಇದ್ದಂಥ

ಸಂಬಂಧ ಈಗ ಇಲ್ಲ. ಆದುದರಿಂದ ನೀವೆಲ್ಲ ಈಗ ಸರಿಯಾಗಿ ನಡೆದುಕೊಳ್ಳಿ. ಅದು ನಿಮ್ಮ ಕರ್ತವ್ಯ ಎಂದು ಹೇಳಬೇಕು. ಇನ್ನು ಜಿಲ್ಲಾ ಮಟ್ಟದ ಸಬ್ ಪ್ಲಾನ್ ತಯಾರು ಮಾಡಿದ್ದೀರಿ, ಇದು ನಿಜವಾಗಿಯೂ ಬಹಳ ಉಪಯುಕ್ತವಾದ ಪ್ಲಾನ್ ಇದೆ. ಅಲ್ಲಿ ಲೋಕೋಪಯೋಗಿ ಇಲಾಖೆಯವರಿಂದ ಕೆಲಸ ಆಗುವುದಿಲ್ಲ. ಟಿ.ಡಿ.ಬಿ ನವರು ೬–೭ ಲಕ್ಷ ರೂಪಾಯಿ ಖರ್ಚು ಮಾಡುವುದಕ್ಕಾಗುವುದಿಲ್ಲ. ಇಂತಹ ಸಮಯದಲ್ಲಿ ಸಬ್ ಪ್ಲಾನ್‌ಗಳಿಗೆ ಹೆಚ್ಚು ಹಣ ಒದಗಿಸಿ ಅಗತ್ಯ ಕೆಲಸಗಳನ್ನು ಮಾಡುವುದಕ್ಕಾಗುತ್ತದೆ. ಅದಕ್ಕಾಗಿ ಸರ್ಕಾರ ಹೆಚ್ಚು ಹಣವನ್ನು ಒದಗಿಸಬೇಕೆಂದು ನಾನು ಹೇಳುತ್ತೇನೆ. ಬಹಳ ದಿನಗಳ ಆಡಳಿತ ಮಾಡಿ ಈಗ ವಿರೋಧ ಪಕ್ಷದಲ್ಲಿ ಕುಳಿತಿರುವ ಜನ ಅಲ್ಪಸಂಖ್ಯಾತರಿಗೆ ಆರ್ಥಿಕವಾಗಿ ಹಣವನ್ನು ಇಟ್ಟಿರಲಿಲ್ಲ. ಅವರಿಗೆ ಅನುಕೂಲವಾಗುವ ರೀತಿ ಆಯವ್ಯಯವನ್ನು ತಯಾರು ಮಾಡಿಲ್ಲವೆಂದು ಹೇಳುತ್ತೇನೆ. ೧೯೭೯ರಲ್ಲಿ ಸುಮಾರು ೨೯–೩೦ ಪರ್ಸೆಂಟ್ ಜನ ಬಡತನದ ರೇಖೆಯಲ್ಲಿ ಇದ್ದವರು ೧೯೮೧ರ ಹೊತ್ತಿಗೆ ೪೭–೪೮ ಪರ್ಸೆಂಟ್‌ಗೆ ಬಂದಿದೆ. ಇವರ ಬಗ್ಗೆ ಬರಿ ಬಾಯಲ್ಲಿ ಕನಿಕರವನ್ನು ತೋರಿಸಿ ಕೊಂಡು ಬಂದರೇ ಹೊರತು ಏನನ್ನೂ ಅವರಿಗಾಗಿ ಮಾಡಲಿಲ್ಲ. ಮುಖ್ಯವಾಗಿ ಹರಿಜನರ ಬಗ್ಗೆ, ಹಳ್ಳಿಗಳವರ ಬಗ್ಗೆ ಕಳಕಳಿ ವ್ಯಕ್ತಪಡಿಸಿದ್ದಾರೆ. ಅವರು ಹರಿಜನರ ಅಭಿವೃದ್ಧಿ ಬಗ್ಗೆ ಅವರ ಅಭ್ಯುದಯದ ಬಗ್ಗೆ ಸರಿಯಾದ ಪ್ರಯತ್ನ ಮಾಡಲಿಲ್ಲ. ಅಧಿಕಾರದಲ್ಲಿ ಇದ್ದವರು ಅವರ ಬಗ್ಗೆ ಬಾಯಲ್ಲಿ ಕನಿಕರವನ್ನು ತೋರಿಸಿಕೊಂಡು, ಅವರಿಂದ ಕೆಲಸ ಮಾಡಿಸಿಕೊಂಡು ಅವರಿಂದ ಓಟನ್ನು ಪಡೆದುಕೊಂಡು ಬಂದಿದ್ದಾರೆ. ಈ ಒಂದು ಸಮಸ್ಯೆಗೆ ಕಾರಣ ಏನು ? ಇನ್ನು ಮೇಲಾದರೂ ಕೂಡಾ ಅವರು ತಮ್ಮ ಕಾಲಮೇಲೆ ನಿಂತು ಸ್ವಂತ ಅಭ್ಯುದಯವನ್ನು ಅವರು ಮಾಡುವ ರೀತಿಯಲ್ಲಿ ಪ್ರಯತ್ನ ಮಾಡಬೇಕೆಂದು ನಾನು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ, ಮಾನ್ಯ ಬಂಗಾರಪ್ಪನವರು ಮಾತನಾಡುವ ಕಾಲದಲ್ಲಿ ಗಾಯವಾಗಿದೆ ಹುಳು ಬೀಳುವುದಕ್ಕೆ ಅವಕಾಶ ಕೊಡಬೇಡಿ ಎಂದು ಹೇಳಿದರು ಆದರೆ ಅವರ ಕಾಲದಲ್ಲಿಯೇ ಗಾಯವಾಗಿ ಹುಳು ಸಹ ಬಿದ್ದಿತು ಆದರೆ ಅದು ಅವರ ಕಣ್ಣಿಗೆ ಕಾಣುತ್ತಿರಲಿಲ್ಲ. ಆ ಹುಳು ಏನು ಬಿದ್ದಿದೆ ಅದಕ್ಕೆ ಔಷಧಿಯಿಲ್ಲ, ಅಷ್ಟು ಗಾಯ ಕೆಟ್ಟು ಹೋಗಿದೆ. ಅದಕ್ಕೋಸ್ಕರವಾಗಿ ಔಷಧಿಯನ್ನು ನಾವು ಕಂಡು ಹಿಡಿಯುತ್ತಿದ್ದೇವೆ ಅದನ್ನು ವಾಸಿ ಮಾಡುತ್ತೇವೆ ಎನ್ನತಕ್ಕ ಭರವಸೆಯನ್ನು ಕೊಟ್ಟು ನನ್ನ ಎರಡು ಮಾತಂಗಳನ್ನು ಮುಗಿಸುತ್ತೇನೆ,

Statement by the Minister

reg.—Suspension of the I. B. Watchman by the Minister.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ (ತೋಟಗಾರಿಕೆ ಮತ್ತು ಹೈನುಗಾರಿಕೆ ಮಂತ್ರಿಗಳು).—

ಅಧ್ಯಕ್ಷರೇ, ಬಹಳ ಸಂತೋಷವಾಗುತ್ತದೆ ಏತಕ್ಕೆಂದರೆ ನಮ್ಮ ಜಿಲ್ಲೆಯ ಶಾಸಕರು ಮತ್ತು ಹಿಂದಕ್ಕೆ ಮಂತ್ರಿಗಳೂ ಆಗಿದ್ದಂಥ ಇಬ್ಬರು ಸಣ್ಣ ವಿಷಯವನ್ನು ನನ್ನ ಮಟ್ಟಿಗೆ ಇಷ್ಟೊಂದು ಕಾಳಜಿ ಇಟ್ಟುಕೊಂಡು ಆಲೋಚನೆ ಮಾಡಿ ಹೇಳಿದ್ದಾರೆಂದರೆ ಅದು ನಿಜಕ್ಕೂ ಸಂತೋಷದ ವಿಷಯವೇ ಆಗಿದೆ. ಏತಕ್ಕೆಂದರೆ ಇಷ್ಟಿಷ್ಟು ಸಣ್ಣ ವಿಷಯದಲ್ಲಿ ಅವರು ಕಣ್ಣು ಇಟ್ಟಮೇಲೆ ದೊಡ್ಡ ತಪ್ಪುಗಳು ನನ್ನಿಂದ ಆಗಬಾರದು ಎನ್ನುವುದಕ್ಕೆ ಎಚ್ಚರಿಕೆಯನ್ನು ನಾನು ವಹಿಸುವುದಕ್ಕೆ ಆಸ್ಪದ ಕೊಟ್ಟ ಹಾಗಾಯಿತು, ಮಾನ್ಯ ಶ್ರೀ ಧರ್ಮಸಿಂಗ್‌ರವರು ಇಲ್ಲಿ ಇಲ್ಲ, ಅವರು ಇರಬೇಕಾಗಿತ್ತು. ಮಾನ್ಯ ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆಯವರು ಇದ್ದಾರೆ ಸಂತೋಷ. ನಾನು ರಾಜಕೀಯ ಜೀವನದಲ್ಲಿ ೧೯೫೨ ರಿಂದ ಕಾಲಿಟ್ಟು ಕೆಲಸ ಮಾಡುತ್ತಿರುವಾಗ ಇವರು ೧೯೬೨ ರಲ್ಲಿ ನಮ್ಮ ಕಾರ್ಯಕರ್ತರಾಗಿ ಕೆಲಸ ಮಾಡಿದ್ದಾರೆ,

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇವರ ಕಾರ್ಯಕರ್ತ ನಾನು ಎಂದೂ ಆಗಿರಲಿಲ್ಲ ಬಿ. ಸೋಮಶೇಖರ್ ಎಂದು ನಮ್ಮ ಲೀಡರ್ ಇದ್ದರು, ಅವರಿಗೂ ಮತ್ತು ಇವರಿಗೂ ಅಲೈನ್ಸ್ ಆದಾಗ ಇದ್ದೆವು ಅಷ್ಟೇ. ಆದರೆ ನಾನು ಇವರ ಶಿಷ್ಯ ಎಂದೂ ಕೂಡ ಆಗಿರಲಿಲ್ಲ, ಆಗಿರುವುದೂ ಇಲ್ಲ.

ಶ್ರೀ ವಿಶ್ವನಾಥ್‌ರೆಡ್ಡಿ ಮುದ್ನಾಳ್.—ನಮ್ಮ ಸಲುವಾಗಿ ಕೆಲಸ ಮಾಡಿದ್ದೀರಿ. ವಿರೋಧ ಪಕ್ಷದ ಸಂಘಟನೆಯನ್ನು ಮಾಡುವ ಕಾಲಕ್ಕೆ ೧೯೬೭ ರಲ್ಲಿ ನೀವು ಅವರ ಜೊತೆಯಲ್ಲಿ ಸೇರಿ ನಮ್ಮ ಶಿಷ್ಯರಾಗಿ ಕೆಲಸ ಮಾಡಿದ್ದೀರಿ, ಇಡೀ ಹೈದರಾಬಾದ್ ಕರ್ನಾಟಕದಲ್ಲಿ ವಿಶೇಷವಾಗಿ ಗುಲ್ಬರ್ಗ